ಮಂಗಳವಾರ, ನವೆಂಬರ್ 2, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಜ್ಯೋತ್ಸವ ಸಂಭ್ರಮ

ದಾವಣಗೆರೆಯಲ್ಲಿ ಸೋಮವಾರ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಪುಟ್ಟ ಬಾಲಕಿಯೊಬ್ಬಳು ಕನ್ನಡ ಧ್ವಜ ಹಿಡಿದು ಸಂಭ್ರಮಿಸಿದ್ದು ಹೀಗೆ



ಮಂಗಳವಾರ, ನವೆಂಬರ್ 2, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 304 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಹೃದಯದ ಆರೋಗ್ಯಕ್ಕೂ ನಮ್ಮ ಜೀವನಶೈಲಿಗೂ ನೇರ ನಂಟಿದೆ. ಹಾಗಾದರೆ ನಮ್ಮ ಹೃದಯದ ಆರೋಗ್ಯಕ್ಕಾಗಿ ನಾವು ಏನು ಮಾಡಬೇಕು? ಏನು ಮಾಡಬಾರದು?



ಸಂಖ್ಯೆ-ಸುದ್ದಿ: ಏರುತ್ತಲೇ ಇದೆ ಆತ್ಮಹತ್ಯೆಗಳ ಸಂಖ್ಯೆ
ಪುನೀತ್ ಅಕ್ಷರ ಸೇವೆ ಮುಂದುವರಿಕೆ 7
ನೀಟ್ ಫಲಿತಾಂಶ: ಮೂವರಿಗೆ ಮೊದಲ ರ‍್ಯಾಂಕ್ 11

ಸೆನ್ಸೆಕ್ಸ್	ನಿಫ್ಟಿ	₹/$
60,138	17,929	74.87

ನಾಡಿನ ಮಕ್ಕಳಿಗೆ ಉದ್ಯೋಗ ದಕ್ಕಿದರೆ ಕನ್ನಡಕ್ಕೆ ಶಕ್ತಿ: ಬಸವರಾಜ ಬೊಮ್ಮಾಯಿ

ಕರ್ನಾಟಕ: ಕನ್ನಡಿಗರಿಗೇ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ, ಸರ್ಕಾರಿ ಮತ್ತು ಅರೆ ಸರ್ಕಾರಿ ಕ್ಷೇತ್ರಗಳಲ್ಲಿ ಸೃಷ್ಟಿಯಾಗುವ ಉದ್ಯೋಗಗಳಲ್ಲಿ ಶೇಕಡ 75ರಷ್ಟನ್ನು ಕನ್ನಡಿಗರಿಗೆ ಸಿಗುವಂತೆ ಮಾಡುವ ಮೂಲಕ ಕನ್ನಡಕ್ಕೆ ಶಕ್ತಿ ತುಂಬುವ ಪ್ರಯತ್ನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಆಯೋಜಿಸಿದ್ದ 66ನೇ ಕರ್ನಾಟಕ ರಾಜ್ಯೋತ್ಸವದ ರಾಜ್ಯಮಟ್ಟದ ಸಮಾರಂಭದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ‘ರಾಜ್ಯ ಔದ್ಯೋಗಿಕ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಾಗುವುದು. ಅದರ ಮೂಲಕ ಕೌಶಲ ಮತ್ತು ಅರೆ ಕೌಶಲ ವಿಭಾಗಕ್ಕೆ ಸೇರಿದ ಶೇಕಡ 75ರಷ್ಟು ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡಲು ಕ್ರಮ ಕೈಗೊಳ್ಳಲಾಗುವುದು’ ಎಂದರು.


ಕನ್ನಡವನ್ನು ಎಲ್ಲ ಆಯಾಮಗಳಲ್ಲೂ ಬಳಕೆಗೆ ತರುವ ಮೂಲಕ ಮತ್ತಷ್ಟು ಶಕ್ತಿ ತುಂಬಬೇಕಿದೆ. ಅದಕ್ಕೆ ಪೂರಕವಾಗಿ ತಾಂತ್ರಿಕ ಶಿಕ್ಷಣವನ್ನು ಕನ್ನಡದಲ್ಲಿ ಬೋಧಿಸುವ ಕೆಲಸವನ್ನು ತಮ್ಮ ಸರ್ಕಾರ ಆರಂಭಿಸಿದೆ. ಈ ವಿಚಾರದಲ್ಲಿ ಗಟ್ಟಿಯಾದ ನಿಲುವನ್ನು ಸರ್ಕಾರ ಹೊಂದಿದೆ ಎಂದರು.

> **ಕನ್ನಡಕ್ಕೆ ತನ್ನದೇ ಆದ ಅಂತರ್ಗತ ಶಕ್ತಿ ಇದೆ. ಸೂರ್ಯ, ಚಂದ್ರರು ಇರುವವರೆಗೂ ಕನ್ನಡದ ಶಕ್ತಿಯನ್ನು ಕಸಿಯಲು ಯಾರಿಂದಲೂ ಸಾಧ್ಯವಿಲ್ಲ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃಭಾಷೆಯ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಪದವಿಯವರೆಗೆ ಎಲ್ಲ ಹಂತದಲ್ಲೂ ಕನ್ನಡಕ್ಕೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

13ನೇ ಪುಟ ನೋಡಿ

ಹಿಂದಿ ಹೇರಿಕೆ ವಿರೋಧಿಸಿದ ಶಾಸಕ ರಿಜ್ವಾನ್



ತ್ರಿಭಾಷಾ ಸೂತ್ರದ ಹೆಸರಿನಲ್ಲಿ ಹಿಂದಿ ಭಾಷೆಯನ್ನು ಕನ್ನಡಿಗರ ಮೇಲೆ ಹೇರುವುದಕ್ಕೆ ತಮ್ಮ ವಿರೋಧವಿದೆ ಎಂದು ಶಿವಾಜಿನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ರಿಜ್ವಾನ್ ಅರ್ಷದ್ ಹೇಳಿದರು.

ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅವರು ವೇದಿಕೆಯಲ್ಲೇ ತಮ್ಮ ವಿರೋಧವನ್ನು ಪ್ರಕಟಿಸಿದರು.

ದೇಶದಲ್ಲಿ ಶೇಕಡ 34ರಷ್ಟು ಜನರು ಮಾತ್ರ ಮಾತೃಭಾಷೆಯಾಗಿ ಹಿಂದಿಯನ್ನು ಬಳಸುತ್ತಾರೆ. ಉಳಿದ ಶೇ 66ರಷ್ಟು ಜನರ ಮೇಲೆ ಹಿಂದಿ ಭಾಷೆಯನ್ನು ಹೇರುವುದು ಪ್ರಜಾಪ್ರಭುತ್ವದ ವಿರೋಧಿ ಎಂದು ಹೇಳಿದರು.

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಶಿಕ್ಷಣದಲ್ಲಿ ಕನ್ನಡ ಕಡ್ಡಾಯ ಪ್ರಶ್ನಿಸಿ ಕೆಲವರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಗಟ್ಟಿಯಾದ ನಿಲುವು ತಾಳುವುದು ಅಗತ್ಯ ಎಂದರು.

ರಾಜ್ಯೋತ್ಸವ: ಪ್ರಶಸ್ತಿ ಮೊತ್ತ ₹ 5 ಲಕ್ಷಕ್ಕೆ ಏರಿಕೆ

ಬೆಂಗಳೂರು: ‘ರಾಜ್ಯೋತ್ಸವ ಪ್ರಶಸ್ತಿಗೆ ಸಾಧಕರ ಆಯ್ಕೆಗೆ ಕನಿಷ್ಠ ವಯೋಮಿತಿ 60 ವರ್ಷ ಪೂರೈಸಬೇಕೆಂಬ ನಿಯಮವನ್ನು ಮುಂದಿನ ವರ್ಷದಿಂದ ಸಡಿಲಿಸುವ ಜೊತೆಗೆ, ಪ್ರಶಸ್ತಿ ಮೊತ್ತವನ್ನು ₹ 1 ಲಕ್ಷದಿಂದ ₹ 5 ಲಕ್ಷಕ್ಕೆ ಹೆಚ್ಚಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ನಡೆದ 66ನೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ‘ಇನ್ನು ಮುಂದೆ ಈ ಪ್ರಶಸ್ತಿಗೆ ಯಾರೂ ಅರ್ಜಿ ಸಲ್ಲಿಸುವ ಅಗತ್ಯ ಇಲ್ಲ. ಆಯ್ಕೆ ಸಮಿತಿಯೇ ಸಾಧಕರನ್ನು ಗುರುತಿಸಲಿದೆ’ ಎಂದೂ ಹೇಳಿದರು.

‘ಆಯ್ಕೆ ಎಂಬುದು ಶೋಧನೆಯಿಂದ ಆಗಬೇಕೇ ಹೊರತು ಅರ್ಜಿಯಿಂದಲ್ಲ. ವಯಸ್ಸಿನ ಆಧಾರದಲ್ಲಿ ಪ್ರಶಸ್ತಿ ನೀಡುವುದೂ ಸರಿಯಲ್ಲ ಎಂಬ ಭಾವನೆಯಿದೆ. ಹೀಗಾಗಿ, ಕನಿಷ್ಠ ವಯೋಮಿತಿ ವಿಧಿಸದೆ, ಪ್ರತಿಭೆ ಗುರುತಿಸಿ ಪ್ರಶಸ್ತಿ ನೀಡಲು ಅವಕಾಶ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಲಾಗುವುದು’ ಎಂದೂ ತಿಳಿಸಿದರು.

ವಿವಿಧ ಕ್ಷೇತ್ರಗಳ 66 ಸಾಧಕರು ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ 10 ಸಂಘ ಸಂಸ್ಥೆಗಳಿಗೆ ಮುಖ್ಯಮಂತ್ರಿ ಪ್ರಶಸ್ತಿ ಪ್ರದಾನ ಮಾಡಿದರು.

ಕೆಲವು ನಿರ್ದಿಷ್ಟ ಸಂದರ್ಭ ಬಿಟ್ಟು, ರಾಜ್ಯೋತ್ಸವ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡುವಾಗ ಕನಿಷ್ಠ ವಯೋಮಿತಿ 60 ವರ್ಷ ಪೂರೈಸಿರಬೇಕು ಎಂದು ಹೈಕೋರ್ಟ್ ಆದೇಶದಂತೆ ಸರ್ಕಾರ ನಿಯಮ ರೂಪಿಸಿದೆ. ಈ ಬಗ್ಗೆ ನ್ಯಾಯಾಲಯಕ್ಕೆ ಮನವಿ ಮಾಡುವ ಕುರಿತು ಬೊಮ್ಮಾಯಿ ಪ್ರಸ್ತಾಪಿಸಿದ್ದಾರೆ.



ಜನರೆಡೆಗೆ ‘ಜನಸೇವಕ’

‘ಜನಸೇವಕ’ ಯೋಜನೆ ಅನುಷ್ಠಾನಕ್ಕೆ ಸೋಮವಾರ ಚಾಲನೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿನ ಪ್ಯಾಲೇಸ್ ಗುಟ್ಟಹಳ್ಳಿಗೆ ತೆರಳಿ ಹೂ ಮಾರುವ ವೆಂಕಟಲಕ್ಷ್ಮಿ ಅವರಿಗೆ ‘ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ’ ಯೋಜನೆಯ ಗುರುತಿನ ಚೀಟಿ ವಿತರಿಸಿದಾಗ ಸಾರ್ವಜನಿಕರು ಹೂಮಳೆ ಸುರಿಸಿ ಅಭಿನಂದಿಸಿದರು. ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಇದ್ದರು – ಪ್ರಜಾವಾಣಿ ಚಿತ್ರ

ಸುದ್ದಿ 4

ಜಿಎಸ್‌ಟಿ ವರಮಾನ ₹ 1.30 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿ ಸಂಗ್ರಹ ಆಗಿರುವ ವರಮಾನದ ಮೊತ್ತವು ಅಕ್ಟೋಬರ್ ತಿಂಗಳಿನಲ್ಲಿ ₹ 1.30 ಲಕ್ಷ ಕೋಟಿಯ ಗಡಿ ದಾಟಿದೆ. ಜಿಎಸ್‌ಟಿ ವ್ಯವಸ್ಥೆಯು 2017ರಲ್ಲಿ ಅನುಷ್ಠಾನಕ್ಕೆ ಬಂದ ನಂತರದಲ್ಲಿ ಸಂಗ್ರಹ ಆಗಿರುವ ಎರಡನೆಯ ಅತಿಹೆಚ್ಚಿನ ಮೊತ್ತ ಇದು.

ಜಿಎಸ್‌ಟಿ ವರಮಾನ ಸಂಗ್ರಹದ ಪ್ರಮಾಣವು ಸತತ ನಾಲ್ಕು ತಿಂಗಳುಗಳಿಂದ ₹ 1 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟದಲ್ಲಿ ಇದೆ. ಅಕ್ಟೋಬರ್ ತಿಂಗಳಿಗೆ ಸಂಬಂಧಿಸಿದ ಅಂಕಿ–ಅಂಶಗಳು ಹಬ್ಬದ ಸಂದರ್ಭದಲ್ಲಿ ನಡೆದ ಖರೀದಿ ವಹಿವಾಟನ್ನು ಸೂಚಿಸುವಂತೆ ಇವೆ.

ಜಿಎಸ್‌ಟಿ ವರಮಾನ ಸಂಗ್ರಹ	
ಏಪ್ರಿಲ್	₹ 1.41 ಲಕ್ಷ ಕೋಟಿ
ಮೇ	₹ 1.02 ಲಕ್ಷ ಕೋಟಿ
ಜೂನ್	₹ 92,849 ಕೋಟಿ
ಜುಲೈ	₹ 1.16 ಲಕ್ಷ ಕೋಟಿ
ಆಗಸ್ಟ್	₹ 1.12 ಲಕ್ಷ ಕೋಟಿ
ಸೆಪ್ಟೆಂಬರ್	₹ 1.17 ಲಕ್ಷ ಕೋಟಿ
ಅಕ್ಟೋಬರ್	₹ 1.30 ಲಕ್ಷ ಕೋಟಿ

ಈ ವರ್ಷದ ಅಕ್ಟೋಬರ್‌ನಲ್ಲಿ ಆಗಿರುವ ಜಿಎಸ್‌ಟಿ ವರಮಾನ ಸಂಗ್ರಹ ಪ್ರಮಾಣವು ಹಿಂದಿನ ವರ್ಷದ ಅಕ್ಟೋಬರ್ ತಿಂಗಳಿನ ಮಟ್ಟಕ್ಕೆ ಹೋಲಿಸಿದರೆ ಶೇಕಡ 24ರಷ್ಟು ಹೆಚ್ಚು.

‘ಅಕ್ಟೋಬರ್‌ನಲ್ಲಿ ಒಟ್ಟು ₹ 1,30,127 ಕೋಟಿ ವರಮಾನ ಸಂಗ್ರಹ ಆಗಿದೆ.

13ನೇ ಪುಟ ನೋಡಿ

ರಸ್ತೆ ಶುಲ್ಕ ಸಂಗ್ರಹ ಏರಿಕೆ

ಫಾಸ್ಟ್ಯಾಗ್ ಮೂಲಕ ಸಂಗ್ರಹ ಆಗುವ ರಸ್ತೆ ಬಳಕೆ ಶುಲ್ಕದ ಮೊತ್ತವು ಅಕ್ಟೋಬರ್‌ನಲ್ಲಿ ₹ 3,356 ಕೋಟಿಗೆ ಏರಿಕೆ ಆಗಿದೆ. ಅಕ್ಟೋಬರ್‌ನಲ್ಲಿ ಒಟ್ಟು 21.42 ಕೋಟಿ ವಹಿವಾಟುಗಳು ನಡೆದಿವೆ. ಇದು ಇಲ್ಲಿಯವರೆಗಿನ ದಾಖಲೆ. ಸೆಪ್ಟೆಂಬರ್ ತಿಂಗಳಿನಲ್ಲಿ ಫಾಸ್ಟ್ಯಾಗ್ ಮೂಲಕ ₹ 3,000 ಕೋಟಿ ಶುಲ್ಕ ಸಂಗ್ರಹ ಆಗಿತ್ತು.

ಸಿಂದಗಿ–ಹಾನಗಲ್: ಫಲಿತಾಂಶ ಇಂದು

ವಿಜಯಪುರ/ಹಾವೇರಿ: ಸಿಂದಗಿ ಹಾಗೂ ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಮತ ಎಣಿಕೆ ಪ್ರಕ್ರಿಯೆ ನ.2ರಂದು ಬೆಳಿಗ್ಗೆ 8 ಗಂಟೆಗೆ ಆರಂಭವಾಗಲಿದೆ.

ವಿಜಯಪುರ ನಗರದ ಸೈನಿಕ ಶಾಲೆಯ ‘ಒಡೆಯರ ಹೌಸ್’ನಲ್ಲಿ ಸಿಂದಗಿ ಕ್ಷೇತ್ರದ ಮತ ಎಣಿಕೆಗೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ಒಟ್ಟು 22 ಸುತ್ತು ಮತ ಎಣಿಕೆ ನಡೆಯಲಿದೆ.

ಹಾವೇರಿ ನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಹಾನಗಲ್ ಕ್ಷೇತ್ರದ ಮತ ಎಣಿಕೆ ನಡೆಯಲಿದೆ.

ಗ್ಲಾಸ್ಗೋ ಶೃಂಗಸಭೆಯಲ್ಲಿ ಜಾಗತಿಕ ನಾಯಕರ ಮೊರೆ

ಮಾನವ ಕುಲ ರಕ್ಷಣೆಗೆ ಕರೆ

ಗ್ಲಾಸ್ಗೋ (ಎಎಫ್‌ಪಿ): ಹವಾಮಾನ ವೈಪರೀತ್ಯವನ್ನು ತಡೆಗಟ್ಟುವ ಮೂಲಕ ಮಾನವ ಕುಲವನ್ನು ರಕ್ಷಿಸಬೇಕು ಎಂದು ಜಾಗತಿಕ ನಾಯಕರಿಗೆ ಗ್ಲಾಸ್ಗೋ ಹವಾಮಾನ ವೈಪರೀತ್ಯ ತಡೆ ಶೃಂಗ ಸಭೆಯು ಸೋಮವಾರ ಕರೆ ಕೊಟ್ಟಿದೆ. ಶೃಂಗ ಸಭೆಯು ವಿಫಲವಾದರೆ ಅದು ಅನೈತಿಕ, ಇದರ ಕಹಿಯು ಹಲವು ತಲೆಮಾರು ಉಳಿಯಲಿದೆ ಎಂದು ಹೇಳಲಾಗಿದೆ.

ಇಂಗಾಲ ಹೊರಸೂಸುವಿಕೆಯ ಕಡಿತದ ಬದ್ಧತೆಗೆ ರಾಷ್ಟ್ರಗಳು ವಿಫಲವಾದರೆ, ಪ್ರತಿ ದೇಶವೂ ತಮ್ಮ ಹವಾಮಾನ ವೈಪರೀತ್ಯ ತಡೆ ಯೋಜನೆ ಮತ್ತು ನೀತಿಯನ್ನು ಪರಿಷ್ಕರಿಸುತ್ತಲೇ ಇರಬೇಕು. ಇದು ಐದು ವರ್ಷಕ್ಕೆ ಒಮ್ಮೆ ಆದರೆ ಸಾಲದು, ಪ್ರತಿ ವರ್ಷವೂ ಮಾಡಬೇಕಾಗುತ್ತದೆ ಎಂದು ವಿಶ್ವ ಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಹೇಳಿದ್ದಾರೆ.

‘ಇಂಗಾಲ ಹೊರಸೂಸುವಿಕೆ ತಡೆ ಮತ್ತು ಹೊರಸೂಸುವಿಕೆ ಸೊನ್ನೆಗೆ ಇಳಿಸುವಿಕೆ ವಿಚಾರದಲ್ಲಿ ವಿಶ್ವಾಸಾರ್ಹತೆಯ ಕೊರತೆ ಇದೆ, ಗೊಂದಲ ಬಹಳ ಹೆಚ್ಚು ಇದೆ’ ಎಂದು ಅವರು ವಿಶ್ಲೇಷಿಸಿದ್ದಾರೆ.

‘ಜೀವ ವೈವಿಧ್ಯದ ಮೇಲಿನ ದಮನ ಸಾಕು. ಇಂಗಾಲದಿಂದ ನಮ್ಮನ್ನು ನಾವೇ ಹತ್ಯೆ ಮಾಡಿಕೊಂಡದ್ದು ಸಾಕು. ನಿಸರ್ಗವನ್ನು ಶೌಚಾಲಯದಂತೆ ಬಳಸಿದ್ದು ಸಾಕು. ಇನ್ನೂ ಆಳಕ್ಕೆ ಗಣಿಗಾರಿಕೆಗಾಗಿ ತೋಡಿದ್ದು ಸಾಕು. ನಾವೇ ನಮ್ಮ ಗೋರಿಗಳನ್ನು ತೋಡುತ್ತಿದ್ದೇವೆ’ ಎಂದು ಗುಟೆರಸ್ ಜಗತ್ತಿಗೆ ಎಚ್ಚರಿಕೆ ನೀಡಿದ್ದಾರೆ.

ಶೃಂಗಸಭೆಯು ವಿಫಲವಾದರೆ ಜನರ ಆಕ್ರೋಶವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಮುಂದಿನ ತಲೆಮಾರುಗಳು ‘ನಮ್ಮನ್ನು ಕ್ಷಮಿಸದು’ ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಎಚ್ಚರಿಕೆ ಕೊಟ್ಟಿದ್ದಾರೆ.

ಭಾರತದ ಹಾಗೆಯೇ ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳ ಕೃಷಿಗೂ ಹವಾಮಾನ ಬದಲಾವಣೆಯು ಬಹುದೊಡ್ಡ ಸವಾಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಕುಡಿಯುವ ನೀರಿನಿಂದ ಕೈಗೆಟಕುವ ದರದ ವಸತಿಯವರೆಗೆ ಎಲ್ಲವೂ ಹವಾಮಾನ ಬದಲಾವಣೆ ತಡೆಗೆ ಪೂರಕವಾಗಿರಬೇಕು ಎಂದು ಅವರು ಹೇಳಿದರು.

ಹವಾಮಾನ ಬದಲಾವಣೆ ತಡೆ ವಿಚಾರಗಳು ಶಾಲಾ ಪಠ್ಯಕ್ರಮದ ಭಾಗವಾಗಬೇಕು. ಆ ಮೂಲಕ ಮುಂದಿನ ತಲೆಮಾರುಗಳು ಕೂಡ ಈ ವಿಷಯದ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಹವಾಮಾನ ಬದಲಾವಣೆಯನ್ನು ತಡೆಯಲು ಈ ದೇಶಗಳು ವಿಫಲವಾದರೆ ಅದು ನಮ್ಮ ಸಮುದಾಯಗಳಲ್ಲಿನ ಜೀವ ಮತ್ತು ಜೀವನೋಪಾಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಬಾರ್ಬಡೋಸ್ ಪ್ರಧಾನಿ ಹೇಳಿದ್ದಾರೆ.

ಇಂಗಾಲ ಸ್ಥಗಿತ: ಭಾರತ ಕರೆ

ಶ್ರೀಮಂತ ರಾಷ್ಟ್ರಗಳು ಇಂಗಾಲ ಹೊರಸೂಸುವಿಕೆಯನ್ನು ಈಗಿನ ಮಟ್ಟಕ್ಕೆ ಸ್ಥಗಿತಗೊಳಿಸಬೇಕು. ಆ ಮೂಲಕ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ‘ಇಂಗಾಲ ಹೊರಸೂಸುವಿಕೆ ಅವಕಾಶ’ ಕಲ್ಪಿಸಬೇಕು ಎಂದು ಭಾರತವು ಒತ್ತಾಯಿಸಿದೆ. ಭಾರತದಂತಹ ಮಧ್ಯಮ ಆದಾಯದ ದೇಶಗಳಿಗೆ ತಮ್ಮ ಅಭಿವೃದ್ಧಿ ಕಾರ್ಯಸೂಚಿಯನ್ನು ಜಾರಿಗೆ ತರಲು ಇದರಿಂದ ಅನುಕೂಲ ಆಗಲಿದೆ ಎಂದು ಕೇಂದ್ರ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಮೋದಿ–ಬೋರಿಸ್ ಸಭೆ: ಪ್ರಧಾನಿ ಮೋದಿ ಮತ್ತು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಶೃಂಗಸಭೆಯ ಸಂದರ್ಭದಲ್ಲಿ ಭೇಟಿಯಾಗಿ ದ್ವಿಪಕ್ಷೀಯ ವಿಚಾರಗಳ ಬಗ್ಗೆ ಚರ್ಚಿಸಿದ್ದಾರೆ. ಶುದ್ಧ ಇಂಧನ, ಅರ್ಥವ್ಯವಸ್ಥೆ ಮತ್ತು ರಕ್ಷಣೆ ಕುರಿತಂತೆ ಅವರು ಚರ್ಚಿಸಿದ್ದಾರೆ. ಮೋದಿ–ಜಾನ್ಸನ್ ಅವರು ಇದೇ ಮೊದಲಿಗೆ ಭೇಟಿಯಾಗಿದ್ದಾರೆ. ಈ ಹಿಂದೆ, ಎರಡು ಬಾರಿ ಅವರ ಭೇಟಿಯು ಕೋವಿಡ್ ಕಾರಣಕ್ಕೆ ರದ್ದಾಗಿತ್ತು.

ಇನ್ನಷ್ಟು ಸುದ್ದಿಗಳು 10, 11

ವಾಣಿಜ್ಯ ಬಳಕೆ ಎಲ್‌ಪಿಜಿ ಬೆಲೆ ಹೆಚ್ಚಳ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ಪ್ರತಿ ಸಿಲಿಂಡರ್‌ಗೆ ₹ 266ರಷ್ಟು ಹೆಚ್ಚಳ ಆಗಿದೆ. ಈ ಹೆಚ್ಚಳದ ಪರಿಣಾಮವಾಗಿ 19 ಕೆ.ಜಿ. ತೂಕದ ಎಲ್‌ಪಿಜಿ ಸಿಲಿಂಡರ್ ದರವು ಬೆಂಗಳೂರಿನಲ್ಲಿ ₹ 2060.50 ಆಗಿದೆ ಎಂದು ಮೂಲಗಳು ತಿಳಿಸಿವೆ.

ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಹೆಚ್ಚಳ ಮಾಡಿಲ್ಲ. ಆದರೆ, ಇದರ ಬೆಲೆ ಕೂಡ ಶೀಘ್ರದಲ್ಲೇ ಜಾಸ್ತಿ ಆಗುವ ಸಾಧ್ಯತೆಗಳು ಇವೆ ಎಂದು ಮೂಲಗಳು ಹೇಳಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



‘ಕರ್ನಾಟಕದಲ್ಲಿ ಮೊದಲ ಬಾರಿಗೆ ಈ ಮಾದರಿಯ ಕಸಿ’

ನಾಲ್ವರಿಗೆ ಬೆಳಕು ಕೊಟ್ಟ ಅಪ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕಾಲಿಕವಾಗಿ ನಿಧನರಾದ ನಟ ಪುನೀತ್ ರಾಜಕುಮಾರ್ ಅವರ ಕಣ್ಣು ನಾಲ್ವರಿಗೆ ಜಗದ ಬೆಳಕು ತೋರಿದೆ. ಸಾವಿನ ಬಳಿಕ ಮಣ್ಣಿನಲ್ಲಿ ಮಣ್ಣಾಗಲಿದ್ದ ಕಣ್ಣನ್ನು ಪುನೀತ್ ಕುಟುಂಬ ದಾನ ಮಾಡಿದ್ದರಿಂದಾಗಿ, ನಾಲ್ವರ ಬಾಳಿನಲ್ಲಿ ಇಲ್ಲಿಯವರೆಗಿದ್ದ ಅಂಧಕಾರ ದೂರವಾಗಿ ಹೊರಜಗತ್ತನ್ನು ನೋಡುವ ಸೌಭಾಗ್ಯ ದೊರಕಿದೆ.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ನಾರಾಯಣ ನೇತ್ರಾಲಯದ ಮುಖ್ಯಸ್ಥ ಡಾ.ಭುಜಂಗ ಶೆಟ್ಟಿ ಅವರು, ‘ಪುನೀತ್ ಅವರ ಕಣ್ಣಿನ ಕಾರ್ನಿಯಾದ ಮುಂದಿನ ಮತ್ತು ಹಿಂದಿನ ಪದರಗಳನ್ನು ಬೇರ್ಪಡಿಸುವ (ಸೀಳುವ) ಮೂಲಕ ಪ್ರತಿ ಕಣ್ಣಿನಿಂದ ತಲಾ ಇಬ್ಬರು ರೋಗಿಗಳಿಗೆ ಚಿಕಿತ್ಸೆ ನೀಡಲು ನಾವು ಬಳಸಿದ್ದೇವೆ. ಇದರಿಂದ ನಾಲ್ವರಿಗೆ ದೃಷ್ಟಿ ಬಂದಿದೆ’ ಎಂದರು.

‘ಕಣ್ಣಿನ ಮೇಲ್ಪದರದ ಕಾರ್ನಿಯಲ್ ಕಾಯಿಲೆ ಇರುವ ಇಬ್ಬರು ರೋಗಿಗಳಿಗೆ ಮೇಲ್ಪದರವನ್ನು ಕಸಿ ಮಾಡಲಾಗಿದೆ. ಆಳವಾದ ಪದರವನ್ನು ಮಾತ್ರ ಎಂಡೋಥೀಲಿಯಲ್ ಅಥವಾ ಆಳವಾದ ಕಾರ್ನಿಯಲ್ ಪದರದ ಕಾಯಿಲೆ ಇರುವ ರೋಗಿಗಳಿಗೆ ಕಸಿ ಮಾಡಲಾಗಿದೆ. ಆದ್ದರಿಂದ, ನಾಲ್ಕು ವಿಭಿನ್ನ ರೋಗಿಗಳ ದೃಷ್ಟಿಯನ್ನು ಸೃಜಿಸಲು ನಾವು ಎರಡು ಕಾರ್ನಿಯಾಗಳಿಂದ ನಾಲ್ಕು ವಿಭಿನ್ನ ಕಸಿಗಳನ್ನು ಮಾಡಿದ್ದೇವೆ. ಈ ರೀತಿ ಒಂದೇ ದಿನ ಒಬ್ಬರ ಕಣ್ಣನ್ನು ನಾಲ್ವರಿಗೆ ಕಸಿ ಮಾಡಿರುವುದು ರಾಜ್ಯದಲ್ಲಿ ಇದೇ ಮೊದಲು’ ಎಂದು ಅವರು ತಿಳಿಸಿದರು.



> **ಇಂತಹ ಸಂಕಷ್ಟದ ಸಂದರ್ಭದಲ್ಲೂ ಕಣ್ಣಿನ ದಾನ ಮಾಡಿದ ಡಾ.ರಾಜಕುಮಾರ ಕುಟುಂಬ ವರ್ಗಕ್ಕೆ ನಾವು ತುಂಬಾ ಧನ್ಯವಾದಗಳನ್ನು ಸಲ್ಲಿಸುತ್ತೇವೆ**
> **ಡಾ. ಭುಜಂಗ ಶೆಟ್ಟಿ**
> ಮುಖ್ಯಸ್ಥ, ನಾರಾಯಣ ನೇತ್ರಾಲಯ

ಲ್ಯಾಮೆಲ್ಲರ್ ಕೆರಾಟೊಪ್ಲ್ಯಾಸ್ಟಿಯ ಹೇಗೆ:

- ಡೀಪ್ ಆಂಟೀರಿಯರ್ ಲ್ಯಾಮೆಲ್ಲರ್ ಕೆರಾಟೊಪ್ಲ್ಯಾಸ್ಟಿ (DALK) - ಕಾರ್ನಿಯಾದ ಹೊರ ಅಥವಾ ಬಾಹ್ಯ ಭಾಗವನ್ನು ಕಾರ್ನಿಯಲ್ ಡಿಸ್ಟ್ರೋಫಿ ಮತ್ತು ಕೆರಾಟೋಕೊನಸ್ ಹೊಂದಿರುವ ಇಬ್ಬರು ಯುವ ರೋಗಿಗಳಿಗೆ ಕಸಿ ಮಾಡಲಾಗಿದೆ. ಇವು ಕಾರ್ನಿಯಾದ ಮೇಲ್ಮೈ ಪದರದ ಮೇಲೆ ಪರಿಣಾಮ ಬೀರುತ್ತವೆ. ಅವರ ಕಣ್ಣಿನ ಆಳದ ಭಾಗವು ಸಾಮಾನ್ಯವಾಗಿತ್ತು. ಹೀಗಾಗಿ, ಮೇಲಿನ ಭಾಗವನ್ನು ಮಾತ್ರ ಬದಲಾಯಿಸಲಾಯಿತು ಮತ್ತು ರೋಗಿಯ ಎಂಡೋಥೀಲಿಯಂ ಅನ್ನು ಉಳಿಸಿಕೊಳ್ಳಲಾಗಿದೆ.

13ನೇ ಪುಟ ನೋಡಿ

ಕೋವಿಡ್: ಮರಣ ಪ್ರಮಾಣ ದರ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಮರಣ ಪ್ರಕರಣಗಳು ಗಣನೀಯವಾಗಿ ಇಳಿದಿವೆ. ಸೋಮವಾರ ಮೈಸೂರು ಜಿಲ್ಲೆಯಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ.

ಎರಡನೇ ಅಲೆ ಕಾಣಿಸಿಕೊಂಡ ನಂತರ ಇದೇ ಮೊದಲ ಬಾರಿಗೆ ಬೆಂಗಳೂರು ಸೇರಿದಂತೆ 29 ಜಿಲ್ಲೆಗಳಲ್ಲಿ ಹೊಸ ಮರಣ ಪ್ರಕರಣಗಳು ವರದಿಯಾಗಿಲ್ಲ. ಮರಣ ಪ್ರಮಾಣ ದರವು ಸಹ ಇಳಿಕೆಯಾಗಿದ್ದು, ಶೇ 1.06ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಅಸುನೀಗಿದವರ ಒಟ್ಟು ಸಂಖ್ಯೆ 38,084ಕ್ಕೆ ಏರಿಕೆಯಾಗಿದೆ.

ಕೋವಿಡ್ ಹೊಸ ಪ್ರಕರಣಗಳು ಸಹ ಕಡಿಮೆಯಾಗಿವೆ. ಒಂದು ದಿನದಲ್ಲಿ 188 ಮಂದಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.88 ಲಕ್ಷ ದಾಟಿದೆ. ಕೋವಿಡ್ ದೃಢ ಪ್ರಮಾಣವು ಶೇ 0.25ರಷ್ಟಿದೆ.

ಸೋಮವಾರ 318 ಜನರಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಚೇತರಿಸಿಕೊಂಡವರ ಸಂಖ್ಯೆ 29.41 ಲಕ್ಷದಷ್ಟಿದೆ. ಸಕ್ರಿಯ ಪ್ರಕರಣಗಳು ಇಳಿದಿವೆ. ಸದ್ಯ 8,512 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದೆ. ಒಂದು ದಿನದಲ್ಲಿ 73,924 ಮಾದರಿಗಳನ್ನು ಪರೀಕ್ಷಿಸಲಾಗಿದೆ. 5 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೆಂಗಳೂರಿನಲ್ಲಿ 95 ಮಂದಿ ಸೋಂಕಿತರಾಗಿದ್ದಾರೆ. ಮೈಸೂರು (16), ದಕ್ಷಿಣ ಕನ್ನಡ (12), ಹಾಸನ(11) ಮತ್ತು ಕೊಡಗು (10) ಜಿಲ್ಲೆಗಳಲ್ಲಿ ಹತ್ತಕ್ಕಿಂತ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಹತ್ತು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಲಸಿಕಾ ಅಭಿಯಾನವು ತ್ವರಿತಗತಿಯಲ್ಲಿ ನಡೆದಿದ್ದು, ಇದುವರೆಗೆ 4.25 ಕೋಟಿಯಷ್ಟು ಮೊದಲ ಡೋಸ್ ಮತ್ತು 2.29 ಕೋಟಿ ಎರಡನೇ ಡೋಸ್ ನೀಡಲಾಗಿದೆ ಎಂದು ಆರೋಗ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ಮಲಬಾರ್‌ನಿಂದ ಇಂದು ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧನ ತ್ರಯೋದಶಿ ಅಂಗವಾಗಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ರಾಜ್ಯದ ತನ್ನ ಎಲ್ಲ ಮಳಿಗೆಗಳಲ್ಲಿ ನ.2ರಂದು ವಿಶೇಷ ಕೊಡುಗೆಗಳನ್ನು ನೀಡಿದೆ.

ಗ್ರಾಹಕರಿಗೆ ಹಬ್ಬದ ಕೊಡುಗೆಯಾಗಿ ₹50 ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ರತ್ನದ ಕಲ್ಲು ಮತ್ತು ವಜ್ರದ ಆಭರಣಗಳ ಪ್ರತಿ ಖರೀದಿಗೆ ಒಂದು ಚಿನ್ನದ ನಾಣ್ಯ ಸಿಗಲಿದೆ.


ಎಸ್‌ಬಿಐ ಕ್ರೆಡಿಟ್ ಕಾರ್ಡ್ ಇರುವ ಗ್ರಾಹಕರಿಗೆ ಶೇ 5ರಷ್ಟು ಹೆಚ್ಚುವರಿ ಕ್ಯಾಶ್‌ಬ್ಯಾಕ್ ಹಾಗೂ ಪ್ರತಿ ಕಾರ್ಡ್‌ಗೆ ಗರಿಷ್ಠ ₹2,500ರವರೆಗೆ ಕ್ಯಾಶ್‌ಬ್ಯಾಕ್ ಪಡೆಯಬಹುದು.


‘ಶುದ್ಧ ಚಿನ್ನ, ವಜ್ರ ಮತ್ತು ಅಮೂಲ್ಯ ರತ್ನದ ಕಲ್ಲುಗಳಲ್ಲಿ ತಯಾರಿಸಿರುವ ವ್ಯಾಪಕ ಶ್ರೇಣಿಯ ಆಭರಣ ವಿನ್ಯಾಸಗಳನ್ನು ಮಳಿಗೆಗಳಲ್ಲಿ ಪ್ರದರ್ಶಿಸಲಾಗುತ್ತಿದೆ. ನ.2ರಂದು ಬೆಳಿಗ್ಗೆ 8 ಗಂಟೆಯಿಂದಲೇ ಮಳಿಗೆಗಳು ತೆರೆದಿರಲಿವೆ’ ಎಂದು ಪ್ರಕಟಣೆ ತಿಳಿಸಿದೆ.

8ರಿಂದ ಬಯೊಮೆಟ್ರಿಕ್ ಹಾಜರಾತಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ನವೆಂಬರ್ 8ರಿಂದ ಅನ್ವಯವಾಗುವಂತೆ ತನ್ನ ಎಲ್ಲ ಹಂತದ ಸಿಬ್ಬಂದಿಗೆ ಬಯೊಮೆಟ್ರಿಕ್ ಕ್ರಮದಲ್ಲಿ ಹಾಜರಾತಿ ಪಡೆಯುವ ವ್ಯವಸ್ಥೆಯನ್ನು ಮರುಜಾರಿಗೊಳಿಸಲು ತೀರ್ಮಾನಿಸಿದೆ.

ಕೋವಿಡ್ ಕಾರಣದಿಂದಾಗಿ ಸಿಬ್ಬಂದಿಗೆ ಇದುವರೆಗೂ ಬಯೊಮೆಟ್ರಿಕ್ ಕ್ರಮದಲ್ಲಿ ಹಾಜರಾತಿ ನೀಡುವುದರಿಂದ ವಿನಾಯಿತಿ ನೀಡಲಾಗಿತ್ತು.





ಡಾಲರ್ ಇಂಡಸ್ಟ್ರೀಸ್ ಕಂಪನಿಗೆ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾಲರ್ ಇಂಡಸ್ಟ್ರೀಸ್ ಕಂಪನಿಯು ತನ್ನ ಸೆಪ್ಟೆಂಬರ್ ತ್ರೈಮಾಸಿಕ ಫಲಿತಾಂಶ ಪ್ರಕಟಿಸಿದ್ದು, ಕಂಪನಿಯು ₹ 41.24 ಕೋಟಿ ಲಾಭ ಗಳಿಸಿದೆ.

ಕಂಪನಿಯ ಕಾರ್ಯಾಚರಣೆ ಆದಾಯವು ₹ 390 ಕೋಟಿ ಆಗಿದೆ ಎಂದು ಪ್ರಕಟಣೆ ತಿಳಿಸಿದೆ. ‘ಅಕ್ಟೋಬರ್ ತಿಂಗಳಿನಲ್ಲಿ ನಾವು ನಮ್ಮ ಕಂಪನಿಯ ಮೊದಲ ಮಳಿಗೆಯನ್ನು ಅಯೋಧ್ಯೆಯಲ್ಲಿ ಆರಂಭಿಸಿದ್ದೇವೆ. ಇದೇ ಮಾದರಿಯಲ್ಲಿ ದೇಶದ ಎಲ್ಲ ಕಡೆ ಮಳಿಗೆ ಆರಂಭಿಸುವ ಉದ್ದೇಶ ಹೊಂದಿದ್ದೇವೆ’ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ವಿನೋದ್ ಕುಮಾರ ಗುಪ್ತ ಹೇಳಿದ್ದಾರೆ.

ನಗರದಲ್ಲಿ ಇಂದು

‘ಪ್ರಕ್ರಿಯಾ ಅಡ್ವಾನ್ಸ್ಡ್ ಬರ್ನ್ ಯೂನಿಟ್’ ಉದ್ಘಾಟನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಅತಿಥಿಗಳು–ಆರ್‌ಆರ್ ಸಂಸ್ಥೆ ಅಧ್ಯಕ್ಷ ರಾಜಾ ರೆಡ್ಡಿ, ಪೀಣ್ಯ ಕೈಗಾರಿಕೆಗಳ ಸಂಘದ ಅಧ್ಯಕ್ಷ ಪ್ರಕಾಶ್ ಹಾಗೂ ಕಾರ್ಯದರ್ಶಿ ಶ್ಯಾಮ್, ಸ್ಥಳ–ಪ್ರಕ್ರಿಯಾ ಆಸ್ಪತ್ರೆ, 8ನೇ ಮೈಲಿ ಸಿಗ್ನಲ್ ಸಮೀಪ, ತುಮಕೂರು ರಸ್ತೆ, ನಾಗಸಂದ್ರ, ಬೆಳಿಗ್ಗೆ 11

ಕನ್ನಡಕ್ಕಾಗಿ ನಾವು ಅಭಿಯಾನ: ನೃತ್ಯ ರೂಪಕ–ಭವಾನಿ ವಲ್ಲಭ ಮತ್ತು ತಂಡ, ಸುಗಮ ಸಂಗೀತ–ಕಿಕ್ಕೇರಿ ಕೃಷ್ಣಮೂರ್ತಿ, ‘ಶಿವರಾತ್ರಿ’ ನಾಟಕ–ಪ್ರಯೋಗ ರಂಗ ತಂಡ, ಅಧ್ಯಕ್ಷತೆ–ಶಾಸಕಿ ಸೌಮ್ಯಾ ರೆಡ್ಡಿ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಹಕಾರ–ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ–ಜಯರಾಮ ಸೇವಾ ಮಂಡಲಿ, ಜಯನಗರ, ಸಂಜೆ 5.30


ಕಿಕ್ಕೇರಿ ಕೃಷ್ಣಮೂರ್ತಿ

ಪರಿಶಿಷ್ಟರ ವಸತಿ ಯೋಜನೆಗೆ ಪ್ರಭಾವಿಗಳ ಅಡ್ಡಗಾಲು • ದುಡಿದುಣ್ಣುವ ಬಡವರ ಕನಸು ಬುಡಮೇಲು

ದಶಕದ ಹೋರಾಟದ ಬಳಿಕವೂ ಸ್ವಂತ ನಿವೇಶನ ಗಗನ ಕುಸುಮ

• ಮಂಜುನಾಥ ಹೆಬ್ಬಾರ್



ಬೆಂಗಳೂರು: ದಶಕದ ಹೋರಾಟದ ಬಳಿಕ ನಗರದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಬಡವರಿಗೆ ನಿವೇಶನಗಳನ್ನು ನೀಡಲು ಫಲಾನುಭವಿಗಳ ಆಯ್ಕೆಯೂ ಆಗಿದೆ. ಯೋಜನೆಗೆ ಅನುದಾನವೂ ಮಂಜೂರಾಗಿದೆ. ದಶಕಗಳ ಹೋರಾಟಕ್ಕೆ ಜಯ ಸಿಕ್ಕೇ ಬಿಟ್ಟಿತು ಎಂದು ಫಲಾನುಭವಿಗಳು ಸಂಭ್ರಮವನ್ನೂ ಪಟ್ಟಿದ್ದರು. ಸ್ವಂತ ನಿವೇಶನ ಹೊಂದುವ ದುಡಿದುಣ್ಣುವ ಬಡವರ ಕನಸು ಕೊನೆಕ್ಷಣದಲ್ಲಿ ಬುಡಮೇಲಾಗಿದೆ.

ಈಗಾಗಲೇ ಸಿದ್ಧವಾಗಿರುವ ಫಲಾನುಭವಿಗಳ ಪಟ್ಟಿಯನ್ನು ಕೈಬಿಟ್ಟು ಗುಂಪು ವಸತಿ ಯೋಜನೆಯ ಮೂಲಕ ಫಲಾನುಭವಿಗಳ ಆಯ್ಕೆ ಮಾಡಲು ರಾಜ್ಯ ಬಿಜೆಪಿ ಸರ್ಕಾರವು ಮುಂದಾಗಿರುವುದು ಈ ಯೋಜನೆಯ ಅನುಷ್ಠಾನವನ್ನೇ ಕಗ್ಗಂಟಾಗಿಸಿದೆ. ಮೊದಲೇ ಆಮೆಗತಿಯಲ್ಲಿ ಸಾಗಿದ್ದ ಯೋಜನೆ ಮತ್ತಷ್ಟು ವಿಳಂಬವಾಗುವ ಎಲ್ಲ ಲಕ್ಷಣಗಳೂ ಕಾಣಿಸುತ್ತಿವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ವಿಶೇಷ ಘಟಕ ಯೋಜನೆಯಡಿ 1,110 ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡುವ ಯೋಜನೆಗೆ ಪ್ರಭಾವಿಗಳು ಅಡ್ಡಗಾಲು ಹಾಕುತ್ತಿದ್ದಾರೆ ಎಂಬುದು ಫಲಾನುಭವಿಗಳ ಅಳಲು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಹಸ್ತಕ್ಷೇಪದಿಂದಾಗಿ ಸಮಸ್ಯೆ ಸೃಷ್ಟಿಯಾಗಿದೆ ಎಂಬುದು ಅವರ ಆರೋಪ. ವಸತಿ ಸಚಿವರಿಗೆ ತಪ್ಪು ಮಾಹಿತಿ ನೀಡಿ ಶಾಸಕರು ಪತ್ರ ಬರೆಸಿದ್ದಾರೆ ಎಂಬುದು ಅವರ ದೂರು. ಈ ಯೋಜನೆಗೆ ಕಾಯ್ದಿರಿಸಿದ್ದ ಜಮೀನನ್ನು ಮುಖ್ಯಮಂತ್ರಿಯವರ ವಸತಿ ಯೋಜನೆ ಅನುಷ್ಠಾನಕ್ಕೆ ಬಳಸುವುದಕ್ಕೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರೂ ವಿರೋಧ ವ್ಯಕ್ತಪಡಿಸಿದ್ದಾರೆ.

ಏನಿದು ಪ್ರಕರಣ: ಬಿಬಿಎಂಪಿಯಲ್ಲಿ ವೆಚ್ಚ ಮಾಡದೆ ಉಳಿದಿದ್ದ ಎಸ್‌ಸಿಪಿ/ಟಿಎಸ್‌ಪಿ (ವಿಶೇಷ ಘಟಕ ಯೋಜನೆ) ಮೀಸಲು ಹಣದಲ್ಲಿ ವಸತಿ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ಯೋಜನೆ ಹಮ್ಮಿಕೊಳ್ಳಲಾಗಿತ್ತು. ಪರಿಶಿಷ್ಟರಿಗೆ ನಿವೇಶನ ಹಂಚಿಕೆ ಮಾಡಲು ಪಾಲಿಕೆಯ ಪಶ್ಚಿಮ ವಲಯ, ದಕ್ಷಿಣ ವಲಯ ಮತ್ತು ರಾಜರಾಜೇಶ್ವರಿನಗರ ವಲಯಗಳ ಜಂಟಿ ಆಯುಕ್ತರ ಅಧ್ಯಕ್ಷತೆಯಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ನಿವೇಶನರಹಿತ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಪಾಲಿಕೆಯ ವ್ಯಾಪ್ತಿಯಲ್ಲಿ ಜಮೀನು ಲಭ್ಯ ಇರಲಿಲ್ಲ.

ಶ್ರೀನಿವಾಸ ಪ್ರಸಾದ್ ಕಂದಾಯ ಸಚಿವರಾಗಿದ್ದಾಗ ಅವರ ಅಧ್ಯಕ್ಷತೆಯಲ್ಲಿ 2014ರ ಜುಲೈ 18ರಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಬಿಬಿಎಂಪಿ ಆಯುಕ್ತರು ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿ ಉಪಸ್ಥಿತಿಯಲ್ಲಿ ಸಭೆ ನಡೆದಿತ್ತು. ವಸತಿ ರಹಿತರಿಗೆ ನಿವೇಶನ ಒದಗಿಸಲು ಜಮೀನುಗಳನ್ನು ಗುರುತಿಸಿ ಪಾಲಿಕೆಗೆ ಹಸ್ತಾಂತರಿಸಲು ತೀರ್ಮಾನಿಸಲಾಗಿತ್ತು. ಈ ಉದ್ದೇಶಕ್ಕೆ ದಾಸನಪುರ ಹೋಬಳಿಯ ಲಕ್ಷ್ಮೀಪುರ ಗ್ರಾಮದ ಸರ್ವೆ ನಂಬರ್ 24 ಮತ್ತು 25ರಲ್ಲಿ ಹಾಗೂ ಕೆಂಗೇರಿ ಹೋಬಳಿಯ ಅಗರ ಗ್ರಾಮದ ಸರ್ವೆ ನಂ.28ರಲ್ಲಿ ಸೇರಿ ಒಟ್ಟು 29 ಎಕರೆ 7 ಗುಂಟೆ ಜಮೀನನ್ನು ಪಾಲಿಕೆಗೆ ಹಸ್ತಾಂತರಿಸಲಾಗಿತ್ತು. ಫಲಾನುಭವಿಗಳ ಆಯ್ಕೆಯನ್ನೂ ಮಾಡಲಾಗಿತ್ತು.

ಶಾಸಕರ ಪತ್ರ: ಈ ನಡುವೆ, 2019ರ ಆಗಸ್ಟ್‌ನಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದ ಎಸ್.ಆರ್.ವಿಶ್ವನಾಥ್ ಅವರು, ಈ ಪ್ರಕ್ರಿಯೆಯನ್ನು ರದ್ದು ಮಾಡಬೇಕು ಎಂದು ಕೋರಿದ್ದರು. ಶಾಸಕರ ಮನವಿಯಂತೆ ಕ್ರಮ ಕೈಗೊಳ್ಳಬೇಕು ಎಂದು ಯಡಿಯೂರಪ್ಪ ಅವರು ಅಧಿಕಾರಿಗಳಿಗೆ ಸೂಚಿಸಿದರು.

'ಫಲಾನುಭವಿಗಳನ್ನು ಆಶ್ರಯ ಸಮಿತಿಯ ಮೂಲಕ ಆಯ್ಕೆ ಮಾಡಿಲ್ಲ. ಬಿಬಿಎಂಪಿಯ ಜಂಟಿ ಆಯುಕ್ತರಿಂದ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸಲಾಗಿದೆ. ಇದು ಸರ್ಕಾರದ ನಿಯಮಗಳಿಗೆ ವಿರುದ್ಧ. ಹೀಗಾಗಿ, ಈ ಪ್ರಸ್ತಾವನೆಯನ್ನು ಮರುಪರಿಶೀಲಿಸಿ ಫಲಾನುಭವಿಗಳ ಆಯ್ಕೆಯನ್ನು ಆಶ್ರಯ ಸಮಿತಿ ಹಾಗೂ ಜಾಗೃತ ಸಮಿತಿಗಳ ಮೂಲಕ ಮಾಡಬೇಕು' ಎಂದು ಎಸ್.ಆರ್. ವಿಶ್ವನಾಥ್ ಪತ್ರದಲ್ಲಿ ಆಗ್ರಹಿಸಿದ್ದರು.

'ಈ ಜಮೀನಿನಲ್ಲಿ 1,100 ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡುವ ಬದಲು ಗುಂಪು ವಸತಿ ಯೋಜನೆಯಡಿ 2,500 ಫಲಾನುಭವಿಗಳಿಗೆ ಸಿದ್ಧ ವಸತಿ ಕಲ್ಪಿಸುವುದು ಉತ್ತಮ. ಇದಕ್ಕಾಗಿ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಫಲಾನುಭವಿಗಳ ಆಯ್ಕೆ ಮಾಡಿ ವಿಳಂಬವಿಲ್ಲದೆ ಯೋಜನೆ ಅನುಷ್ಠಾನ ಮಾಡಬೇಕು' ಎಂದೂ ವಸತಿ ಸಚಿವ ವಿ.ಸೋಮಣ್ಣ ಅವರು 2020ರ ನವೆಂಬರ್‌ನಲ್ಲಿ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದರು. ಈ ಪತ್ರದ ಆಧಾರದಲ್ಲಿ, 'ಈ ಜಮೀನನ್ನು ರಾಜೀವ ಗಾಂಧಿ ವಸತಿ ನಿಗಮಕ್ಕೆ ಹಸ್ತಾಂತರಿಸಬೇಕು. ಗುಂಪು ವಸತಿ ಯೋಜನೆಯಡಿ 2,500 ಫಲಾನುಭವಿಗಳಿಗೆ ವಸತಿಗಳನ್ನು ಹಂಚಿಕೆ ಮಾಡಬೇಕು' ಎಂದು ಯಡಿಯೂರಪ್ಪ ನಿರ್ದೇಶನ ನೀಡಿದ್ದರು.

ಬಿಜೆಪಿ ಸಂಸದರಿಂದಲೇ ಪತ್ರ: ಈ ಜಮೀನನ್ನು ಮುಖ್ಯಮಂತ್ರಿಯವರ ವಸತಿ ಯೋಜನೆ ಅನುಷ್ಠಾನಕ್ಕೆ ಬಳಸುವುದಕ್ಕೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ವಿರೋಧ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿರುವ ಶ್ರೀನಿವಾಸ ಪ್ರಸಾದ್, 'ಈಗಾಗಲೇ ಆಯ್ಕೆಯಾಗಿರುವ 1,110 ಫಲಾನುಭವಿಗಳಿಗೆ ನಿವೇಶನ ನೀಡುವುದಕ್ಕೆ ಮಾತ್ರ ಈ ಜಮೀನನ್ನು ಉಪಯೋಗಿಸಿಕೊಳ್ಳಬೇಕು. ಇದನ್ನೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಕೂಡಲೇ ಬಡಾವಣೆ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿ ನಿವೇಶನ ಹಂಚಲು ಆದೇಶ ಮಾಡಬೇಕು. ಈ ಜಮೀನನ್ನು ವಸತಿ ನಿರ್ಮಾಣಕ್ಕೆ ಬಳಸುವ ನಿರ್ದೇಶನವನ್ನು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದ್ದಾರೆ.

'ಪರಿಶಿಷ್ಟರಿಗೆ ನಿವೇಶನ ನೀಡಲು ನಗರಾಭಿವೃದ್ಧಿ ಇಲಾಖೆಯು ಉನ್ನತ ಮಟ್ಟದ ಸಭೆಯಲ್ಲಿ ನಿಮ್ಮ ಮುಂದೆ ಕಡತ ಮಂಡಿಸಲು ಸಿದ್ಧತೆ ನಡೆಸಿತ್ತು. ಈ ನಡುವೆ ವಸತಿ ಸಚಿವರು ಈ ಫಲಾನುಭವಿಗಳ ಜೊತೆಗೆ ಇನ್ನಷ್ಟು ಫಲಾನುಭವಿಗಳನ್ನು ಸೇರಿಸಿ ಎಲ್ಲರಿಗೂ ನಿವೇಶನದ ಬದಲು ವಸತಿ ನೀಡುವ ಯೋಜನೆಗೆ ತಮ್ಮಿಂದ ಅನುಮತಿ ಪಡೆದಿದ್ದಾರೆ. ನಿವೇಶನದ ಬದಲು ವಸತಿ ನೀಡುವುದು ಈ ಕಾರ್ಯಕ್ರಮದ ಮೂಲ ಆಶಯಕ್ಕೆ ಧಕ್ಕೆ ತರುತ್ತದೆ' ಎಂದೂ ಟೀಕಿಸಿದ್ದಾರೆ.



13 ವರ್ಷಗಳಿಂದ ಹೋರಾಟ ಮಾಡಿದ ಬಳಿಕ ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿತು. ಆದರೆ, ಈಗ ಯೋಜನೆಯ ಮೂಲಸ್ವರೂಪವನ್ನೇ ಬದಲಿಸಲಾಗುತ್ತಿದೆ. ಇದನ್ನು ಖಂಡಿಸಿ ಶಾಸಕ ಎಸ್.ಆರ್.ವಿಶ್ವನಾಥ್ ಮನೆ ಮುಂದೆ ಧರಣಿ ನಡೆಸಲಾಗುವುದು.

ಮಾರಸಂದ್ರ ಮುನಿಯಪ್ಪ, ಬಿಎಸ್‌ಪಿ ರಾಜ್ಯ ಉಸ್ತುವಾರಿ



ಈ ವಿಷಯದ ಬಗ್ಗೆ ನನ್ನಲ್ಲಿ ಈಗ ಹೆಚ್ಚು ಮಾಹಿತಿ ಇಲ್ಲ. ವಿವರವಾಗಿ ಮಾಹಿತಿ ಪಡೆದು ಮಂಗಳವಾರ ಪ್ರತಿಕ್ರಿಯೆ ನೀಡುತ್ತೇನೆ.

ವಿ.ಸೋಮಣ್ಣ, ವಸತಿ ಸಚಿವ

ಸಿ.ಎಂ ನೇತೃತ್ವದಲ್ಲಿ 6ರಂದು ಸಭೆ

ಈ ವಸತಿ ಯೋಜನೆಯ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಇದೇ 6ರಂದು ಮುಖ್ಯಮಂತ್ರಿ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಸಭೆ ಆಯೋಜಿಸಲಾಗಿದೆ.

'ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರು ಸೂರು ಕಟ್ಟಿಕೊಳ್ಳುವ ಹೊತ್ತಿನಲ್ಲಿ ಕೆಲವು ದಲಿತ ವಿರೋಧಿಗಳು ಅಡ್ಡಗಾಲು ಹಾಕಿದ್ದಾರೆ. ಶಾಸಕ ಎಸ್.ಆರ್.ವಿಶ್ವನಾಥ್ ಹಾಗೂ ಸಚಿವ ವಿ.ಸೋಮಣ್ಣ ಈ ಯೋಜನೆಗೆ ಅಡ್ಡಿಪಡಿಸುತ್ತಿದ್ದಾರೆ. ಬಿಬಿಎಂಪಿಗೆ ಹಸ್ತಾಂತರ ಆಗಿರುವ ಜಮೀನನ್ನು ತಮ್ಮ ಯೋಜನೆಗೆ ಬಳಸಿಕೊಂಡು ಮನೆ ಕಟ್ಟಿಸಿ ಕೊಟ್ಟಂತರ ರೂಪಾಯಿಗೆ ಮಾರಾಟ ಮಾಡಲು ಮುಂದಾಗಿದ್ದಾರೆ' ಎಂದು ಮಾರಸಂದ್ರ ಮುನಿಯಪ್ಪ ಅವರು ಮುಖ್ಯಮಂತ್ರಿ ಅವರಿಗೆ ದೂರು ನೀಡಿದ್ದರು. ಹೀಗಾಗಿ, ಈ ಸಭೆಯನ್ನು ಕರೆಯಲಾಗಿದೆ.

ಸಭೆಯಲ್ಲಿ ಪಾಲ್ಗೊಳ್ಳಲು ವಸತಿ ಸಚಿವ ವಿ.ಸೋಮಣ್ಣ, ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, ನಗರಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಬಿಬಿಎಂಪಿ ಮುಖ್ಯ ಆಯುಕ್ತ, ವಸತಿ ಇಲಾಖೆಯ ಕಾರ್ಯದರ್ಶಿ, ನಗರ ಜಿಲ್ಲಾಧಿಕಾರಿ, ಬಿಎಸ್‌ಪಿಯ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ ಅವರಿಗೆ ಆಹ್ವಾನ ನೀಡಲಾಗಿದೆ.



ಮುಖ್ಯಮಂತ್ರಿಯವರ ವಸತಿ ಯೋಜನೆಗೆ ಸಾವಿರಾರು ಎಕರೆ ಸರ್ಕಾರಿ ಜಮೀನುಗಳು ಬೆಂಗಳೂರು ಸುತ್ತಮುತ್ತಲು ಲಭ್ಯ ಇವೆ. ಈ ಜಮೀನುಗಳನ್ನು ವರ್ಗಾಯಿಸಿಕೊಂಡು ವಸತಿ ಇಲಾಖೆಯ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬಹುದು.

ವಿ.ಶ್ರೀನಿವಾಸ ಪ್ರಸಾದ್, ಬಿಜೆಪಿ ಸಂಸದ

ಮೂಲಭೂತ ಹಕ್ಕು ಕಸಿದುಕೊಂಡಂತೆ

ನಿವೇಶನ ನೀಡುವ ಮಹತ್ವಾಕಾಂಕ್ಷಿ ಯೋಜನೆಯಡಿ ಭೂ ಒಡೆತನ ಹಕ್ಕು ಫಲಾನುಭವಿಗಳಿಗೆ ನೀಡುವುದು ಅತ್ಯಂತ ಪರಿಣಾಮಕಾರಿ ಹಾಗೂ ದೂರದೃಷ್ಟಿ ಹೊಂದಿರುವಂತಹುದು. ಆದರೆ, ವಸತಿ ಇಲಾಖೆಯ ಪ್ರಸ್ತಾವನೆಯು ಈ ಮೂಲ ಆಶಯಕ್ಕೆ ಧಕ್ಕೆ ತರುವಂತಹುದು. ಸುಮಾರು ಒಂದು ದಶಕದಿಂದ ನಿವೇಶನ ಪಡೆಯಲು ಕಾಯುತ್ತಿರುವ 1,100 ಬಡ ಫಲಾನುಭವಿಗಳ ಮೂಲಭೂತ ಹಕ್ಕನ್ನು ಕಸಿದುಕೊಂಡಂತೆ ಆಗುತ್ತದೆ. ಫಲಾನುಭವಿಗಳ ಹಿತಾಸಕ್ತಿಗೆ ಮಾರಕವಾಗುವ ರೀತಿಯಲ್ಲಿ ಯೋಜನೆಯನ್ನು ಬದಲಾಯಿಸಿರುವ ಕ್ರಮವನ್ನು ಕೈಬಿಡಬೇಕು. ಪಾಲಿಕೆಯ ವತಿಯಿಂದಲೇ ಯೋಜನೆ ಜಾರಿಗೊಳಿಸಬೇಕು.

ಎಸ್.ಗಂಗಾಧರ್, ಬಹುಜನ ವಿಮೋಚನ ಚಳವಳಿಯ ಸಂಚಾಲಕ

ಮನೆಯನ್ನೇ ಕಟ್ಟಿಸಿಕೊಡುತ್ತೇವೆ



ಪಾಲಿಕೆಯಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹೇಗೆ ನಡೆಸಲಾಯಿತು ಹಾಗೂ ಆಯ್ಕೆ ಮಾಡಿದ್ದು ಯಾರು ಎಂಬುದೇ ಅಧಿಕಾರಿಗಳಿಗೆ ಸರಿಯಾಗಿ ಗೊತ್ತಿಲ್ಲ. ಆಶ್ರಯ ಸಮಿತಿ ಮೂಲಕ ಫಲಾನುಭವಿಗಳ ಆಯ್ಕೆ ಮಾಡಬೇಕಲ್ಲವೇ. ನಿವೇಶನ ಹಂಚುವ ಬದಲು ಮನೆ ಕಟ್ಟಿಸಿಕೊಡುವುದು ನಮ್ಮ ಉದ್ದೇಶ. ಅದಕ್ಕಾಗಿ ಮುಖ್ಯಮಂತ್ರಿ ವಸತಿ ಯೋಜನೆಯಡಿ ಯೋಜನೆ ಅನುಷ್ಠಾನಕ್ಕೆ ಮುಂದಾಗಿದ್ದೇವೆ. ಅರ್ಹರೆಲ್ಲರೂ ಅರ್ಜಿ ಹಾಕಲಿ. ಮನೆಯನ್ನೇ ಕಟ್ಟಿಸಿಕೊಡುತ್ತೇವೆ. ಮನೆ ನಿರ್ಮಿಸಲು ಅವರಿಗೆ ₹5 ಲಕ್ಷ ನೆರವು ನೀಡಲಾಗುತ್ತದೆ. ಜತೆಗೆ, ಯೋಜನೆಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕಿದೆ. ಈ ವಿಚಾರದಲ್ಲಿ ಕೆಲವರು ಅನಗತ್ಯವಾಗಿ ವಿವಾದ ಸೃಷ್ಟಿ ಮಾಡುತ್ತಿದ್ದಾರೆ.

ಎಸ್.ಆರ್.ವಿಶ್ವನಾಥ್, ಬಿಡಿಎ ಅಧ್ಯಕ್ಷ

ರಷ್ಯಾಕ್ಕೆ ಭಾರತದ ರಾಯಭಾರಿಯಾಗಿ ಪವನ್ ಕಪೂರ್

ನವದೆಹಲಿ (ಪಿಟಿಐ): ರಷ್ಯಾಕ್ಕೆ ಭಾರತದ ರಾಯಭಾರಿಯಾಗಿ ಪವನ್ ಕಪೂರ್, ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ (ಯುಎಇ) ರಾಯಭಾರಿಯಾಗಿ ಸಂಜಯ್ ಸುಧೀರ್ ಅವರನ್ನು ಸೋಮವಾರ ನೇಮಕ ಮಾಡಲಾಗಿದೆ.

ಸ್ಪೇನ್‌ಗೆ ಭಾರತದ ಮುಂದಿನ ರಾಯಭಾರಿಯಾಗಿ ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿ ಮಹಾ ನಿರ್ದೇಶಕ ದಿನೇಶ್ ಕೆ. ಪಟ್ನಾಯಕ್ ಅವರನ್ನು ನೇಮಕ ಮಾಡಲಾಗಿದೆ.

ಸಾರಿಗೆ ಇಲಾಖೆಯಲ್ಲಿ 30 ಆನ್‌ಲೈನ್ ಸೇವೆ


ಸಾರಿಗೆ ಇಲಾಖೆಯು ವಾಹನ ನೋಂದಣಿ, ಕಲಿಕಾ ಚಾಲನಾ ಪರವಾನಗಿ ಸೇರಿದಂತೆ 30 ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸಲಿದೆ. ಕಾಗದ ರಹಿತ ಮತ್ತು ಸಂಪರ್ಕ ರಹಿತ ಸೇವೆಗಳಿಗೆ ಮುಖ್ಯಮಂತ್ರಿ ಸೋಮವಾರ ಚಾಲನೆ ನೀಡಿದರು.

ವಾಹನ ಮಾರಾಟ ಮಳಿಗೆಗಳಲ್ಲೇ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸುವ ವ್ಯವಸ್ಥೆಯೂ ಜಾರಿಗೆ ಬಂದಿದೆ. ಪ್ರಾಯೋಗಿಕವಾಗಿ ರಾಜ್ಯದ ಹತ್ತು ಮಳಿಗೆಗಳಲ್ಲಿ ಈ ಸೇವೆ ಆರಂಭಕ್ಕೆ ಅನುಮತಿ ನೀಡಲಾಗಿದೆ ಎಂದು ಮುಖ್ಯಮಂತ್ರಿ ಪ್ರಕಟಿಸಿದರು.

ಬೆಂಗಳೂರಿನಲ್ಲಿ ಯಶಸ್ವಿಯಾದರೆ ಜ.26ರಿಂದ ರಾಜ್ಯದಾದ್ಯಂತ ವಿಸ್ತರಣೆ: ಬೊಮ್ಮಾಯಿ

56 ಸರ್ಕಾರಿ ಸೇವೆ: ಮನೆ ಬಾಗಿಲಿಗೆ ಜನಸೇವಕ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ ಸರ್ಕಾರದ ಎಂಟು ಇಲಾಖೆಗಳ 56 ಸೇವೆಗಳು ಇನ್ನು ಜನರ ಮನೆ ಬಾಗಿಲಿನಲ್ಲೇ ಬರಲಿವೆ. ಜನರು ನಿಗದಿಪಡಿಸಿದ ಸಮಯಕ್ಕೆ 'ಜನಸೇವಕರು' ಅರ್ಜಿ ನಮೂನೆ ಹಿಡಿದು ಮನೆ ಬಾಗಿಲಿಗೇ ಬರಲಿದ್ದಾರೆ.

'ಜನಸೇವಕ' ಯೋಜನೆಯನ್ನು ಬಿಬಿಎಂಪಿ ವ್ಯಾಪ್ತಿಯ ಎಲ್ಲ ಪ್ರದೇಶದಲ್ಲೂ ಅನುಷ್ಠಾನಕ್ಕೆ ತರುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಚಾಲನೆ ನೀಡಿದರು. ರಾಜಾಜಿನಗರ ಮತ್ತು ದಾಸರಹಳ್ಳಿ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಾಯೋಗಿಕವಾಗಿ ಜಾರಿಯಾಗಿದ್ದ ಈ ಕಾರ್ಯಕ್ರಮ ನಗರದ ಎಲ್ಲ 28 ವಿಧಾನಸಭಾ ಕ್ಷೇತ್ರಗಳಿಗೂ ವಿಸ್ತರಣೆಯಾಗಿದೆ. 2022ರ ಜನವರಿ 26ರೊಳಗೆ ರಾಜ್ಯದಾದ್ಯಂತ ವಿಸ್ತರಿಸುವ ಗುರಿ ಹೊಂದಲಾಗಿದೆ.

'ಜನಸೇವಕ' ಯೋಜನೆ ಅನುಷ್ಠಾನ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ, 'ಸರ್ಕಾರಿ ಕಚೇರಿಗಳಲ್ಲಿ ಸುಲಭವಾಗಿ ಜನರ ಕೆಲಸ ಆಗುತ್ತಿಲ್ಲ. ಜನರು ಮತ್ತು ಸರ್ಕಾರದ ನಡುವೆ ಅಡ್ಡಗೋಡೆ ಸೃಷ್ಟಿಯಾಗಿದೆ. ಹಣ ತೆತ್ತು ಸರ್ಕಾರಿ ಸೇವೆಗಳನ್ನು ಪಡೆಯಬೇಕಾದ ಸ್ಥಿತಿ ಇದೆ. ಇವೆಲ್ಲದಕ್ಕೂ ಕಡಿವಾಣ ಹಾಕುವ ಉದ್ದೇಶದಿಂದ ಜನಸೇವಕ ಯೋಜನೆ ಜಾರಿಗೆ ತರಲಾಗಿದೆ' ಎಂದರು.

ಇದೊಂದು ಕ್ರಾಂತಿಕಾರಿ ಕಾರ್ಯಕ್ರಮ. ಬಿಬಿಎಂಪಿ ವ್ಯಾಪ್ತಿಯಲ್ಲಿ ಯೋಜನೆ ಯಶಸ್ವಿಯಾಗಿ ಜಾರಿಗೆ ಬರಬೇಕು. ಅಧಿಕಾರಿಗಳು ಈ ಯೋಜನೆ ಅನುಷ್ಠಾನದಲ್ಲಿ ಬದ್ಧತೆಯಿಂದ ಕೆಲಸ ಮಾಡಬೇಕು. ಸ್ಪಷ್ಟ ಗುರಿಯೊಂದಿಗೆ ಮುನ್ನಡೆಯಬೇಕು ಎಂದು ಸೂಚಿಸಿದರು.

ಮೇಲುಸ್ತುವಾರಿಗೆ ಸಮಿತಿ: ಜನಸೇವಕರಾಗಿ ನಿಯುಕ್ತಿಗೊಂಡವರು ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಯೋಜನೆಯ ಅನುಷ್ಠಾನದ ಮೇಲುಸ್ತುವಾರಿಗೆ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಪ್ರತಿ ಹಂತದಲ್ಲೂ ನಿಗಾ ಇಡುವ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಇದು ಜನಸ್ನೇಹಿ ಆಡಳಿತದ ಒಂದು ಭಾಗ. ಈ ಯೋಜನೆ ಯಶಸ್ವಿಯಾದರೆ ರಾಜ್ಯದ ಜನರ ಆದಾಯ ಹೆಚ್ಚಳಕ್ಕೆ ದಾರಿಯಾಗಲಿದೆ. ಇದರಿಂದ ಸರ್ಕಾರದ ವರಮಾನವೂ ಹೆಚ್ಚುತ್ತದೆ. ಜನರೇ ಸರ್ಕಾರದ ನಿಜವಾದ ಮಾಲೀಕರು. ಈಗ ಸರ್ಕಾರ ತನ್ನ ಮಾಲೀಕರ ಮನೆ ಬಾಗಿಲಿಗೆ ಹೋಗಿ ಸೇವೆ ಒದಗಿಸುವ ಪ್ರಯತ್ನ ಆರಂಭಿಸಿದೆ ಎಂದರು.

ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಬಿ. ಶ್ರೀರಾಮುಲು, ಬಿ.ಸಿ.ನಾಗೇಶ್, ಶಾಸಕರಾದ ರಿಜ್ವಾನ್ ಅರ್ಷದ್, ಎಸ್. ಸುರೇಶ್ ಕುಮಾರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಉಪಸ್ಥಿತರಿದ್ದರು.

ಇಲಾಖೆ	ಸೇವೆಗಳ ಸಂಖ್ಯೆ
ಆಧಾರ್	4
ಕಂದಾಯ ಇಲಾಖೆ	21
ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ	9
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ	18
ಅಂಗವಿಕಲರು ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ	1
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	1
ಪೊಲೀಸ್ ಇಲಾಖೆ	3
ಆಹಾರ ಇಲಾಖೆ	1

ಜನಸೇವಕ ಅನುಷ್ಠಾನ ಹೇಗೆ?

ಜನರು ಸರ್ಕಾರಿ ಸೇವೆ ಪಡೆಯಲು 080-44554455 ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದು ಅಥವಾ ಮೊಬೈಲ್ ಒನ್ ಆ್ಯಪ್‌ನಲ್ಲಿ ನೋಂದಣಿ ಮಾಡಿಸಬಹುದು ಅಥವಾ www.janasevaka.karnataka.gov.in ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಸಬಹುದು.

ಯಾವ ಸೇವೆ ಅಗತ್ಯವಿದೆ? ಯಾವ ಸಮಯಕ್ಕೆ ಜನಸೇವಕರು ಮನೆಗೆ ಬರಬೇಕು ಎಂಬುದನ್ನೂ ನಿಗದಿಪಡಿಸಬೇಕು. ನಿರ್ದಿಷ್ಟ ಸಮಯಕ್ಕೆ ಜನಸೇವಕರು ಅರ್ಜಿ ನಮೂನೆಗಳೊಂದಿಗೆ ಮನೆ ಬಾಗಿಲಿಗೆ ಹೋಗುತ್ತಾರೆ. ಪೂರಕ ದಾಖಲೆ ಪಡೆದು ಸೇವಾ ಸಿಂಧು ತಂತ್ರಾಂಶದಲ್ಲಿ ಅರ್ಜಿ ಅಪ್‌ಲೋಡ್ ಮಾಡುತ್ತಾರೆ. ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿ ನಿಗದಿತ ಸೇವೆಯನ್ನು ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ.

ಪ್ರತಿ ಸೇವೆಗೆ ₹ 115 ಸೇವಾ ಶುಲ್ಕ ಮತ್ತು ಇಲಾಖೆಯ ಸೇವಾ ಶುಲ್ಕ ಪಾವತಿಸಬೇಕು. ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೂ ಭೇಟಿಗೆ ಸಮಯ ನಿಗದಿಗೆ ಅವಕಾಶವಿದೆ.

ಕುಂದುಕೊರತೆ ನಿವಾರಣೆಗೆ ಜನಸ್ಪಂದನ

ಸಾರ್ವಜನಿಕರ ಕುಂದುಕೊರತೆಗಳ ನಿವಾರಣೆಗಾಗಿ ರೂಪಿಸಿರುವ ಏಕೀಕೃತ 'ಜನಸ್ಪಂದನ' ವ್ಯವಸ್ಥೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು.

ಸಾರ್ವಜನಿಕರು ದೂರವಾಣಿ ಸಂಖ್ಯೆ 1902ಗೆ ಕರೆಮಾಡಿ ಅಥವಾ ಜನಸ್ಪಂದನ ತಂತ್ರಾಂಶದಲ್ಲಿ ಲಾಗಿನ್ ಆಗಿ ತಮ್ಮ ಅಹವಾಲು ಸಲ್ಲಿಸಬಹುದು. 50 ಇಲಾಖೆಗಳ 600 ಕಾರ್ಯಕ್ರಮಗಳು, ಯೋಜನೆಗಳಿಗೆ ಸಂಬಂಧಿಸಿದಂತೆ ದೂರು ಸಲ್ಲಿಸಬಹುದು.

ಸ್ವಯಂಚಾಲಿತವಾಗಿ ಅಹವಾಲು/ ದೂರು ಸಂಬಂಧಿಸಿದ ಅಧಿಕಾರಿಗೆ ರವಾನೆಯಾಗುತ್ತದೆ. ಅದನ್ನು ವಿಲೇವಾರಿ ಮಾಡುವವರೆಗೂ ನಿಗಾ ಇಡುವ ವ್ಯವಸ್ಥೆ ರೂಪಿಸಲಾಗಿದೆ.

4.11 ಲಕ್ಷ ಪಡಿತರ ಚೀಟಿ ಮಂಜೂರು

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 4.11 ಲಕ್ಷ ಪಡಿತರ ಚೀಟಿಗಳನ್ನು ಮಂಜೂರು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸೋಮವಾರ ನಡೆದ ಜನಸೇವಕ ಯೋಜನೆ ಉದ್ಘಾಟನಾ ಸಮಾರಂಭದಲ್ಲಿ ಈ ವಿಷಯ ಪ್ರಕಟಿಸಿದ ಅವರು, 'ಪಡಿತರ ಚೀಟಿ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳು ಹಲವು ವರ್ಷಗಳಿಂದ ಬಾಕಿ ಇದ್ದವು. ಎಲ್ಲವನ್ನೂ ಅನುಮೋದಿಸಲಾಗಿದೆ. ಹೊಸ ಪಡಿತರ ಚೀಟಿಗಳನ್ನು ಮಂಜೂರು ಮಾಡಿ ಆದೇಶ ಹೊರಡಿಸಿದ್ದೇನೆ' ಎಂದರು.

'2.66 ಲಕ್ಷ ಆದ್ಯತಾ ವಲಯದ (ಬಡತನ ರೇಖೆಗಿಂತ ಕೆಳಗಿರುವ- ಬಿಪಿಎಲ್) ಮತ್ತು 1.45 ಎಪಿಎಲ್ ಪಡಿತರ ಚೀಟಿಗಳಿಗೆ ಅನುಮೋದನೆ ನೀಡಿದ್ದೇನೆ. ಇದರಿಂದ 4.11 ಲಕ್ಷ ಕುಟುಂಬಗಳಿಗೆ ಅನುಕೂಲವಾಗಲಿದೆ' ಎಂದು ಹೇಳಿದರು.

ಹೆಚ್ಚುವರಿ ಹೊರೆ ಇಲ್ಲ: ಇತ್ತೀಚಿನ ಕೆಲವು ತಿಂಗಳುಗಳಲ್ಲಿ 2.70 ಲಕ್ಷಕ್ಕೂ ಹೆಚ್ಚು ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ. ಅಷ್ಟೇ ಸಂಖ್ಯೆಯ ಹೊಸ ಬಿಪಿಎಲ್ ಪಡಿತರ ಚೀಟಿಗಳನ್ನು ಮಂಜೂರು ಮಾಡಲಾಗಿದೆ. ಹೀಗಾಗಿ ಹೊಸ ಪಡಿತರ ಚೀಟಿಗಳ ಮಂಜೂರಾತಿಯಿಂದ ಸರ್ಕಾರದ ಬೊಕ್ಕಸದ ಮೇಲೆ ಯಾವುದೇ ಹೊರೆ ಆಗುವುದಿಲ್ಲ ಎಂದು ಆಹಾರ ಇಲಾಖೆ ಮೂಲಗಳು ತಿಳಿಸಿವೆ.

2022ರ ಹಜ್ ಯಾತ್ರೆ: ಆನ್‌ಲೈನ್ ಅರ್ಜಿಗೆ ಚಾಲನೆ

ಮುಂಬೈ (ಪಿಟಿಐ): ದಕ್ಷಿಣ ಮುಂಬೈನ ಹಜ್ ಹೌಸ್‌ನಲ್ಲಿ ಸೋಮವಾರ 2022ರ ಹಜ್ ಯಾತ್ರೆಯ ಆನ್‌ಲೈನ್ ಪ್ರಕ್ರಿಯೆಗೆ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ ಅವರು ಚಾಲನೆ ನೀಡಿದರು.

ಈ ಬಾರಿಯ ಹಜ್ ಯಾತ್ರೆ ಪ್ರಕ್ರಿಯೆಯು ಶೇ 100ರಷ್ಟು ಡಿಜಿಟಲ್/ ಆನ್‌ಲೈನ್ ಆಗಿರುತ್ತದೆ. ಯಾತ್ರೆಗೆ ಅರ್ಜಿ ಸಲ್ಲಿಸಲು 2022ರ ಜನವರಿ 31 ಕೊನೆಯ ದಿನಾಂಕ ಆಗಿರುತ್ತದೆ. ಯಾತ್ರಾರ್ಥಿಗಳು 'ಹಜ್' ಮೊಬೈಲ್ ಆ್ಯಪ್ ಮೂಲಕವೂ ಅರ್ಜಿ ಸಲ್ಲಿಸಬಹುದು ಎಂದು ಹೇಳಿದರು.

'ಈ ಹಿಂದೆ ಹಜ್ ಯಾತ್ರೆಗೆ ತೆರಳುತ್ತಿದ್ದ ಯಾತ್ರಾರ್ಥಿಗಳು ಸೌದಿ ಅರೇಬಿಯಾದಲ್ಲಿ ವಿದೇಶಿ ಕರೆನ್ಸಿಯಲ್ಲಿ ಬೆಡ್‌ಶೀಟ್, ತಲೆದಿಂಬು ಸೇರಿದಂತೆ ಇತರ ವಸ್ತುಗಳನ್ನು ಖರೀದಿಸುತ್ತಿದ್ದರು. ಆದರೆ, ಈ ಬಾರಿ ಈ ಸರಕುಗಳನ್ನು ಭಾರತೀಯ ಕರೆನ್ಸಿಗಳಲ್ಲಿ ಖರೀದಿಸಲಾಗುತ್ತದೆ. ಸೌದಿ ಅರೇಬಿಯಾಕ್ಕೆ ಹೋಲಿಸಿದರೆ ಈ ಸರಕುಗಳು ಈಗ ಶೇ 50ರಷ್ಟು ರಿಯಾಯ್ತಿ ದರದಲ್ಲಿ ದೊರೆಯುತ್ತವೆ' ಎಂದೂ ನಖ್ವಿ ವಿವರಿಸಿದರು.

'ವಿಶಿಷ್ಟ ಬರಹಗಳನ್ನು ಒಳಗೊಂಡ ಕೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿ.ಎಸ್.ಹೆಗಡೆಯವರ 'ಜೀವನ ಪಥ- ನೆನಪಿನ ರಥ' ಪುಸ್ತಕವು ವಿಶಿಷ್ಟ ಬರಹಗಳ ಆಗರವಾಗಿದೆ. ಇದರಲ್ಲಿ ಅಡಕವಾಗಿರುವ ವಿಷಯಗಳು ಪ್ರತಿಯೊಬ್ಬರ ಮನಮುಟ್ಟುತ್ತದೆ' ಎಂದು ನಿರ್ದೇಶಕ ಟಿ.ಎನ್. ಸೀತಾರಾಂ ಹೇಳಿದರು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, 'ಕೃತಿಯಲ್ಲಿರುವ ಪ್ರತಿಯೊಂದು ಲೇಖನದ ಜೊತೆಗೆ ಕ್ಯೂ ಆರ್ ಕೋಡ್ ನೀಡಲಾಗಿದೆ. ಇದರಿಂದ ಲೇಖನ ಓದುವುದರ ಜೊತೆಗೆ ಆಯಾ ಕಾಲಘಟ್ಟದ ಛಾಯಾಚಿತ್ರಗಳನ್ನು ನೋಡಲು ಹಾಗೂ ಹಾಡುಗಳನ್ನು ಆಲಿಸಲು ಓದುಗರಿಗೆ ಸಹಕಾರಿಯಾಗುತ್ತದೆ' ಎಂದರು.

'ಸಪ್ತಕ ಸಂಸ್ಥೆಯು ಶುದ್ಧ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಜೊತೆಗೆ ಇನ್ನಿತರ ಕಲಾ ಪ್ರಕಾರಗಳ ಬಗ್ಗೆ ಜನರಲ್ಲಿ ಆಸಕ್ತಿ ಮೂಡಿಸುತ್ತಿದೆ. ವಿವಿಧ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಅನುಭವಿ ಕಲಾವಿದರು ಹಾಗೂ ಯುವ ಗಾಯಕರಿಗೆ ವೇದಿಕೆ ಕಲ್ಪಿಸಿಕೊಡುತ್ತಿದೆ. ನನ್ನ ಧಾರಾವಾಹಿಗಳಲ್ಲಿ ಹಿಂದೂಸ್ತಾನಿ ಸಂಗೀತ ಛಾಯೆಯ ಹಿನ್ನೆಲೆ ಸಂಗೀತ ಇರುತ್ತದೆ. ಈ ಪ್ರಕಾರದ ಬಗ್ಗೆ ಜಿ.ಎಸ್.ಹೆಗಡೆಯವರು ನನ್ನಲ್ಲಿ ಮೂಡಿಸಿದ ಆಸಕ್ತಿ ಅದಕ್ಕೆ ಕಾರಣ' ಎಂದು ಹೇಳಿದರು.

ಪುಸ್ತಕ ಬಿಡುಗಡೆ ಬಳಿಕ ಪಂಡಿತ ಪ್ರವೀಣ್ ಗೋಡ್ಖಿಂಡಿ ಅವರ ಕೊಳಲು ಮತ್ತು ಪಂಡಿತ ಜಯತೀರ್ಥ ಮೇವುಂಡಿ ಅವರ ಗಾಯನದ 'ಜುಗಲ್ ಬಂದಿ' ನಡೆಯಿತು.



ಟಿ.ಎನ್‌.ಸೀತಾರಾಂ ಅವರು 'ಜೀವನ ಪಥ–ನೆನಪಿನ ರಥ' ಪುಸ್ತಕ ಬಿಡುಗಡೆ ಮಾಡಿದರು. ಜಿ.ಎಸ್‌.ಹೆಗಡೆ, ಕರ್ಣಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಂ.ಎಸ್‌.ಮಹಾಬಲೇಶ್ವರ ಇದ್ದಾರೆ –ಪ್ರಜಾವಾಣಿ ಚಿತ್ರ

ಬೀದಿ ಬದಿ ವ್ಯಾಪಾರ– ಈಗಿಲ್ಲ ಜನಜಂಗುಳಿ ●ಕೋವಿಡ್ ಲಾಕ್‌ಡೌನ್ ಏಟು– ಚೇತರಿಸಿಲ್ಲ ವಹಿವಾಟು

ಗ್ರಾಹಕರ ಬರ– ವರ್ತಕರು ಕಂಗಾಲು

• ವಿಜಯಕುಮಾರ್ ಎಸ್.ಕೆ.



ಗಾಂಧಿ ಬಜಾರ್‌ನಲ್ಲಿ ಗ್ರಾಹಕರಿಗಾಗಿ ಕಾಯುತ್ತಿರುವ ವ್ಯಾಪಾರಿಗಳು

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಒಂದರ ಮೇಲೊಂದು ಲಾಕ್‌ಡೌನ್‌ನಿಂದ ಕಂಗಾಲಾಗಿರುವ ಬೀದಿ ಬದಿ ವ್ಯಾಪಾರಿಗಳಿಗೆ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಬಿಸಿಯೂ ಬರಸಿಡಿಲಾಗಿ ಎರಗಿದೆ. ಗ್ರಾಹಕರ ಬರಗಾಲ ಎದುರಿಸುತ್ತಿರುವ ಈ ವ್ಯಾಪಾರಿಗಳಿಗೆ ಇಂದಿಗೂ ಅರೆಹೊಟ್ಟೆಯೇ ಗತಿಯಾಗಿದೆ.

ಲಾಕ್‌ಡೌನ್‌ಗಳು ತೆರವಾದರೂ ಬೀದಿ ಬದಿ ವ್ಯಾಪಾರವಿನ್ನೂ ಕಳೆಗಟ್ಟಿಲ್ಲ. ಕೋವಿಡ್ ತಂದೊಡ್ಡಿದ ಆರ್ಥಿಕ ಮುಗ್ಗಟ್ಟು ಇನ್ನೂ ಹಳಿಗೆ ಮರಳಿಲ್ಲ. ದುಡಿಯುವ ಕೈಗಳಿಗೆ ಕೈ ತುಂಬ ಕೆಲಸ ಇನ್ನೂ ಸಿಕ್ಕಿಲ್ಲ. ಬೇರೆ ಉದ್ಯಮಗಳು ಸೊರಗಿರುವುದು ಕೂಡ ಬೀದಿ ಬದಿ ವ್ಯಾಪಾರದ ಮೇಲೆ ಪರಿಣಾಮ ಬೀರಿದೆ. ವಸ್ತುಗಳನ್ನು ಖರೀದಿಸುವ ಶಕ್ತಿ ಸಾಮಾನ್ಯ ಜನರಲ್ಲಿ ಇಲ್ಲದಿರುವುದು ಬೀದಿ ಬದಿ ವಹಿವಾಟು ಕ್ಷೀಣಿಸುವಂತೆ ಮಾಡಿದೆ.

ಸದಾ ಗಿಜಿಗುಡುತ್ತಿದ್ದ ಗಾಂಧಿನಗರ, ಗಾಂಧಿ ಬಜಾರ್, ಶಿವಾಜಿನಗರದಂತಹ ಬೀದಿ ಬದಿ ಮಾರುಕಟ್ಟೆಗಳೂ ಗ್ರಾಹಕರಿಲ್ಲದೆ ಬಣಗುಡುತ್ತಿವೆ. ಹಬ್ಬದ ಸಂದರ್ಭಗಳಲ್ಲಿ ಹೂವು, ಹಣ್ಣಿನ ವ್ಯಾಪಾರ ಸ್ವಲ್ಪ ಕಳೆಗಟ್ಟುತ್ತದೆ. ಉಳಿದ ದಿನಗಳಲ್ಲಿ ಗಾಂಧಿ ಬಜಾರ್‌ನಲ್ಲಿ ವ್ಯಾಪಾರವಿಲ್ಲದೆ ಅಂಗಡಿಗಳನ್ನು ಮುಚ್ಚಿರುವ ಉದಾಹರಣೆಗಳು ಇವೆ.

ಅಂದಿನ ತುತ್ತನ್ನು ಅಂದೇ ದುಡಿದು ತಿನ್ನಬೇಕಾದ ಸ್ಥಿತಿಯಲ್ಲಿರುವ ಕುಟುಂಬಗಳೇ ಈ ಬೀದಿ ಬದಿ ವ್ಯಾಪಾರದಲ್ಲಿ ಹೆಚ್ಚಿನದಾಗಿ ತೊಡಗಿಸಿಕೊಂಡಿವೆ. ವಿಶೇಷವಾಗಿ ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿ ಹೊಟ್ಟೆಪಾಡಿಗೆ ಈ ವಹಿವಾಟನ್ನೇ ನಂಬಿಕೊಂಡಿದ್ದಾರೆ. ದಿನದ ತುತ್ತಿನ ಚೀಲ ತುಂಬಿಸಿಕೊಳ್ಳಲು ಸಾಧ್ಯವಾಗದೆ ಪರದಾಡುತ್ತಿದ್ದಾರೆ.

'ಬೀದಿ ವ್ಯಾಪಾರ– ಬದುಕು ದುಸ್ತರ' ಭಾಗ - 1

'ಎರಡು ವರ್ಷಗಳಿಂದ ಪಡಬಾರದ ಕಷ್ಟಪಡುತ್ತಿದ್ದೇವೆ. ಮನೆ ಬಾಡಿಗೆ ಕಟ್ಟಿಲ್ಲ, ತಿನ್ನಲು ಗತಿ ಇಲ್ಲದ ಸ್ಥಿತಿಗೆ ಬಂದು ತಲುಪಿದ್ದೇವೆ. ಕೈ ಸಾಲ ಮತ್ತು ಬ್ಯಾಂಕ್ ಸಾಲಗಳು ಶೂಲವಾಗಿ ಬೆಳೆಯುತ್ತಿವೆ. ಶಾಲೆಗಳು ತೆರೆದಿವೆಯಾದರೂ ಮಕ್ಕಳನ್ನು ಕಳುಹಿಸಲು ಆಗುತ್ತಿಲ್ಲ. ಬಿಡಿಗಾಸೂ ಇಲ್ಲದಿರುವಾಗ ಶಾಲೆಯ ಶುಲ್ಕ ಪಾವತಿಸುವುದಾದರೂ ಹೇಗೆ' ಎಂದು ಗಾಂಧಿ ಬಜಾರ್ ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷೆ ವನಜಾಕ್ಷಿ ಪ್ರಶ್ನಿಸಿದರು.

'ಪಾತ್ರೆ ಉಜ್ಜುವ ಸ್ಕ್ರಬ್ಬರ್‌ಗಳನ್ನು ಶಿವಾಜಿನಗರದ ರಸ್ತೆ ಬದಿಯಲ್ಲಿ ಮಾರಾಟ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ. ಒಂದು ಸ್ಕ್ರಬ್ಬರ್ ಮಾರಾಟ ಮಾಡಿದರೆ ₹4 ಲಾಭ ಸಿಗುತ್ತದೆ. ಬೆಳಿಗ್ಗೆಯಿಂದ ಸಂಜೆ ತನಕ ಮಾರಾಟ ಮಾಡಿದರೂ ₹100 ದುಡಿದರೆ ಹೆಚ್ಚು ಎನ್ನುವ ಸ್ಥಿತಿ ಇದೆ' ಎಂದು ಶಿವಾಜಿನಗರದ ಅಯಾಸ್ ತಿಳಿಸಿದರು.

'ನನ್ನ ಈ ಸ್ಥಿತಿ ಗಮನಿಸಿ ಅಕ್ಕ–ಪಕ್ಕದ ಅಂಗಡಿಯವರು, ಅಣ್ಣ–ತಮ್ಮಂದಿರು ಕೈಲಿದ್ದಷ್ಟು ಹಣ ಕೊಡುತ್ತಾರೆ. ಎಲ್ಲವನ್ನೂ ಒಗ್ಗೂಡಿಸಿ ಅಕ್ಕಿ, ಬೇಳೆ ತೆಗೆದುಕೊಂಡು ಹೋದರಷ್ಟೇ ಮಕ್ಕಳ ಹೊಟ್ಟೆ ತುಂಬುತ್ತದೆ. ಇಲ್ಲದಿದ್ದರೆ ಅರೆಹೊಟ್ಟೆಯೇ ಗತಿ' ಎಂದು ಅವರು ಗದ್ಗದಿತರಾದರು.

'ಮನೆಯಲ್ಲಿ ನಮಗಾಗಿ ಕಾಯುವ ಹೆಂಡತಿ– ಮಕ್ಕಳಿಗೆ ಬರಿಗೈನಲ್ಲಿ ಹೋಗಿ ಮುಖ ತೋರಿಸುವಾಗ ಆಗುವ ಸಂಕಟ ಯಾರಿಗೂ ಬೇಡ' ಎನ್ನುವಾಗ ಅವರ ಕಣ್ಣಾಲಿಗಳು ತುಂಬಿದ್ದವು.

ವಿಡಿಯೋ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೋಣಿಯೇ ಆಗದ ದಿನಗಳು



ರಮೇಶ್

'ದಿನವಿಡೀ ಬೀದಿ ಬದಿಯಲ್ಲಿ ನಿಂತು ಗ್ರಾಹಕರನ್ನು ಕೂಗಿ ಕರೆದು ಗಂಟಲು ಕಟ್ಟಿಹೋದರೂ ಬೋಣಿಯೇ ಆಗದೆ ದಿನಗಳನ್ನು ಎಣಿಸುತ್ತಿದ್ದೇವೆ' ಎಂದು ಗಾಂಧಿ ನಗರದ ಬೀದಿ ಬದಿ ವ್ಯಾಪಾರಿ ರಮೇಶ್ ತಿಳಿಸಿದರು.

'ಗಾಂಧಿನಗರ ಎಂದರೆ ಸದಾ ಜನರಿಂದ ಗಿಜಿಗುಡುವ ಜಾಗ. ಆ ದಿನಗಳು ಈಗ ಮರೆಯಾಗಿವೆ. ಪೆಟ್ರೋಲ್ ಖರ್ಚು ಮಾಡಿಕೊಂಡು ಬಂದು ಅಂಗಡಿ ತೆರೆದರೆ ಊಟ, ತಿಂಡಿ, ಕಾಫಿ ಖರ್ಚಿಗೂ ಹಣ ಇಲ್ಲದಾಗಿದೆ. ಜೇಬುಗಳಲ್ಲಿ ತಡಕಾಡಿದರೂ ₹5 ಸಿಗುವುದು ಕಷ್ಟವಾಗಿದೆ. ಸಂಜೆ ತನಕ ಬೋಣಿಯೇ ಆಗದ ಅನೇಕ ದಿನಗಳನ್ನು ಕಂಡಿದ್ದೇವೆ' ಎಂದು ಬೇಸರ ತೋಡಿಕೊಂಡರು.

'ರಸ್ತೆ ಬದಿಯಲ್ಲಿ ಸಣ್ಣ ಸಣ್ಣ ಬಟ್ಟೆ ವ್ಯಾಪಾರ ಮಾಡಿಕೊಂಡಿದ್ದೇನೆ. ಒಂದೇ ಒಂದು ಬಟ್ಟೆಯೂ ಮಾರಾಟವಾಗದ ದಿನಗಳಿವೆ. ಸರ್ಕಾರದ ಪರಿಹಾರಗಳು ಎಲ್ಲರಿಗೂ ತಲುಪಿಲ್ಲ. ಹೊಟ್ಟೆ ಹೊರೆಯುವುದೇ ಕಷ್ಟವಾಗಿದೆ' ಎಂದರು.

ಸಗಟು ಬೆಲೆ ಹೆಚ್ಚಳವೂ ಬರೆ



ಜಮೀರ್

'ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿರುವುದು ಕೂಡ ನಮ್ಮ ವ್ಯಾಪಾರ ವಹಿವಾಟಿನ ಮೇಲೆ ಬರೆ ಎಳೆದಿದೆ' ಎಂದು ಶಿವಾಜಿನಗರದ ಬೀದಿ ಬದಿ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ಜಮೀರ್ ಹೇಳುತ್ತಾರೆ.

'ಬಡ ಮತ್ತು ಮಧ್ಯಮ ವರ್ಗದ ಜನರೇ ಹೆಚ್ಚಿನ ಸಂಖ್ಯೆಯಲ್ಲಿ ಬೀದಿ ಬದಿ ವಸ್ತುಗಳನ್ನು ಖರೀದಿಸುತ್ತಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿರುವುದು ಅವರ ಜೇಬುಗಳನ್ನು ಖಾಲಿ ಆಗಿಸಿದೆ. ಇನ್ನೊಂದೆಡೆ, ನಾವು ಸಗಟು ರೂಪದಲ್ಲಿ ಖರೀದಿ ಮಾಡುತ್ತಿದ್ದ ವಸ್ತುಗಳ ಬೆಲೆಯೂ ಏರಿಕೆಯಾಗಿದೆ. ಇವೆಲ್ಲದರ ಪರಿಣಾಮ ವ್ಯಾಪಾರ ಕುಸಿದಿದೆ' ಎಂದು ವಿವರಿಸಿದರು.

'₹100ಕ್ಕೆ ನಾಲ್ಕರಿಂದ ಐದು ಬನಿಯನ್ ಮಾರಾಟ ಮಾಡುತ್ತಿದ್ದೆ. ಈಗ ಸಗಟು ಬೆಲೆ ಜಾಸ್ತಿ ಆಗಿರುವುದರಿಂದ ₹100ಕ್ಕೆ ಮೂರು ಬನಿಯನ್ ಅಷ್ಟೇ ಕೊಡಲು ಸಾಧ್ಯ. ಇನ್ನಷ್ಟು ದಿನಗಳು ಕಳೆದರೆ ₹100ಕ್ಕೆ ಎರಡು ಬನಿಯನ್ ಅಷ್ಟೇ ಕೊಡಲು ಸಾಧ್ಯ. ಅಷ್ಟು ಹಣ ಕೊಟ್ಟು ಖರೀದಿಸುವ ಶಕ್ತಿ ಜನರಿಗಿಲ್ಲ. ಕಡಿಮೆ ಬೆಲೆಗೆ ಮಾರಾಟ ಮಾಡುವ ಸ್ಥಿತಿಯಲ್ಲಿ ನಾವಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

535 ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗ

ಬೆಂಗಳೂರು: ಆಂಧ್ರಪ್ರದೇಶದ ವೆಲ್ಲೂರು ತಾಂತ್ರಿಕ ಸಂಸ್ಥೆಯಲ್ಲಿ 2020–21ನೇ ಸಾಲಿನಲ್ಲಿ ವ್ಯಾಸಂಗ ಮಾಡಿರುವ ಒಟ್ಟು 535 ವಿದ್ಯಾರ್ಥಿಗಳು ಪ್ರತಿಷ್ಠಿತ ಅಂತರ-ರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುವ ಅವಕಾಶ ಪಡೆದಿದ್ದಾರೆ.

'ಸಂಸ್ಥೆಯ ವಿದ್ಯಾರ್ಥಿಯೊಬ್ಬರಿಗೆ ಕಂಪನಿಯೊಂದು ವಾರ್ಷಿಕ ₹33.29 ಲಕ್ಷ ವೇತನ ನೀಡುತ್ತಿದೆ. ಹೋದ ವರ್ಷಕ್ಕೆ (₹ 20 ಲಕ್ಷ) ಹೋಲಿಸಿದರೆ ಇದು ಶೇ 166.45ರಷ್ಟು ಅಧಿಕ. ಈ ಬಾರಿ ವಿವಿಧ ಕಂಪನಿಗಳಲ್ಲಿ ಉದ್ಯೋಗ ಪಡೆದಿರುವ ಸಂಸ್ಥೆಯ ವಿದ್ಯಾರ್ಥಿಗಳ ಸರಾಸರಿ ವಾರ್ಷಿಕ ವೇತನ ₹6.77 ಲಕ್ಷ' ಎಂದು ಪ್ರಕಟಣೆ ತಿಳಿಸಿದೆ.

'ಇಂಟೆಲ್, ಕ್ಸಿಲಿಂಕ್ಸ್, ರಾಬರ್ಟ್ ಬಾಷ್, ಅಲ್‌ಸ್ಟಾಮ್, ಮೈಕ್ರೋಸಾಫ್ಟ್, ವಾಲ್‌ಮಾರ್ಟ್, ಅಡೋಬ್, ಅಮೆಜಾನ್, ಐಬಿಎಂ, ಫಿಲಿಪ್ಸ್ ಸೇರಿದಂತೆ ಒಟ್ಟು 121 ಕಂಪನಿಗಳು ಕ್ಯಾಂಪಸ್ ಆಯ್ಕೆಯ ಮೂಲಕ ವಿದ್ಯಾರ್ಥಿಗಳನ್ನು ನೇಮಿಸಿಕೊಂಡಿವೆ. ಕೆಲಸ ಪಡೆದವರ ಪೈಕಿ ಶೇ 30ರಷ್ಟು ವಿದ್ಯಾರ್ಥಿನಿಯರು ಇದ್ದಾರೆ' ಎಂದು ಹೇಳಲಾಗಿದೆ.

'ಪ್ರತಿಷ್ಠಿತ ಕಂಪನಿಗಳು ನಮ್ಮ ಸಂಸ್ಥೆಯ ವಿದ್ಯಾರ್ಥಿಗಳನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಕ್ಕೆ ಆಯ್ಕೆ ಮಾಡಿರುವುದರಿಂದ ಖುಷಿಯಾಗಿದೆ. ನಮ್ಮ ವಿಶ್ವವಿದ್ಯಾಲಯವು ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದ್ದು, ಇದನ್ನು ಮುಂದುವರಿಸಿಕೊಂಡು ಹೋಗಲಿದೆ. ವಿದ್ಯಾರ್ಥಿಗಳೂ ಪರಿಶ್ರಮದಿಂದ ಓದುತ್ತಿದ್ದಾರೆ' ಎಂದು ಕುಲಪತಿ ಎಸ್.ವಿ.ಕೋಟಾ ರೆಡ್ಡಿ ತಿಳಿಸಿದರು.

'ಕನ್ನಡೇತರರಿಗೆ ಕನ್ನಡದ ಪಾಠ ಕಲಿಸಿ'



ಕೆ.ಆರ್.ಪುರ: 'ನಗರದಲ್ಲಿನ ಪರ ಭಾಷಿಕರಿಂದಾಗಿ ಕನ್ನಡ ಉಳಿಸಿಕೊಳ್ಳುವುದೇ ಸವಾಲಿನ ಕೆಲಸವಾಗಿದೆ. ಪರಭಾಷಿಕರಿಗೂ ಕನ್ನಡ ಕಲಿಸುವ ಕೆಲಸವನ್ನು ಮಾಡಬೇಕಿದೆ' ಎಂದು ಪೂರ್ವ ತಾಲ್ಲೂಕು ತಹಶೀಲ್ದಾರ್ ಅಜಿತ್ ಕುಮಾರ್ ಹೇಳಿದರು.

ಕೆ.ಆರ್.ಪುರ ಪೂರ್ವ ತಾಲ್ಲೂಕು ವತಿಯಿಂದ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ಕಾರ್ಯಕ್ರಮ ಹಾಗೂ ಸಾರ್ವಜನಿಕರಿಗೆ 200ಕ್ಕೂ ಹೆಚ್ಚು ಕನ್ನಡ ಪುಸ್ತಕ ವಿತರಿಸಿ ಮಾತನಾಡಿದರು.

'ನಗರದಲ್ಲಿ ವಾಸಿಸುವ ಜನರು ಕನ್ನಡದ ನೆಲ ಜಲದ ಮೇಲಿನ ಪ್ರೀತಿ ಹೆಚ್ಚಿಸಿಕೊಳ್ಳಬೇಕು. ಕನ್ನಡ ಕಲಿಕೆಯಲ್ಲಿ ಮಕ್ಕಳಿಗೆ ಆಸಕ್ತಿ ಇದ್ದರೂ ಕನ್ನಡ ಶಿಕ್ಷಣ ಕೊಡಿಸಲು ಮುಂದಾಗುತ್ತಿಲ್ಲ. ಕನ್ನಡ ಭಾಷೆ ಪೋಷಿಸಿ, ಬೆಳೆಸುವ ಕಾರ್ಯವನ್ನು ಪ್ರತಿಯೊಬ್ಬರೂ ಮಾಡಬೇಕಿದೆ' ಎಂದು ಹೇಳಿದರು.

ಸಾಹಿತಿ ವೆಂಕಟರಾಮನ್, ವಿಶೇಷ ತಹಶಿಲ್ದಾರ್ ನಾಗಪ್ರಶಾಂತ್, ಉಪ ತಹಶಿಲ್ದಾರ್ ಸುರೇಶ್, ಡಾ.ರಾಜಕುಮಾರ ಸಂಘದ ಅಧ್ಯಕ್ಷ ಕೆ.ಪಿ.ಕೃಷ್ಣ, ರಮೇಶ್, ಸಾಹುಕಾರ್ ಗಿರೀಶ್ ಇದ್ದರು. ಇದ್ದರು.

ನಗರದಲ್ಲಿ ರಾಜ್ಯೋತ್ಸವ ಸಂಭ್ರಮ: ಪುನೀತ್‌ಗೆ ಶ್ರದ್ಧಾಂಜಲಿ ಸಲ್ಲಿಸಿದ ಅಭಿಮಾನಿಗಳು

ಮೊಳಗಿದ ಕನ್ನಡ ಡಿಂಡಿಮ: ನಾಡು ನುಡಿ ಗೀತೆಗಳ ಅನುರಣನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲೆಡೆ ಅನುರಣಿಸಿದ ಕನ್ನಡ. ರಾರಾಜಿಸಿದ ಕನ್ನಡ ಬಾವುಟಗಳು, ನಾಡು–ನುಡಿಯ ಹಿರಿಮೆ ಸಾರುವ ಗೀತೆಗಳು...

66ನೇ ಕರ್ನಾಟಕ ರಾಜ್ಯೋತ್ಸವವನ್ನು ಜನರು ಸಂಭ್ರಮದಿಂದ ಆಚರಿಸಿದರು. ವಿವಿಧ ಸಂಘಟನೆಗಳು ಕಾರ್ಯಕ್ರಮಗಳನ್ನು ಆಯೋಜಿಸಿ ಧ್ವಜಾರೋಹಣ ಮಾಡುವ ಮೂಲಕ ನೆಲ, ಜಲ, ಭಾಷೆ ರಕ್ಷಣೆಗೆ ಸದಾ ಬದ್ಧವಾಗಿರುವುದಾಗಿ ಘೋಷಿಸಿದವು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಿಧನರಾದ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪುನೀತ್ ಪ್ರತಿಮೆಗೆ ಮನವಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘದ ಕೇಂದ್ರ ಕಚೇರಿ ಅವರಣದಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಪುನೀತ್ ರಾಜ್‌ಕುಮಾರ್ ಅವರಿಗೆ ನುಡಿ ನಮನ ಸಲ್ಲಿಸುವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ, ಸಂಘದ ಅಧ್ಯಕ್ಷರಾದ ಸಂಗೊಳ್ಳಿ ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ಅಮೃತ್ ರಾಜ್ ಪುಷ್ಪ ನಮನ ಸಲ್ಲಿಸಿದರು.

'ಕನ್ನಡ ಸಂಘದ ಆವರಣದಲ್ಲಿ ಡಾ. ರಾಜಕುಮಾರ್ ಅವರ ಪ್ರತಿಮೆ ಪಕ್ಕದಲ್ಲಿ ಪುನೀತ್ ಅವರ ಕಂಚಿನ ಪ್ರತಿಮೆಯನ್ನು ಸಂಘದ ಸ್ವಂತ ವೆಚ್ಚದಲ್ಲಿ ನಿರ್ಮಿಸಲು ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ. ಅನುಮತಿ ನೀಡಿದರೆ ಇನ್ನೆರಡು ಎರಡು ತಿಂಗಳಲ್ಲಿ ಪ್ರತಿಮೆ ಅನಾವರಣ ಮಾಡಲಾಗುವುದು' ಎಂದು ಅಮೃತ್‌ರಾಜ್ ಹೇಳಿದರು.

ಮುಖ್ಯ ಆಯುಕ್ತ ಗೌರವ್ ಗುಪ್ತ ಮಾತನಾಡಿ, 'ಪುನೀತ್ ಅವರ ಕಂಚಿನ ಪ್ರತಿಮೆ ಸ್ಥಾಪಿಸುವ ವಿಷಯವನ್ನು ಕಾನೂನಿನ ಚೌಕಟ್ಟಿನಲ್ಲಿ ಪರಿಶೀಲಿಸಲಾಗುವುದು' ಎಂದು ಹೇಳಿದರು.



ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಸೋಮವಾರ ಆಯೋಜಿಸಿದ್ದ ರಾಜ್ಯೋತ್ಸವ ಕಾರ್ಯಕ್ರಮವನ್ನು ಮಾಜಿ ಸಚಿವೆ ಲೀಲಾವತಿ ಆರ್. ಪ್ರಸಾದ್ ಉದ್ಘಾಟಿಸಿದರು. ಸಮಿತಿ ಅಧ್ಯಕ್ಷ ಗುರುದೇವ ನಾರಾಯಣಕುಮಾರ್, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ, ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್, ಗಾಂಧಿ ಸ್ಮಾರಕ ನಿಧಿ ಸಂಸ್ಥೆ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ, ಕರ್ನಾಟಕ ವಿಚಾರ ವೇದಿಕೆ ಅಧ್ಯಕ್ಷ ಫಾಲನೇತ್ರ ಇದ್ದರು

ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆ: ಚಂದಾಪುರದ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ರಾಜ್ಯೋತ್ಸವವನ್ನು ಲೇಖಕ ಪಿನಾಕಪಾಣಿ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು.

ಬೆಂಗಳೂರು ವಿ.ವಿ: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ರಾಜ್ಯೋತ್ಸವ ಆಚರಿಸಲಾಯಿತು. ವಿ.ವಿ.ಕುಲಪತಿ ಪ್ರೊ. ಲಿಂಗರಾಜ್‌ಗಾಂಧಿ ಕಾರ್ಯಕ್ರಮ ಉದ್ಘಾಟಿಸಿದರು. ಎನ್.ಎಸ್.ಎಸ್. ಸಂಯೋಜಕ ಡಾ. ಗೋವಿಂದೇಗೌಡ ಇದ್ದರು.

ನಿಸರ್ಗ ಬಡಾವಣೆ: ಬನ್ನೇರುಘಟ್ಟ ಸಮೀಪ ನಿರ್ಮಾಣ್ ಶೆಲ್ಟರ್ಸ್ ನಿರ್ಮಿಸಿರುವ ನಿಸರ್ಗ ಬಡಾವಣೆಯಲ್ಲಿ ರಾಜ್ಯೋತ್ಸವ ಆಚರಿಸಲಾಯಿತು. ನಿರ್ಮಾಣ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ವಿ. ಲಕ್ಷ್ಮೀನಾರಾಯಣ್ ಅಧ್ಯಕ್ಷತೆ ವಹಿಸಿದ್ದರು. ನಿಪ್‌ಮ್ಯಾಟ್‌ನ ಕಾರ್ಯದರ್ಶಿ ಡಿ.ಎಂ. ಲೋಕೇಶ್ ಧ್ವಜಾರೋಹಣ ನೆರವೇರಿಸಿದರು.

ಎನ್. ತಿಮ್ಮೇಗೌಡ, ಕೃಷ್ಣಾರೆಡ್ಡಿ, ಮೈಕೋ ನಾಗರಾಜ್, ಎಸ್. ರವಿರಾಜ್‌ಭಟ್ ಇದ್ದರು. ಶ್ವೇತಾ ವಿಶ್ವಾಸ್, ಭಾಷಿಣಿ, ವತ್ಸಲಾ ಶ್ಯಾಮ ಸುಂದರ್, ಯತಿರಾಜ್, ವಿಜಯ್ ಕುಮಾರ್ ಅವರು ನಾಡಗೀತೆ, ದೇಶ ಭಕ್ತಿಗೀತೆಗಳನ್ನು ಹಾಡಿ ಕಾರ್ಯಕ್ರಮಕ್ಕೆ ಮೆರಗು ತಂದರು.



ಚಂದಾಪುರದ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯಲ್ಲಿ ನಡೆದ ರಾಜ್ಯೋತ್ಸವದಲ್ಲಿ ಪಿನಾಕಪಾಣಿ ಅವರು ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿದರು. ಸಂಸ್ಥೆಯ ಪದಾಧಿಕಾರಿಗಳಾದ ಗೋಪಾಲರೆಡ್ಡಿ, ವೆಂಕಟೇಶ್, ರಾಮಸ್ವಾಮಿರೆಡ್ಡಿ, ಮುಖ್ಯ ಶಿಕ್ಷಕಿ ಸ್ವರೂಪ ಇದ್ದರು



ಬನ್ನೇರುಘಟ್ಟ ಸಮೀಪದ ನಿಸರ್ಗ ಬಡಾವಣೆಯಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಿರ್ಮಾಣ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ವಿ. ಲಕ್ಷ್ಮೀನಾರಾಯಣ್, ನಿಪ್‌ಮ್ಯಾಟ್‌ನ ಕಾರ್ಯದರ್ಶಿ ಡಿ.ಎಂ. ಲೋಕೇಶ್ ಇದ್ದರು

ಭುವನೇಶ್ವರಿ ದೇವಾಲಯದಲ್ಲಿ ರಾಜ್ಯೋತ್ಸವ

ನೆಲಮಂಗಲ: ಕನ್ನಡ ಸಾಂಸ್ಕೃತಿಕ ರಂಗ, ಮಕ್ಕಳ ಸಾಹಿತ್ಯ ಪರಿಷತ್ತು, ರಕ್ಷಣಾ ವೇದಿಕೆ ಹಾಗೂ ವಿವಿಧ ಸಂಘ ಸಂಸ್ಥೆಗಳು ಪಟ್ಟಣದ ಕೋಟೆ ಬೀದಿಯಲ್ಲಿರುವ ಭುವನೇಶ್ವರಿ ದೇವಾಲಯದ ಆವರಣದಲ್ಲಿ ಧ್ವಜಾರೋಹಣ ಹಾಗೂ ಭುವನೇಶ್ವರಿಗೆ ಪೂಜೆ ಸಲ್ಲಿಸುವುದರ ಮೂಲಕ ರಾಜ್ಯೋತ್ಸವ ಆಚರಿಸಿದವು.

ಕನ್ನಡ ಸಾಂಸ್ಕೃತಿಕ ರಂಗದ ಅಧ್ಯಕ್ಷ ಡಿ.ಸಿದ್ದರಾಜು ಮಾತನಾಡಿ, 'ತಾಲ್ಲೂಕಿನಲ್ಲಿ ಕನ್ನಡ ಭವನ ನಿರ್ಮಿಸಲು ನಿವೇಶನ ಒದಗಿಸಬೇಕು. ಪಟ್ಟಣದ ಕುವೆಂಪು ಮಹಾದ್ವಾರ ಶಿಥಿಲಾವಸ್ಥೆಯಲ್ಲಿದೆ. ಇದಕ್ಕೆ ಕಾಯಕಲ್ಪ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

ಭುವನೇಶ್ವರಿ ದೇವಾಲಯ ಸಮಿತಿ ಅಧ್ಯಕ್ಷ ಎಚ್.ಜಿ.ರಾಜು, ಮಕ್ಕಳ ಸಾಹಿತ್ಯ ಪರಿಷತ್ ಜಿಲ್ಲಾ ಸಂಚಾಲಕ ಎನ್.ಜಿ.ಗೋಪಾಲ್, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರಾದ ಎನ್. ಜಿ.ಗೋಪಾಲ್, ಡಾ.ಲಕ್ಷ್ಮೀನಾರಾಯಣ ಶೆಟ್ಟಿ, ಕರವೇ ಅಧ್ಯಕ್ಷ ಉಮೇಶ್‌ಗೌಡ, ಯಶವಂತ್, ಪುರಸಭೆ ಮಾಜಿ ಸದಸ್ಯ ಎನ್.ಎಸ್.ಮೂರ್ತಿ (ಮಿಲ್ಟ್ರಿ ಮಾಮಾ), ಆನಂದ್ ಮೂಡ್, ಲೇಖಕರಾದ ಮುರಳಿಧರ್, ಆನಂದಮೌರ್ಯ, ಶಿವಲಿಂಗಯ್ಯ ಇದ್ದರು.



ನೆಲಮಂಗಲದಲ್ಲಿ ಸೋಮವಾರ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲ ಕನ್ನಡ ಸಾಂಸ್ಕೃತಿಕ ರಂಗ, ಮಕ್ಕಳ ಸಾಹಿತ್ಯ ಪರಿಷತ್ತು, ರಕ್ಷಣಾ ವೇದಿಕೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಕನ್ನಡ ಧ್ವಜಾರೋಹಣ ಮಾಡಿದರು.

'ಕನ್ನಡ ಕಲಿಸಿ, ಬೆಳೆಸುವ ಕಾರ್ಯ ನಡೆಯಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಸ್ತಕಗಳ ರಾಶಿ, ರಾಶಿ ನಡುವೆ ಕನ್ನಡದ ಕಂಪು ಅಲ್ಲಿ ಪಸರಿಸಿತ್ತು. ಸಾಹಿತಿಗಳು, ಸಾಹಿತ್ಯಾಸಕ್ತರು ಒಗ್ಗೂಡಿ ಕನ್ನಡ ಪ್ರೇಮ ಮೆರೆದರು. 'ಸಪ್ನ ಬುಕ್ ಹೌಸ್' ರಾಜ್ಯೋತ್ಸವ ಪ್ರಯುಕ್ತ ಸೋಮವಾರ ಆಯೋಜಿಸಿದ್ದ 'ಪುಸ್ತಕ ಜಾತ್ರೆ'ಯಲ್ಲಿ ನಾಡಿನ ಖ್ಯಾತ ಸಾಹಿತಿಗಳು ಚಿಕ್ಕದಾದ ಪ್ರಶ್ನೆಗೆ ಚುಟುಕಾಗಿ ಉತ್ತರಿಸಿ ಕನ್ನಡ ಉಳಿಸುವ ಮತ್ತು ಬೆಳೆಸುವ ಮಾತುಗಳನ್ನಾಡಿದರು.

'ಇಂದಿನ ಸನ್ನಿವೇಶದಲ್ಲಿ ಮಕ್ಕಳಿಗೆ ಕನ್ನಡ ಕಲಿಸುವ ಮೂಲಕ ಈ ಭಾಷೆಯನ್ನು ಬೆಳೆಸುವ ಕಾರ್ಯ ನಡೆಯಬೇಕಾಗಿದೆ. ಮಕ್ಕಳಲ್ಲಿ ಕನ್ನಡ ಪ್ರೀತಿ ಬೆಳೆಸಬೇಕು. ನೆರೆಹೊರೆಯವರಿಗೆ ಕನ್ನಡ ಕಲಿಸಬೇಕು' ಎಂದು ಸಾಹಿತಿ ಕಮಲಾ ಹಂಪನಾ ಸಲಹೆ ನೀಡಿದರು.

'ಜಗತ್ತಿನಾದ್ಯಂತ ಕನ್ನಡ ಆಳಲಿ, ಕನ್ನಡ ಬಾಳಲಿ, ಕನ್ನಡ ಬೆಳಗಲಿ' ಎಂದು ಸಾಹಿತಿ ಹಂಪ ನಾಗರಾಜಯ್ಯ ಆಶಯ ವ್ಯಕ್ತಪಡಿಸಿದರು.

ಚಿತ್ರಗೀತೆಗಳ ಬಗ್ಗೆ ಪ್ರತಿಕ್ರಿಯಿಸಿದ ಸಾಹಿತಿ ಪ್ರೊ. ದೊಡ್ಡರಂಗೇಗೌಡ, 'ಎಲ್ಲ ಕಾಲಕ್ಕೂ ಒಳ್ಳೆಯ ಕವಿತೆಗಳು ಚಿತ್ರಗೀತೆಗಳಾಗಿ ಮೂಡಿಬರಬೇಕು' ಎಂದು ಹೇಳಿದರು.

ಕವಿ ಎಚ್.ಎಸ್.ವೆಂಕಟೇಶ್ ಮೂರ್ತಿ, 'ಈ ಹೊತ್ತಿನ ಕವಿಗಳಿಗೆ ಸಾಹಿತ್ಯ ಪರಂಪರೆಯ ಅರಿವು ಇರಬೇಕು. ಮುಖ್ಯವಾಗಿ ಕನ್ನಡ ಸಮಾಜವನ್ನು ಅರ್ಥಮಾಡಿಕೊಳ್ಳಬೇಕು. ತಮ್ಮ ಕೇರಿಯಲ್ಲಿ, ಓಣಿಯಲ್ಲಿ ಮಾತನಾಡುವ ಕನ್ನಡದ ಸೊಬಗು, ಸೊಗಡು ಅರ್ಥ ಮಾಡಿಕೊಳ್ಳಬೇಕು. ತಮ್ಮ ಊರಲ್ಲಿನ ಕನ್ನಡ ವೈಶಿಷ್ಟ್ಯವನ್ನು ನಮ್ಮ ಲೇಖಕರು ಬಳಸಬೇಕು' ಎಂದು ಸಲಹೆ ನೀಡಿದರು.

ವಿಮರ್ಶೆ ಬಗ್ಗೆ ಪ್ರತಿಕ್ರಿಯಿಸಿದ ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ, 'ವಿಮರ್ಶಕ ಅತ್ಯುತ್ತಮ ಓದುಗ. ವಿಮರ್ಶಕರನ್ನು, ಕವಿಗಳನ್ನು ಬೆಳೆಸುವವರು ಓದುಗರು. ಓದುಗರಿಗೆ ನಿಜವಾದ ಪ್ರಾಮುಖ್ಯತೆ ದೊರೆಯಬೇಕು' ಎಂದು ಹೇಳಿದರು.



ನಗರದಲ್ಲಿ ಸೋಮವಾರ ಏರ್ಪಡಿಸಿದ್ದ 'ಪುಸ್ತಕ ಜಾತ್ರೆ'ಯನ್ನು ನಟಿ ರಂಜನೀ ರಾಘವನ್ ಉದ್ಘಾಟಿಸಿದರು. ಪ್ರೊ. ದೊಡ್ಡರಂಗೇಗೌಡ, ಜೋಗಿ, ಹಂಪ ನಾಗರಾಜಯ್ಯ, ನಿತಿನ್ ಷಾ, ಎಚ್.ಎಸ್.ವೆಂಕಟೇಶ ಮೂರ್ತಿ, ಕಮಲಾ ಹಂಪನಾ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ವತ್ಸಲಾ ಮೋಹನ್, ವಸುಂಧರಾ ಭೂಪತಿ ಇದ್ದರು —ಪ್ರಜಾವಾಣಿ ಚಿತ್ರ

ಜನೋತ್ಸವವಾಗಿ ರಾಜ್ಯೋತ್ಸವ: ಮುಖ್ಯಮಂತ್ರಿ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ವರ್ಷದಿಂದ ರಾಜ್ಯೋತ್ಸವವನ್ನು ಜನೋತ್ಸವವನ್ನಾಗಿ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

66ನೇ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, 'ಈ ಪ್ರಶಸ್ತಿಯ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಬೇಕಿದೆ. ಹೀಗಾಗಿ, ಪ್ರಶಸ್ತಿ ಕೊಡಿ ಎಂದು ಇನ್ನು ಮುಂದೆ ಯಾರೂ ಸ್ವವಿವರಗಳ ಸಹಿತ ಅರ್ಜಿ ಸಲ್ಲಿಸಬೇಕಿಲ್ಲ. ಆಯ್ಕೆ ಸಮಿತಿ ತಾನೇ ಶೋಧಿಸಿ, ಗುರುತಿಸಿದಾಗ ಪ್ರಶಸ್ತಿ ಮೌಲ್ಯ ಹೆಚ್ಚುತ್ತದೆ' ಎಂದು ಅಭಿಪ್ರಾಯಪಟ್ಟರು.

'ರಾಜ್ಯೋತ್ಸವ ಪ್ರಶಸ್ತಿ ಮೊತ್ತ ಹೆಚ್ಚಿಸುವುದಷ್ಟೇ ಮುಖ್ಯವಲ್ಲ. ಈ ಪ್ರಶಸ್ತಿಗೆ ಸರ್ಕಾರ ಎಷ್ಟು ಗೌರವ ನೀಡುತ್ತಿದೆ ಎಂಬುದನ್ನೂ ಅರಿಯಬೇಕು. ವಯೋಮಿತಿ ಸಡಿಲಿಕೆ, ಮೊತ್ತ ಹೆಚ್ಚಳ ಸೇರಿದಂತೆ ನಾನು ಪ್ರಸ್ತಾಪಿಸಿರುವ ವಿಚಾರಗಳ ಬಗ್ಗೆ ನಾಡಿನ ಗಣ್ಯರು, ಸಾಹಿತಿಗಳ ಜೊತೆಗೆ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದೂ ಹೇಳಿದರು.

'ಸರ್ಕಾರದಿಂದ ಮಾತ್ರ ಕನ್ನಡ ನಾಡು ಕಟ್ಟಲು ಸಾಧ್ಯವಿಲ್ಲ. ಎಲ್ಲರ ಒಗ್ಗಟ್ಟಿನಿಂದ, ನವಕರ್ನಾಟಕದಿಂದ ನವಭಾರತ ನಿರ್ಮಾಣ ಆಗಬೇಕಿದೆ. ಅದಕ್ಕಾಗಿ ದಣಿವರಿಯದೆ ಕೆಲಸ ಮಾಡಬೇಕಿದೆ. ಸಮಾಜದ ಎಲ್ಲ ರಂಗಗಳಲ್ಲಿ ಕನ್ನಡಿಗರೇ ಮುಂಚೂಣಿಯಲ್ಲಿ ಇರುವಂತೆ ಕರ್ನಾಟಕ ಪರ್ವಕ್ಕೆ ಎಲ್ಲರೂ ಸೇರಿ ಚಾಲನೆ ನೀಡಬೇಕು' ಎಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್‌ಕುಮಾರ್ ಮಾತನಾಡಿ, 'ಯಾದಗಿರಿಯ ಪೌರಕಾರ್ಮಿಕ ಮಹಿಳೆಯೊಬ್ಬರಿಗೆ ಪ್ರಶಸ್ತಿಗೆ ವಿವರ ನೀಡುವಂತೆ ಕರೆ ಮಾಡಿದಾಗ, ತನಗಿಂತಲೂ ಉತ್ತಮ ಕೆಲಸ ಮಾಡಿರುವ ಮತ್ತೊಬ್ಬ ಮಹಿಳೆ ಇದ್ದು, ಆಕೆಗೆ ನೀಡುವಂತೆ ಹೇಳಿದರು. ಪ್ರಶಸ್ತಿಗಾಗಿ ಹಾತೊರೆಯುವವರ ನಡುವೆ ಇಂಥ ನಿಸ್ವಾರ್ಥಿಗಳೂ ಇದ್ದಾರೆ' ಎಂದರು.

ಕಾರ್ಯಕ್ರಮದ ಆರಂಭಕ್ಕೂ ಮೊದಲು ಪುನೀತ್ ರಾಜ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ, ಮೌನ ಆಚರಿಸಲಾಯಿತು. ಪ್ರೊ. ದೊಡ್ಡರಂಗೇಗೌಡ ಅವರು ರಚಿಸಿ, ಅಜಯ್ ವಾರಿಯರ್ ಹಾಡಿರುವ 'ನಮ್ಮ ಕನ್ನಡ' ವಿಡಿಯೊ ಹಾಡನ್ನು ಲೋಕಾರ್ಪಣೆ ಮಾಡಲಾಯಿತು.

ಪ್ರಶಸ್ತಿ ಪುರಸ್ಕೃತರ ಅನಿಸಿಕೆ

'ಎಲ್ಲ ಸಾಧಕರಿಗೆ ಸಂದ ಗೌರವ'

ಭಾರತದ ಪರಂಪರೆಯ ಮೌಲ್ಯ ಸತ್ಯ. ಸತ್ಯಕ್ಕೆ ಯಾವಾಗಲೂ ಗೆಲುವು ಸಿಗಬೇಕು. ನಮ್ಮ ಪ್ರಯಾಣ ಅಸತ್ಯದಿಂದ ಸತ್ಯದೆಡೆಗೆ ಇರಬೇಕು. ಕನ್ನಡ ಒಂದು ಸಾಧನೆ ಎಂಬ ವಾತಾವರಣ ಈ ಹಿಂದೆ ಇತ್ತು. ತಾಯಿ ಚಾಮುಂಡೇಶ್ವರಿ ಕುರಿತು ಗೌರವ ಇಲ್ಲದವರು ದಸರಾ ಉದ್ಘಾಟಿಸುವಂತಾಗಿತ್ತು. ಆದರೆ, ಈಗ ವಾತಾವರಣ ಬದಲಾಗಿದೆ. ಇದು ಎಲ್ಲ ಸಾಧಕರಿಗೆ ಸಂದ ಗೌರವ

ಮಂಜುನಾಥ್ ಅಜ್ಜಂಪುರ, ಲೇಖಕ

'ಅನೇಕರ ಪ್ರಯತ್ನದ ಫಲ'

'ಆಯ್ಕೆ ಸಮಿತಿಯಲ್ಲಿ ಇರುವವರಿಗೆ ನಾವು ಕಣ್ಣಿಗೆ ಬಿದ್ದಿರುತ್ತೇವೆ. ಆ ಸಾಧನೆ ಕಣ್ಣಿಗೆ ಬೀಳಲು ಅನೇಕರ ಪ್ರಯತ್ನ ಇರುತ್ತದೆ. ಎಲ್ಲರ ಪ್ರಯತ್ನದ ಫಲವಾಗಿ ಈ ಗೌರವ ಸಿಕ್ಕಿದೆ. ಎಲ್ಲರ ಪ್ರತಿನಿಧಿಯಾಗಿ ನಾವು ಬಂದಿದ್ದೇವೆ. ರಂಗಭೂಮಿ ಎನ್ನುವುದು ನಟನ ಭೂಮಿ. ಇತ್ತೀಚೆಗೆ ನಿರ್ದೇಶಕ ಎಂಬ ಪರಿಕಲ್ಪನೆ ಬಂದಿದೆ. ನಟರಿಗೆ ಗೌರವ ನೀಡಬೇಕು. ಹೊಸ ರೀತಿಯಲ್ಲಿ ನೋಡುವ ಅಭ್ಯಾಸ ಮಾಡಿಕೊಳ್ಳಬೇಕು ಎಂಬ ಮುಖ್ಯಮಂತ್ರಿಗೆ ಮಾತಿಗೆ ಬೆಂಬಲವಿದೆ


ಪ್ರಕಾಶ್ ಬೆಳವಾಡಿ, ರಂಗಕರ್ಮಿ

'60 ವರ್ಷ ಬದುಕುವುದೇ ಕಷ್ಟ'

ಕಲಾವಿದರು 60 ವರ್ಷ ಬದುಕುವುದೇ ಕಷ್ಟ. ವಯಸ್ಸು ಕಡಿಮೆ ಮಾಡಬೇಕು ಎಂದು ಮುಖ್ಯಮಂತ್ರಿ ಬಳಿ ಮನವಿ ಮಾಡಲು ನಿರ್ಧರಿಸಿದ್ದೆ. ಆದರೆ, ಮುಖ್ಯಮಂತ್ರಿಯವರೇ ಈ ಚಿಂತನೆ ಮಾಡಿರುವುದು ಸಂತಸ ತಂದಿದೆ. ಸ್ವತಃ ಸಮಿತಿಯವರೇ ಗುರುತಿಸಿ ಪ್ರಶಸ್ತಿ ನೀಡಿರುವುದು ಸಂತೋಷವಾಗಿದೆ

ಗಂಗಾವತಿ ಪ್ರಾಣೇಶ್, ಹಾಸ್ಯ ಕಲಾವಿದ

ಚಿತ್ರ | ಪುಟ 7



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶುಕ್ರವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ ಸಚಿವ ಸುನಿಲ್ ಕುಮಾರ್, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ, ಶಾಸಕ ಉದಯ ಗರುಡಾಚಾರ್ ಸಂಸದ ತೇಜಸ್ವಿ ಸೂರ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಎಸ್.ಮಂಜುಳಾ , ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ, ಸಂಸದ ಉಮೇಶ್ ಜಾದವ್ ಮತ್ತು ಪ್ರಶಸ್ತಿ ಪುರಸ್ಕೃತರು ಇದ್ದಾರೆ.

ಪ್ರಜಾವಾಣಿ ಚಿತ್ರ : ಅನೂಪ್ ರಾಘ.ಟಿ.

ಭಾಷೆ ಉಳಿವಿಗೆ ಸಂವಿಧಾನ ತಿದ್ದುಪಡಿ ಅಗತ್ಯ: ನಾಗಾಭರಣ

ಪ್ರಜಾವಾಣಿ ವಾರ್ತೆ




ಮೈಸೂರು: 'ಒಕ್ಕೂಟ ವ್ಯವಸ್ಥೆಯ ಎಲ್ಲ ಭಾಷೆಗಳ ಬೆಳವಣಿಗೆಗೆ ಸಂವಿಧಾನದ 343ರಿಂದ 351ರವರೆಗಿನ ವಿಧಿಗಳನ್ನು ತಿದ್ದುಪಡಿ ಮಾಡಲೇಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಪ್ರತಿಪಾದಿಸಿದರು.

ಭಾರತೀಯ ಭಾಷಾ ಸಂಸ್ಥಾನದ (ಸಿಐಐಎಲ್) ಶಾಸ್ತ್ರೀಯ ಕನ್ನಡ ಅತ್ಯುನ್ನತ ಕೇಂದ್ರವು ಸೋಮವಾರ ಏರ್ಪಡಿಸಿದ್ದ ರಾಜ್ಯೋತ್ಸವ ಹಾಗೂ ಶಾಸ್ತ್ರೀಯ ಕನ್ನಡ ಮಾನ್ಯತಾ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ತಿದ್ದುಪಡಿಯಿಂದ 8ನೇ ಪರಿಚ್ಛೇದದಲ್ಲಿರುವ 22 ಭಾಷೆಗಳಷ್ಟೇ ಅಲ್ಲದೆ ದೇಶದ ಎಲ್ಲ ನುಡಿಗಳಿಗೂ ಸಾಂವಿಧಾನಿಕ ಮಾನ್ಯತೆ ಸಿಗುತ್ತದೆ. ಅಳಿಯುತ್ತಿರುವ ಭಾಷೆಗಳನ್ನೂ ಉಳಿಸಿಕೊಳ್ಳಬಹುದು' ಎಂದರು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮಾತೃಭಾಷೆಗೆ ಪ್ರಾಧಾನ್ಯತೆ ನೀಡಿದ್ದರೂ ಕಡ್ಡಾಯ ಎಂಬ ಅಂಶವೇ ಇಲ್ಲ. ಸಾಧ್ಯವಾದರೆ, ಬಹುದು ಎಂಬ ಪದಗಳಿವೆ. ಪ್ರಾದೇಶಿಕ ಭಾಷೆಗಳ ಬಗ್ಗೆ ಆಳುವವರಿಗೆ, ಅನ್ಯ ಭಾಷಿಕರಿಗೆ ತಾತ್ಸಾರವಿದೆ. ಅನ್ಯ ಭಾಷಿಕರು ಕನ್ನಡ ಕಲಿಯುವಂಥ ಅನಿವಾರ್ಯತೆಯನ್ನು ಕನ್ನಡಿಗರು ಸೃಷ್ಟಿಸಬೇಕು. ಕಾನೂನು ತಂದಾದರೂ ಸರಿ' ಎಂದರು.

ಡಿ.1ರಿಂದ ಪಿಂಚಣಿ ಅದಾಲತ್



ಶಿವರಾಮ ಹೆಬ್ಬಾರ

ಕಾರವಾರ: 'ಪಿಂಚಣಿದಾರರಿಗೆ ಅನುಕೂಲವಾಗುವಂತೆ ಹೋಬಳಿ ಮಟ್ಟದಲ್ಲಿ ಡಿ.1ರಿಂದ ಪಿಂಚಣಿ ಅದಾಲತ್ ಹಮ್ಮಿಕೊಳ್ಳಲು ಸೂಚನೆ ನೀಡಲಾಗಿದೆ' ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಗ್ರಾಮೀಣ ಭಾಗದಲ್ಲಿರುವ ಫಲಾನುಭವಿಗಳಿಗೂ ಸೌಲಭ್ಯಗಳು ಸೂಕ್ತ ರೀತಿಯಲ್ಲಿ ಸಿಗಬೇಕು ಎಂಬ ಉದ್ದೇಶವು ರಾಜ್ಯ ಸರ್ಕಾರದ್ದಾಗಿದೆ. ಹಾಗಾಗಿ ಪಿಂಚಣಿ ಅದಾಲತ್ ಆಯೋಜಿಸಲು ತಹಶೀಲ್ದಾರರಿಗೆ ತಿಳಿಸಲಾಗಿದೆ. ಅವರೇ ಅದರ ನೇತೃತ್ವ ವಹಿಸಲಿದ್ದಾರೆ' ಎಂದರು.

'23 ಸಾವಿರ ಅರ್ಜಿಗಳು ವಿಲೇವಾರಿ ಆಗಬೇಕಾಗಿದ್ದು, ಅವುಗಳಲ್ಲಿ ಹಲವು ನ್ಯಾಯಾಲಯದಲ್ಲಿವೆ' ಎಂದರು.

ಹೊಣೆ ಹೊತ್ತ ತಮಿಳು ಚಿತ್ರರಂಗದ ನಾಯಕ ನಟ ವಿಶಾಲ್

ಪುನೀತ್ ಅಕ್ಷರ ಸೇವೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಸಾಮಾಜಿಕ ಕಾಳಜಿಯ ಯೋಜನೆಗಳನ್ನು ಮುಂದುವರಿಸುವ ಪ್ರಯತ್ನ ಸಾಗಿದೆ.

ಪುನೀತ್ ರಾಜ್‌ಕುಮಾರ್ ಅವರು ಶಿಕ್ಷಣದ ವೆಚ್ಚ ಭರಿಸುತ್ತಿದ್ದ 1,800 ಮಕ್ಕಳ ಮುಂದಿನ ವಿದ್ಯಾಭ್ಯಾಸದ ಹೊಣೆಯನ್ನು ತಮಿಳು ಚಿತ್ರರಂಗದ ನಾಯಕ ನಟ ವಿಶಾಲ್ ವಹಿಸಿಕೊಂಡಿದ್ದಾರೆ.

ತಮ್ಮ ನಟನೆಯ 'ಎನಿಮಿ' ಚಿತ್ರದ ಬಿಡುಗಡೆ ಪೂರ್ವ ಸಮಾರಂಭದಲ್ಲಿ ಪುನೀತ್‌ಗೆ ಗೌರವ ಸಲ್ಲಿಸಿ ಅವರು ಮಾತನಾಡಿದರು.



ವಿಶಾಲ್

'ಮುಂದಿನ ವರ್ಷದಿಂದ ಆ ಬಡ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸದ ಹೊಣೆಯನ್ನು ನಾನು ವಹಿಸಿಕೊಳ್ಳುತ್ತೇನೆ. ಇದು ನನ್ನ (ವಿಶಾಲ್) ಮತ್ತು ಪುನೀತ್ ನಡುವಿನ ಸ್ನೇಹ ಸಂಬಂಧಕ್ಕೆ ಕೊಡುತ್ತಿರುವ ಗೌರವ' ಎಂದಿದ್ದಾರೆ.

ವಿಶಾಲ್ ಹೇಳಿಕೆಗೆ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಶ್ಲಾಘನೆ ವ್ಯಕ್ತವಾಗಿದೆ.

ಶೀಘ್ರ ತೆರೆಯಲ್ಲಿ ಪುನೀತ್!: 'ಜೇಮ್ಸ್' ಚಿತ್ರದಲ್ಲಿ ಪುನೀತ್ ಅಭಿನಯದ ಭಾಗಗಳ ಚಿತ್ರೀಕರಣ ಪೂರ್ಣಗೊಂಡಿದೆ. ಒಂದು ಹಾಡು ಮಾತ್ರ ಬಾಕಿ ಇತ್ತು. ಕೆಲ ದಿನಗಳಲ್ಲಿ ಅಭಿಮಾನಿಗಳು ತಮ್ಮ 'ದೇವರನ್ನು' (ಪುನೀತ್) ತೆರೆಯ ಮೇಲೆ ನೋಡಬಹುದು ಎಂದು ಚಿತ್ರದ ನಿರ್ದೇಶಕ ಚೇತನ್ ಕುಮಾರ್ ತಿಳಿಸಿದ್ದಾರೆ.

'ಪುನೀತ್‌ಗೆ ಕರ್ನಾಟಕ ರತ್ನ– ಚರ್ಚಿಸಿ ನಿರ್ಧಾರ'

ಬೆಂಗಳೂರು: ಚಿತ್ರನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಗೌರವ ನೀಡಬೇಕೆಂದು ಅವರ ಅಭಿಮಾನಿಗಳು ಆಗ್ರಹಿಸುತ್ತಿರುವ ಕುರಿತು ಪ್ರಮುಖರ ಜತೆ ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪುನೀತ್ ಅವರಿಗೆ ಕರ್ನಾಟಕ ರತ್ನ ಗೌರವ ನೀಡಬೇಕೆಂದು ಅಭಿಮಾನಿಗಳಿಂದ ಒತ್ತಾಯ ಹೆಚ್ಚುತ್ತಿರುವ ಕುರಿತು ಸುದ್ದಿಗಾರರಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ಈ ಬೇಡಿಕೆ ಕುರಿತು ತಕ್ಷಣದಲ್ಲೇ ಏನನ್ನೂ ಹೇಳಲಾಗದು. ಪ್ರಮುಖರ ಜತೆ ಚರ್ಚಿಸುತ್ತೇನೆ' ಎಂದರು.

ಸಿಂದಗಿ ಮತ್ತು ಹಾನಗಲ್ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸುವುದು ಖಚಿತ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪೊಲೀಸರು ಕನ್ನಡದಲ್ಲೇ ಕವಾಯತು ನಡೆಸುವುದಕ್ಕೆ ಅವಕಾಶ ಕಲ್ಪಿಸಿ ಆದೇಶ ಹೊರಡಿಸಲಾಗುವುದು. ಐಪಿಎಸ್ ಅಧಿಕಾರಿ ಬಿ.ಆರ್. ರವಿಕಾಂತೇಗೌಡ ಬೆಳಗಾವಿಯಲ್ಲಿದ್ದಾಗ ಕನ್ನಡ ಕವಾಯತು ವ್ಯವಸ್ಥೆ ಮಾಡಿದ್ದರು. ಈಗ ಅದನ್ನು ರಾಜ್ಯದಾದ್ಯಂತ ಜಾರಿಗೆ ತರಲು ಗೃಹ ಸಚಿವರು ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ ಎಂದರು.

ಶಾಸಕ ಶ್ರೀನಿವಾಸ್‌ಗೆ ಕಾಂಗ್ರೆಸ್ ಟಿಕೆಟ್: ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ತುಮಕೂರು: ಜೆಡಿಎಸ್‌ನಿಂದ ದೂರವಾಗಿರುವ ಶಾಸಕ ಎಸ್. ಆರ್.ಶ್ರೀನಿವಾಸ್ ಅವರಿಗೆ ಕಾಂಗ್ರೆಸ್ ಸೇರುವಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಹ್ವಾನ ನೀಡಿದ್ದು, ಗುಬ್ಬಿ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ನೀಡುವುದಾಗಿ ಭರವಸೆ ನೀಡಿದರು.

ಗುಬ್ಬಿಯಲ್ಲಿ ಖಾಸಗಿ ಆಸ್ಪತ್ರೆ ಉದ್ಘಾಟನೆಗೆ ಬಂದಿದ್ದ ಸಮಯದಲ್ಲಿ ಪಕ್ಷಕ್ಕೆ ಬರುವಂತೆ ಆಹ್ವಾನಿಸಿದರು. 'ಈ ಬಗ್ಗೆ ಕಾರ್ಯಕರ್ತರ ಜತೆ ಚರ್ಚಿಸಿದ ನಂತರ ಪಕ್ಷ ಸೇರ್ಪಡೆಯಾಗುತ್ತೇನೆ. ಜೆಡಿಎಸ್‌ನಿಂದ ದೂರವಾಗಿರುವುದರಿಂದ ಕಾಂಗ್ರೆಸ್ ಸೇರುವುದು ಅನಿವಾರ್ಯವಾಗಿದೆ' ಎಂದು ಶ್ರೀನಿವಾಸ್ ತಿಳಿಸಿದರು.

ಜೆಡಿಎಸ್ ವಿಧಾನ ಪರಿಷತ್ ಸದಸ್ಯ ಬೆಮಲ್ ಕಾಂತರಾಜು ಈಗಾಗಲೇ ಕಾಂಗ್ರೆಸ್ ಸೇರುವುದಾಗಿ ಹೇಳಿದ್ದು, ಅವರಿಗೆ ಮುಂಬರುವ ಚುನಾವಣೆಯಲ್ಲಿ ತುರುವೇಕೆರೆ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ನೀಡಲಾಗುವುದು. ಇಬ್ಬರೂ ನಾಯಕರು ಪಕ್ಷ ಸೇರ್ಪಡೆ ಸಮಯದಲ್ಲಿ ಬೃಹತ್ ಕಾರ್ಯಕ್ರಮ ಸಂಘಟಿಸಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ಎಚ್‌ಡಿಕೆಗೆ ಸವಾಲು: 'ಕಳೆದ ಲೋಕಸಭೆ ಚುನಾವಣೆಯಲ್ಲಿ ತುಮಕೂರಿನಿಂದ ಸ್ಪರ್ಧಿಸಿದ್ದ ಮಾಜಿ ಪ್ರಧಾನಿ ದೇವೇಗೌಡರ ಸೋಲಿಗೆ ನಾನೇ ಕಾರಣ ಎನ್ನುವ ಜೆಡಿಎಸ್ ಮುಖಂಡ ಕುಮಾರಸ್ವಾಮಿ ಯಾವ ದೇವಾಲಯಕ್ಕೆ ಕರೆದರೂ ಹೋಗಿ ಪ್ರಮಾಣ ಮಾಡುತ್ತೇನೆ. ಅವರೂ ಮಾಡಲಿ' ಎಂದು ಜೆಡಿಎಸ್ ಗುಬ್ಬಿ ಶಾಸಕ ಎಸ್. ಆರ್ ಶ್ರೀನಿವಾಸ್ ಸವಾಲು ಹಾಕಿದರು.



ಕಡಲಾಳದಲ್ಲಿ ಕನ್ನಡ ಧ್ವಜ ಪ್ರದರ್ಶನ... ಉತ್ತರ ಕನ್ನಡ ಜಿಲ್ಲೆ ಭಟ್ಕಳದ ಮುರ್ಡೇಶ್ವರದಲ್ಲಿ ನೇತ್ರಾಣಿ ಅಡ್ವೆಂಚರ್ಸ್ ಸಂಸ್ಥೆಯ ಗಣೇಶ ಹರಿಕಾಂತ ಹಾಗೂ ತಂಡದವರು ನೇತ್ರಾಣಿ ಗುಡ್ಡದ ಬಳಿ ಸಮುದ್ರದಲ್ಲಿ 10 ಮೀಟರ್ ಆಳದಲ್ಲಿ ಕನ್ನಡ ಬಾವುಟವನ್ನು ಪ್ರದರ್ಶಿಸಿ ಈ ಬಾರಿಯ ರಾಜ್ಯೋತ್ಸವವನ್ನು ವಿಶಿಷ್ಟವಾಗಿ ಆಚರಿಸಿದರು

4 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಲಂಕಾ ಭಾಗದಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ನ.6ರವರೆಗೆ ಹೆಚ್ಚು ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ನ.2ರಂದ 6ರವರೆಗೆ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ 'ಯೆಲ್ಲೊ ಅಲರ್ಟ್' ಮುಂದುವರಿಸಲಾಗಿದೆ.

ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಇದೇ 3ರಿಂದ ಹಾಗೂ ಉತ್ತರ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಇದೇ 6ರಿಂದ ಮಳೆ ಹೆಚ್ಚಾಗಲಿದೆ. ಉಳಿದ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದೆ. ಕೆಲವು ಸ್ಥಳಗಳಲ್ಲಿ ಸಾಧಾರಣ ಮಳೆಯಾಗಬಹುದು.

ಮಳೆ-ಎಲ್ಲಿ, ಎಷ್ಟು?: ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯದಲ್ಲಿ ಸೋಮವಾರ 8 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಭಾಗಮಂಡಲ 5, ಸುಳ್ಯ, ಸಕಲೇಶಪುರ 4, ಕಾರ್ಕಳ, ಪುತ್ತೂರು 3, ಮೂಡುಬಿದರೆ 2, ಬೆಳ್ತಂಗಡಿ, ಬೆಳಗಾವಿ, ಕೆ.ಆರ್. ಪೇಟೆ, ಶ್ರೀರಂಗಪಟ್ಟಣ, ಮಳವಳ್ಳಿ, ನಂಜನಗೂಡು, ಎಚ್.ಡಿ.ಕೋಟೆ, ಮಡಿಕೇರಿ ಹಾಗೂ ಹಾಸನದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ರಭಸದ ಮಳೆ: ಹುಬ್ಬಳ್ಳಿ ನಗರದ ಕೆಲವೆಡೆ ಸೋಮವಾರ ಸಂಜೆ ಜೋರಾಗಿ ಮಳೆ ಸುರಿಯಿತು. ತಗ್ಗು ಪ್ರದೇಶದ ಕೆಲವು ಬಡಾವಣೆಗಳಲ್ಲಿ ನೀರು ನುಗ್ಗಿದ ಪರಿಣಾಮ, ಸ್ಥಳೀಯ ನಿವಾಸಿಗಳು ಪರದಾಡಿದರು.

ಮಧ್ಯಾಹ್ನದ ವೇಳೆ ಮೋಡ ಮುಸುಕಿದ ವಾತಾವರಣವಿತ್ತು. ಸಂಜೆ ಗುಡುಗು ಸಹಿತ ಮಳೆ ಸುರಿಯಿತು.

ರಭಸದ ಮಳೆಗೆ ಚನ್ನಮ್ಮ ವೃತ್ತ, ದಾಜೀಬಾನ್ ಪೇಟೆ, ಹೊಸೂರು ವೃತ್ತ, ವಾಣಿ ವಿಲಾಸ ವೃತ್ತ, ಗದಗ ರಸ್ತೆ ಸೇರಿದಂತೆ ವಿವಿಧ ಪ್ರಮುಖ ಪ್ರದೇಶಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು. ಹೊಸಪೇಟೆಯಲ್ಲಿಯೂ ಕೆಲ ಸಮಯ ತುಂತುರು ಮಳೆಯಾಗಿದೆ.

ಸಿಡಿಲು ಬಡಿದು ಇಬ್ಬರ ಸಾವು, ಮೂವರಿಗೆ ಗಾಯ

ಮಂಗಳೂರು: ಕರಾವಳಿ ಹಾಗೂ ಮಲೆನಾಡಿನಲ್ಲಿ ಸೋಮವಾರ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯಲ್ಲಿ ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದು, ಮೂವರಿಗೆ ಗಂಭೀರ ಗಾಯಗಳಾಗಿವೆ. ಪುತ್ತಿಗೆ ಗ್ರಾಮದ ಕಂಚಿಬೈಲು ನಿವಾಸಿ ಯಶವಂತ (25) ಮತ್ತು ಮಣಿಪ್ರಸಾದ್ (26) ಮೃತಪಟ್ಟ ಕಾರ್ಮಿಕರು. ಇವರು ಸಮೀಪದ ಯರಡುಂಡಿ ಫಾಲ್ಸ್‌ಗೆ ಹೋಗಿದ್ದಾಗ ಘಟನೆ ಸಂಭವಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರ ರಾತ್ರಿಯಿಂದಲೇ ಧಾರಾಕಾರ ಮಳೆ ಸುರಿಯಿತು. ಸೋಮವಾರ ಬೆಳಿಗ್ಗೆ ಬಿಸಿಲಿನ ವಾತಾವರಣವಿತ್ತು. ಸಂಜೆ ಮತ್ತೆ ಮಳೆಯಾಗಿದೆ. ಸುಳ್ಯ ತಾಲ್ಲೂಕಿನಲ್ಲಿ ಗರಿಷ್ಠ 5.2 ಸೆಂ.ಮೀ. ಮಳೆ ದಾಖಲಾಗಿದೆ. ಮಳೆಯಿಂದ ಒಂದು ಮನೆಗೆ ಭಾಗಶಃ ಹಾನಿಯಾಗಿದೆ.

ಉಡುಪಿ ಜಿಲ್ಲೆಯಾದ್ಯಂತ ಗುಡುಗು ಸಿಡಿಲು ಸಹಿತ ಮಳೆ ಸುರಿಯಿತು. ಉಡುಪಿ, ಬೈಂದೂರು, ಕಾರ್ಕಳ, ಕುಂದಾಪುರ, ಕಾಪು, ಹೆಬ್ರಿ ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗಿದ್ದರೆ, ಬ್ರಹ್ಮಾವರ, ಕಾಪು ತಾಲ್ಲೂಕುಗಳಲ್ಲಿ ಬಿರುಸಿನ ಮಳೆ ಸುರಿಯಿತು.

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದ ವಿವಿಧೆಡೆ ಸೋಮವಾರ ಮಳೆಯಾಗಿದೆ. ಚಿಕ್ಕಮಗಳೂರು, ಕಳಸ ಭಾಗದಲ್ಲಿ ಮಧ್ಯಾಹ್ನ ಅರ್ಧ ಗಂಟೆ ಬಿರುಸಾಗಿ ಮಳೆ ಸುರಿದಿದೆ. ಗುಡುಗು, ಮಿಂಚಿನ ಆರ್ಭಟವೂ ಇತ್ತು. ಕಡೂರು ಭಾಗದಲ್ಲಿ ತುಂತುರು ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	5,032	4,563
ಹಾರಂಗಿ	2,859	2,857.40	800	1,600
ಕಬಿನಿ	2284.00	2,283.99	2,010	1,500
ಹೇಮಾವತಿ	2,922	2,909.62	2,378	3,606
ಲಿಂಗನಮಕ್ಕಿ	1,819	1,814.65	2,984	-
ಸೂಪಾ (ಮೀ)	564	556.12	991	2,311
ಮಾಣಿ	594	583.9	3,568	-
ತುಂಗಭದ್ರಾ	1,633	1,632.92	8,726	10,653
ಮಲಪ್ರಭಾ	2079.5	2,078.30	97	1,694
ಘಟಪ್ರಭಾ	2175	172.53	-	3,160
ಭದ್ರಾ	186	185.10	3,184	3,786
ಆಲಮಟ್ಟಿ (ಮೀ)	519.6	519	10;000	11,296
ನಾರಾಯಣಪುರ (ಮೀ)	492.25	491.49	9,636	11,490

* ನೆಲಮಟ್ಟದಿಂದ

ಕಲ್ಲಿದ್ದಲು ಪೂರೈಕೆ ಹೆಚ್ಚಿಸಲು ಜೋಶಿ ಸಲಹೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕನಿಷ್ಠ 18 ದಿನಗಳ ಅವಧಿಗೆ ಸಾಕಾಗುವಷ್ಟು ಕಲ್ಲಿದ್ದಲು ದಾಸ್ತಾನು ಇರುವಂತೆ ನೋಡಿಕೊಳ್ಳಬೇಕು ಎಂದು ಕೇಂದ್ರದ ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ ಸರ್ಕಾರಿ ಸ್ವಾಮ್ಯದ ಕೋಲ್ ಇಂಡಿಯಾ ಹಾಗೂ ಅಂಗಸಂಸ್ಥೆಗಳಿಗೆ ಸಲಹೆ ನೀಡಿದರು.

ಸೋಮವಾರ ನಡೆದ ಕೋಲ್ ಇಂಡಿಯಾದ 47ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕಲ್ಲಿದ್ದಲಿನ ಬೆಲೆ ಜಾಗತಿಕವಾಗಿ ಮೂರು ಪಟ್ಟು ಹೆಚ್ಚಾಗಿದೆ. ಇದರ ಪರಿಣಾಮ ಆಮದು ಪ್ರಮಾಣ ಶೇ 38ರಷ್ಟು ಕಡಿಮೆಯಾಗಿದ್ದರಿಂದ ಕೊರತೆ ಹೆಚ್ಚಿದ್ದು, ವಿದ್ಯುತ್‌ನ ಬೇಡಿಕೆ ಶೇ 24ರಷ್ಟು ಹೆಚ್ಚಿದೆ ಎಂದರು.

ದೇಶದ ಕಲ್ಲಿದ್ದಲು ಪೂರೈಕೆಯಲ್ಲಿ ಏಕಸ್ವಾಮ್ಯವನ್ನು ಹೊಂದಿರುವ ಕೋಲ್ ಇಂಡಿಯಾದ ಕಲ್ಲಿದ್ದಲು ಉತ್ಪಾದನೆಯು ಅಗತ್ಯದ ಶೇ 80ಕ್ಕೂ ಅಧಿಕ ಪ್ರಮಾಣದಲ್ಲಿದೆ. 2024ರ ಅಂತ್ಯದ ವೇಳೆಗೆ ಉತ್ಪಾದನೆಯ ಪ್ರಮಾಣವು ವಾರ್ಷಿಕ 1 ಶತಕೋಟಿ ಟನ್ ತಲುಪುವಂತಾಗಬೇಕು ಎಂದು ಅವರು ತಿಳಿಸಿದರು.

ಉಷ್ಣ ವಿದ್ಯುತ್ ಸ್ಥಾವರಗಳಿಗೆ 22 ಲಕ್ಷ ಟನ್ ಕಲ್ಲಿದ್ದಲು ಪೂರೈಸಿರುವ ಕಾರಣ ಕೋಲ್ ಇಂಡಿಯಾ ಸೇರಿದಂತೆ ಇತರ ಕಂಪನಿಗಳನ್ನು ಜೋಶಿ ಅವರು ಇತ್ತೀಚೆಗೆ ಅಭಿನಂದಿಸಿದ್ದರು.

ಕಲ್ಲಿದ್ದಲು ಪೂರೈಕೆ ಪ್ರಮಾಣದಲ್ಲಿ ಚೇತರಿಕೆ ಕಂಡುಬಂದ ಕಾರಣ, ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಅಂದಾಜು ಐದು ದಿನಗಳಿಗೆ ಸಾಕಾಗುವಷ್ಟು ದಾಸ್ತಾನು ಇದೆ. ಆರು ದಿನಗಳಿಗೆ ಸಾಕಾಗುವಷ್ಟು ಪ್ರಮಾಣದ ದಾಸ್ತಾನು ಮುಂದಿನ ವಾರದೊಳಗೆ ಲಭ್ಯವಾಗುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದರು.

ಪ್ರತ್ಯೇಕ ರಾಜ್ಯ ಧ್ವಜಾರೋಹಣಕ್ಕೆ ಯತ್ನ: 20 ಜನರ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ಆರೋಪಿಸಿ ಸೋಮವಾರ ನಗರದಲ್ಲಿ ಪ್ರತ್ಯೇಕ ರಾಜ್ಯಕ್ಕೆ ಒತ್ತಾಯಿಸಿ ಧ್ವಜಾರೋಹಣಕ್ಕೆ ಮುಂದಾದ 20ಕ್ಕೂ ಹೆಚ್ಚು ಜನ ಹೋರಾಟಗಾರರನ್ನು ಪೊಲೀಸರು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

'ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ' ನೇತೃತ್ವದಲ್ಲಿ ಹೋರಾಟಗಾರರು ನಗರದ ಕೋರ್ಟ್ ರಸ್ತೆಯಲ್ಲಿರುವ ವಿಶ್ವೇಶ್ವರಯ್ಯ ಭವನದಿಂದ ಮೆರವಣಿಗೆಯಲ್ಲಿ ತೆರಳಿ ಸರ್ದಾರ್ ವಲ್ಲಭಭಾಯ್ ಪಟೇಲ್ ವೃತ್ತದ ಬಳಿ ಧ್ವಜಾರೋಹಣ ಮಾಡಲು ಮುಂದಾದಾಗ, ಪೊಲೀಸರು ತಡೆದರು.

'ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ನೀಡಿರುವ ವಿಶೇಷ ಸೌಲಭ್ಯ 371 (ಜೆ) ಕಲಂ ಅನುಷ್ಠಾನದಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ. ಸಚಿವ ಸಂಪುಟದಲ್ಲಿ ಕಲ್ಯಾಣ ಕರ್ನಾಟಕದವರನ್ನು ಕಡೆಗಣಿಸಲಾಗಿದೆ. ರಾಜ್ಯ ಸರ್ಕಾರದಿಂದ ಈ ಪ್ರದೇಶಕ್ಕೆ ಅನ್ಯಾಯ ಮುಂದುವರಿದಿದ್ದು, ಪ್ರತ್ಯೇಕ ರಾಜ್ಯ ಘೋಷಿಸಬೇಕು' ಎಂದು ಹೋರಾಟ ಸಮಿತಿ ಮುಖಂಡ ಎಂ.ಎಸ್. ಪಾಟೀಲ ನರಿಬೋಳ ಒತ್ತಾಯಿಸಿದರು.

ಕಲ್ಯಾಣ ಕರ್ನಾಟಕ ನಿರ್ಲಕ್ಷಿಸಿಲ್ಲ: 'ಅಭಿವೃದ್ಧಿ ವಿಚಾರದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶವನ್ನು ನಿರ್ಲಕ್ಷಿಸಿಲ್ಲ. ಹೀಗಾಗಿ ಪ್ರತ್ಯೇಕ ರಾಜ್ಯದ ಬೇಡಿಕೆ ಇಡುವುದು ಸಮಂಜಸವಲ್ಲ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಜಿಲ್ಲೆಯಲ್ಲಿ ವಿಮಾನಯಾನ ಮತ್ತು ರಕ್ಷಣಾ ಇಲಾಖೆಗೆ ಪೂರಕವಾಗಿ ಘಟಕ ಆರಂಭಿಸುವ ಚಿಂತನೆ ನಡೆದಿದೆ. ಜಿಲ್ಲೆಯಲ್ಲಿ ಟೆಕ್ಸ್‌ಟೈಲ್ ಪಾರ್ಕ್ ಆರಂಭಿಸಲು ಕೇಂದ್ರಕ್ಕೆ ಪತ್ರ ಬರೆಯಲಾಗಿದೆ' ಎಂದರು.

ತಲೆಕೆಳಗಾಗಿ ಹಾರಾಡಿದ ಧ್ವಜ

ಮಂಗಳೂರು: ಜಿಲ್ಲಾಡಳಿತದ ವತಿಯಿಂದ ನಗರದ ನೆಹರೂ ಮೈದಾನದಲ್ಲಿ ಸೋಮವಾರ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜ ತಲೆಕೆಳಗಾಗಿ ಹಾರಾಡಿತು. ಮೀನುಗಾರಿಕಾ ಸಚಿವ ಎಸ್. ಅಂಗಾರ ಧ್ವಜಾರೋಹಣ ಮಾಡಿದ ಕೂಡಲೇ ಇದನ್ನು ಗಮನಿಸಿದ ಅಧಿಕಾರಿಗಳು, ತಕ್ಷಣ ತಪ್ಪನ್ನು ಸರಿಪಡಿಸಿದರು.

ಸರ್ಕಾರಕ್ಕೆ ಧಿಕ್ಕಾರ, ಮೊಳಗಿದ ಜೈ ಮಹಾರಾಷ್ಟ್ರ ಘೋಷಣೆ

ಎಂಇಎಸ್‌ನಿಂದ 'ಕರಾಳ ದಿನಾಚರಣೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರ ಏಕೀಕರಣ ಸಮಿತಿ(ಎಂಇಎಸ್) ಮತ್ತು ಶಿವಸೇನಾ ಕಾರ್ಯಕರ್ತರು ಕರ್ನಾಟಕ ರಾಜ್ಯೋತ್ಸವ ಬಹಿಷ್ಕರಿಸಿ ಕರಾಳ ದಿನಾಚರಣೆ ನಡೆಸಿ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ವಿರುದ್ಧ ಸೋಮವಾರ ಘೋಷಣೆ ಕೂಗಿದರು. ಪ್ರಚೋದನಕಾರಿ ಭಾಷಣ ಮಾಡಿದ ಮುಖಂಡರು, ಗಡಿ ವಿವಾದವನ್ನು ಕೆಣಕಿದರು.

ನಗರದ ಮರಾಠಾ ಮಂದಿರದಲ್ಲಿ 350ಕ್ಕೂ ಹೆಚ್ಚು ಮಂದಿ ಸೇರಿ ಪ್ರತಿಭಟನಾ ಸಭೆ ನಡೆಸಿದರು. ಬಹುತೇಕರು ಕಪ್ಪು ಬಟ್ಟೆ ಧರಿಸಿದ್ದರು. ಕೆಲವರು, ಕಪ್ಪು ಬಾವುಟಗಳನ್ನು ಹಿಡಿದಿದ್ದರು. ಹಲವರು ಕಪ್ಪು ಪಟ್ಟಿ ಧರಿಸಿದ್ದರು. ಈ ಸಭೆಗೆ ಪೊಲೀಸ್ ಅನುಮತಿ ಪಡೆದಿರಲಿಲ್ಲ.

'ಬೆಳಗಾವಿ, ಖಾನಾಪುರ, ಕಾರವಾರ, ನಿಪ್ಪಾಣಿ, ಬೀದರ್, ಭಾಲ್ಕಿ ಸೇರಿದಂತೆ ಗಡಿ ಭಾಗದ ಎಲ್ಲ ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಲೇಬೇಕು. ಮಹಾನಗರ ಪಾಲಿಕೆ ಎದುರಿನ ಕನ್ನಡ ಧ್ವಜ ತೆರವುಗೊಳಿಸಬೇಕು, ಇಲ್ಲವೇ ಅಲ್ಲಿ ಭಗವಾಧ್ವಜ ಹಾರಿಸಲು ಅವಕಾಶ ಕೊಡಬೇಕು' ಎಂದು ಆಗ್ರಹಿಸಿದರು.

ಮರಾಠಿಗರಿಂದ ರಾಜ್ಯೋತ್ಸವ

ಚಿಕ್ಕೋಡಿ: ತಾಲ್ಲೂಕಿನ ಮಾಂಜರಿ ಗ್ರಾಮದಲ್ಲಿ ಮರಾಠಿಗರು, ಶಿವಾಜಿ ತರುಣ ಮಂಡಳ ಹಾಗೂ ಗ್ರಾಮಸ್ಥರು ಗ್ರಾಮದ ಶಿವಾಜಿ ಚೌಕನಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಿಸುವ ಮೂಲಕ ಭಾಷಾ ಬಾಂಧವ್ಯಕ್ಕೆ ಸಾಕ್ಷಿಯಾದರು.

ಗ್ರಾಮ ಪಂಚಾಯಿತಿ ಸದಸ್ಯ ಜ್ಞಾನೇಶ್ವರ ಪಾಟೋಳೆ ಭುವನೇಶ್ವರಿ ದೇವಿ ಪ್ರತಿಮೆಗೆ ಪೂಜೆ ಸಲ್ಲಿಸಿದರು. ಮಾಂಜರಿ ಪ್ರಾಥಮಿಕ ಕೃಷಿ ಪತ್ತಿನ ಅಧ್ಯಕ್ಷ ಅಣ್ಣಾಸಾಹೇಬ ಯಾದವ ಕನ್ನಡ ಧ್ವಜಾರೋಹಣ ನೇರವೇರಿಸಿದರು.

'ಪ್ರತಿಯೊಬ್ಬರೂ ರಾಜ್ಯದ ಅಧಿಕೃತ ಮಾತೃಭಾಷೆಯನ್ನು ಮೊದಲು ಕಲಿತುಕೊಳ್ಳಬೇಕು. ನಂತರ ತಮ್ಮ ತಮ್ಮ ಮಾತೃಭಾಷೆಯಲ್ಲಿ ದಿನನಿತ್ಯದ ವ್ಯವಹಾರಗಳನ್ನು ನಡೆಸಬೇಕು. ಭಾಷಾ ಬಾಂಧವ್ಯದಿಂದ ಸಮಾಜದಲ್ಲಿ ಸಾಮರಸ್ಯವೂ ಮೂಡುತ್ತದೆ' ಎಂದು ಅಣ್ಣಾಸಾಹೇಬ್ ಯಾದವ ಹೇಳಿದರು.

ಶಿವಾಜಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷ ರಾಮಚಂದ್ರ ಭೋಸಲೆ, ಮೋಹನ ಲೋಕರೆ, ಶಶಿಕಾಂತ ಪಾಟೀಲ, ಜಹಾಂಗೀರ ಕೋಥಳಿ, ಶಂಕರ ಚವಾಣ, ರಾಮಚಂದ್ರ ಕದಂ, ಯುವರಾಜ ಭೂಯಿ, ಬಬ್ರುವಾಹನ ಸಾರಾಪೂರೆ, ಬಾಬಾಸಾಹೇಬ್ ತೋರಸೆ, ನಾಮದೇವ ಪಾಟೋಳೆ, ಚಂದ್ರಸೇನ ಕದಂ, ಸುಖದೇವ ಪಾಟೋಳೆ, ಮಹಮ್ಮದ ತರಾಳ, ಸುಕುಮಾರ ಕಾಳವೀರೆ, ಅಮೋಲ ಜಾಧವ ಇದ್ದರು.



ಆನೆ ಹೋಗುವಾಗ ನಾಯಿ ಬೊಗಳಿದರೆ ಏನೂ ಆಗುವುದಿಲ್ಲ. ಮುಂದಿನ ದಿನಗಳಲ್ಲಿ ಎಂಇಎಸ್‌ಗೆ ಬುದ್ಧಿ ಕಲಿಸುತ್ತೇವೆ

–ಗೋವಿಂದ ಕಾರಜೋಳ,
ಜಿಲ್ಲಾ ಉಸ್ತುವಾರಿ ಸಚಿವ

ಎಂಇಎಸ್ ಮುಖಂಡನಿಂದ ವಿವಾದಿತ ಪೋಸ್ಟ್

ಬೆಳಗಾವಿಯ ಎಂಇಎಸ್ ಮುಖಂಡ ಶುಭಂ ಶೆಳಕೆ, 'ಸಂಯುಕ್ತ ಮಹಾರಾಷ್ಟ್ರ ಪರಿಕಲ್ಪನೆ'ಯ ನಕ್ಷೆಯನ್ನು ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ಗಡಿ ವಿವಾದವನ್ನು ಕೆಣಕಿದ್ದಾರೆ.

ಬೆಳಗಾವಿ, ಕಾರವಾರ, ಹಳ್ಯಾಳ, ನಿಪ್ಪಾಣಿ, ಬೀದರ್, ಭಾಲ್ಕಿ ಮಹಾರಾಷ್ಟ್ರಕ್ಕೆ ಸೇರಿದ್ದೆಂಬ ವಿವಾದಿತ ನಕ್ಷೆಯ ಫೋಟೊ ಪೋಸ್ಟ್ ಮಾಡಿದ್ದಾರೆ. 'ನ.1 ನಮ್ಮ ಪಾಲಿಗೆ ಕರಾಳ ದಿನ' ಎಂದು ಬರೆದಿದ್ದಾರೆ. ಇದನ್ನು ಎಂಇಎಸ್ ಕಾರ್ಯಕರ್ತರು ಸಾಮಾಜಿಕ ಮಾಧ್ಯಮದಲ್ಲಿ ಶೇರ್ ಮಾಡುತ್ತಿದ್ದಾರೆ. ಅವರ ವಾಟ್ಸ್ ಆ್ಯಪ್ ಗ್ರೂಪ್‌ಗಳಲ್ಲೂ ಹರಿದಾಡುತ್ತಿದೆ.

ಡಾ.ತಾರಿಣಿ ಶುಭದಾಯಿನಿಗೆ ಮುದ್ದಣ ಕಾವ್ಯ ಪ್ರಶಸ್ತಿ



ಮೂಡುಬಿದಿರೆ: ಪಠೇಲ್ ಪುನರೂರು ವಾಸುದೇವರಾವ್ ಟ್ರಸ್ಟ್ ಪ್ರಾಯೋಜಕತ್ವದ ಕಾಂತಾವರ ಕನ್ನಡ ಸಂಘ ಕೊಡಮಾಡುವ, 2021ನೇ ಸಾಲಿನ 'ಮುದ್ದಣ ಕಾವ್ಯ ಪ್ರಶಸ್ತಿ'ಗೆ ಚಿತ್ರದುರ್ಗದ ಸಾಹಿತಿ, ವಿಮರ್ಶಕಿ ಡಾ. ತಾರಿಣಿ ಶುಭದಾಯಿನಿ ಅವರ 'ವಿವೇಕಿಯ ಸ್ವಗತ' ಕವನ ಸಂಕಲನದ ಹಸ್ತಪ್ರತಿಯನ್ನು ಆಯ್ಕೆ ಮಾಡಲಾಗಿದೆ.

'ಚಿಂತಾಮಣಿ ಕೊಡ್ಲೆಕೆರೆ, ಬೆಳಗೋಡು ರಮೇಶ ಭಟ್ (ವಿಭಾವರಿ ಭಟ್), ಮತ್ತು ಟಿ.ಎ.ಎನ್. ಖಂಡಿಗೆ ಅವರಿದ್ದ ಸಮಿತಿ ಆಯ್ಕೆ ಮಾಡಿದೆ. ಪ್ರಶಸ್ತಿಯು ₹10 ಸಾವಿರ ಗೌರವ ಸಂಭಾವನೆ ಒಳಗೊಂಡಿದೆ' ಎಂದು ಕನ್ನಡ ಸಂಘದ ಸ್ಥಾಪಕ ಅಧ್ಯಕ್ಷ ಡಾ.ನಾ ಮೊಗಸಾಲೆ ತಿಳಿಸಿದ್ದಾರೆ.

ನಿಧನ ವಾರ್ತೆ

ಪ್ರೊ.ಜ್ಯೋತಿ ಹೊಸೂರ



ಬೆಳಗಾವಿ: ಸಾಹಿತಿ ಹಾಗೂ ಜಾನಪದ ತಜ್ಞ ರಾಯಬಾಗದ ಪ್ರೊ.ಜ್ಯೋತಿ (ಜೋತೆಪ್ಪ) ಹೊಸೂರ (84) ಅವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ಸೋಮವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಮೃತದೇಹವನ್ನು ಕೆ.ಎಲ್.ಇ. ಸಂಸ್ಥೆಯ ಜೆಎನ್‌ಎಂಸಿಗೆ ದಾನ ಮಾಡಲಾಗಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಯಬಾಗದ ಎಸ್.ಪಿ. ಮಂಡಳ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು.

ಗಾದೆ, ಒಡಪು, ಗ್ರಾಮದೇವತೆಗಳ ಕುರಿತು ಸಂಶೋಧನೆ ನಡೆಸಿದ್ದರು. ಅವರು ನಡೆಸಿದ ಸಂಶೋಧನೆಗಳು ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಚರ್ಚೆ ಆಗುತ್ತಿದ್ದವು. ಶಂಬಾ ಜೋಶಿ ಅವರ ಪ್ರಭಾವಕ್ಕೆ ಒಳಗಾಗಿ, ಅವರ ಬಗ್ಗೆ ವಿಶೇಷ ಅಧ್ಯಯನ ಮಾಡಿದ್ದರು. ರಾಯಬಾಗದಲ್ಲಿ 'ಕಾಲಗತಿ' ಪ್ರಕಾಶನ ಎಂಬ ಸಂಸ್ಥೆ ಸ್ಥಾಪಿಸಿ ಅದರ ಮೂಲಕ ಶಂಬಾ ಜೋಶಿ ಅವರ ಸಮಗ್ರ ಸಾಹಿತ್ಯವನ್ನು ಪ್ರಕಟಿಸಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಮಾನವತೆಯನ್ನು ಮರೆತ ಮತೋದ್ಧಾರ ಹೆಣದ ಸಿಂಗಾರ.
-ಕೆ.ಎಸ್.ನಿಸಾರ್ ಅಹಮದ್

ರೈತರಿಗೆ ಸಕಾಲಕ್ಕೆ ರಸಗೊಬ್ಬರ ದೊರೆಯುವಂತೆ ನೋಡಿಕೊಳ್ಳಿ

ರಾಜ್ಯದಲ್ಲಿ ಹಿಂಗಾರು ಹಂಗಾಮಿನ ಬಿತ್ತನೆ ಚುರುಕಾಗಿರುವ ವರದಿಗಳ ಬೆನ್ನಲ್ಲೇ ಡಿಎಪಿ, ಯೂರಿಯಾ ರಸಗೊಬ್ಬರಗಳ ಕೊರತೆಯೂ ಕಾಣಿಸಿಕೊಂಡಿದೆ. ಮಳೆಯೊಡನೆ ಜೂಜಾಡುತ್ತಾ ಸದಾ ಆತಂಕದಲ್ಲಿರುವ ರೈತರಿಗೆ, ಗೊಬ್ಬರ ಪೂರೈಕೆಗೆ ಸಂಬಂಧಿಸಿದಂತೆ ಸರ್ಕಾರದ ಅಸಮರ್ಪಕ ನೀತಿಯಿಂದ ಉಂಟಾಗುವ ಕೃತಕ ಅಭಾವವೂ ಸಂಕಟವನ್ನು ಹೆಚ್ಚಿಸುತ್ತಿದೆ. ಕಳೆದ ವರ್ಷವೂ ಹಿಂಗಾರು ಹಂಗಾಮಿನ ಹೊತ್ತಿಗೆ ರಸಗೊಬ್ಬರಕ್ಕಾಗಿ ರೈತರ ಕೂಗು ಮುಗಿಲು ಮುಟ್ಟಿತ್ತು. ಈಗ ಈ ಹಂಗಾಮಿನಲ್ಲೂ ರಸಗೊಬ್ಬರ ಮಾರಾಟದ ಮಳಿಗೆಗಳ ಮುಂದೆ ರೈತರ ಉದ್ದನೆಯ ಸಾಲು ಕಾಣಿಸಿಕೊಂಡಿದೆ. ಬಾಗಲಕೋಟೆ, ಉತ್ತರ ಕನ್ನಡ, ಚಿಕ್ಕಮಗಳೂರು, ರಾಮನಗರ, ರಾಯಚೂರು, ಚಾಮರಾಜನಗರ, ಮಂಡ್ಯ, ಕಲಬುರಗಿ, ಯಾದಗಿರಿ ಮುಂತಾದ ಜಿಲ್ಲೆಗಳಲ್ಲಿ ಬೇಡಿಕೆಗೆ ತಕ್ಕಂತೆ ರಸಗೊಬ್ಬರದ ಪೂರೈಕೆ ನಡೆದಿಲ್ಲ ಎಂದು ರೈತರು ದೂರುತ್ತಿದ್ದಾರೆ. ಡಿಎಪಿ ರಸಗೊಬ್ಬರದ ಕೊರತೆ ತೀವ್ರವಾಗಿರುವ ಕಡೆಗಳಲ್ಲಿ ಪರ್ಯಾಯವಾಗಿ ಕಾಂಪ್ಲೆಕ್ಸ್ ರಸಗೊಬ್ಬರ ಬಳಸುವಂತೆ ಸರ್ಕಾರಿ ಅಧಿಕಾರಿಗಳೇ ರೈತರ ಮನ ಒಲಿಸುತ್ತಿರುವುದು ವರದಿಯಾಗಿದೆ. ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ತಿಂಗಳು ರಸಗೊಬ್ಬರ ಕೊರತೆಯನ್ನು ಪ್ರತಿಭಟಿಸಿ ರೈತರು ಗೊಬ್ಬರ ಮಳಿಗೆಗಳ ಎದುರು ಜಮಾಯಿಸಿ ಕೂಗಾಡಿದ್ದು ದೊಡ್ಡ ಸುದ್ದಿಯಾಗಿತ್ತು. ಆಡಳಿತವನ್ನು ಚುರುಕುಗೊಳಿಸಿ ರೈತರಿಗೆ ಯಾವ ಆತಂಕವೂ ಇಲ್ಲದೆ ಸಕಾಲದಲ್ಲಿ ರಸಗೊಬ್ಬರ ದೊರಕಿಸುವುದು ಸರ್ಕಾರವೊಂದು ಮಾಡಬೇಕಾದ ಪ್ರಾಥಮಿಕ ಕರ್ತವ್ಯ. ಕೃಷಿ ಇಲಾಖೆಗೆ ಇಂತಹ ರೈತನಿಷ್ಠ ಕಾರ್ಯಕ್ರಮಗಳನ್ನು ಬಿಟ್ಟರೆ ಬೇರೆ ಯಾವ ಘನಂದಾರಿ ಕೆಲಸವಿದೆ? ಇಲಾಖೆ ಈ ಕೆಲಸವನ್ನೂ ನೆಟ್ಟಗೆ ನಿರ್ವಹಿಸದೆ ಪ್ರತೀ ಹಂಗಾಮಿನಲ್ಲೂ ಹೀಗೆ ರೈತರ ಆತಂಕವನ್ನು ಹೆಚ್ಚಿಸುವುದು ಎಳ್ಳಷ್ಟೂ ಸರಿಯಲ್ಲ. ಹೊಲ-ಗದ್ದೆಯ ಕೆಲಸಗಳನ್ನು ಬಿಟ್ಟು ರೈತರು ಗೊಬ್ಬರದ ಅಂಗಡಿಯ ಮುಂದೆ ಗಂಟೆಗಟ್ಟಲೆ ಸಾಲುಗಟ್ಟಿ ನಿಲ್ಲುವುದು ಸರ್ಕಾರಕ್ಕೆ ಶೋಭೆ ತರುವ ಸಂಗತಿಯೂ ಅಲ್ಲ.




ಸರ್ಕಾರದ ಪೂರೈಕೆ ಜಾಲ ಸಮರ್ಪಕವಾಗಿದ್ದರೆ, ಕಾಳಸಂತೆಯಿಂದ ಬೆಳೆಗಾರರ ಶೋಷಣೆಗೆ ಅವಕಾಶ ಇರದು

ಕೇಂದ್ರ ಸರ್ಕಾರದಲ್ಲಿ ಈಗ ರಾಜ್ಯದವರೇ ಆದ ಭಗವಂತ ಖೂಬಾ ಅವರು ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ರಾಜ್ಯ ಸಚಿವರಾಗಿದ್ದಾರೆ. ಕೇಂದ್ರ ಸರ್ಕಾರದ ರಸಗೊಬ್ಬರ ಇಲಾಖೆಯ ವೆಬ್‌ಸೈಟ್ ಗಮನಿಸಿದರೆ, ಬೇಡಿಕೆಗಿಂತ ಹೆಚ್ಚು ದಾಸ್ತಾನು ಇದೆ ಎಂಬ ಅಂಕಿ ಅಂಶಗಳು ಕಾಣಸಿಗುತ್ತಿವೆ. ಅಕ್ಟೋಬರ್ ಅಂತ್ಯಕ್ಕೆ ಯೂರಿಯಾದ ಬೇಡಿಕೆ 1.21 ಲಕ್ಷ ಟನ್ ಇದ್ದರೆ, ದಾಸ್ತಾನು 3.69 ಲಕ್ಷ ಟನ್ ಇದೆ. ಡಿಎಪಿ ಕೂಡಾ ಬೇಡಿಕೆಗಿಂತ ಎರಡು ಪಟ್ಟು ಹೆಚ್ಚು ದಾಸ್ತಾನು ಇದೆ. ‘ಕರ್ನಾಟಕದಲ್ಲಿ ರಸಗೊಬ್ಬರದ ಕೊರತೆಯೇ ಇಲ್ಲ. ಬೇಡಿಕೆಗಿಂತ ಹೆಚ್ಚು ದಾಸ್ತಾನು ಇದೆ’ ಎಂದು ಸಚಿವ ಖೂಬಾ ಇತ್ತೀಚೆಗೆ ಹೇಳಿದ್ದಾರೆ. ರಾಜ್ಯದ ಕೃಷಿ ಸಚಿವ ಬಿ.ಸಿ.ಪಾಟೀಲ ಅವರೂ ಇದೇ ಮಾತನ್ನು ಹೇಳಿದ್ದಾರೆ. ಹಾಗಿದ್ದೂ ಈ ದಾಸ್ತಾನು ರೈತರಿಗೆ ಸಕಾಲಕ್ಕೆ ಸುಲಭದಲ್ಲಿ ಏಕೆ ಸಿಗುತ್ತಿಲ್ಲ? ಅವರೇಕೆ ಮಳಿಗೆಗಳ ಮುಂದೆ ಇಡೀ ದಿನ ಕಾದು ನಿಲ್ಲಬೇಕು? ಅಧಿಕಾರಿಗಳೇಕೆ ರೈತರನ್ನು ಕಾಂಪ್ಲೆಕ್ಸ್ ಗೊಬ್ಬರ ಖರೀದಿಸುವಂತೆ ಪುಸಲಾಯಿಸಬೇಕು? ಪೂರೈಕೆಯ ಕೊಂಡಿ ಎಲ್ಲಿ ಏರುಪೇರಾಗುತ್ತಿದೆ?

ರೈತರ ಶೋಷಣೆಗೆ ಹಲವು ಮುಖಗಳಿವೆ. ಕೆಲವು ಕಂಪನಿಗಳು ತಮ್ಮಲ್ಲಿನ ಉಳಿಕೆ ಗೊಬ್ಬರಗಳನ್ನು ‘ಲಿಂಕ್ ಖರೀದಿ’ ವಿಧಾನದಡಿ ಮಾರಾಟ ನಡೆಸಿದ ಬಗ್ಗೆ ಕಳೆದ ಹಂಗಾಮಿನಲ್ಲಿ ಹಾನಗಲ್ ಭಾಗದಿಂದ ದೂರು ಕೇಳಿಬಂದಿತ್ತು. ರೈತರು ಒಂದು ಮೂಟೆ ಯೂರಿಯಾ ಬೇಕೆಂದರೆ ಕಡ್ಡಾಯವಾಗಿ ಡಿಎಪಿ ಅಥವಾ ಇತರ ಗೊಬ್ಬರ ಖರೀದಿಸಬೇಕು ಎಂದು ಷರತ್ತು ವಿಧಿಸಲಾಗುತ್ತಿತ್ತು. ಇನ್ನು ಹಲವೆಡೆ, ಆಧಾರ್ ಪರಿಗಣಿಸಿ ಒಬ್ಬರಿಗೆ ಇಂತಿಷ್ಟು ಕೆ.ಜಿ. ಗೊಬ್ಬರ ಎಂಬ ನಿಯಮವನ್ನು ದುರುಪಯೋಗಪಡಿಸಿಕೊಂಡು, ರಸಗೊಬ್ಬರ ಬೇಕಾಗಿಲ್ಲದ ರೈತರ ಆಧಾರ್ ಪಡೆದು ಮಧ್ಯವರ್ತಿಗಳು ಖರೀದಿಸಿ ಹೆಚ್ಚಿನ ದರಕ್ಕೆ ಮಾರಾಟ ಮಾಡುವುದೂ ನಡೆದಿದೆ. ಅಫಜಲಪುರ ತಾಲ್ಲೂಕಿನಲ್ಲಿ ರಸಗೊಬ್ಬರವನ್ನು ಕಾಳಸಂತೆಯಲ್ಲಿ ದುಬಾರಿ ದರಕ್ಕೆ ಮಾರಾಟ ಮಾಡುತ್ತಿರುವ ದೂರುಗಳಿವೆ. ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯಲ್ಲಿ ರಸಗೊಬ್ಬರ ಸಕಾಲಕ್ಕೆ ಸಿಗದೆ ಸಣ್ಣ ಪ್ರಮಾಣದ ಕಾಫಿ ಬೆಳೆಗಾರರು ಪರದಾಡುತ್ತಿದ್ದಾರೆ. ಸರ್ಕಾರದ ಪೂರೈಕೆ ಜಾಲ ಸರಿಯಾಗಿ ಕಾರ್ಯ ನಿರ್ವಹಿಸಿದರೆ ಈ ರೀತಿಯ ಶೋಷಣೆಗೆ ಅವಕಾಶ ಇರುವುದಿಲ್ಲ. ಈ ಅವ್ಯವಸ್ಥೆಯನ್ನು ಸರಿಪಡಿಸುವತ್ತ ಸರ್ಕಾರ ತುರ್ತು ಗಮನ ಹರಿಸಬೇಕಿದೆ. ಅಧಿಕಾರಿಗಳ ಸಭೆ ಕರೆದು ಆಡಳಿತಕ್ಕೆ ಚುರುಕು ನೀಡಬೇಕಿದೆ. ಮಧ್ಯವರ್ತಿಗಳು ಕೃತಕ ಅಭಾವ ಸೃಷ್ಟಿಸುತ್ತಿದ್ದರೆ ಅಧಿಕಾರಿಗಳು ಅವರನ್ನೂ ಮಟ್ಟ ಹಾಕಿ ರೈತರ ಆತಂಕವನ್ನು ತಗ್ಗಿಸಬೇಕಿದೆ. ಮಳೆ, ಬೆಳೆಯ ಹಂಗಾಮು ಸರ್ಕಾರದ ಸೋಂಬೇರಿತನವನ್ನು ಕಾದು ಕುಳಿತುಕೊಳ್ಳುವುದಿಲ್ಲ. ಗೋದಾಮಿನಲ್ಲಿ ದಾಸ್ತಾನು ಇದ್ದರೆ ಸಾಲದು, ಅಗತ್ಯವಿರುವ ರೈತರಿಗೆ ಅದು ಸಕಾಲದಲ್ಲಿ ದೊರೆತರೆ ಮಾತ್ರ ಕೃಷಿ ಕೈಹಿಡಿಯುತ್ತದೆ. ರಸಗೊಬ್ಬರದ ಬೆಲೆ ಏರುವುದನ್ನಂತೂ ತಡೆಯಲಾಗುತ್ತಿಲ್ಲ. ಕನಿಷ್ಠಪಕ್ಷ ರಸಗೊಬ್ಬರ ಸಕಾಲಕ್ಕೆ ಮತ್ತು ಸುಲಭವಾಗಿ ರೈತರಿಗೆ ತಲುಪುವಂತಾದರೂ ನೋಡಿಕೊಳ್ಳಬೇಕಾದುದು ಸರ್ಕಾರದ ಆದ್ಯ ಕರ್ತವ್ಯ.

ಯಾವುದೇ ಆಧುನಿಕ ಶಸ್ತ್ರಾಸ್ತ್ರಗಳನ್ನು ಭಾರತ ತನ್ನದಾಗಿಸಿಕೊಂಡರೂ, ಅದರಿಂದ ಜಗತ್ತು ಹೆದರಬೇಕಿಲ್ಲ

ಖಂಡಾಂತರ ಕ್ಷಿಪಣಿ, ಗಗನ ಗುರಾಣಿ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತು 5 ಸಾವಿರ ಕಿ.ಮೀ. ದೂರದ ಗುರಿ ತಲುಪಬಲ್ಲ ಅಗ್ನಿ-5 ಹೆಸರಿನ ಖಂಡಾಂತರ ಕ್ಷಿಪಣಿಯನ್ನು ಭಾರತ ಅಕ್ಟೋಬರ್ 27ರಂದು ಯಶಸ್ವಿಯಾಗಿ ಪರೀಕ್ಷಿಸಿತು. ಇನ್ನು ಕೆಲವು ದಿನಗಳಲ್ಲಿ ವಾಯುದಾಳಿ ಪ್ರತಿರೋಧ ಕ್ಷಿಪಣಿ ಎಸ್-400ರ ಘಟಕಗಳು ರಷ್ಯಾದಿಂದ ಭಾರತಕ್ಕೆ ಬರುವ ನಿರೀಕ್ಷೆ ಇದೆ. ಇದರಿಂದಾಗಿ ನಮ್ಮ ಸಾಮರಿಕ ಸಾಮರ್ಥ್ಯ ಹೆಚ್ಚುತ್ತದೆ ಮತ್ತು ರಕ್ಷಣಾ ವ್ಯವಸ್ಥೆ ಬಲಗೊಳ್ಳುತ್ತದೆ.

ಅತ್ಯಾಧುನಿಕ ರಕ್ಷಣಾ ಉಪಕರಣಗಳು ಭಾರತದ ಬತ್ತಳಿಕೆಯನ್ನು ಸೇರಿದಾಗ ನಮ್ಮ ನೆರೆಯ ಚೀನಾ ಮತ್ತು ಪಾಕಿಸ್ತಾನ ಅಧೀರಗೊಂಡರೆ ಅದು ಸಹಜವೇ. ಆದರೆ ಎಸ್-400 ವಿಷಯದಲ್ಲಿ ಅಮೆರಿಕ ಕೊಂಚ ಸಿಟ್ಟಾಗಿದೆ. ರಷ್ಯಾದಿಂದ ಎಸ್-400 ಖರೀದಿಸುವ ಪ್ರಕ್ರಿಯೆಗೆ ಭಾರತ ಚಾಲನೆ ಕೊಟ್ಟ ದಿನದಿಂದಲೂ ಅದು ತನ್ನ ಅಸಮಾಧಾನವನ್ನು ತೋರ್ಪಡಿಸಿದೆ, ದಿಗ್ಬಂಧನ ಹೇರುವ ಬೆದರಿಕೆ ಒಡ್ಡಿದೆ. ಇದುವರೆಗೂ ಎಚ್ಚರಿಕೆ ಮತ್ತು ಬೆದರಿಕೆಯ ಅಸ್ತ್ರ ಬಿಟ್ಟ ಅಮೆರಿಕ ಇದೀಗ ತನ್ನ ನಿಲುವು ಪ್ರಕಟಿಸಬೇಕಾದ ಹಂತ ತಲುಪಿದೆ. ಚೆಂಡು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರ ಅಂಗಳಕ್ಕೆ ಬಿದ್ದಿದೆ.

ಇಲ್ಲಿ ಕೆಲವು ಪ್ರಶ್ನೆಗಳಿವೆ. ಅಮೆರಿಕದ ವಿರೋಧದ ನಡುವೆಯೂ ಭಾರತ ಎಸ್-400 ಖರೀದಿಗೆ ಮುಂದಾಗಲು ಕಾರಣವೇನು ಎಂಬುದು ಮೊದಲ ಪ್ರಶ್ನೆ. ರಷ್ಯಾ ಅಭಿವೃದ್ಧಿಪಡಿಸಿರುವ ಎಸ್-400, ಪ್ರಸ್ತುತ ಲಭ್ಯವಿರುವ ವಾಯುದಾಳಿ ಪ್ರತಿರೋಧಕಗಳ ಪೈಕಿ ಅತ್ಯುತ್ತಮವಾದದ್ದು ಎನಿಸಿದೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಕ್ಷಿಪ್ರವಾಗಿ ಮತ್ತು ಸುಲಭವಾಗಿ ಕೊಂಡೊಯ್ಯಬಹುದು ಎಂಬುದು ಇದರ ಹೆಗ್ಗಳಿಕೆ. ಶತ್ರು ದೇಶದ ಯಾವುದೇ ಬಗೆಯ ವಾಯುದಾಳಿಯನ್ನು ಇದು ಗುರುತಿಸುತ್ತದೆ ಮತ್ತು ನಿಖರವಾದ ಪ್ರತಿದಾಳಿಗೆ ಅನುಕೂಲ ಒದಗಿಸುತ್ತದೆ ಎಂಬುದು ಹೆಚ್ಚುಗಾರಿಕೆ.

ಹಾಗಾಗಿಯೇ ಹಲವು ರಾಷ್ಟ್ರಗಳು ಎಸ್-400 ಕೊಳ್ಳಲು ಮತ್ತು ತನ್ಮೂಲಕ ತಮ್ಮ ವಾಯುಪಡೆಗೆ ಶಕ್ತಿ ತುಂಬಲು ಉತ್ಸುಕವಾಗಿವೆ. ಚೀನಾ 2014ರಲ್ಲಿ ರಷ್ಯಾದ ಜೊತೆ ಎಸ್-400 ಖರೀದಿ ಒಪ್ಪಂದ ಮಾಡಿಕೊಂಡಿತು. 2018ರ ಜನವರಿಯಲ್ಲಿ ಆ ಬೇಡಿಕೆಯನ್ನು ರಷ್ಯಾ ಪೂರೈಸಿತು. ಇದೀಗ ಭಾರತದ ಗಡಿಯಲ್ಲಿ ಎಸ್-400 ಘಟಕಗಳನ್ನು ಚೀನಾ ನಿಲ್ಲಿಸಿದೆ. ಹಾಗಾಗಿ ಪಾಕಿಸ್ತಾನ ಮತ್ತು ಚೀನಾದ ಗಡಿತಂಟೆಯನ್ನು ಎದುರಿಸುತ್ತಲೇ ಬಂದಿರುವ ಭಾರತ ಸೇನೆಯನ್ನು ರಕ್ಷಣಾತ್ಮಕವಾಗಿ ಬಲಪಡಿಸಲು ಎಸ್-400 ಹೊಂದುವುದು ಅನಿವಾರ್ಯವಾಗಿದೆ.

ಹಾಗಾದರೆ ಎಸ್-400 ಕುರಿತ ಅಮೆರಿಕದ ಕಳವಳಕ್ಕೆ ಕಾರಣಗಳೇನು ಎಂಬುದು ಎರಡನೆಯ ಪ್ರಶ್ನೆ. ಅಮೆರಿಕದ ವಿರೋಧಿ ರಾಷ್ಟ್ರಗಳನ್ನು ದಿಗ್ಬಂಧನದ ಮೂಲಕ ಕಟ್ಟಿಹಾಕುವ ಕಾಯ್ದೆಯೊಂದನ್ನು (CAATSA) 2017ರಲ್ಲಿ ಅಮೆರಿಕದ ಸಂಸತ್ತು ಅಂಗೀಕರಿಸಿತು. ಇರಾನ್, ಉತ್ತರ ಕೊರಿಯಾ ಮತ್ತು ರಷ್ಯಾದೊಂದಿಗೆ ರಕ್ಷಣಾ ವಲಯಕ್ಕೆ ಸಂಬಂಧಿಸಿದ ಯಾವುದೇ ವ್ಯಾವಹಾರಿಕ ಒಪ್ಪಂದಗಳನ್ನು ಮಾಡಿಕೊಳ್ಳುವಂತಿಲ್ಲ. ಒಂದೊಮ್ಮೆ ಯಾವುದೇ ದೇಶ ಅಂತಹ ಒಪ್ಪಂದಕ್ಕೆ ಮುಂದಾದರೆ ಆ ದೇಶದ ಮೇಲೆ ಅಮೆರಿಕ ದಿಗ್ಬಂಧನ ಹೇರಬಹುದು. ವಿನಾಯಿತಿ ನೀಡುವುದು ಅಧ್ಯಕ್ಷರ ವಿವೇಚನೆಗೆ ಬಿಟ್ಟದ್ದು ಎಂಬುದು ಕಾಯ್ದೆಯ ಸಾರಾಂಶ. ಹಾಗಾಗಿ ರಷ್ಯಾದೊಂದಿಗೆ ಎಸ್-400 ಖರೀದಿಗೆ ಮುಂದಾಗಿರುವ ಭಾರತ ದಿಗ್ಬಂಧನ ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಹೇಳುತ್ತಿದೆ.

ಆದರೆ ಕಾರಣ ಅದೊಂದೇ ಅಲ್ಲ. ಅಮೆರಿಕ ಯುದ್ಧೋಪಕರಣಗಳ ಉತ್ಪಾದಕ ರಾಷ್ಟ್ರ. ಭಾರತ ಯುದ್ಧಸಾಮಗ್ರಿಗಳ ಅತಿದೊಡ್ಡ ಗ್ರಾಹಕ ರಾಷ್ಟ್ರ. ರಕ್ಷಣಾ ಸಾಮಗ್ರಿಗಳ ಅಭಿವೃದ್ಧಿ ಮತ್ತು ಮಾರಾಟದಲ್ಲಿ ಅಮೆರಿಕಕ್ಕೆ ಪ್ರತಿಸ್ಪರ್ಧಿಯಾಗಿ ರಷ್ಯಾ ಇದೆ. ಹಾಗಾಗಿ ರಷ್ಯಾದ ಗ್ರಾಹಕ ದೇಶಗಳನ್ನು ತನ್ನತ್ತ ಒಲಿಸಿಕೊಳ್ಳುವ ಕೆಲಸವನ್ನು ಅಮೆರಿಕ ಎಲ್ಲ ಆಯ್ಕೆಗಳನ್ನು ಬಳಸಿ ಮಾಡುತ್ತಾ ಬಂದಿದೆ. ಒಂದು ಹಂತದಲ್ಲಿ ಡೊನಾಲ್ಡ್ ಟ್ರಂಪ್ ಅವರು ‘ಒಂದೊಮ್ಮೆ ಅಮೆರಿಕದ ಎಫ್-16 ಯುದ್ಧ ವಿಮಾನಗಳನ್ನು ಭಾರತ ಕೊಳ್ಳುವುದಾದರೆ ದಿಗ್ಬಂಧನದಿಂದ ವಿನಾಯಿತಿ ನೀಡಲಾಗುವುದು’ ಎಂದಿದ್ದರು. ತಾನು ಅಭಿವೃದ್ಧಿಪಡಿಸಿರುವ ‘ಪ್ಯಾಕ್-3’ ಅಥವಾ ‘ಥಾಡ್’ ರಕ್ಷಣಾ ವ್ಯವಸ್ಥೆಯನ್ನು ಕೊಳ್ಳುವಂತೆ ಅಮೆರಿಕವು ಭಾರತಕ್ಕೆ ಮನವಿ ಮಾಡಿತ್ತು. ಹಾಗಾಗಿ 2017ರ ಕಾಯ್ದೆಯನ್ನು ಅಮೆರಿಕ ಉಲ್ಲೇಖಿಸಿದರೆ ಅದೊಂದು ನೆಪ ಅಷ್ಟೆ.

ಹಾಗಾದರೆ ಜೋ ಬೈಡನ್ ಭಾರತದ ವಿರುದ್ಧ ದಿಗ್ಬಂಧನದ ನಿರ್ಣಯ ಕೈಗೊಳ್ಳುವರೇ? ಇತ್ತೀಚಿನ ವರ್ಷಗಳಲ್ಲಿ ಅಮೆರಿಕ ಮತ್ತು ಭಾರತದ ನಡುವಿನ ಸಖ್ಯ ಗಟ್ಟಿಯಾಗಿದೆ. ಏಷ್ಯಾ ಪೆಸಿಫಿಕ್ ವಲಯದ ಮಟ್ಟಿಗೆ ಚೀನಾವನ್ನು ಎದುರಿಸಲು ಭಾರತದೊಂದಿಗಿನ ಸಖ್ಯ ಅಮೆರಿಕಕ್ಕೆ ಹಿಂದೆಂದಿಗಿಂತಲೂ ಈಗ ಅಗತ್ಯ. ಕ್ವಾಡ್ ಒಕ್ಕೂಟದ ಸದಸ್ಯ ರಾಷ್ಟ್ರವಾಗಿ ಕೂಡ ಭಾರತ ಇದೆ. ಭಾರತದ ಮೇಲೆ ಕ್ರಮ ಕೈಗೊಂಡರೆ ರಷ್ಯಾದೊಂದಿಗಿನ ತಂತುಗಳನ್ನು ಭಾರತ ಗಟ್ಟಿ ಮಾಡಿಕೊಳ್ಳಬಹುದು ಎಂಬ ಆತಂಕ ಅಮೆರಿಕಕ್ಕೆ ಇಲ್ಲದಿಲ್ಲ. ಇದೆಲ್ಲಕ್ಕೂ ಮಿಗಿಲಾಗಿ ಭಾರತ ಬೆಳೆಯುತ್ತಿರುವ ದೊಡ್ಡ ಮಾರುಕಟ್ಟೆ. ಹಾಗಾಗಿ ದಿಗ್ಬಂಧನ ವಿಧಿಸಿ ತನ್ನ ಕೈಗಳನ್ನು ತಾನೇ ಕಟ್ಟಿಹಾಕಿಕೊಳ್ಳುವ ಕೆಲಸವನ್ನು ಅಮೆರಿಕ ಮಾಡುವ ಸಾಧ್ಯತೆ ಕಡಿಮೆ.




ಆದರೆ ಈ ಹಿಂದೆ ಎಸ್-400 ಅನ್ನು ಚೀನಾ ಖರೀದಿಸಿದಾಗ ಅಮೆರಿಕ ಒಂದಿಷ್ಟು ನಿರ್ಬಂಧ ವಿಧಿಸಿತ್ತು. ರಷ್ಯಾದ ಜೊತೆ ಟರ್ಕಿ ಒಪ್ಪಂದ ಮಾಡಿಕೊಂಡಾಗ, ನ್ಯಾಟೊ ಸದಸ್ಯ ರಾಷ್ಟ್ರ ಎಂಬುದನ್ನು ಲೆಕ್ಕಿಸದೇ ಎಫ್-35 ಯುದ್ಧ ವಿಮಾನಗಳನ್ನು ಸರಬರಾಜು ಮಾಡುವುದಿಲ್ಲ ಎಂದಿತ್ತು. ‘ಎಸ್-400 ಘಟಕಗಳನ್ನು ಅಳವಡಿಸಲು ರಷ್ಯಾದ ತಾಂತ್ರಿಕ ಪರಿಣತರು ಭೇಟಿ ಕೊಡುತ್ತಾರೆ, ಆ ಸಂದರ್ಭದಲ್ಲಿ ಎಫ್-35ರ ತಂತ್ರಜ್ಞಾನ ರಷ್ಯಾದ ಪಾಲಾಗಬಹುದು’ ಎಂಬ ತನ್ನ ದಿಗಿಲನ್ನು ಹೇಳಿಕೊಂಡಿತ್ತು. ಒಂದೊಮ್ಮೆ ಭಾರತಕ್ಕೆ ದಿಗ್ಬಂಧನದಿಂದ ವಿನಾಯಿತಿ ನೀಡಿದರೆ ಟರ್ಕಿ ಮತ್ತು ಚೀನಾದ ಟೀಕೆಯನ್ನು ಕೇಳಬೇಕಾಗಿ ಬರಬಹುದು ಎಂಬ ದ್ವಂದ್ವ ಅಮೆರಿಕವನ್ನು ಕಾಡುತ್ತಿದೆ.

ಎಸ್-400 ವಿಷಯದಲ್ಲಿ ಅಮೆರಿಕದ ಒತ್ತಡ ಇದ್ದಾಗ್ಯೂ ಭಾರತ ಸ್ಥಿರವಾಗಿ ನಿಂತಿದ್ದಕ್ಕೆ ಕಾರಣವಿದೆ. ಯಾವುದೇ ದೇಶದ ಮೇಲೆ ವಿಶ್ವಸಂಸ್ಥೆ ಹೇರುವ ದಿಗ್ಬಂಧನಕ್ಕೆ ಬದ್ಧವಾಗಿರುತ್ತೇವೆ, ಆದರೆ ಏಕಪಕ್ಷೀಯವಾಗಿ ಯಾವುದೇ ರಾಷ್ಟ್ರ ಹೇರುವ ದಿಗ್ಬಂಧನಗಳಿಗೆ ಮಾನ್ಯತೆ ನೀಡುವುದಿಲ್ಲ ಎನ್ನುವುದು ಭಾರತದ ಸ್ಥಾಪಿತ ನಿಲುವು. ಜೊತೆಗೆ ರಷ್ಯಾ ಜೊತೆಗಿನ ಭಾರತದ ಸಖ್ಯ ಹಳೆಯದು. ಭಾರತ ಬಳಸುತ್ತಿರುವ ಶೇಕಡ 65ರಷ್ಟು ಯುದ್ಧೋಪಕರಣಗಳು ರಷ್ಯಾ ಮೂಲದ್ದಾಗಿವೆ. ಆ ಉಪಕರಣಗಳನ್ನು ಸುಸ್ಥಿತಿಯಲ್ಲಿಡಲು ಅಗತ್ಯವಾದ ಬಿಡಿಭಾಗಗಳನ್ನು ರಷ್ಯಾ ಪೂರೈಸುತ್ತಿದೆ. ಈ ಹಿಂದೆ 1998ರಲ್ಲಿ ಭಾರತ ಅಣ್ವಸ್ತ್ರ ಪರೀಕ್ಷೆ ನಡೆಸಿದಾಗ, ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳು ದಿಗ್ಬಂಧನ ಹೇರಿದಾಗಲೂ ಭಾರತದ ಜೊತೆಗಿನ ಶಸ್ತ್ರಾಸ್ತ್ರ ವಹಿವಾಟನ್ನು ರಷ್ಯಾ ತೊರೆದಿರಲಿಲ್ಲ. ಹಾಗಾಗಿ ರಷ್ಯಾ ಜೊತೆಗಿನ ಬಾಂಧವ್ಯವನ್ನು ಭಾರತ ಜಾಗರೂಕತೆಯಿಂದ ಕಾಯ್ದುಕೊಂಡು ಬಂದಿದೆ.

ಅದೇನೇ ಇರಲಿ, ಆಧುನಿಕ ಜಗತ್ತಿನ ಯುದ್ಧಗಳಲ್ಲಿ ಸೋಲು ಮತ್ತು ಗೆಲುವನ್ನು ಅತ್ಯಾಧುನಿಕ ಯುದ್ಧ ವಿಮಾನಗಳು, ಕ್ಷಿಪಣಿಗಳು, ವಾಯುದಾಳಿ ಪ್ರತಿರೋಧಕ ವ್ಯವಸ್ಥೆಗಳು ನಿರ್ಧರಿಸುತ್ತವೆ. ಶತ್ರುರಾಷ್ಟ್ರದ ಉದ್ದಗಲ ತಲುಪಬಲ್ಲ ಖಂಡಾಂತರ ಕ್ಷಿಪಣಿಯಂತಹ ಅಸ್ತ್ರಗಳ ಜೊತೆಗೆ ಪ್ರತಿದಾಳಿಯಿಂದ ತಪ್ಪಿಸಿಕೊಳ್ಳಲು ಗುರಾಣಿಯೂ ಮುಖ್ಯವಾಗುತ್ತದೆ. ಆ ದೃಷ್ಟಿಯಿಂದ ಎಸ್-400 ಭಾರತಕ್ಕೆ ಅತ್ಯಗತ್ಯ. 1998ರಲ್ಲಿ ನಾವು ಅಣ್ವಸ್ತ್ರ ಪರೀಕ್ಷೆ ನಡೆಸಿದಾಗ, ಜಗತ್ತು ನಮ್ಮ ಮೇಲೆ ಮುಗಿಬಿದ್ದಿತ್ತು. ಆಗ ಟಿಬೆಟಿಯನ್ನರ ಧರ್ಮಗುರು ದಲೈಲಾಮಾ ಅವರು ‘ಪರಮಾಣು ಅಸ್ತ್ರ ಹೊಂದಿರುವುದರಿಂದ ಶತ್ರು ರಾಷ್ಟ್ರ ಆಕ್ರಮಣಕ್ಕೆ ಹಿಂಜರಿಯುತ್ತದೆ. ಇದು ಶಾಂತಿ ಸ್ಥಾಪನೆಗೆ ಸಹಕಾರಿ’ ಎಂದು ವಾಜಪೇಯಿ ಅವರಿಗೆ ಪತ್ರ ಬರೆದಿದ್ದರು. ‘ಅಭದ್ರತೆಯಿಂದ ನರಳುವ ರಾಷ್ಟ್ರ, ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮಲಾರದು. ಯುದ್ಧಗಳನ್ನು ಅಣ್ವಸ್ತ್ರ ತಪ್ಪಿಸಬಲ್ಲದು’ ಎಂಬುದು ವಾಜಪೇಯಿ ಅವರ ನಿಲುವಾಗಿತ್ತು. ಅಪಾಯಕಾರಿ ಅಸ್ತ್ರಗಳನ್ನು ‘ಮೊದಲು ಬಳಸುವುದಿಲ್ಲ’ (ನೋ ಫಸ್ಟ್ ಯೂಸ್) ಎಂಬ ಧೋರಣೆಗೆ ಬದ್ಧವಾಗಿರುವ ರಾಷ್ಟ್ರ ಭಾರತ. ಹಾಗಾಗಿ ಯಾವುದೇ ಆಧುನಿಕ ಶಸ್ತ್ರಾಸ್ತ್ರಗಳನ್ನು ಭಾರತ ತನ್ನದಾಗಿಸಿಕೊಂಡರೂ ಅದರಿಂದ ಜಗತ್ತು ಹೆದರಬೇಕಾಗಿಲ್ಲ.

ಚುರುಮುರಿ



ದೀಪಾವಳಿ ಭವಿಷ್ಯ

• ಲಿಂಗರಾಜು ಡಿ.ಎಸ್.

ಶನಿ, ರಾಹು-ಕೇತುಗಳ ಕ್ರೂರ ದೃಷ್ಟಿಯಿಂದ ಸಾಮಾನ್ಯರಿಗೆ ಸೋಲಾಯಮಾನ ಸ್ಥಿತಿ ಕಾಡಲಿದೆ. ಭಾರತೀಯ ಕ್ರಿಕೆಟ್ ವೀರರಿಗೆ ಸಾಡೆಸಾತಿಯ ಪ್ರಭಾವದಿಂದ ನಿರಂತರ ಅಪವಾದ ಭಯ. ಕೊರೊನಾ ಕಾಲದಲ್ಲಿ ಧನ್ವಂತರಿ ಸ್ತೋತ್ರ ಪಠಣೆಯಿಂದ ಅನುಕೂಲ.

ರಾಜಕೀಯದ ಕೀಳು ಬೈಗುಳಗಳ ಪಟಾಕಿಯ ದುರ್ವಾಸನೆಯಿಂದ ಸಾಮಾನ್ಯರಿಗೆ ಉಬ್ಬಸ ಸಾಧ್ಯತೆ. ಅಕ್ರಮಾದಿತ್ಯರಲ್ಲಿ ಸ್ವಕರ್ಮಾಸಕ್ತಿ ಹೆಚ್ಚುವುದರಿಂದ ಸಾರ್ವಜನಿಕ ಹಣ ದುರ್ವ್ಯಯ. ಕೈ-ತೆನೆಗಳ ನಾಯಕರಿಂದ ಅಧಿಕಾರದ ನಿರಂತರ ಕನವರಿಕೆ, ಸ್ವಜನವೈರ, ನಿದ್ರಾನಾಶ, ದ್ವೇಷ ಭಾವನೆ ಹೆಚ್ಚಳ. ಕಮಲಮುಖಿಗಳು 1008 ಬಾರಿ ‘ಸಾರುವ ಭೌಮಾ ನಮೋ, ನಮೋ’ ಎಂಬ ಶಾ-ಕ್ತ ಮಂತ್ರ ಜಪಿಸುವುದರಿಂದ ಕಾರ್ಯಸಿದ್ಧಿ.

ರಾಜ್ಯದಲ್ಲಿ ಪಟಿಂಗ ಮಂತ್ರಿಗಳಿಗೆ, ಶಾಸಕರಿಗೆ ಬಾಯಿಬೀಗ ಹಾಕುವುದರಿಂದ ಶಬ್ದಮಾಲಿನ್ಯ ಇಳಿದೀತು. ಕಾಮಗಾರಿ ಬಿಲ್ಲುಗಾರರಿಗೆ ಹಸ್ತ ಚಾಪಲ್ಯ ಹೆಚ್ಚಳ. ಪರಿಷತ್ ಪಟುಗಳು ಪ್ರಚಾರಪ್ರಿಯತೆ ಬಿಟ್ಟು ಕನ್ನಡ ಕೈಂಕರ್ಯ, ಭುವನೇಶ್ವರಿ ಆರಾಧನೆ ಮಾಡಿದಲ್ಲಿ ಉತ್ತಮ ಫಲ.

‘ಗ್ಯಾಸ್ಫೋಟನ ಮತ್ತು ಬೆಲೆ ಏರಿಕೆಯಿಂದ ಜನರೇನೂ ಆಕ್ರೋಶಗೊಂಡಿಲ್ಲ’ ಎಂದು ಭಗವಂತನು ಆದೇಶ ನೀಡಿದ್ದು, ಇಂಧನ ದರ ಯುಗಾದಿಯ ವೇಳೆಗೆ ದ್ವಿಶತಕ ಬಾರಿಸುವ ಸಾಧ್ಯತೆ ಇದೆ. ಧನವ್ಯಯದಿಂದ ಕಂತುಪಿತರಿಗೆ ಇಎಂಐ ತತ್ವಾರವು. ಮಧ್ಯಮ ವರ್ಗವು ‘ಬ್ಯಾಕ್ ಟು ಬೇಸಿಕ್ಸ್’ ಪ್ರಕಾರ ಸೌದೆ ಒಲೆ ಬಳಸಿ, ಕ್ಯಾಂಡಲ್ ಉರಿಸಿ, ವಾಹನಗಳಿಗೆ ವಿಶ್ರಾಂತಿ ಯೋಗ ನೀಡುವುದರಿಂದ ಆರ್ಥಿಕ ಆರೋಗ್ಯ ಲಾಭ. ರೈತ ವರ್ಗಕ್ಕೆ ಧಾನ್ಯಹಾನಿ, ಮನೋವ್ಯಥೆ.

ಕರ್ನಾಟಕ ಲೋಪಸೇವಾ ಆಯೋಗದ ಹುದ್ದೆ ನಂಬಿದ ಯುವಕರಿಗೆ ಉದ್ಯೋಗ ನಾಸ್ತಿ. ಲಂಚ ಸ್ವೀಕರಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರೂ ಹಣಾನುಬಂಧ ತಪ್ಪದು. ಐಟಿಗಳಿಂದ ಖೂಳರ ಊರುಭಂಗ. ಮೇಲ್ವರ್ಗಕ್ಕೆ ಸನ್ ಸ್ಟ್ರೋಕ್ ಸಾಧ್ಯತೆ ಹೆಚ್ಚುವುದರಿಂದ ಯಶೋಹಾನಿ. ಲ್ಯಾಂಡುರೋಗಿಗಳಿಂದ ಭೂ-ಚೇಷ್ಟೆ ಹೆಚ್ಚುವುದು. ಆರ್ಥಿಕರಂಗದಲ್ಲಿ ಬಿಟ್‌ಕಾಯಿನ್ ಕೃಷ್ಣಲೀಲೆಯಿಂದ ಅಲ್ಲೋಲ ಕಲ್ಲೋಲ!

ದಿನದ ಟ್ವೀಟ್



ಆರ್ಥಿಕ ಪ್ರಗತಿಗೂ ದಾರಿಯಾಗಲಿ

ನಮ್ಮ ಕನ್ನಡ ಭಾಷೆಯು ಸಂಸ್ಕೃತಿ, ಸಂಸ್ಕಾರ ಮತ್ತು ಜೀವನ ಮೌಲ್ಯಗಳ ರಕ್ಷಕ ಹೌದು. ಆದರೆ ಅದು ಸಾಮಾನ್ಯ ಕನ್ನಡಿಗರ ಆರ್ಥಿಕ ಪ್ರಗತಿಯ ಪೋಷಕವೂ ಆಗಬೇಕು. ಕರ್ನಾಟಕದ ಕನ್ನಡತನ ಎಂದೂ ಹೋಗದಂತೆ ನೋಡೋಣ. ಜೊತೆಗೆ, ಇತರೆಲ್ಲ ಭಾಷೆಗಳೊಂದಿಗೆ ಸುಮಧುರ ಸಂಬಂಧ ಗಟ್ಟಿ ಮಾಡೋಣ. ಎಲ್ಲರೂ ಕೂಡಿ ಭಾರತದ ಗೌರವ ಬೆಳೆಸೋಣ. ರಾಜ್ಯೋತ್ಸವ ಶುಭಾಶಯಗಳು.

ಸುಧೀಂದ್ರ ಕುಲಕರ್ಣಿ, ಲೇಖಕ

ಕಿಡಿನುಡಿ



ಶಿಕ್ಷಣ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡಕ್ಕೆ ಅವಕಾಶ ಸಿಗದಂತೆ ಭಾಷಾ ಸಂಕುಚಿತ ಮನಃಸ್ಥಿತಿಯವರು ಹುನ್ನಾರ ನಡೆಸಿದ್ದಾರೆ. ಸಿಬಿಎಸ್‌ಇ, ಐಸಿಎಸ್‌ಇಯಲ್ಲಿ ಕನ್ನಡ ಕಡ್ಡಾಯ ಏಕೆ ಎಂದು ನ್ಯಾಯಾಲಯದ ಮೆಟ್ಟಿಲು ಏರಿದ್ದಾರೆ. ಇವರಿಗೆಲ್ಲ ಪಾಠ ಕಲಿಸಬೇಕು.

ಟಿ.ಎಸ್.ನಾಗಾಭರಣ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

25 ವರ್ಷಗಳ ಹಿಂದೆ

ಶನಿವಾರ, 2-11-1996

• ಪ್ರಧಾನಿಯಿಂದ ನೈರುತ್ಯ ರೈಲ್ವೆ ವಲಯ ಉದ್ಘಾಟನೆ

ಬೆಂಗಳೂರು, ನ. 1– ರಾಜ್ಯದ ಪುನರ್ ವಿಂಗಡಣೆಯಾದ ನಂತರ ಜನತೆಯ ಹಲವು ವರ್ಷಗಳ ಕನಸಾಗಿದ್ದ ನೈರುತ್ಯ ರೈಲ್ವೆ ವಲಯವನ್ನು ಪ್ರಧಾನ ಮಂತ್ರಿ ಎಚ್.ಡಿ. ದೇವೇಗೌಡ ಅವರು ಇಂದು ಇಲ್ಲಿ ವಿಧ್ಯುಕ್ತವಾಗಿ ಉದ್ಘಾಟಿಸಿದರು.

‘ಸುಂದರ– ಸಮೃದ್ಧ– ಸ್ವಾಭಿಮಾನ ಕರ್ನಾಟಕ ಕಟ್ಟಲು ಸಣ್ಣಪುಟ್ಟ ಭೇದಗಳನ್ನು ಮರೆತು ಒಂದಾಗಿ ದುಡಿಯೋಣ’ ಎಂದು ಅವರು ಈ ಸಂದರ್ಭದಲ್ಲಿ ಕರೆ ನೀಡಿದರು.

• ಧಾರವಾಡ ಬಂದ್ ವಿಫಲ

ಧಾರವಾಡ, ನ. 1– ನೈರುತ್ಯ ರೈಲ್ವೆ ವಲಯ ಮತ್ತು ಹೈಕೋರ್ಟ್ ಪೀಠವನ್ನು ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಆರಂಭಿಸುವ ಬಗ್ಗೆ ರಾಜ್ಯ ಸರ್ಕಾರ ತಾಳಿರುವ ಮಲತಾಯಿ ಧೋರಣೆಯನ್ನು ವಿರೋಧಿಸಿ ಉತ್ತರ ಕರ್ನಾಟಕ ಸಮಗ್ರ ಅಭಿವೃದ್ಧಿ ಯುವ ವೇದಿಕೆ ‘ಧಾರವಾಡ ನಗರ ಬಂದ್’ಗೆ ನೀಡಿದ್ದ ಕರೆಗೆ ಇಂದು ಜನರು ಪ್ರತಿಕ್ರಿಯೆ ನೀಡಲಿಲ್ಲ.

ಬಂದ್‌ಗೆ ಕರೆ ನೀಡಿ ನಿನ್ನೆ ಕರಪತ್ರಗಳ ಮೂಲಕ ಜನರ ಸಹಕಾರವನ್ನು ಪಡೆಯಲು ಪ್ರಯತ್ನಿಸಿದ್ದ ವೇದಿಕೆಯ ಮೂವರು ಮುಖಂಡರು ಮತ್ತು ಇತರ 15 ಜನರನ್ನು ಪೊಲೀಸರು ನಿನ್ನೆ ರಾತ್ರಿ 2 ಗಂಟೆ ವೇಳೆಗೆ ಬಂಧಿಸಿ ಅವರನ್ನು ಹುಬ್ಬಳ್ಳಿಯ ಪೊಲೀಸ್ ಠಾಣೆಯಲ್ಲಿ ಇರಿಸಿದ್ದರಿಂದ ಬಂದ್ ಆರಂಭಿಸುವ ಪ್ರಯತ್ನಗಳನ್ನು ಯಾರೂ ಮಾಡಲಿಲ್ಲ.

50 ವರ್ಷಗಳ ಹಿಂದೆ

ಮಂಗಳವಾರ, 2-11-1971

• ಷೆಲ್ ಮಳೆಗರೆಯುತ್ತಿದ್ದ ಪಾಕ್ ಫಿರಂಗಿ ಸಾಲು– ಭಾರತದ ಪೆಟ್ಟಿಗೆ ಧ್ವಂಸ

ನವದೆಹಲಿ, ನ. 1– ಕಳೆದ ಹನ್ನೊಂದು ದಿನಗಳಿಂದ ತ್ರಿಪುರಾದ ಕಮಲಾಪುರ ಪಟ್ಟಣದ ಮೇಲೆ ಷೆಲ್‌ಗಳನ್ನು ಸತತವಾಗಿ ಹಾರಿಸುತ್ತಿದ್ದ ಪಾಕಿಸ್ತಾನಿ ಫಿರಂಗಿಗಳ ಬಾಯಿ ಮುಚ್ಚಿಸಲು ಭಾರತದ ಗಡಿ ಪಡೆಗಳು ಇಂದು ಪರಿಣಾಮಕಾರಿ ‘ಪ್ರತಿಕ್ರಮ’ ಕೈಗೊಂಡವು.

ಭಾರತ ಮತ್ತು ಪಾಕಿಸ್ತಾನದ ಪ್ರಸ್ತುತ ಗಡಿ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಇದು ‘ಈ ಬಗೆಯ ಪ್ರಥಮ ಕಾರ್ಯಾಚರಣೆ’ ಎಂದು ವಕ್ತಾರರು ವಿವರಿಸಿದರು.

• ಹೆಚ್ಚು ಸಂಭ್ರಮ– ಸಡಗರದ ರಾಜ್ಯೋತ್ಸವ

ಬೆಂಗಳೂರು, ನ. 1– ಕರ್ನಾಟಕದ ಸಿರಿಭರಿತ ಪರಂಪರೆಯನ್ನು ಪ್ರದರ್ಶಿಸುವ ಹಲವಾರು ಮೆರವಣಿಗೆಗಳು, ನಾಡುನುಡಿಗಳ ಹಿರಿಮೆ ಸಾರುವ ಭಾಷಣಗಳು, ನಾನಾ ಕ್ಷೇತ್ರಗಳಲ್ಲಿ ಸೇವೆಗೈದವರಿಗೆ ರಾಜ್ಯದ ಪುರಸ್ಕಾರ, ಸಾಂಸ್ಕೃತಿಕ ಹಾಗೂ ಮನರಂಜನೆ ಕಾರ್ಯಕ್ರಮಗಳು ಈ ಬಾರಿ ರಾಜ್ಯೋತ್ಸವದ ವೈಭವವನ್ನು ಹೆಚ್ಚಿಸಿದವು.

ಬೆಳಿಗ್ಗೆ ಕಂಠೀರವ ಕ್ರೀಡಾಂಗಣ ದಲ್ಲಿ ನಡೆದ ಮಕ್ಕಳ ಸಂಭ್ರಮದ ಮೇಳದಿಂದ ರಾತ್ರಿ ಬಹಳ ಹೊತ್ತಿನವರೆಗೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳವರೆಗೆ ನಗರದ ನಾನಾ ಸಂಘ ಸಂಸ್ಥೆಗಳು ಕನ್ನಡ ನಾಡಿನ ಹದಿನೈದನೆಯ ಹುಟ್ಟುಹಬ್ಬವನ್ನು ಸಡಗರ ಹಾಗೂ ವಿಜೃಂಭಣೆಯಿಂದ ಆಚರಿಸಿದವು.

ಸಂಗತ

ಸಮತೋಲಿತ ಕೃಷಿ: ಉತ್ತಮ ಮಾರ್ಗ

ಕೃಷಿಯಲ್ಲಿ ಸಾವಯವ ಮತ್ತು ರಾಸಾಯನಿಕ ಗೊಬ್ಬರ ಎರಡನ್ನೂ ಸಮರ್ಪಕವಾಗಿ ಬಳಸುವುದು ಉತ್ತಮ ಮಾದರಿ

• ಮಲ್ಲಿಕಾರ್ಜುನ ಹೆಗ್ಗಳಗಿ

ಸಾವಯವ ಕೃಷಿ ಬಗ್ಗೆ ಭಾರತ ಬಹಳ ಉತ್ಸಾಹ ತೋರತೊಡಗಿದೆ. ಶೂನ್ಯ ಬಂಡವಾಳ ಸಾವಯವ ಕೃಷಿಯ ಬಗ್ಗೆ ಅನೇಕರು ಪಾಠ ಹೇಳುತ್ತಿದ್ದಾರೆ. ರಾಜ್ಯ ಸರ್ಕಾರಗಳು ಸಾವಯವ ಕೃಷಿಯ ಉತ್ತೇಜನಕ್ಕೆ ಪ್ರತ್ಯೇಕ ವಿಭಾಗಗಳನ್ನು ಆರಂಭಿಸಿವೆ. ಆದರೆ, ಶ್ರೀಲಂಕಾ ಸಂಪೂರ್ಣ ಸಾವಯವ ಕೃಷಿ ನೀತಿ ಜಾರಿಗೆ ತಂದು, ಒಂದೇ ವರ್ಷದಲ್ಲಿ ವಿಪರೀತ ಆಹಾರ ಕೊರತೆ ಹಾಗೂ ಕೃಷಿ ಇಳುವರಿ ಹಾನಿಯಿಂದ ತೊಂದರೆ ಅನುಭವಿಸುತ್ತಿರುವುದು ಒಂದು ಎಚ್ಚರಿಕೆಯ ಗಂಟೆಯಂತೆ ಕೇಳಿಸುತ್ತಿದೆ.

ಶ್ರೀಲಂಕಾದ ಅಧ್ಯಕ್ಷ ರಾಜಪಕ್ಸೆ ಅವರು ಅತ್ಯಂತ ಅವಸರದಿಂದ ರಾಸಾಯನಿಕ ಗೊಬ್ಬರಗಳ ಆಮದನ್ನು ಪೂರ್ಣ ನಿಷೇಧಿಸಿದರು. ಸಂಪೂರ್ಣ ಸಾವಯವ ಕೃಷಿಯ ದೇಶ ಎಂಬ ಗೌರವಕ್ಕೆ ಪಾತ್ರವಾಗಬೇಕು ಎಂಬುದು ಅಧ್ಯಕ್ಷರ ಮಹತ್ವಾಕಾಂಕ್ಷೆಯಾಗಿತ್ತು.

ಬಹಳ ವಿಷಾದದ ಸಂಗತಿಯೆಂದರೆ, ಶ್ರೀಲಂಕಾದ ಕೃಷಿ ಆದಾಯ ಒಮ್ಮೆಲೇ ಶೇ 50ರಷ್ಟು ಕುಸಿದಿದೆ. ಹಣ ತರುವ ಚಹಾ ಮತ್ತು ರಬ್ಬರ್ ಉತ್ಪಾದನೆಯಲ್ಲಿ ಶೇ 60ರಷ್ಟು ಇಳಿಕೆಯಾಗಿದೆ. ಶ್ರೀಲಂಕಾದ ಚಹಾ ಬೆಳೆಯ ಹಿರಿಯ ಉದ್ಯಮಿ ಹೆರಮನ್ ಗುಣರತ್ನೆ ಅವರು ರಾಷ್ಟ್ರಪತಿಗೆ ಪತ್ರ ಬರೆದು, ಸಂಪೂರ್ಣ ಸಾವಯವ ಬೇಸಾಯ ವಿಧಾನದಿಂದ ಚಹಾ ಉದ್ದಿಮೆ ಸ್ಥಗಿತಗೊಳ್ಳುವ ಭೀತಿ ವ್ಯಕ್ತಪಡಿಸಿದ್ದಾರೆ.

ಸಾವಯವ ಕೃಷಿ ಉತ್ಪನ್ನಗಳ ಸೇವನೆ ಆರೋಗ್ಯಕ್ಕೆ ಉತ್ತಮ ಎಂಬ ಬಗ್ಗೆ ಎರಡು ಮಾತಿಲ್ಲ. ಆದರೆ ಸಾವಯವ ಕೃಷಿಯಿಂದ ಎಲ್ಲರ ಹೊಟ್ಟೆ ತುಂಬಿಸುವುದು ಸಾಧ್ಯವಾಗದ ಮಾತು ಎಂಬುದನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಸಮತೋಲಿತ ಕೃಷಿ ವಿಧಾನ ಅನುಸರಿಸುವುದೇ ಉತ್ತಮ ಪರಿಹಾರವಾಗಬಲ್ಲದು ಎಂಬುದನ್ನು ವೈಜ್ಞಾನಿಕ ಚಿಂತನೆಗಳಿಂದ ಗ್ರಹಿಸಬೇಕು.

ಭೂಮಿ ಅಸಂಖ್ಯಾತ ಸಜೀವ ಬ್ಯಾಕ್ಟೀರಿಯಾ ಹಾಗೂ ಫಂಗಸ್‌ನಿಂದ ಕೂಡಿದ ಅಮೂಲ್ಯ ಸಂಪತ್ತು. ಭೂಮಿಯಲ್ಲಿ ಬ್ಯಾಕ್ಟೀರಿಯಾ ಬೆಳೆಯಲು, ಭೂಮಿಯ ತೇವಾಂಶ ಚೆನ್ನಾಗಿ ಹಿಡಿದಿಟ್ಟುಕೊಳ್ಳಲು ಸಾವಯವ ಗೊಬ್ಬರ ತೀರಾ ಅವಶ್ಯ. ಭೂಮಿ ಹದಗೊಳ್ಳಲು ಸಾವಯವ ಗೊಬ್ಬರ ಸಹಕಾರಿ. ಆದರೆ ಬೆಳೆಗಳಿಗೆ ಬೇಕಾಗುವಷ್ಟು ಸಾರಜನಕ, ರಂಜಕ, ಪೊಟ್ಯಾಷ್ ಹಾಗೂ ಇತರ ಲವಣಗಳನ್ನು ಸಾವಯವ ಗೊಬ್ಬರದಿಂದ ಪಡೆಯುವುದು ಸಾಧ್ಯವಿಲ್ಲ.

ಸೆಗಣಿ, ಬೂದಿ, ಕಸಕಡ್ಡಿ, ಕಳಿತ ವಸ್ತುಗಳಿಂದ ತಯಾರಾದ ಸಾವಯವ ಗೊಬ್ಬರದಿಂದ ಬೆಳೆಗಳಿಗೆ ಶೇ 2ರಿಂದ 5ರಷ್ಟು ಮಾತ್ರ ನೈಟ್ರೋಜನ್ ಲಭಿಸುವುದು. ಬೆಳೆಗಳು ಚೆನ್ನಾಗಿ ಬೆಳೆಯುವುದಕ್ಕೆ ಶೇ 36ರಿಂದ 46ರಷ್ಟು ನೈಟ್ರೋಜನ್ ಬೇಕು. ರಾಸಾಯನಿಕ ಗೊಬ್ಬರಗಳಿಂದ ಮಾತ್ರ ಸಾಕಷ್ಟು ಪ್ರಮಾಣದಲ್ಲಿ ನೈಟ್ರೋಜನ್ ಹಾಗೂ ಇತರ ಲವಣಗಳನ್ನು ಪಡೆಯುವುದು ಸಾಧ್ಯ.

ಕೇವಲ ಸಾವಯವ ಗೊಬ್ಬರ ಬಳಸುವುದರಿಂದ ಕೃಷಿ ಉತ್ಪಾದನೆಗಳ ಪ್ರಮಾಣ ಬಹಳ ಕುಸಿಯುತ್ತದೆ. ಸಾವಯವ ಕೃಷಿ ವೆಚ್ಚವೂ ಬಹಳ ಹೆಚ್ಚಾಗುವುದು. ಸಾಮಾನ್ಯ ಬೆಲ್ಲ ಕಿಲೊಗೆ ₹ 30 ಆದರೆ ಸಾವಯವ ಕೃಷಿಯಿಂದ ಬೆಳೆದ ಕಬ್ಬಿನಿಂದ ತಯಾರಿಸಿದ ಬೆಲ್ಲಕ್ಕೆ ₹ 70 ಪಾವತಿಸಬೇಕಾಗುತ್ತದೆ. ಆಹಾರ ಧಾನ್ಯಗಳಿಗೂ ಇದು ಅನ್ವಯಿಸುತ್ತದೆ. ಭೂಮಿ ಮತ್ತು ಬೆಳೆಯ ಅವಶ್ಯಕತೆ ಅನುಸರಿಸಿ ಮೊದಲ ಹಂತದಲ್ಲಿ ಸಾವಯವ ಗೊಬ್ಬರ ಹಾಗೂ ಎರಡನೆಯ ಹಂತದಲ್ಲಿ ರಾಸಾಯನಿಕ ಗೊಬ್ಬರ ಬಳಸಬೇಕು. ಇದರಿಂದ ಉತ್ತಮ ಇಳುವರಿ ಮತ್ತು ಗುಣಮಟ್ಟದ ಬೆಳೆ ಬೆಳೆಯಬಹುದು. ಹೀಗೆ ಬೆಳೆದ ಬೆಳೆಯಲ್ಲಿ ರಾಸಾಯನಿಕದ ಪ್ರಮಾಣ ನಿರ್ಲಕ್ಷಿಸಬಹುದಾದಷ್ಟು ಕಡಿಮೆಯಾಗಿರುತ್ತದೆ.

ಸಾವಯವ ಗೊಬ್ಬರದ ಹೆಸರಿನಲ್ಲಿ ಬಹಳ ವಂಚನೆಗಳು ನಡೆಯುತ್ತವೆ. ರೈತರೇ ಮನೆಯಲ್ಲಿ ಸುಲಭ ಗೊಬ್ಬರ ತಯಾರಿಸಿ ಬಳಸುವುದು ಒಳ್ಳೆಯದು.

ಜಾಗತಿಕ ಹಸಿವು ಸೂಚ್ಯಂಕದ 2021ನೇ ಸಾಲಿನ ಪಟ್ಟಿ ಬಿಡುಗಡೆಯಾಗಿದೆ. ಇದರಲ್ಲಿ ಬ್ರೆಜಿಲ್, ಕುವೈತ್ ರಾಷ್ಟ್ರಗಳು ಮೊದಲ ಸ್ಥಾನ ಹಂಚಿಕೊಂಡರೆ, ಭಾರತ 101ನೇ ರ‍್ಯಾಂಕಿಗೆ ಕುಸಿದಿರುವುದು ಕಳವಳಕಾರಿ. ಆಹಾರ ಉತ್ಪಾದನೆಯಲ್ಲಿ ಎಚ್ಚರಿಕೆಯ ಹೆಜ್ಜೆ ಇಡುವುದು ಅವಶ್ಯ.



ಪ್ರಧಾನಿ ನರೇಂದ್ರ ಮೋದಿ ಅವರು ಕೃಷಿಕರ ಆದಾಯ ದ್ವಿಗುಣಗೊಳಿಸುವ ವಿಚಾರ ಹೇಳುತ್ತಿದ್ದಾರೆ. ಕೃಷಿ ಉತ್ಪಾದನೆಗೆ ಸಂತುಲಿತ ಕೃಷಿ ವಿಧಾನ ಮಾತ್ರ ಸಹಾಯಕವಾಗಬಲ್ಲದು. ಉತ್ತರ ಕರ್ನಾಟಕ ಭಾಗದಲ್ಲಿ ಒಂದು ಎಕರೆ ಭೂಮಿಯಲ್ಲಿ 100 ಟನ್ ಕಬ್ಬು ಬೆಳೆಯುವ ರೈತರ ತಂಡಗಳಿವೆ. ಸಾವಯವ ಮತ್ತು ರಾಸಾಯನಿಕ ಗೊಬ್ಬರವನ್ನು ಇವರು ಸಮರ್ಪಕವಾಗಿ ಬಳಸುತ್ತಾರೆ. ಇದೊಂದು ಉತ್ತಮ ಮಾದರಿಯಾಗಿದೆ. ಆದರೆ ಶೇ 95ರಷ್ಟು ರೈತರು ಒಂದು ಎಕರೆ ಭೂಮಿಯಲ್ಲಿ 25ರಿಂದ 35 ಟನ್ ಕಬ್ಬು ಬೆಳೆಯುತ್ತಾರೆ. ಕಡಿಮೆ ಕಬ್ಬು ಬೆಳೆಯುವ ರೈತರು ತಮ್ಮ ಕೃಷಿಯ ವಿಧಾನ ಮತ್ತು ಚಿಂತನೆ ಬದಲಿಸಿಕೊಂಡರೆ, ಅವರೂ ಸುಲಭವಾಗಿ ಹೆಚ್ಚು ಕಬ್ಬು ಬೆಳೆಯಬಹುದು ಎಂದು ಕೃಷಿ ವಿಜ್ಞಾನಿಗಳಾದ ಡಾ. ವಿಜಯಕುಮಾರ ಗಿಡ್ಡನವರ, ಡಾ. ಆರ್.ಬಿ.ಖಂಡಗಾವಿ ಮತ್ತು ಎ.ಎಂ. ಸಾವಳಗಿ ಗಟ್ಟಿಯಾಗಿ ಹೇಳುತ್ತಾರೆ.

ಬಹಳಷ್ಟು ಕೃಷಿ ಸಂಶೋಧನೆಗಳು ನಡೆದಿವೆ. ಆದರೆ ಇವು ರೈತರ ಭೂಮಿಗೆ ತಲುಪಿಲ್ಲ. ಅಂಗಾಂಶ ಕೃಷಿ, ಹನಿ ನೀರಾವರಿ ಮತ್ತು ಸುಧಾರಿಸಿದ ಬೇಸಾಯ ಪದ್ಧತಿ ಅನುಸರಿಸುವುದರಿಂದ ಕೃಷಿ ಕ್ಷೇತ್ರ ಅಲ್ಪಾವಧಿಯಲ್ಲಿ ಖಂಡಿತ ಉನ್ನತಿ ಸಾಧಿಸುವುದು.

ಲೇಖಕ: ಸದಸ್ಯ, ದಕ್ಷಿಣ ಭಾರತ ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ತಂತ್ರಜ್ಞರ ಮಹಾಮಂಡಳ

ವಾಚಕರ ವಾಣಿ

ಭಾಷೆಯಾಗಿ ಕನ್ನಡ ಕಲಿಸಬೇಕಿದೆ

ಕಲಿಕೆಗಾಗಿ ನಮ್ಮ ಕರ್ನಾಟಕಕ್ಕೆ ಬರುವ ಹೊರಗಿನ ವಿದ್ಯಾರ್ಥಿಗಳಿಗೆ ಕನ್ನಡವನ್ನು ಕಡ್ಡಾಯಗೊಳಿಸುವಂತಿಲ್ಲ, ಅದು ಅವರ ಮೇಲೆ ಒತ್ತಡ ಹೇರಿದಂತಾಗುತ್ತದೆಂದು ಹೈಕೋರ್ಟ್ ಹೇಳಿರುವುದು ಸುದ್ದಿಯಾಗಿದೆ. ಇದರ ಬಗ್ಗೆ ಮಾಧ್ಯಮಗಳಲ್ಲಿ ಹಲವು ವಿಭಿನ್ನ ಅಭಿಪ್ರಾಯಗಳು ಕೂಡ ಚರ್ಚೆಯಾಗುತ್ತಿವೆ. ನ್ಯಾಯಾಲಯವು ಪ್ರಕರಣವನ್ನು ಮುಂದೂಡಿದೆ. ಮರುಪರಿಶೀಲನೆ ನಡೆಸಿ ಅಭಿಪ್ರಾಯ ತಿಳಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ ಎಂಬುದೂ ಇಲ್ಲಿ ಮುಖ್ಯ. ಆದರೆ ನಾವು ಆಲೋಚಿಸುವಂತೆ ಅಂಕ ಆಧಾರಿತವಾದುದು ಒತ್ತಡದ ಕಲಿಕೆಗೆ ಹೆಚ್ಚು ಕಾರಣವಾಗಿರುತ್ತದೆ. ಅಂಕವನ್ನೇ ಮುಖ್ಯವಾಗಿಸದೆ ಒಂದು ಭಾಷೆಯಾಗಿ ಕನ್ನಡವನ್ನು ಕಲಿಸಿದರೆ ಕನ್ನಡೇತರರೂ ಕಡ್ಡಾಯವಾಗಿ ಕನ್ನಡವನ್ನು ಕಲಿಯುತ್ತಾರೆ. ಇದಕ್ಕೆ ಪೂರಕವಾಗಿ ಎಂಜಿನಿಯರಿಂಗ್, ವೈದ್ಯಕೀಯ ಮುಂತಾದ ಕೋರ್ಸ್‌ಗಳಲ್ಲಿ ಕನ್ನಡವನ್ನು ಒಂದು ಬಳಕೆಯ ಭಾಷೆಯಾಗಿ ಕಲಿಸಲಾಗುತ್ತಿದ್ದು, ಇದು ಯಶಸ್ಸು ಕೂಡ ಕಂಡಿದೆ. ಇದು ಮುಂದಿನ ದಿನಗಳಲ್ಲಿ ವೃತ್ತಿಯನ್ನು ನಿರ್ವಹಿಸಲು ಹಾಗೂ ಇಲ್ಲಿನ ಜನಜೀವನ, ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲೂ ಸಾಧ್ಯವಾಗಿಸಿದೆ. ಆದ್ದರಿಂದ ನಮ್ಮ ಸರ್ಕಾರವು ಈ ದಿಸೆಯಲ್ಲಿ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬಹುದಾಗಿದೆ. ಜೊತೆಗೆ ಪ್ರಾಥಮಿಕ ತಿಳಿವಳಿಕೆಯ ಸಾಧನವಾಗಿ ಹೊರಗಿನವರಿಗೆ ಮಾತ್ರ ಹೀಗೆ ಪ್ರತ್ಯೇಕ ವಿಧಾನದಿಂದ ಕಲಿಸಲು ಚಿಂತನೆ ಮಾಡಬಹುದಾಗಿದೆ.

ಡಾ. ಸಂಪತ್ ಬೆಟ್ಟಗೆರೆ, ಮೂಡಿಗೆರೆ

ಜನೋಪಯೋಗಿ ಕಾರ್ಯ ಮುಂದುವರಿಯಲಿ

ಪುನೀತ್ ರಾಜ್‌ಕುಮಾರ್ ಬಾಲ್ಯದಿಂದ ನಟನೆಯಲ್ಲಿ ತೊಡಗಿ ನಾಯಕ ನಟನಾಗಿ ಬೆಳೆದ ಅಪರೂಪದ ನಟ. ನಟನೆಯ ಜೊತೆಗೆ ಸಾಮಾಜಿಕ ಸೇವೆಯಲ್ಲಿ ತೊಡಗಿ ವೃದ್ಧಾಶ್ರಮ, ಅನಾಥಾಲಯ, ಗೋಶಾಲೆ, ಶಿಕ್ಷಣದ ಕೆಲಸಗಳಲ್ಲಿ ಅವರು ತೊಡಗಿದ್ದ ಸುದ್ದಿ ಅವರ ನಿಧನದ ನಂತರ ಬಿತ್ತರಗೊಳ್ಳುತ್ತಿದೆ. ಯಾವುದೇ ಪ್ರಚಾರ ಇಲ್ಲದೆ ಅವರು ಮಾಡಿರುವ ಇಂಥ ಸಮಾಜಮುಖಿ ಕೆಲಸ ಮಾದರಿಯದಾಗಿದೆ.

ಪುನೀತ್ ನಿಧನದಿಂದ, ಚಿತ್ರರಂಗದ ಜೊತೆಗೆ ಅವರು ಕೈಗೊಂಡಿದ್ದ ಸಮಾಜಮುಖಿ ಕಾರ್ಯಗಳಿಗೂ ಹೊಡೆತ ಬೀಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಅವರ ಕುಟುಂಬ ಹಾಗೂ ಅಭಿಮಾನಿಗಳು ಪುನೀತ್ ಅವರು ಪ್ರಾರಂಭಿಸಿದ ಜನೋಪಯೋಗಿ ಕೆಲಸಗಳನ್ನು ಮುಂದುವರಿಸುವ ಮೂಲಕ ಅವರ ಹೆಸರನ್ನು ಅಜರಾಮರ ಆಗಿಸಬೇಕಿದೆ.

ಈ.ಬಸವರಾಜು, ಬೆಂಗಳೂರು

...ದೊರಕದೆ ಹೋದಾನೇ?

ಪುನೀತ್ ರಾಜ್‌ಕುಮಾರ್ ಅವರು ನಿಧನರಾದ ಸುದ್ದಿ ಕೇಳಿ ಅವರ ಅಭಿಮಾನಿಗಳು ಒಂದಿಬ್ಬರು ಆತ್ಮಹತ್ಯೆ ಮಾಡಿಕೊಂಡ ವಿಷಯ ತಿಳಿದಾಗ, ಕುವೆಂಪು ಅವರ ಈ ಸಾಲುಗಳು ನೆನಪಾದವು– ‘ಶೋಕವಿರುವುದು ಪ್ರದರ್ಶನಕ್ಕಾಗಿಯೇ? ಆತನಿಗೆ ಸಂತೋಷವಾಗುವ ರೀತಿಯಲ್ಲಿ ಬಾಳಿದರೆ ಆತನು ನಮಗೆ ದೊರಕದೆ ಹೋದಾನೇ?’ ನೆಚ್ಚಿನ ನಟನ ಮೇಲಿನ ಅಭಿಮಾನವನ್ನು ವ್ಯಕ್ತಪಡಿಸಲು ಆತ್ಮಹತ್ಯೆಯೊಂದೇ ಮಾರ್ಗವೇ? ಹಾಗೆ ನೋಡಿದರೆ ಪುನೀತ್ ಈ ಸಮಾಜದ ಬಗೆಗೆ ಅತ್ಯಂತ ಕಾಳಜಿಯನ್ನು ಹೊಂದಿದ್ದ ವ್ಯಕ್ತಿ. ನಿಜವಾಗಿಯೂ ಅವರ ಮೇಲಿನ ಅಭಿಮಾನವನ್ನು ಅವರ ಅಭಿಮಾನಿಗಳು ಸಮಾಜಕ್ಕೆ ನಾಲ್ಕು ಒಳ್ಳೆ ಕೆಲಸಗಳನ್ನು ಮಾಡುವುದರ ಮೂಲಕ ಇನ್ನೂ ಉತ್ತಮ ರೀತಿಯಲ್ಲಿ ವ್ಯಕ್ತಪಡಿಸಬಹುದಿತ್ತು. ಇದು ಪುನೀತ್ ಅವರ ಆತ್ಮಕ್ಕೆ ಸಂತೋಷ ತರುವಂತಹ ಕೆಲಸ. ಕುವೆಂಪು ಅವರು ಹೇಳಿದ ರೀತಿ ನಡೆದುಕೊಂಡು ತಮ್ಮ ನೆಚ್ಚಿನ ನಟನಿಗೆ ನಿಜವಾದ ಶ್ರದ್ಧಾಂಜಲಿ ಸಲ್ಲಿಸಬೇಕು.

ಈರಣ್ಣ ಎನ್.ವಿ., ಶಿರಾ

ಭಾರತೀಯ ಕ್ರಿಕೆಟ್: ಆಮೂಲಾಗ್ರ ಬದಲಾವಣೆಯಾಗಲಿ

ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿನ ಭಾರತದ ಹೀನಾಯ ಸೋಲು ಭಾರತೀಯ ಕ್ರಿಕೆಟ್‌ನಲ್ಲಿ ಆಡಳಿತ ಮಂಡಳಿಯಿಂದ ಹಿಡಿದು ಎಲ್ಲವನ್ನೂ ಆಮೂಲಾಗ್ರವಾಗಿ ಬದಲಿಸಬೇಕೆಂಬ ಕ್ರಿಕೆಟ್ ಅಭಿಮಾನಿಗಳ ಕೂಗಿಗೆ ಬಲ ನೀಡಿದೆ. ಆಟದಲ್ಲಿ ಗೆಲುವಿನಂತೆ ಸೋಲು ಕೂಡಾ ಒಂದು ಭಾಗ. ಆದರೆ, ಸೋಲು ವೀರೋಚಿತವಾಗಿರಬೇಕೇ ವಿನಾ ಶರಣಾಗತಿ ಆಗಿರಬಾರದು. ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ವಿರುದ್ಧ ಭಾರತದ ಆಟದ ವೈಖರಿಯನ್ನು ನೋಡಿದಾಗ, ಭಾರತದ ಕ್ರಿಕೆಟ್‌ಗೆ ಗಂಭೀರ ಶಸ್ತ್ರಚಿಕಿತ್ಸೆಯ ಅವಶ್ಯಕತೆ ಇದೆ ಅನಿಸುತ್ತಿದೆ. ದಶಕಗಳಿಂದ ಬ್ಯಾಟ್ ಬೀಸುತ್ತಿರುವವರು ಮತ್ತು ಬಾಲ್ ಎಸೆಯುವವರನ್ನು ಕೈಬಿಟ್ಟು ಹೊಸಬರನ್ನು ಪರಿಚಯಿಸುವ ಅನಿವಾರ್ಯ ಎದ್ದು ಕಾಣುತ್ತಿದೆ ಮತ್ತು ಅವರಿಗೆ ಸಾದನೆ ಆಧಾರಿತ ಶುಲ್ಕವನ್ನು ನಿಗದಿಪಡಿಸಬೇಕು ಎನ್ನುವ ಕೂಗೂ ಕೇಳುತ್ತಿದೆ. ತಂಡದ ಈ ಸಾಧನೆಗೆ ₹ 7 ಕೋಟಿ ಸಂಬಳದ ಕೋಚ್ ಬೇಕಿತ್ತೇ ಎನ್ನುವ ಆಕ್ರೋಶದಲ್ಲಿ ಅರ್ಥವಿದೆ.

ರಮಾನಂದ ಶರ್ಮಾ, ಬೆಂಗಳೂರು

ಶಿಕ್ಷಣ, ಆರೋಗ್ಯ ಕ್ಷೇತ್ರ ಸುಧಾರಣೆಗೆ ಬೇಕು ಇಚ್ಛಾಶಕ್ತಿ

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ನಮ್ಮ ಸರ್ಕಾರಗಳು ಕೊಡಬೇಕಾದಷ್ಟು ಗಮನ ಕೊಟ್ಟಿಲ್ಲ. ದೂರದೃಷ್ಟಿ ಇಲ್ಲದ ರಾಜಕಾರಣಿಗಳು ಈ ಎರಡೂ ಕ್ಷೇತ್ರಗಳನ್ನು ನಿರ್ಲಕ್ಷಿಸುತ್ತಲೇ ಬಂದಿದ್ದಾರೆ. ಈ ಮೂಲಕ ದೇಶವನ್ನು ದುರ್ಬಲಗೊಳಿಸುತ್ತಿದ್ದಾರೆ. ಶಿಕ್ಷಕರ ಕೊರತೆ ವಿಪರೀತ ಇದೆ. ಕಾಲಕಾಲಕ್ಕೆ ಶಿಕ್ಷಕರ ನೇಮಕಾತಿ ಮಾಡದೇ ಇರುವುದರಿಂದ ಈ ಸ್ಥಿತಿ ಉಂಟಾಗಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡದಿದ್ದರೆ ಅವರ ಭವಿಷ್ಯ ಏನಾಗಬಹುದು? ಅಭಿವೃದ್ಧಿಗೂ ತೊಡರುಗಾಲು!


ಶಿಕ್ಷಕರ ಕೊರತೆ ನೀಗುವುದರ ಜೊತೆಗೆ ಶಾಲಾ ಕಟ್ಟಡಗಳು, ಗ್ರಂಥಾಲಯ, ಪ್ರಯೋಗಾಲಯ, ಶೌಚಾಲಯದಂತಹ ಅತಿ ಅವಶ್ಯಕ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಇಚ್ಛಾಶಕ್ತಿ ತೋರಬೇಕು. ಅದಕ್ಕೆ ಬೇಕಾದ ಅನುದಾನ ಒದಗಿಸಬೇಕು. ಸರ್ಕಾರಿ ಶಾಲೆಗಳ ಸ್ಥಿತಿಗತಿ ಬಗೆಗೆ ಮಾಧ್ಯಮಗಳು ವಿಶೇಷ ವರದಿಗಳನ್ನು ಪ್ರಕಟಿಸುವ ಮೂಲಕ ಸರ್ಕಾರದ ಕಣ್ಣು ತೆರೆಸಬೇಕು. ಆಳುವ ವರ್ಗದ ಕಣ್ಣು ತೆರೆಸುವ ಕೆಲಸವನ್ನು ಸಾರ್ವಜನಿಕರೂ ಮಾಡಬೇಕು.

ಬಿ. ರಾಜ್‌ಕುಮಾರ್, ಕೆಂಗೇರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಏರುತ್ತಲೇ ಇದೆ ಆತ್ಮಹತ್ಯೆಗಳ ಸಂಖ್ಯೆ

2020ರಲ್ಲಿ ದೇಶದಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆಗಿಂತ ಹೆಚ್ಚು ಜನರು ಆತ್ಮಹತ್ಯೆಗೆ ಬಲಿಯಾಗಿದ್ದಾರೆ ಎನ್ನುತ್ತದೆ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊವಿನ ಅಪಘಾತ ಮತ್ತು ಆತ್ಮಹತ್ಯಾ ಸಾವುಗಳ ವರದಿ-2020. 2019ಕ್ಕೆ ಹೋಲಿಸಿದರೆ ದೇಶದಲ್ಲಿ 2020ರಲ್ಲಿ ಆತ್ಮಹತ್ಯೆ ಮಾಡಿಕೊಂಡ ಜನರ ಸಂಖ್ಯೆಯೂ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ; ಆತ್ಮಹತ್ಯೆ ಮಾಡಿಕೊಂಡವರ ಪ್ರಮಾಣ ಶೇ 10ರಷ್ಟು ಏರಿಕೆಯಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಪ್ರತಿ ವರ್ಷ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಏರಿಕೆಯಾಗುತ್ತಲೇ ಇದೆ. 2017ಕ್ಕೆ ಹೋಲಿಸಿದರೆ, 2020ರಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಪ್ರಮಾಣದಲ್ಲಿ ಶೇ 16ರಷ್ಟು ಏರಿಕೆಯಾಗಿದೆ.




1,48,774 2020ರಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ

1,53,052 2020ರಲ್ಲಿ ಆತ್ಮಹತ್ಯೆಗೆ ಮಾಡಿಕೊಂಡವರ ಸಂಖ್ಯೆ


ಪುರುಷರೇ ಅಧಿಕ

2020ರಲ್ಲಿ ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಪುರುಷರ ಪ್ರಮಾಣವೇ ಹೆಚ್ಚು. ಆದರೆ ಆತ್ಮಹತ್ಯೆ ಮಾಡಿಕೊಂಡ ಪ್ರತಿ ಮೂವರಲ್ಲಿ ಒಬ್ಬರು, ಮಹಿಳೆ ಇದ್ದಾರೆ ಎನ್ನುತ್ತದೆ ಎನ್‌ಸಿಆರ್‌ಬಿಯ ಅಪಘಾತ ಮತ್ತು ಆತ್ಮಹತ್ಯಾ ಸಾವುಗಳು-2020 ವರದಿ




ಯುವಕರು, ಮಧ್ಯವಯಸ್ಕರಲ್ಲೇ ಹೆಚ್ಚು

ಕಳೆದ ವರ್ಷ ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಯುವಕರು ಮತ್ತು ಮಧ್ಯವಯಸ್ಕರ ಪ್ರಮಾಣವೇ ಹೆಚ್ಚು. 1.53 ಲಕ್ಷ ಆತ್ಮಹತ್ಯೆಗಳಲ್ಲಿ 18-45 ವರ್ಷ ವಯೋಮಾನದವರ ಸಂಖ್ಯೆ ಲಕ್ಷದಷ್ಟಾಗುತ್ತದೆ. 45-60 ವರ್ಷದವರೂ ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ



9 ರಾಜ್ಯಗಳಲ್ಲಿ ಶೇ 70ರಷ್ಟು ಪ್ರಕರಣಗಳು

2020ರಲ್ಲಿ ದೇಶದಲ್ಲಿ ನಡೆದ ಆತ್ಮಹತ್ಯಗಳಲ್ಲಿ ಶೇ 70ರಷ್ಟು ಪ್ರಕರಣಗಳು 9 ರಾಜ್ಯಗಳಲ್ಲೇ ಸಂಭವಿಸಿದೆ. ಮಹಾರಾಷ್ಟ್ರ, ತಮಿಳುನಾಡು, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ಸೇರಿ 9 ರಾಜ್ಯಗಳಲ್ಲಿ 1.06 ಲಕ್ಷ ಆತ್ಮಹತ್ಯೆಗಳು ವರದಿಯಾಗಿವೆ



ಆತ್ಮಹತ್ಯೆ ತಡೆಗೆ ಕ್ರಮಗಳು

- ವ್ಯಕ್ತಿಯು ಖಿನ್ನತೆಗೆ ಒಳಗಾಗದಂತೆ ನೋಡಿಕೊಳ್ಳಬೇಕು
- ಮನೆಯಲ್ಲಿ ವ್ಯಕ್ತಿ ಒಂಟಿಯಾಗಿ ಇರದಂತೆ ನೋಡಿಕೊಳ್ಳಬೇಕು
- ಆತ್ಮಹತ್ಯೆ ಕುರಿತಾದ ಎಚ್ಚರಿಕೆಗಳನ್ನು ಕಡೆಗಣಿಸಬಾರದು
- ಮನೆಯಲ್ಲಿ ಅಪಾಯಕಾರಿ ವಸ್ತುಗಳು, ಪಿಸ್ತೂಲು, ಕೀಟನಾಶಕಗಳನ್ನು ಆತ್ಮಹತ್ಯೆ ಮನೋಭಾವದ ವ್ಯಕ್ತಿಗಳಿಂದ ದೂರವಿರಿಸಬೇಕು
- ಮಾನಸಿಕ ತಜ್ಞರ ಜೊತೆ ಸಮಾಲೋಚನೆ ನಡೆಸಬೇಕು
- ದೈಹಿಕ ವ್ಯಾಯಾಮ ಮಾಡುವಂತೆ ಉತ್ತೇಜಿಸಬೇಕು
- ಭರವಸೆ ತುಂಬುವ ಮಾತನ್ನಾಡಬೇಕು. ಬದುಕಿನ ಬಗ್ಗೆ ಧೈರ್ಯ ತುಂಬಬೇಕು

ಸಹಾಯವಾಣಿ


ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ದಿನದ 24 ಗಂಟೆ ಕಾರ್ಯನಿರ್ವಹಿಸುವ ಮಾನಸಿಕ ಆರೋಗ್ಯ ಪುನರ್‌ವಸತಿ ಉಚಿತ ಸಹಾಯವಾಣಿಯನ್ನು ಕಳೆದ ವರ್ಷ ಆರಂಭಿಸಿದೆ. 1800-599-0019 ಸಂಖ್ಯೆಗೆ ಕರೆ ಮಾಡಿ, ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ಸೇವೆ ಪಡೆಯಬಹುದು. ಮಾನಸಿಕ ಖಿನ್ನತೆಯಿಂದ ಬಳಲುತ್ತಿರುವ, ವಿಶೇಷವಾಗಿ ಕೋವಿಡ್ ಸಾಂಕ್ರಾಮಿಕದ ನಂತರ ಹೆಚ್ಚಾಗುತ್ತಿರುವ ಮಾನಸಿಕ ಕಾಯಿಲೆಗಳ ಹಿನ್ನೆಲೆಯಲ್ಲಿ ಇದನ್ನು ಆರಂಭಿಸಲಾಗಿದೆ.

ಕರ್ನಾಟಕ ಸೇರಿದಂತೆ ಹಲವು ರಾಜ್ಯ ಸರ್ಕಾರಗಳು 104 ಸಹಾಯವಾಣಿಗೆ ಕರೆ ಮಾಡುವ ಸೌಲಭ್ಯ ಕಲ್ಪಿಸಿವೆ. ಮಾನಸಿಕ ಸಮಸ್ಯೆಗಳಿಗೆ ಈ ಸಹಾಯವಾಣಿ ಮೂಲಕ ನೆರವು ನೀಡಲಾಗುತ್ತದೆ.

ಆಧಾರ: ಎನ್‌ಸಿಆರ್‌ಬಿ, ಪಿಟಿಐ

ದಿನಗೂಲಿ ನೌಕರರ ಆತ್ಮಹತ್ಯೆ ಶೇ 22ರಷ್ಟು ಏರಿಕೆ


2019ಕ್ಕೆ ಹೋಲಿಸಿದರೆ 2020ರಲ್ಲಿ ದೇಶದಲ್ಲಿ ಆದ ಆತ್ಮಹತ್ಯೆಗಳ ಏರಿಕೆ ಪ್ರಮಾಣ ಶೇ 10ರಷ್ಟು. ಆದರೆ ಇದೇ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ದಿನಗೂಲಿ ನೌಕರರ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ. 2019ಕ್ಕೆ ಹೋಲಿಸಿದರೆ 2020ರಲ್ಲಿ ಆತ್ಮಹತ್ಯೆ ಮಾಡಿಕೊಂಡ ದಿನಗೂಲಿ ನೌಕರರ ಪ್ರಮಾಣ ಶೇ 22ರಷ್ಟು ಏರಿಕೆಯಾಗಿದೆ. 2018ಕ್ಕೆ ಹೋಲಿಸಿದರೆ 2019ರಲ್ಲಿ ಆತ್ಮಹತ್ಯೆ ಮಾಡಿಕೊಂಡ ದಿನಗೂಲಿ ನೌಕರರ ಸಂಖ್ಯೆಯ ಏರಿಕೆ ಪ್ರಮಾಣ ಶೇ 7.5ರಷ್ಟು ಇತ್ತು. ಆರ್ಥಿಕ ಸಮಸ್ಯೆಗಳು, ಬಡತನ, ಸಾಲ ಮತ್ತು ಕೌಟುಂಬಿಕ ಕಲಹಗಳ ಕಾರಣದಿಂದ ಈ ಆತ್ಮಹತ್ಯೆಗಳು ನಡೆದಿವೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ



2020ರಲ್ಲಿ ರೈತರ ಆತ್ಮಹತ್ಯೆ

5,335 ಪುರುಷರು | **244** ಮಹಿಳೆಯರು

2020ರಲ್ಲಿ ಆತ್ಮಹತ್ಯೆಗೆ ಕಾರಣಗಳು (ಶೇಕಡವಾರು)



ಪ್ರಜಾವಾಣಿ ಗ್ರಾಫಿಕ್ಸ್

ಉತ್ತರ ಪ್ರದೇಶ: ಪ್ರಿಯಾಂಕಾ ಭರವಸೆ
ಮಹಿಳೆಗೆ ಮನ್ನಣೆ ಪ್ರತ್ಯೇಕ ಪ್ರಣಾಳಿಕೆ


ಪ್ರಿಯಾಂಕಾ


ಅಖಿಲೇಶ್

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಮಹಿಳೆಯರಿಗಾಗಿ ಪ್ರತ್ಯೇಕ ಪ್ರಣಾಳಿಕೆ ರಚಿಸಲಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಸೋಮವಾರ ಹೇಳಿದ್ದಾರೆ.

ವಿಧಾನಸಭೆ ಚುನಾವಣೆಯಲ್ಲಿ ಶೇ 40ರಷ್ಟು ಕ್ಷೇತ್ರಗಳಲ್ಲಿ ಮಹಿಳೆಯರನ್ನು ಕಣಕ್ಕೆ ಇಳಿಸಲಾಗುವುದು ಎಂದು ಪ್ರಿಯಾಂಕಾ ಅವರು ಕಳೆದ ತಿಂಗಳು ಘೋಷಿಸಿದ್ದರು. ಶೇ 50ರಷ್ಟಿರುವ ಮಹಿಳೆಯರನ್ನು ಅಧಿಕಾರದ ಪೂರ್ಣ ಪ್ರಮಾಣದ ಪಾಲುದಾರರನ್ನಾಗಿ ಮಾಡುವುದು ಇದರ ಉದ್ದೇಶ ಎಂದು ಅವರು ಹೇಳಿದ್ದರು.

‘ಉತ್ತರ ಪ್ರದೇಶದ ನನ್ನ ಪ್ರೀತಿಯ ಸಹೋದರಿಯರೇ, ನಿಮ್ಮ ಪ್ರತಿ ದಿನವೂ ಸಂಘರ್ಷವೇ ಆಗಿದೆ. ಇದನ್ನು ಅರ್ಥ ಮಾಡಿಕೊಂಡೇ ಕಾಂಗ್ರೆಸ್ ಪಕ್ಷವು ಮಹಿಳೆಯರಿಗಾಗಿ ಪ್ರತ್ಯೇಕ ಪ್ರಣಾಳಿಕೆ ತಯಾರಿಸುವ ನಿರ್ಧಾರ ಕೈಗೊಂಡಿತು’ ಎಂದು ಪ್ರಿಯಾಂಕಾ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ವರ್ಷಕ್ಕೆ ಮೂರು ಎಲ್‌ಪಿಜಿ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡಲಾಗುವುದು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಮಹಿಳೆಯರಿಗೆ ಪಕ್ಷವು ನೀಡಿರುವ ಭರವಸೆಗಳ ಪಟ್ಟಿಯನ್ನೂ ಪ್ರಿಯಾಂಕಾ ಅವರು ಟ್ವೀಟ್ ಮಾಡಿದ್ದಾರೆ. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರಿಗೆ ತಿಂಗಳಿಗೆ ₹10 ಸಾವಿರ ಗೌರವಧನ, ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ಶೇ 40ರಷ್ಟು ಹುದ್ದೆಗಳಿಗೆ ಮಹಿಳೆಯರ ನೇಮಕ, ವಿಧವೆಯರಿಗೆ ₹1,000 ಮಾಶಾಸನ, ವೀರ ವನಿತೆಯರ ಹೆಸರಿನಲ್ಲಿ ರಾಜ್ಯದಲ್ಲಿ 75 ಕೌಶಲ ಶಾಲೆಗಳ ಸ್ಥಾಪನೆ ಕಾಂಗ್ರೆಸ್‌ನ ಭರವಸೆಗಳಲ್ಲಿ ಸೇರಿವೆ.

ಕಾಂಗ್ರೆಸ್ ಪಕ್ಷಕ್ಕೆ ಉತ್ತರ ಪ್ರದೇಶದಲ್ಲಿ ಹೇಳಿಕೊಳ್ಳುವಂತಹ ನೆಲೆಯೇನೂ ಇಲ್ಲ. ರಾಜ್ಯದ ಉಸ್ತುವಾರಿಯಾಗಿರುವ ಪ್ರಿಯಾಂಕಾ ಅವರು ಪಕ್ಷವನ್ನು ಪುನಶ್ಚೇತನಗೊಳಿಸುವ ಅಸಾಧಾರಣ ಹೊಣೆಯನ್ನು ವಹಿಸಿಕೊಂಡಿದ್ದಾರೆ. ಮಹಿಳಾ ಮತದಾರರ ಓಲೈಕೆಯ ಕಾರ್ಯತಂತ್ರವನ್ನು ಕಾಂಗ್ರೆಸ್ ಅನುಸರಿಸುತ್ತಿದೆ.

> ಉತ್ತರ ಪ್ರದೇಶದಲ್ಲಿ ಪ್ರಿಯಾಂಕಾ ಗಾಂಧಿ ಎಂಬ ಬಿರುಗಾಳಿ ಎದ್ದಿದೆ. ಚುನಾವಣೆಯಲ್ಲಿ ಕಾಂಗ್ರೆಸ್ ಜಯಬೇರಿ ಬಾರಿಸಲು ಈ ಬಿರುಗಾಳಿಯು ನೆರವಾಗಲಿದೆ
>
> **ಅಜಯಕುಮಾರ್ ಲಲ್ಲು**
> ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ

ಅಖಿಲೇಶ್ ಸ್ಪರ್ಧೆ ಇಲ್ಲವೇ?

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ. ಆಜಂಗಡದ ಸಂಸದರಾಗಿರುವ ಅಖಿಲೇಶ್ ಅವರು, ಹಿಂದೆ ಯಾವತ್ತೂ ವಿಧಾನಸಭೆಗೆ ಸ್ಪರ್ಧಿಸಿಲ್ಲ. 2012–17ರ ಅವಧಿಯಲ್ಲಿ ಅಖಿಲೇಶ್ ಅವರು ಮುಖ್ಯಮಂತ್ರಿಯಾಗಿದ್ದರು. ಆಗ ಅವರು ವಿಧಾನ ಪರಿಷತ್ ಸದಸ್ಯರಾಗಿದ್ದರು. ವಿಧಾನಸಭೆಗೆ ಸ್ಪರ್ಧಿಸದಿರಲು ಅವರು ಯಾವುದೇ ಕಾರಣ ಕೊಟ್ಟಿಲ್ಲ.

ವಿಧಾನಸಭೆಗೆ ಸ್ಪರ್ಧಿಸುವುದಿಲ್ಲ ಎಂಬ ಅವರ ಹೇಳಿಕೆ ಪ್ರಕಟವಾಗುತ್ತಿದ್ದಂತೆಯೇ ಪಕ್ಷವು ಸ್ಪಷ್ಟೀಕರಣ ನೀಡಿದೆ. ಅಖಿಲೇಶ್ ಅವರು ಸ್ಪರ್ಧಿಸುವುದಿಲ್ಲ ಎಂಬ ನಿರ್ಧಾರ ಇನ್ನೂ ತೆಗೆದುಕೊಂಡಿಲ್ಲ. ಈ ಬಗ್ಗೆ ಪಕ್ಷವು ತೀರ್ಮಾನ ಕೈಗೊಳ್ಳಲಿದೆ ಎಂದು ಎಸ್‌ಪಿ ಹೇಳಿದೆ.

ಅಖಿಲೇಶ್ ಅವರು ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಸಿ) ಜತೆಗಿನ ಚುನಾವಣಾ ಮೈತ್ರಿಯನ್ನು ಅಂತಿಮಗೊಳಿಸಿದ್ದಾರೆ. ಸೀಟು ಹಂಚಿಕೆಯು ಸದ್ಯವೇ ಅಂತಿಮಗೊಳ್ಳಲಿದೆ ಎಂದು ಅವರು ತಿಳಿಸಿದ್ದಾರೆ.

ಎಸ್‌ಪಿ ಬಿಟ್ಟು ಹೋಗಿ ‘ಪ್ರಗತಿಶೀಲ ಸಮಾಜವಾದಿ ಪಕ್ಷ ಲೋಹಿಯಾ’ ಎಂಬ ಪಕ್ಷ ಸ್ಥಾಪಿಸಿರುವ ಅಖಿಲೇಶ್ ಅವರ ಚಿಕ್ಕಪ್ಪ ಶಿವಪಾಲ್ ಯಾದವ್ ಅವರಿಗೆ ಪಕ್ಷದಲ್ಲಿ ಸೂಕ್ತ ಗೌರವ ಸಿಗಲಿದೆ ಎಂದೂ ಅಖಿಲೇಶ್ ಅವರು ಹೇಳಿದ್ದಾರೆ.

ಕೇಂದ್ರ ಕೃಷಿ ಕಾಯ್ದೆಗಳ ವಿಚಾರದಲ್ಲಿ ಎಸ್‌ಪಿ ಮತ್ತು ಆರ್‌ಎಲ್‌ಡಿ ಒಂದೇ ನಿಲುವನ್ನು ಹೊಂದಿವೆ. ರಾಜ್ಯದ ಪಶ್ಚಿಮ ಭಾಗದಲ್ಲಿ ಆರ್‌ಎಲ್‌ಡಿ ರೈತರ ಬೆಂಬಲ ಹೊಂದಿದೆ. ಓಂ ಪ್ರಕಾಶ್ ರಾಜ್‌ಭರ್ ಅವರ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ ಜತೆಗೂ ಎಸ್‌ಪಿ ಮೈತ್ರಿ ಮಾಡಿಕೊಂಡಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜಿ-20 ಸಮ್ಮೇಳನದಲ್ಲಿ ಭಾಗವಹಿಸಲು ಇಟಲಿಗೆ ತೆರಳಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಲ್ಲಿ ಅವಮಾನವಾಗಿದೆ ಎಂಬ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮೋದಿ ಅವರನ್ನು ‘ಟ್ಯಾಕ್ಸಿ’ಯಲ್ಲಿ ಕಳುಹಿಸಿ ಅವಮಾನಿಸಲಾಗಿದೆ ಎಂಬ ವರದಿ ಹರಿದಾಡುತ್ತಿದೆ. ಇದಕ್ಕೆ ಪೂರಕವಾಗಿ ‘ಟ್ಯಾಕ್ಸಿ’ ಎಂಬ ಫಲಕವಿರುವ ಕಾರನ್ನು ಮೋದಿ ಅವರು ಹತ್ತುತ್ತಿರುವ ಫೋಟೊವನ್ನು ಲಗತ್ತಿಸಲಾಗಿದೆ. ಅ.30ರಂದು ವ್ಯಾಟಿಕನ್ ನಗರದಲ್ಲಿ ಪೋಪ್ ಫ್ರಾನ್ಸಿಸ್ ಅವರನ್ನು ಮೋದಿ ಭೇಟಿ ಆದ ಬಳಿಕ ಈ ಫೋಟೊ ಹೊರಬಿದ್ದಿದೆ.



ವೈರಲ್ ಆಗುತ್ತಿರುವ ಈ ಫೋಟೊಗಳು ತಿರುಚಲಾಗಿರುವ ಫೋಟೊಗಳು ಎಂದು ಇಂಡಿಯಾ ಟುಡೆ ಫೇಕ್ ನ್ಯೂಸ್ ವಾರ್ ರೂಮ್ ವರದಿ ಮಾಡಿದೆ. ಮೋದಿ ಅವರು ಪೋಪ್ ಅವರನ್ನು ಭೇಟಿಯಾಗುತ್ತಿದ್ದಂತೆ ಎಎನ್‌ಐ ಸುದ್ದಿ ಸಂಸ್ಥೆ ಈ ಕುರಿತು ವರದಿ ಮಾಡಿತ್ತು. ಅ.30ರಂದು ಮಧ್ಯಾಹ್ನ 1:30ಕ್ಕೆ ಈ ಕುರಿತು ಅಸಲಿ ಫೋಟೊವನ್ನು ಎಎನ್‌ಐ ಟ್ವೀಟ್ ಮಾಡಿತ್ತು. ಜೊತೆಗೆ ತನ್ನ ಯುಟ್ಯೂಬ್ ಚಾನಲ್‌ನಲ್ಲಿ ವಿಡಿಯೊವನ್ನೂ ಪೋಸ್ಟ್ ಮಾಡಿತ್ತು. ಆ ಫೋಟೊ ಮತ್ತು ವಿಡಿಯೊಗಳಲ್ಲಿ ಇರುವ ಕಾರ್ ಮೇಲೆ ‘ಟ್ಯಾಕ್ಸಿ’ ಎಂಬ ಫಲಕ ಇಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಜೀವ-ದೈವಗಳಿಂದ ಲಾವಣ್ಯ ಸೃಷ್ಟಿ

ಜೀವಿ ಬೇಡದಿರೆ ದೈವವನು ಕೇಳುವವರಾರು?|
ದೈವಗುಟ್ಟಿರಿಸದಿರೆ ಜೀವಿಯರಸುವುದೇಂ?||
ಜೀವ ದೈವಂಗಳ ಪರಸ್ಪರಾನ್ವೇಷಣೆಯೆ|
ಲಾವಣ್ಯ ಸೃಷ್ಟಿಯಲಿ - ಮಂಕುತಿಮ್ಮ ||488||

ಪದ-ಅರ್ಥ: ಗುಟ್ಟಿರಿಸದಿರೆ = ಗುಟ್ಟು + ಇರಿಸದಿರೆ (ಇರಿಸದಿದ್ದರೆ), ಜೀವಿಯರಸುವುದೇಂ = ಜೀವಿ + ಅರಸುವುದು + ಏಂ (ಏನನ್ನು), ಪರಸ್ಪರಾನ್ವೇಷಣೆಯೆ = ಪರಸ್ಪರ + ಅನ್ವೇಷಣೆಯೆ

ವಾಚ್ಯಾರ್ಥ: ಜೀವಿಯೇ ಬೇಡದಿದ್ದರೆ ದೈವವನ್ನು ಯಾರು ಕೇಳುತ್ತಾರೆ? ದೈವವೊಂದು ಗುಟ್ಟನಂತೆ ಇರದಿದ್ದರೆ ಜೀವಿ ಹುಡುಕಾಡುವುದು ಏನನ್ನು? ಹೀಗೆ ಜೀವ ಮತ್ತು ದೈವಗಳ ಪರಸ್ಪರ ಹುಡುಕಾಟವೇ ಜಗತ್ತಿನಲ್ಲಿ ಸುಂದರತೆಯನ್ನು ತಂದದ್ದು.

ವಿವರಣೆ: ಗಾಜಿಗೆ ಹೆಚ್ಚು ಬೆಲೆ ಇಲ್ಲ, ಯಾಕೆಂದರೆ ಅದು ಎಲ್ಲೆಡೆಯೂ, ಸುಲಭವಾಗಿ ಸಿಗುವಂಥದ್ದು. ಆದರೆ ಅದರಂತೆಯೇ ಮೇಲ್ನೋಟಕ್ಕೆ ಕಾಣುವ ವಜ್ರಕ್ಕೆ ತುಂಬ ಬೆಲೆ. ಯಾಕೆಂದರೆ ಅದು ಸುಲಭವಾಗಿ ದೊರೆಯಲಾರದು, ಅದನ್ನು ಪಡೆಯಲು ಅದಕ್ಕೆ ನೆಲವನ್ನು ಬಗೆದು ಪರಿಶ್ರಮಿಸಬೇಕು. ಹೀಗೆಂದರೆ, ಯಾವುದು ಸುಲಭವಲ್ಲವೋ, ನಮ್ಮ ಸಾಮಾನ್ಯ ಮಿತಿಗಳನ್ನು ಮೀರಿದ್ದೋ, ಹೆಚ್ಚು ಕಾಲ ಬಾಳುವಂಥದ್ದೋ, ಅದಕ್ಕೆ ಹೆಚ್ಚಿನ ಬೆಲೆ. ಅದನ್ನು ಪಡೆಯುವುದಕ್ಕೆ ತುಡಿತ. ಮಿತಕಾಲ ಬದುಕುವ ಮನುಷ್ಯನಿಗೆ ಅಮಿತವಾದದ್ದರೆಡೆಗೆ ಆಸಕ್ತಿ. ಮೃತ್ಯುವಿನ ಭಯವಿರುವ ಜೀವಿಗೆ, ಮೃತ್ಯುಂಜಯನ ಧ್ಯಾನ. ಹೀಗೆ ಭಯಜನ್ಯವಾಗಿ ಬಂದ ಚಿಂತನೆಯ ರೂಪ, ದೇವರು ಎಂಬ ಕಲ್ಪನೆ. ಬದುಕಿನ ಕಷ್ಟಗಳಲ್ಲಿ ಬೆಂದ ಜೀವಿ, ತಾನು ಕಲ್ಪಿಸಿಕೊಂಡ ಪರಮಶಕ್ತಿ ಕಾಪಾಡೀತು ಎಂಬ ನಂಬಿಕೆಯಿಂದ ಮೊಗವೆತ್ತಿ, ಕೈಚಾಚಿ ಬೇಡುತ್ತಾನೆ. ಹಾಗೆ ಬೇಡುವುದರಿಂದ ದೈವಕ್ಕೊಂದು ಬೆಲೆ. ಯಾರೂ ಬೇಡದೆ ಹೋದರೆ ದೈವವನ್ನು ಕೇಳುವವರಾರು? ಗಿರಾಕಿ ಇದ್ದರೆ ವ್ಯಾಪಾರ, ವ್ಯಾಪಾರಿ. ಗಿರಾಕಿಗಳೇ ಇಲ್ಲದಿದ್ದರೆ ವ್ಯಾಪಾರಿಗೇನು ಕೆಲಸ? ಇದು ಒಂದು ವಾದ. ದೇವರು ನಮ್ಮ ಮುಂದೆಯೇ ಸದಾಕಾಲ ಓಡಾಡಿಕೊಂಡಿದ್ದರೆ ಅವನನ್ನು ಹುಡುಕಲು ಪ್ರಯತ್ನ ಮಾಡಬೇಕೇ? ಅವನು ಕಣ್ಣಿಗೆ ಕಾಣದಂತೆ, ಮರೆಯಾಗಿರುವುದರಿಂದಲೇ ಜೀವಿ, ಅವನನ್ನು ಹುಡುಕಲು ಒದ್ದಾಡುವುದು.

ಹೀಗೆ ಜೀವ, ದೈವಗಳು ಅನ್ಯೋನ್ಯಾಶ್ರಯಗಳು. ಒಂದಿಲ್ಲದೆ ಮತ್ತೊಂದಿಲ್ಲ. ದೈವಕ್ಕೂ ಜೀವಿ ಬೇಕು, ಯಾಕೆಂದರೆ ಅದು ಮೂಲತಃ ಜೀವಿಯ ಕಲ್ಪನೆಯೆ. ಈ ಪರಸ್ಪರ ಅನ್ವೇಷಣೆಯಿಂದ ಪ್ರಪಂಚಕ್ಕಾದದ್ದೇನು? ದೇವತೆಗಳು ಇದ್ದಾರೆ ಮತ್ತು ನಮ್ಮನ್ನು ಕಾಪಾಡುತ್ತಾರೆ ಎಂಬ ನಂಬಿಕೆಯೇ ವೇದ ವಾಙ್ಮಯದ ಸೃಷ್ಟಿಗೆ ಕಾರಣವಾಯಿತು. ಅದೊಂದು ಅಪರೂಪದ ಸಾಹಿತ್ಯ ಸೃಷ್ಟಿ, ಜ್ಞಾನದ ಮೂಲ. ಅತ್ಯಂತ ವಿಸ್ತೃತವಾದ, ರಮ್ಯವಾದ ಸಾಹಿತ್ಯ ಸೃಷ್ಟಿಯ ಮೂಲವೂ ಈ ಚಿಂತನೆಯೆ. ಬ್ರಹ್ಮಸೂತ್ರಗಳು, ಪುರಾಣಗಳು, ಭಾಗವತ, ರಾಮಾಯಣ, ಮಹಾಭಾರತಗಳು, ಬೈಬಲ್, ಕುರಾನ್, ಗ್ರಂಥಸಾಹಿಬ್ ಇವೆಲ್ಲ ರಚನೆಯಾದದ್ದು ಜೀವ-ದೈವಗಳ ಅನ್ವೇಷಣೆಯ ಫಲವಾಗಿ. ದೇವರ ಕಲ್ಪನೆ ಎಂತಹ ಅದ್ಭುತವಾದ ಸಂಗೀತವನ್ನು, ನೃತ್ಯವನ್ನು ನಾಟಕಗಳನ್ನು ರಚಿಸುವುದಕ್ಕೆ ಕಾರಣವಾಗಿದೆ. ದೇವಸ್ಥಾನದ ರಚನೆ ಎಂತೆಂತಹ ಸರ್ವಶ್ರೇಷ್ಠ ವಿಗ್ರಹಗಳನ್ನು, ವಿಶೇಷವಾದ ಶಿಲ್ಪಶಾಸ್ತ್ರವನ್ನು ನಿರ್ಮಾಣ ಮಾಡಿದೆ. ಅರ್ಚಕರು ಪೂಜೆಯಿಂದ ಭಗವಂತನನ್ನು ಅರ್ಚಿಸಿದರೆ, ಶಿಲ್ಪಿ ತನ್ನ ಕಲೆಯಿಂದ ಪೂಜಿಸಿದ್ದಾನೆ. ಅಸಂಖ್ಯಾತ ಚಿತ್ರಗಳು, ಭಜನೆಗಳು, ಧ್ಯಾನಗಳು, ತೀರ್ಥಯಾತ್ರೆಗಳು ಇವೆಲ್ಲ ಸೇರಿ ಪ್ರಪಂಚದಲ್ಲಿ ಲಾವಣ್ಯವನ್ನು, ಸುಂದರತೆಯನ್ನು ತಂದಿವೆ.

ದಿನ ಭವಿಷ್ಯ

ಮಂಗಳವಾರ ನವೆಂಬರ್ 2, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಸ್ವಾತಿ ದ್ವಾದಶೀ ಗಂ. 4-41 (ಬೆ. 8-12) ಮಂಗಳವಾರ ನಿತ್ಯ ನಕ್ಷತ್ರ ಉತ್ತರಫಲ್ಗುಣಿ ಗಂ. 8-8 (ಬೆ. 9-35) ವೈಧೃತಿ ನಾಮ ಯೋಗ ಗಂ. 27-23 ತೈತಲ ಕರಣ ಗಂ. 4-41 ವಿಷ ಗಂ. 28-31 ಅಮೃತ ಗಂ 51-49 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-16 ಸೂರ್ಯಾಸ್ತ: 5-50 ಅದೃಷ್ಟ ಸಂಖ್ಯೆ 4 5

ಮೇಷ: ಬಂಧುವೊಬ್ಬರ ಮನೆಯಲ್ಲಿ ಸಂಜೆಯವರೆಗೂ ವಿಶೇಷ ಸಮಾರಂಭಗಳಲ್ಲಿ ಭಾಗಿಯಾಗಿ ಭೋಜನಕೂಟದಲ್ಲಿ ಭಾಗವಹಿಸುವ ಸಾಧ್ಯತೆ ಕಂಡುಬರುತ್ತಿದೆ. ವ್ಯವಹಾರಗಳು ಎಂದಿನಂತೆ ನಡೆಯಲಿವೆ.

ವೃಷಭ: ವೃತ್ತಿ ನೈಪುಣ್ಯತೆಯಿಂದಾಗಿ ನೌಕರಸ್ಥರಿಗೆ ವಿಶೇಷ ಸ್ಥಾನಮಾನ. ಪದೋನ್ನತಿಯಿಂದಾಗಿ ಆರ್ಥಿಕ ಸುಧಾರಣೆ. ಚಿನ್ನಾಭರಣ ಖರೀದಿ ಸಾಧ್ಯತೆ. ಮನೆಗೆ ಹೊಸ ಸದಸ್ಯರ ಸೇರ್ಪಡೆ.

ಮಿಥುನ: ಪ್ರಮುಖರಿಗೆ ಆಪ್ತ ಸಲಹೆಗಾರರಾಗಿ ಸೇವೆ ಸಲ್ಲಿಸುವ ಅವಕಾಶ. ಗುಪ್ತ ಆಸ್ತಿ ಖರೀದಿಯ ಸಾಧ್ಯತೆ. ತುರ್ತು ವಿಷಯಗಳ ಬಗ್ಗೆ ಗಮನ ಹರಿಸುವಿರಿ. ದೂರದಲ್ಲಿರುವ ಗೆಳೆಯರೊಂದಿಗೆ ವಿಚಾರ ವಿನಿಮಯ.

ಕರ್ಕಾಟಕ: ಅಲಂಕಾರಿಕ ವಸ್ತುಗಳನ್ನು ಖರೀದಿಸಲಿದ್ದೀರಿ. ಸರಳ ವಿವಾಹದ ನಿಶ್ಚಯದಿಂದಾಗಿ ಮನೆಯಲ್ಲಿ ಸಂತಸ ಮೂಡಿಸಲಿದ್ದೀರಿ. ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ.

ಸಿಂಹ: ಮುಂದಾಲೋಚನೆಯಿಂದ ಮುಂಬರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಿದ್ದೀರಿ. ಸಮಾಜ ಕಲ್ಯಾಣ ಕಾರ್ಯಕ್ಕಾಗಿ ನಿಮ್ಮ ಸಲಹೆ ಸಹಕಾರ ನೀಡಬೇಕಾದ ಅನಿವಾರ್ಯತೆ.

ಕನ್ಯಾ: ಅನಗತ್ಯ ಮಾತುಕತೆ, ಚರ್ಚೆಗಳಲ್ಲಿ ಭಾಗವಹಿಸದಿರುವುದೇ ಉತ್ತಮ. ವಕೀಲ ವೃತ್ತಿಯಲ್ಲಿರುವವರಿಗೆ ಬಿಡುವಿನ ದಿನವಾಗಲಿದೆ. ಚಿನ್ನಾಭರಣ ವ್ಯಾಪಾರಿಗಳಿಗೆ ವಿಶೇಷ ಲಾಭ ದೊರಕಲಿದೆ.

ತುಲಾ: ವೃತ್ತಿ ಜೀವನದಲ್ಲಿ ಬದಲಾವಣೆ ಸಾಧ್ಯತೆ. ಆದಾಯದಲ್ಲಿ ಹೆಚ್ಚಳದ ನಿರೀಕ್ಷೆ ಇದೆ. ಶಿಕ್ಷಣ ಕ್ಷೇತ್ರದಲ್ಲಿರುವವರ ಸೇವೆಯನ್ನು ಗಮನಿಸಿ ಸಾಮಾಜಿಕ ಗೌರವ ಪ್ರಾಪ್ತವಾಗಲಿದೆ.

ವೃಶ್ಚಿಕ: ಆಭರಣ ತಯಾರಿಕೆ, ಗೃಹಾಲಂಕಾರ ಸಾಮಗ್ರಿ ಮುಂತಾದ ಕರಕುಶಲ ವೃತ್ತಿಗಳಲ್ಲಿ ತೊಡಗಿದವರಿಗೆ ಹೆಚ್ಚಿನ ವರಮಾನ ದೊರಕಲಿದೆ. ಸಂಸಾರದಲ್ಲಿ ನೆಮ್ಮದಿಯನ್ನು ಕಾಣುವಿರಿ.

ಧನು: ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಶ್ರಮವಹಿಸಿ ಮಾಡಿದ ಉತ್ತಮ ಸಾಧನೆಯ ಸಂತಸವನ್ನು ಮನೆಯವರೊಂದಿಗೆ ಹಂಚಿಕೊಳ್ಳಲಿದ್ದೀರಿ. ವಸ್ತ್ರಾಭರಣ ಖರೀದಿ ಸಾಧ್ಯತೆ.

ಮಕರ: ನಿಮ್ಮ ರಾಜಕೀಯ ವಿಷಯದಲ್ಲಿ ಬದಲಾವಣೆಯೊಂದನ್ನು ಕಾಣಲಿದ್ದೀರಿ. ನಿಮ್ಮ ಪ್ರಭಾವದಿಂದಾಗಿ ನೆರೆ ಹೊರೆಯವರ ಸಮಸ್ಯೆಗಳನ್ನು ಪರಿಹಾರ ಮಾಡಲಿದ್ದೀರಿ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ.

ಕುಂಭ: ಸ್ನೇಹಿತರು ಮತ್ತು ಬಂಧುಗಳೊಂದಿಗಿನ ಸಂಬಂಧಗಳು ಗಟ್ಟಿಗೊಳ್ಳುವ ಸಾಧ್ಯತೆ. ಮನೆಯ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ನಿರ್ಲಕ್ಷ್ಯ ಸಲ್ಲದು.


ಮೀನ: ಕೆಲಸ ಕಾರ್ಯಗಳಲ್ಲಿ ಸಂಪೂರ್ಣವಾಗಿ ನಿಮ್ಮನ್ನು ತೊಡಗಿಸಿಕೊಳ್ಳಲಿದ್ದೀರಿ. ಮನೆಯ ಜವಾಬ್ದಾರಿಯನ್ನು ಯೋಗ್ಯ ರೀತಿಯಲ್ಲಿ ನಿಭಾಯಿಸಿ ಅನ್ಯರ ಪ್ರಶಂಸೆಗೆ ಪಾತ್ರರಾಗುವಿರಿ.

ನಿಮ್ಮ ಜನ್ಮದಿನ 2-ನವೆಂಬರ್ ಈದಿನ ಅತ್ಯಂತ ಶುಭ ದಿನವಾಗಿದೆ. ಹೊಸ ಸ್ಥಿರ ಚರ ಆಸ್ತಿಗಳನ್ನು ಖರೀದಿಸಲಿದ್ದೀರಿ. ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಎಚ್ಚರಿಕೆಯ ನಡೆಯ ಅಗತ್ಯ ಕಂಡುಬರುವುದು. ನಿವೇಶನ ಅಥವಾ ಆಸ್ತಿ ಖರೀದಿಸುವ ಸಾಧ್ಯತೆ ಗೋಚರಿಸುತ್ತಿದೆ.

ಪದಬಂಧ 4766 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹೆಂಡತಿಯ ಸಹೋದರ (5)
4.ಉತ್ತರದವರು ಪಡೆಯುವ ವೇತನ (3)
5.ಗುರುಗುಟ್ಟುತ್ತಿರುವ ಗಂಡು ಕುರಿ (3)
9.ಬಿಡಲು ಯೋಗ್ಯವಾದುದು (2)
10.ಮುಸಲ್ಮಾನ ಸಂತರ ಗೋರಿ (3)
11.ಈ ದಿನದ ಮರು ದಿನ ಉಲ್ಟಾ ಕಾಣುತ್ತಿದೆಯಲ್ಲಾ? (2)
12.ಬೆಳಗಿನ ಜಾವವಿದು (3)
14.ಆತಂಕ ಹುಟ್ಟಿಸುತ್ತಿರುವ ನರಕಾಧಿಪತಿ (3)
15.ರಾಮನ ಮಗನಿಂದಾದ ಹುರುಪು (5)

ಮೇಲಿಂದ ಕೆಳಕ್ಕೆ
1.ಸ್ನೇಹವಿಲ್ಲಿ ಹಿಂದುಮುಂದಾಗಿದೆಯಲ್ಲಾ? (2)
2.ಭಾರತ ಹೊತ್ತಿರುವ ಒಜ್ಜೆ (2)
3.ಅಭಿನಯಿಸುವವ ಇಲ್ಲಿದ್ದಾನೆ (2)
4.ಅಂತ್ಯ ಅಥವಾ ಸಾವು (5)
6.ದುರಂತ ನಾಟಕವಿದು (5)
7.ಶ್ರೀಗಂಧದ ಮರ (3)
8. ವಾಲಿಯ ಮಗ (3)
13.ಕುಟಿಲನ ವಂಶ! (2)
14.ಈ ಹತೋಟಿ ಇಲ್ಲದ ಕಪಿ ಲಂಕೆಗೆ ಹಾರಿತಂತೆ ! (2)
16.ಬಾಲಬಡಿಕ ಹಿಡಿದಿರುವ ದಾರದ ಉಂಡೆ (2)



4765ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜ್ಞಾತಿಕಲಹ 3.ಕುಲಾವಿ 5.ಕಲೋಪಾಸನೆ 7.ಸಾವಿರ 8.ಮತಿಭ್ರಮಣೆ 10.ಸದರ 11.ವಾರಸುದಾರ 14.ಕುಲುಮೆ 15.ಅನುವಾದಕ

ಮೇಲಿಂದ ಕೆಳಕ್ಕೆ: 1. ಜ್ಞಾಪಕ 2.ಕತಪಾ 4.ವಿಧುರ 6.ಸಮ್ಮತಿ 7.ಸಾರಣೆ 8.ಮಸೂರ 9.ಮತ್ಸರ 10.ಸರಕು 12.ಸುದಿವಾ 13.ರಸಿಕ

ಸುಡೊಕು 5152

	4				1		2	
8		7		3				9
		5			9		8	3
	6					3		8
	7	4	1	8	3			
3						5		1
	8		3		4		1	5
		1		9		8		4
4	3		5			2		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5151 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ಗ್ಲಾಸ್ಗೋ ಶೃಂಗಸಭೆ: ಹವಾಮಾನ ವೈಪರೀತ್ಯ ನಿಯಂತ್ರಣಕ್ಕಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ನೆರವು

‘ಬದ್ಧತೆ ಮರೆತ ಶ್ರೀಮಂತ ರಾಷ್ಟ್ರಗಳು’

ಗ್ಲಾಸ್ಗೋ (ಪಿಟಿಐ): ‘ವಿಶ್ವ ಸಂಸ್ಥೆಯ ಹವಾಮಾನ ವೈಪರೀತ್ಯ ಶೃಂಗಸಭೆ-2009ರಲ್ಲಿ ಘೋಷಿಸಿದ್ದಂತೆ, ಪ್ರತಿ ವರ್ಷ 10,000 ಕೋಟಿ ಡಾಲರ್ (ಸುಮಾರು ₹7.5 ಲಕ್ಷ ಕೋಟಿ) ಅನ್ನು ವಾಯುಮಾಲಿನ್ಯ ನಿಯಂತ್ರಣ ಉದ್ದೇಶಕ್ಕೆ ನೀಡುವಲ್ಲಿ ಶ್ರೀಮಂತ ರಾಷ್ಟ್ರಗಳು ವಿಫಲವಾಗಿವೆ’ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಹೇಳಿದ್ದಾರೆ. ಇಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ಹವಾಮಾನ ಶೃಂಗಸಭೆಯಲ್ಲಿ ಅವರು ಈ ಮಾತು ಹೇಳಿದ್ದಾರೆ.

ಅಭಿವೃದ್ಧಿಶೀಲ ರಾಷ್ಟ್ರಗಳಾದ ಬ್ರೆಜಿಲ್, ದಕ್ಷಿಣ ಆಫ್ರಿಕಾ, ಭಾರತ ಮತ್ತು ಚೀನಾ ಪರವಾಗಿ ಮಾತನಾಡಿದ ಅವರು, ‘ಶ್ರೀಮಂತ ರಾಷ್ಟ್ರಗಳು ತಮ್ಮ ಬದ್ಧತೆಯನ್ನು ಉಳಿಸುಕೊಳ್ಳುವಲ್ಲಿ ವಿಫಲವಾಗಿವೆ’ ಎಂದಿದ್ದಾರೆ.

‘2009ರ ಶೃಂಗಸಭೆಯ ಘೋಷಣೆಯ ಪ್ರಕಾರ, 2025ರ ವೇಳೆಗೆ ಜಾಗತಿಕ ತಾಪಮಾನವನ್ನು ನಿಯಂತ್ರಿಸಬೇಕಿತ್ತು. ಇದಕ್ಕಾಗಿ ಶ್ರೀಮಂತ ರಾಷ್ಟ್ರಗಳು, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಪ್ರತಿ ವರ್ಷ 10,000 ಕೋಟಿ ಡಾಲರ್ ನೀಡುವುದಾಗಿ ಪ್ರತಿಜ್ಞೆ ಮಾಡಿದ್ದವು. ಈ ಪ್ರತಿಜ್ಞೆಯನ್ನು ಉಳಿಸಿಕೊಳ್ಳುವಲ್ಲಿ ಅವು ವಿಫಲವಾದವು. ಆದರೆ, ಜಾಗತಿಕ ತಾಪಮಾನವನ್ನು ನಿಯಂತ್ರಿಸುವ ಗುರಿಯನ್ನು ಮಾತ್ರ ಒತ್ತಿ ಹೇಳುತ್ತಾ ಬಂದವು’ ಎಂದು ಯಾದವ್ ಹೇಳಿದ್ದಾರೆ.

‘ಅಭಿವೃದ್ಧಿಶೀಲ ರಾಷ್ಟ್ರಗಳು ಜಾಗತಿಕ ತಾಪಮಾನ ನಿಯಂತ್ರಣಕ್ಕೆ ಈ ಅವಧಿಯಲ್ಲಿ ಮಹತ್ವದ ಕ್ರಮಗಳನ್ನು ತೆಗೆದುಕೊಂಡಿವೆ. ಶ್ರೀಮಂತ ರಾಷ್ಟ್ರಗಳು ಕೇವಲ ಗುರಿಯ ಬಗ್ಗೆ ಮಾತನಾಡುತ್ತಿವೆ. ಅದಕ್ಕೆ ಪ್ರತಿಯಾಗಿ ಹಣಕಾಸು ನೆರವು ನೀಡಲು ವಿಫಲವಾಗಿವೆ. ಇದು ಒಪ್ಪತಕ್ಕದ್ದಲ್ಲ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘2015ರ ಪ್ಯಾರಿಸ್ ಒಪ್ಪಂದದ ಘೋಷಣೆಯನ್ನು ಉಳಿಸಿಕೊಳ್ಳುವಲ್ಲೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ವಿಫಲವಾಗಿವೆ. ಹವಾಮಾನ ವೈಪರೀತ್ಯವನ್ನು ನಿಯಂತ್ರಿಸಲು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹಣಕಾಸು, ತಂತ್ರಜ್ಞಾನದ ನೆರವನ್ನು ಅಭಿವೃದ್ಧಿ ಹೊಂದಿದ ದೇಶಗಳು ನೀಡುವುದು ಅನಿವಾರ್ಯ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

‘ಶ್ರೀಮಂತ ರಾಷ್ಟ್ರಗಳು ಶ್ರಮಿಸಬೇಕು’: ‘ಹವಾಮಾನ ವೈಪರೀತ್ಯವನ್ನು 2050ರ ವೇಳೆಗೆ ಸಂಪೂರ್ಣವಾಗಿ ನಿಯಂತ್ರಿಸುವ ಗುರಿಯನ್ನು ಮುಟ್ಟಲು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಸಾಗರಯಾನದಲ್ಲಿ ಮಾಲಿನ್ಯ ನಿಯಂತ್ರಿಸಲು ಮುಂದಾಗಬೇಕು. 2030 ಮತ್ತು 2040ರ ಮಧ್ಯಂತರ ಗುರಿಗಳನ್ನು ಮುಟ್ಟಲೂ ಈ ದೇಶಗಳು ಶ್ರಮಿಸಬೇಕು’ ಎಂದು ಡೆನ್ಮಾರ್ಕ್ ಪ್ರಧಾನಿ ಮೆಟ್ಟೇ ಫ್ರೆಡರಿಕ್ಸನ್ ಪ್ರತಿಪಾದಿಸಿದ್ದಾರೆ.

ಈ ಗುರಿಗಳನ್ನು ಮುಟ್ಟಲು ಸಾಗರಯಾನದಲ್ಲೂ ಮಾಲಿನ್ಯವನ್ನು ಕಡಿತಗೊಳಿಸುವುದು ಅತ್ಯಂತ ಮಹತ್ವದ ಪಾತ್ರವಹಿಸಲಿದೆ. ಇದಕ್ಕಾಗಿ ಸಂಬಂಧಿತ ರಾಷ್ಟ್ರಗಳು ಇತ್ತ ಗಮನಹರಿಸಬೇಕು. ಸಾಗರಯಾನದಲ್ಲಿ ನವೀಕರಿಸಬಹುದಾದ ಇಂಧನ ಬಳಕೆಗೆ ಒತ್ತು ನೀಡಬೇಕು. ಈ ಮೂಲಕ ಅಭಿವೃದ್ಧಿಶೀಲ ರಾಷ್ಟ್ರಗಳ ಇಂಧನದ ಅಗತ್ಯವನ್ನು ಪೂರೈಸಲು ನೆರವಾಗಬೇಕು. ಆಗ ಹವಾಮಾನ ವೈಪರೀತ್ಯ ನಿಯಂತ್ರಣ ಸಾಧ್ಯವಾಗಲಿದೆ’ ಎಂದು ಹೇಳಿದ್ದಾರೆ.



ಗ್ಲಾಸ್ಗೋ ಶೃಂಗಸಭೆಯನ್ನು ವಿರೋಧಿಸಿ ಪ್ರತಿಭಟನಕಾರರು ರಸ್ತೆಗಳಲ್ಲಿ ಬ್ಯಾನರ್ ಹಾಕಿದ್ದರು –ರಾಯಿಟರ್ಸ್ ಚಿತ್ರ

ಗ್ಲಾಸ್ಗೋ ರಸ್ತೆಗಳಲ್ಲಿ ಕಸದ ರಾಶಿ

ಗ್ಲಾಸ್ಗೋ ನಗರದಲ್ಲಿ ಅಂತರರಾಷ್ಟ್ರೀಯ ಹವಾಮಾನ ವೈಪರೀತ್ಯ ಶೃಂಗಸಭೆ ನಡೆಯುತ್ತಿರುವಾಗಲೇ, ನಗರದ ಪೌರ ಕಾರ್ಮಿಕರು ಮುಷ್ಕರ ನಡೆಸಿದ್ದಾರೆ.

ವೇತನ ಹೆಚ್ಚಳ ಸಂಬಂಧ ಪೌರ ಕಾರ್ಮಿಕರ ಸಂಘಟನೆ ಮತ್ತು ಗ್ಲಾಸ್ಗೋ ನಗರಾಡಳಿತದ ಮಧ್ಯೆ ಮಾತುಕತೆ ಮುರಿದುಬಿದ್ದ ಕಾರಣ, ನೌಕರರು ಮುಷ್ಕರ ಹೂಡಿದ್ದಾರೆ. ಇದರ ಭಾಗವಾಗಿ ನಗರದ ರಸ್ತೆಗಳನ್ನು ಸೋಮವಾರ ಸ್ವಚ್ಛಗೊಳಿಸಿರಲಿಲ್ಲ. ಹೀಗಾಗಿ ನಗರದ ರಸ್ತೆಗಳಲ್ಲಿ ಕಸವು ರಾಶಿಯಾಗಿತ್ತು. ಶೃಂಗಸಭೆ ನಡೆಯುತ್ತಿರುವ ಸ್ಥಳಕ್ಕೆ ಹೋಗಲು ವಿಶ್ವದ ಹಲವು ದೇಶಗಳ ನಾಯಕರು ಇದರಿಂದ ತೊಂದರೆ ಎದುರಿಸಬೇಕಾಯಿತು. ಮುಷ್ಕರವು ಈ ವಾರ ಪೂರ್ತಿ ಮುಂದುವರಿಯುವ ಸಾಧ್ಯತೆ ಇದೆ.

120 ನಾಯಕರಿಗೆ ಸ್ವಾಗತ

ಗ್ಲಾಸ್ಗೋನಲ್ಲಿ ಆರಂಭವಾಗಿರುವ ಅಂತರರಾಷ್ಟ್ರೀಯ ಹವಾಮಾನ ವೈಪರೀತ್ಯ ಶೃಂಗಸಭೆಯಲ್ಲಿ ಭಾಗಿಯಾಗಲು ಬಂದ ವಿಶ್ವದ ನಾಯಕರನ್ನು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಮತ್ತು ವಿಶ್ವ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಆ್ಯಂಟೋನಿಯೊ ಗುಟೆರಸ್ ಅವರು ಸ್ವಾಗತಿಸಿದರು.

12 ದಿನಗಳ ಈ ಶೃಂಗಸಭೆಯಲ್ಲಿ ವಿಶ್ವದ ವಿವಿಧ ದೇಶಗಳ 120 ನಾಯಕರು ಭಾಗಿಯಾಗಲಿದ್ದಾರೆ. ಇವರೆಲ್ಲರನ್ನೂ ಬರಮಾಡಿಕೊಳ್ಳುವ ಸ್ವಾಗತ ಕಾರ್ಯಕ್ರಮವು ಹಲವು ಗಂಟೆಗಳ ಕಾಲ ನಡೆಯಲಿದೆ. ಮಂಗಳವಾರವೂ ಕೆಲವು ನಾಯಕರು ಬಂದು ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ.

ಶೃಂಗಸಭೆಯನ್ನು ವರದಿ ಮಾಡಲು ಸಾವಿರಾರು ಪತ್ರಕರ್ತರು ಸೇರಿದ್ದಾರೆ. ಕಿಕ್ಕಿರಿದು ತುಂಬಿದ್ದ ಕಾರಣ ಹಲವು ಪತ್ರಕರ್ತರು ತಮ್ಮ ಹೋಟೆಲ್‌ಗಳಿಗೆ ಹಿಂತಿರುಗಿ, ಅಲ್ಲಿಂದಲೇ ಕೆಲಸ ಮಾಡಿದ್ದಾರೆ.


ಬಾಂಗ್ಲಾದೇಶ ಪ್ರಧಾನಿ ಶೇಕ್ ಹಸೀನಾ ಅವರನ್ನು ಮೊಣಕೈ ತಾಗಿಸುವ ಮೂಲಕ ಶೃಂಗಸಭೆಗೆ ಬರಮಾಡಿಕೊಂಡ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ –ರಾಯಿಟರ್ಸ್ ಚಿತ್ರ

ಭಾರತಕ್ಕೆ ನೆರವಿಗೆ ಬ್ರಿಟನ್ ಗ್ಯಾರಂಟಿ

ಭಾರತದಲ್ಲಿ ವಾಹನಗಳಿಂದಾಗುವ ವಾಯುಮಾಲಿನ್ಯ ನಿಯಂತ್ರಣವನ್ನು ಕಡಿತ ಮಾಡಲು ತೆಗೆದುಕೊಳ್ಳುವ ಕ್ರಮಗಳಿಗೆ ಅಗತ್ಯವಿರುವ ಹಣಕಾಸು ನೆರವಿಗೆ ಜಾಮೀನು ನೀಡುವುದಾಗಿ ಬ್ರಿಟನ್ ಇಲ್ಲಿ ಘೋಷಿಸಿದೆ.

ವಿದ್ಯುತ್ ಚಾಲಿತ ವಾಹನಗಳ ಬಳಕೆಗೆ ಉತ್ತೇಜನಕ್ಕೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಭಾರತವು ವಿಶ್ವಬ್ಯಾಂಕ್‌ನಿಂದ ನೆರವು ಪಡೆಯಬೇಕಿದೆ. ಇದಕ್ಕೆ ಜಾಮೀನು ಇರದಿದ್ದ ಕಾರಣ ಇನ್ನೂ ₹7,681 ಕೋಟಿಯಷ್ಟು ಆರ್ಥಿಕ ನೆರವು ಭಾರತಕ್ಕೆ ದೊರೆತಿಲ್ಲ. ಈ ನೆರವನ್ನು ನೀಡಲು ವಿಶ್ವಬ್ಯಾಂಕ್‌ಗೆ ನಾವು ಜಾಮೀನು ನೀಡುತ್ತೇವೆ ಎಂದು ಬ್ರಿಟನ್ ಹೇಳಿದೆ.

ವಿಶ್ವದಲ್ಲಿ ಅತ್ಯಂತ ಹೆಚ್ಚು ಹಸಿರುಮನೆ ಅನಿಲಗಳನ್ನು ಹೊರಸೂಸುವ ನಾಲ್ಕನೇ ರಾಷ್ಟ್ರ ರಷ್ಯಾ. ಇದನ್ನು ತಡೆಗಟ್ಟಲು ರಷ್ಯಾ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ
ಅಮೆರಿಕ

ಹವಾಮಾನ ವೈಪರೀತ್ಯ ನಿಯಂತ್ರಿಸಲು ಚೀನಾ ತೆಗೆದುಕೊಂಡ ಕ್ರಮಗಳು ಒಪ್ಪತಕ್ಕದ್ದಲ್ಲ. ಈ ಗುರಿಯನ್ನು ಮುಟ್ಟಬೇಕೆಂದರೆ ಚೀನಾ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು
ಜೇಕ್ ಸಲೀವಾನ್, ಅಮೆರಿಕದ ಅಧ್ಯಕ್ಷರ ರಾಷ್ಟ್ರೀಯ ಭದ್ರತಾ ಸಲಹೆಗಾರ

ಹಸಿರುಮನೆ ಅನಿಲಗಳ ಹೊರಸೂಸುವಿಕೆ ಮಟ್ಟವನ್ನು ಶೇ 80ರಷ್ಟು ಕಡಿಮೆ ಮಾಡಲು ರಷ್ಯಾ ಕಾರ್ಯಕ್ರಮ ಹಾಕಿಕೊಂಡಿದೆ. ಈ ಗುರಿಯನ್ನು 2060ಕ್ಕೆ ಮುಟ್ಟಲಾಗುತ್ತದೆ
ವ್ಲಾಡಿಮಿರ್ ಪುಟಿನ್, ರಷ್ಯಾ ಅಧ್ಯಕ್ಷ

ಹವಾಮಾನ ವೈಪರೀತ್ಯವನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸುವ ಗುರಿ ತಲುಪಲು ಗ್ಲಾಸ್ಗೋ ವಿಫಲವಾದರೆ, ಬೇರೆಲ್ಲವೂ ವಿಫಲವಾದಂತೆಯೇ ಸರಿ
ಬೋರಿಸ್ ಜಾನ್ಸನ್, ಬ್ರಿಟನ್ ಪ್ರಧಾನಿ

ನಮಗೆ ನೀಡಬೇಕಿದ್ದ ಭದ್ರತೆಯನ್ನು ಕೊನೆಯ ಕ್ಷಣದಲ್ಲಿ ಕಡಿತ ಮಾಡಲಾಗಿದೆ. ಈ ಕಾರಣದಿಂದ ಗ್ಲಾಸ್ಗೋ ಹವಾಮಾನ ವೈಪರೀತ್ಯ ಶೃಂಗಸಭೆಗೆ ನಾನು ಹಾಜರಾಗುವುದಿಲ್ಲ
ರೆಸಿಪ್ ತಯ್ಯಪೆ ಎರ್ಡೋಗನ್, ಟರ್ಕಿ ಅಧ್ಯಕ್ಷ

ಸುದ್ದಿ 2 ನಿಮಿಷ

‘ತಾಲಿಬಾನ್ ಭಾರತದತ್ತ ಬಂದರೆ ವೈಮಾನಿಕ ದಾಳಿಗೆ ಸಜ್ಜು’

ಲಖನೌ (ಪಿಟಿಐ): ತಾಲಿಬಾನ್‌ನಿಂದಾಗಿ ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನ ತಲ್ಲಣಗೊಂಡಿವೆ. ಆದರೆ, ಈ ಬಂಡುಕೋರರ ಗುಂಪು ಭಾರತದತ್ತ ಬಂದರೆ ವೈಮಾನಿಕ ದಾಳಿಗೆ ಸಜ್ಜಾಗಿದ್ದೇವೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಭಾನುವಾರ ಹೇಳಿದರು.

ಇಲ್ಲಿ ನಡೆದ ಸಾಮಾಜಿಕ ಪ್ರತಿನಿಧಿ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಪ್ರಧಾನಿ ನಾಯಕತ್ವದಲ್ಲಿ ಭಾರತ ಶಕ್ತಿಶಾಲಿಯಾಗಿದ್ದು ಯಾವುದೇ ದೇಶವೂ ಭಾರತದತ್ತ ತನ್ನ ದೃಷ್ಟಿ ಹಾಯಿಸುವ ಧೈರ್ಯ ಹೊಂದಿಲ್ಲ. ಒಂದು ವೇಳೆ ಭಾರತದ ತಂಟೆಗೆ ಹೋದರೆ ವೈಮಾನಿಕ ದಾಳಿ ಎದುರಿಸಬೇಕಾಗುತ್ತದೆ ಎಂಬುದು ತಾಲಿಬಾನ್‌ಗೆ ಗೊತ್ತಿದೆ’ ಎಂದರು. ಉತ್ತರ ಪ್ರದೇಶದ ಬಿಜೆಪಿ ಘಟಕವು ಯೋಗಿ ಅವರ ಹೇಳಿಕೆಯ ಬಗ್ಗೆ ಪ್ರಕಟಣೆಯೊಂದನ್ನು ಹೊರಡಿಸಿದೆ.



ರೋಹಿಂಗ್ಯಾ ನಾಯಕ ಮೊಹಿಬ್ ಹತ್ಯೆ ಬಳಿಕ 172 ಮಂದಿ ಬಂಧನ

ಕಾಕ್ಸ್ ಬಜಾರ್, (ಬಾಂಗ್ಲಾದೇಶ) (ಎಎಫ್‌ಪಿ): ಕಾಕ್ಸ್ ಬಜಾರ್ ಬಳಿಯ ನಿರಾಶ್ರಿತರ ಶಿಬಿರದಲ್ಲಿ ರೋಹಿಂಗ್ಯಾ ಸಮುದಾಯದ ನಾಯಕ ಮೊಹಿಬ್ ಉಲ್ಲಾ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಿದ ಬಳಿಕ ಬಾಂಗ್ಲಾದೇಶದ ಪೊಲೀಸರು ಆ ಸಮುದಾಯದ 172 ಮಂದಿಯನ್ನು ಬಂಧಿಸಿದ್ದಾರೆ.

ನಿರಾಶ್ರಿತರ ಶಿಬಿರದಲ್ಲಿದ್ದ ಮೊಹಿಬ್ ಉಲ್ಲಾ ಅವರನ್ನು ಸೆಪ್ಟೆಂಬರ್‌ನಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ವಕೀಲರಾಗಿದ್ದ ಮೊಹಿಬ್ ಅವರಿಗೆ ಹತ್ಯೆಗೂ ಮುನ್ನ ಅರಕನ್ ರೋಹಿಂಗ್ಯಾ ಸಾಲ್ವೇಶನ್ ಆರ್ಮಿ ಗುಂಪಿನಿಂದ ಬೆದರಿಕೆಯ ಕರೆಗಳು ಬಂದಿದ್ದವು ಎನ್ನಲಾಗಿದೆ.

‘ಹತ್ಯೆಯ ನಂತರ ನಡೆದ ಕಾರ್ಯಾಚರಣೆಯಲ್ಲಿ ರೋಹಿಂಗ್ಯಾ ಸಮುದಾಯದ 172 ಮಂದಿಯನ್ನು ಬಂಧಿಸಲಾಗಿದ್ದು, ಅದರಲ್ಲಿ 10 ಮಂದಿ ಮೊಹಿಬ್ ಅವರ ಹತ್ಯೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಶಂಕಿಸಲಾಗಿದೆ’ ಎಂದು ಸಶಸ್ತ್ರ ಪೊಲೀಸ್ ಬೆಟಾಲಿಯನ್ ಕಮಾಂಡರ್ ನೈಮುಲ್ ಹಕ್ ಹೇಳಿದ್ದಾರೆ.

27ರಿಂದ ಹೋರಾಟ ತೀವ್ರ: ರೈತರ ಎಚ್ಚರಿಕೆ

ನವದೆಹಲಿ: ಕೇಂದ್ರ ಸರ್ಕಾರ ಜಾರಿ ಮಾಡಿರುವ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯದೇ ಇದ್ದರೆ ನವೆಂಬರ್ ಕೊನೆಯಿಂದ ಹೋರಾಟವನ್ನು ತೀವ್ರಗೊಳಿಸುತ್ತೇವೆ ಎಂದು ಪ್ರತಿಭಟನೆ ನಿರತ ರೈತರು ಕೇಂದ್ರವನ್ನು ಎಚ್ಚರಿಸಿದ್ದಾರೆ.

ದೆಹಲಿಯ ಗಡಿಗಳಲ್ಲಿ ರೈತರು ಪ್ರತಿಭಟನೆ ಆರಂಭಿಸಿ ನವೆಂಬರ್ 26ಕ್ಕೆ ಒಂದು ವರ್ಷ ತುಂಬಲಿದೆ.

ಕೇಂದ್ರ ಸರ್ಕಾರಕ್ಕೆ ನ.26ರ ವರೆಗೆ ಸಮಯಾವಕಾಶವಿದೆ. ಅಷ್ಟರಲ್ಲಿ ಕೃಷಿ ನೀತಿಗಳನ್ನು ಹಿಂಪಡೆಯದಿದ್ದರೆ ನ.27ರಂದು ರೈತರು ಹಳ್ಳಿಗಳಿಂದ ಟ್ರ್ಯಾಕ್ಟರ್‌ಗಳಲ್ಲಿ ದೆಹಲಿ ಗಡಿಗಳನ್ನು ತಲುಪಿ ಪ್ರತಿಭಟನೆಯನ್ನು ಬಲಪಡಿಸಲಿದ್ದಾರೆ ಎಂದು ಪ್ರತಿಭಟನೆ ಮುನ್ನಡೆಸುತ್ತಿರುವ ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ರಾಕೇಶ್ ಟಿಕಾಯತ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಆದೇಶದ ಬಳಿಕ ದೆಹಲಿ ಪೊಲೀಸರು ಪ್ರತಿಭಟನಾ ಸ್ಥಳಗಳಾದ ಟಿಕ್ರಿ ಮತ್ತು ಗಾಜಿಪುರ ಗಡಿಗಳಲ್ಲಿ ಇರಿಸಲಾಗಿದ್ದ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಿದ್ದರು. ಇದರಿಂದಾಗಿ, ಪ್ರತಿಭಟನಕಾರರನ್ನು ಒತ್ತಾಯವಾಗಿ ಅಲ್ಲಿಂದ ತೆರವುಗೊಳಿಸುತ್ತಿರುವ ಕುರಿತು ಅನುಮಾನಗಳು ಮೂಡಿದ್ದವು.

ಈ ಹಿನ್ನೆಲೆಯಲ್ಲಿ ಟಿಕಾಯತ್ ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ‘ಗಡಿಗಳಿಂದ ಪ್ರತಿಭಟನಕಾರರನ್ನು ಒತ್ತಾಯವಾಗಿ ತೆರವುಗೊಳಿಸುವ ಪ್ರಯತ್ನಗಳು ನಡೆದರೆ, ದೇಶದ ಎಲ್ಲಾ ಸರ್ಕಾರಿ ಕಚೇರಿಗಳನ್ನು ನಾವು ಧಾನ್ಯದ ಮಾರುಕಟ್ಟೆಯಾಗಿ ಪರಿವರ್ತಿಸುತ್ತೇವೆ. ಪ್ರತಿಭಟನಾ ಸ್ಥಳಗಳಲ್ಲಿ ರೈತರ ಟೆಂಟುಗಳನ್ನು ಪೊಲೀಸರು ತೆರವುಗೊಳಿಸುತ್ತಾರೆ ಎಂಬುದು ನಮಗೆ ಗೊತ್ತಾಗಿದೆ. ಅಂಥ ಪ್ರಯತ್ನಗಳು ನಡೆದರೆ ಪೊಲೀಸ್ ಠಾಣೆಗಳಲ್ಲಿ ಮತ್ತು ಜಿಲ್ಲಾ ಕಚೇರಿಗಳಲ್ಲಿ ರೈತರು ಟೆಂಟುಗಳನ್ನು ಹಾಕುತ್ತಾರೆ’ ಎಂದಿದ್ದಾರೆ.

ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಆಗ್ರಹಿಸಿ, ದೆಹಲಿ ಗಡಿಗಳಾದ ಸಿಂಘು, ಟಿಕ್ರಿ ಮತ್ತು ಗಾಜಿಪುರ ಗಡಿಗಳಲ್ಲಿ ಸಾವಿರಾರು ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ.

‘ರೈತರ ಜೊತೆ ಮಾತನಾಡುವುದಲ್ಲ; ಅವರ ಮಾತುಗಳನ್ನು ಕೇಳಿಸಿಕೊಳ್ಳಿ’



ನವದೆಹಲಿ: ‘ಜನರ ಜೊತೆಗೆ ಮಾತನಾಡುವ ಬದಲಿಗೆ ಅವರ ಕಷ್ಟಗಳನ್ನು ಅರ್ಥಮಾಡಿಕೊಳ್ಳಲು ಅವರ ಮಾತುಗಳನ್ನು ಆಲಿಸಿ’ ಎಂದು ಸಂಸದ, ಬಿಜೆಪಿ ಮುಖಂಡ ವರುಣ್ ಗಾಂಧಿ ಪಕ್ಷದ ಮುಖಂಡರಿಗೆ ಸಲಹೆ ನೀಡಿದ್ದಾರೆ.

ತಿದ್ದುಪಡಿಯಾಗಿರುವ ಮೂರು ಕೃಷಿ ಕಾಯ್ದೆಗಳ ವಾಪಸಾತಿಗೆ ಆಗ್ರಹಪಡಿಸಿ ಪ್ರತಿಭಟಿಸುತ್ತಿರುವ ಕೃಷಿಕ ಸಂಘಟನೆಗಳು ಮತ್ತು ಕೇಂದ್ರ ಸರ್ಕಾರದ ನಡುವಿನ ತಿಕ್ಕಾಟ ಮುಂದುವರಿದಿರುವಂತೆಯೇ ಈ ಸಲಹೆ ಕೇಳಿಬಂದಿದೆ.

ಲೋಕಸಭೆ ಕ್ಷೇತ್ರ ಪಿಲಿಭಿಟ್ ವ್ಯಾಪ್ತಿಯಲ್ಲಿ ಕೃಷಿಕರನ್ನು ಭೇಟಿಯಾದ ಬಳಿಕ ಅವರು ಮಾತನಾಡುತ್ತಿದ್ದರು. ಜನರ ಕಷ್ಟ ತಿಳಿಯಲು ಅವರ ಮಾತುಗಳನ್ನು ಕೇಳಿಸಿಕೊಳ್ಳಬೇಕು. ಕನಿಷ್ಠ ಬೆಂಬಲ ಬೆಲೆ ಸಿಗಲಿದೆ ಎಂಬುದಕ್ಕೆ ಕಾನೂನು ರಕ್ಷಣೆ ಬೇಕಾಗಿದೆ. ಇದರಿಂದ ಮಾತ್ರವೇ ಸಗಟು ಮಾರುಕಟ್ಟೆಯಲ್ಲಿ ರೈತರ ಶೋಷಣೆ ತಪ್ಪಲಿದೆ ಎಂದು ಹೇಳಿದರು.

ಕಾನೂನಾತ್ಮಕ ರಕ್ಷಣೆ ಇಲ್ಲದಿದ್ದಲ್ಲಿ ರೈತರ ಶೋಷಣೆ ಮುಂದುವರಿಯಲಿದೆ. ಇದರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಅಗತ್ಯ ಎಂದು ಮೂರು ಬಾರಿ ಲೋಕಸಭೆಗೆ ಆಯ್ಕೆಯಾಗಿರುವ ವರುಣ್ ಗಾಂಧಿ ಪ್ರತಿಪಾದಿಸಿದರು.


ಹಣ ಅಕ್ರಮ ವರ್ಗಾವಣೆ ಪ್ರಕರಣ

ಅಮಾನತುಗೊಂಡಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರ ಹೇಳಿಕೆಗಳು ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿ ವಿಚಾರಣೆ ನಡೆಸಬೇಕಿದೆ.

ಅನಿಲ್ ದೇಶ್‌ಮುಖ್ ಇ.ಡಿ ಎದುರು ಹಾಜರು

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶ್‌ಮುಖ್ ಅವರು ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಸೋಮವಾರ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ವಿಚಾರಣೆಗೆ ಹಾಜರಾದರು. ಈ ಹಿಂದೆ ಐದು ಬಾರಿ ಸಮನ್ಸ್ ಜಾರಿಯಾಗಿದ್ದರೂ ಅವರು ವಿಚಾರಣೆಗೆ ಗೈರು ಹಾಜರಾಗಿದ್ದರು.

71 ವರ್ಷದ ದೇಶ್‌ಮುಖ್ ಅವರು ದಕ್ಷಿಣ ಮುಂಬೈನ ಬಲ್ಲಾರ್ಡ್ ಎಸ್ಟೇಟ್ ಪ್ರದೇಶದಲ್ಲಿರುವ ಇ.ಡಿ ಕಚೇರಿಗೆ ಬೆಳಿಗ್ಗೆ 11.40ರ ವೇಳೆಗೆ ತಮ್ಮ ವಕೀಲರು, ಅವರ ಸಹಾಯಕರ ಜೊತೆಗೆ ಹಾಜರಾದರು. ಸಮನ್ಸ್ ರದ್ದುಪಡಿಸಲು ಕೋರಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ಕಳೆದ ವಾರ ತಿರಸ್ಕರಿಸಿತ್ತು.


ಅನಿಲ್ ದೇಶ್‌ಮುಖ್

ಇ.ಡಿ ಅಧಿಕಾರಿಗಳು ಎನ್‌ಸಿಪಿ ನಾಯಕನ ಹೇಳಿಕೆ ದಾಖಲಿಸುವರು. ಪೊಲೀಸ್ ಇಲಾಖೆಯಲ್ಲಿ ₹ 100 ಕೋಟಿ ಲಂಚ ವಸೂಲಿ, ಸುಲಿಗೆ ಆರೋಪ ಕುರಿತ ಪ್ರಕರಣಕ್ಕೆ ಸಂಬಂಧಿಸಿ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಕ್ರಿಮಿನಲ್ ವಿಚಾರಣೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ವಿಚಾರಣೆಗೆ ತೆರಳುವ ಮುನ್ನ ವಿಡಿಯೊ ಸಂದೇಶ ಬಿಡುಗಡೆ ಮಾಡಿದ್ದ ದೇಶ್‌ಮುಖ್ ಅವರು, ‘ತನಿಖೆಗೆ ಸಹಕರಿಸುತ್ತಿಲ್ಲ ಎಂಬ ವರದಿಗಳಿಗೆ ಆಧಾರವಿಲ್ಲ. ಹಿಂದೆಯೂ ಸಿಬಿಐ ಅಧಿಕಾರಿಗಳ ಎದುರು ಎರಡು ಬಾರಿ ಹಾಜರಾಗಿದ್ದೆ. ನನ್ನ ಅರ್ಜಿ ಈಗ ಸುಪ್ರೀಂ ಕೋರ್ಟ್‌ನಲ್ಲಿದೆ. ಅದಕ್ಕೆ ಇನ್ನಷ್ಟು ಸಮಯ ತಗಲುವ ಕಾರಣ ಈಗ ಸ್ವಯಂಪ್ರೇರಿತವಾಗಿ ವಿಚಾರಣೆಗೆ ತೆರಳುತ್ತಿದ್ದೇನೆ’ ಎಂದು ಹೇಳಿದ್ದರು.

ಆರ್ಯನ್ ಖಾನ್‌ಗೆ ಡ್ರಗ್ಸ್ ಸರಬರಾಜು ಆರೋಪದ ಪ್ರಕರಣ

ವಾಟ್ಸ್‌ಆ್ಯಪ್ ಚಾಟ್ ಪುರಾವೆ ಸಾಲದು: ನ್ಯಾಯಾಲಯ

ಮುಂಬೈ (ಪಿಟಿಐ): ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪ್ರಕರಣದ ಆರೋಪಿ ಆಚಿತ್ ಕುಮಾರ್ ಅವರು ಬಾಲಿವುಡ್ ಸೂಪರ್ ಸ್ಟಾರ್ ಶಾರುಕ್ ಖಾನ್ ಮಗ, ಪ್ರಕರಣದ ಇನ್ನೊಬ್ಬ ಆರೋಪಿ ಆರ್ಯನ್ ಖಾನ್‌ಗೆ ಡ್ರಗ್ಸ್ ಪೂರೈಸಿದ್ದಾರೆ ಎಂಬುದನ್ನು ವಾಟ್ಸ್‌ಆ್ಯಪ್ ಚಾಟ್ ಆಧಾರದಲ್ಲಿ ನಿರ್ಧರಿಸಲಾಗದು ಎಂದು ವಿಶೇಷ ನ್ಯಾಯಾಲಯವು ಹೇಳಿದೆ. ಆಚಿತ್ ಕುಮಾರ್‌ಗೆ ಕಳೆದ ವಾರ ಜಾಮೀನು ಮಂಜೂರು ಮಾಡಿದ ಆದೇಶದಲ್ಲಿ ಈ ಬಗೆಗಿನ ವಿವರಗಳಿವೆ.

ಮಾದಕ ದ್ರವ್ಯ ನಿಯಂತ್ರಣ ಮಂಡಳಿಯ (ಎನ್‌ಸಿಬಿ) ಪಂಚನಾಮೆ ದಾಖಲೆಗಳ ಸತ್ಯಾಸತ್ಯತೆ ಬಗ್ಗೆಯೂ ಕೋರ್ಟ್ ಪ್ರಶ್ನೆಗಳನ್ನು ಎತ್ತಿದ್ದು, ಅವುಗಳು ಅನುಮಾನಾಸ್ಪದವಾಗಿ ತೋರುತ್ತಿವೆ ಎಂದಿದೆ. ನ್ಯಾಯಾಲಯದ ವಿವರವಾದ ಆದೇಶದ ಪ್ರತಿ ಭಾನುವಾರ ಲಭ್ಯವಾಗಿದೆ.



ನಾರ್ಕೋಟಿಕ್ಸ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟೆನ್ಸ್ (ಎನ್‌ಡಿಪಿಎಸ್) ಕಾಯ್ದೆಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಗೆ ನಿಯೋಜಿತವಾಗಿರುವ ವಿಶೇಷ ನ್ಯಾಯಾಧೀಶ ವಿ.ವಿ ಪಾಟೀಲ್ ಅವರು ಆಚಿತ್‌ಗೆ ಶನಿವಾರ ಜಾಮೀನು ಮಂಜೂರು ಮಾಡಿದ್ದರು.

ಆರ್ಯನ್ ಖಾನ್ ಅವರೊಂದಿಗಿನ ವಾಟ್ಸ್‌ಆ್ಯಪ್ ಚಾಟ್ ಹೊರತುಪಡಿಸಿದರೆ, ಅವರು ಮತ್ತು ಅರ್ಬಾಜ್ ಖಾನ್ ಜತೆಗೆ ಆಚಿತ್ ಸಂಪರ್ಕದಲ್ಲಿದ್ದರು ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ ಎಂದು ನ್ಯಾಯಾಲಯ ಹೇಳಿದೆ.

ಡ್ರಗ್ಸ್ ಪ್ರಕರಣದಲ್ಲಿ ಅಕ್ಟೋಬರ್ 3ರಂದು ಬಂಧಿತರಾಗಿದ್ದ ಆರ್ಯನ್ ಖಾನ್ ಮತ್ತು ಮರ್ಚೆಂಟ್ ಅವರಿಗೆ ಬಾಂಬೆ ಹೈಕೋರ್ಟ್ ಕಳೆದ ಗುರುವಾರ ಜಾಮೀನು ನೀಡಿತ್ತು.

ಮೊದಲನೇ ಆರೋಪಿ ಆರ್ಯನ್ ಖಾನ್ ಅಥವಾ ಇತರರಿಗೆ ಅರ್ಜಿದಾರ ಕುಮಾರ್ ಡ್ರಗ್ಸ್ ಸರಬರಾಜು ಮಾಡಿದ್ದಾರೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ಆದ್ದರಿಂದ ಅರ್ಜಿದಾರ ಜಾಮೀನಿಗೆ ಅರ್ಹ ಎಂದು ಆದೇಶದಲ್ಲಿ ತಿಳಿಸಲಾಗಿದೆ. 17ನೇ ಆರೋಪಿ ಆಚಿತ್ ಅವರನ್ನು ಅಕ್ಟೋಬರ್ 6ರಂದು ಬಂಧಿಸಲಾಗಿತ್ತು.

ಆಚಿತ್ ನಿವಾಸದಿಂದ 2.6 ಗ್ರಾಂ ಗಾಂಜಾ ವಶಪಡಿಸಿಕೊಂಡಿರುವುದಾಗಿ ಎನ್‌ಸಿಬಿ ಹೇಳಿಕೊಂಡಿತ್ತು. ಎನ್‌ಸಿಬಿ ಪ್ರಕಾರ, ಆಚಿತ್ ಅವರು ಆರ್ಯನ್ ಖಾನ್ ಮತ್ತು ಮರ್ಚೆಂಟ್‌ಗೆ ಗಾಂಜಾ ಮತ್ತು ಚರಸ್ ಅನ್ನು ಪೂರೈಸುತ್ತಿದ್ದರು. ಆಚಿತ್ ಮತ್ತು ಆರ್ಯನ್ ಖಾನ್ ವಾಟ್ಸ್‌ಆ್ಯಪ್ ಚಾಟ್ ಮೂಲಕ ಡ್ರಗ್ಸ್ ವ್ಯವಹಾರ ನಡೆಸಿದ್ದರು ಎಂದು ತೋರಿಸಲು ತನ್ನ ಬಳಿ ಸಾಕ್ಷ್ಯವಿದೆ ಎಂದು ಎನ್‌ಸಿಬಿ ವಾದಿಸಿತ್ತು.

ಆಚಿತ್ ಅವರು ನಿರಪರಾಧಿ ಮತ್ತು ಅವರ ವಿರುದ್ಧದ ಎಲ್ಲಾ ಆರೋಪಗಳು ಸುಳ್ಳು ಮತ್ತು ಆಧಾರರಹಿತ ಎಂದು ಅವರ ಪರ ವಕೀಲ ಅಶ್ವಿನ್ ಥೂಲ್ ವಾದಿಸಿದ್ದರು.

ದಿನದ ಬೆಳವಣಿಗೆ

- ಎನ್‌ಸಿಬಿಯ ಮುಂಬೈ ವಲಯ ನಿರ್ದೇಶಕ ಸಮೀರ್ ವಾಂಖೆಡೆ ಅವರು ಎನ್‌ಸಿಬಿಯ ಕೇಂದ್ರ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳನ್ನು ಸೋಮವಾರ ಭೇಟಿ ಆಗಿದ್ದಾರೆ. ಕಚೇರಿ ಕೆಲಸದ ನಿಮಿತ್ತ ಅವರು ಎನ್‌ಸಿಬಿ ಕಚೇರಿಗೆ ಭೇಟಿ ಕೊಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎನ್‌ಸಿಬಿ ಮಹಾ ನಿರ್ದೇಶಕ ಎಸ್.ಎನ್. ಪ್ರಧಾನ್ ಅಥವಾ ಉಪ ಮಹಾ ನಿರ್ದೇಶಕ ಜ್ಞಾನೇಶ್ವರ ಸಿಂಗ್ ಅವರನ್ನು ಸಮೀರ್ ಭೇಟಿ ಆಗಿದ್ದಾರೆಯೇ ಎಂಬುದು ತಿಳಿದು ಬಂದಿಲ್ಲ. ಆರ್ಯನ್ ಪ್ರಕರಣದಲ್ಲಿ ಲಂಚಕ್ಕೆ ಬೇಡಿಕೆ ಇರಿಸಿದ ಆರೋಪ ಸಮೀರ್ ಅವರ ಮೇಲೆ ಇದೆ.
- ಸಮೀರ್ ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರಾಷ್ಟ್ರೀಯ ಆಯೋಗದ ಅಧ್ಯಕ್ಷರಾದ ವಿಜಯಾ ಸಂಪಲ ಅವರನ್ನು ಭೇಟಿ ಆಗಿದ್ದಾರೆ. ಆಯೋಗಕ್ಕೆ ತಮ್ಮ ಜಾತಿ ಪ್ರಮಾಣಪತ್ರಗಳನ್ನು ಸಮೀರ್ ಸಲ್ಲಿಸಿದ್ದಾರೆ. ‘ಅವರು ಸಲ್ಲಿಸಿದ ದಾಖಲೆಗಳನ್ನು ಮಹಾರಾಷ್ಟ್ರ ಸರ್ಕಾರದ ಮೂಲಕ ದೃಢಪಡಿಸಿಕೊಳ್ಳಲಾಗುವುದು. ದಾಖಲೆಗಳು ಸಿಂಧು ಎಂದು ಕಂಡು ಬಂದರೆ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ’ ಎಂದು ವಿಜಯ ಅವರು ತಿಳಿಸಿದ್ದಾರೆ. ಸಮೀರ್ ಅವರು ಮುಸ್ಲಿಂ, ಆದರೆ, ನಕಲಿ ಜಾತಿ ಪ್ರಮಾಣಪತ್ರದ ಮೂಲಕ ಅವರು ಮೀಸಲಾಗಿ ಪಡೆದುಕೊಂಡಿದ್ದಾರೆ ಎಂದು ಮಹಾರಾಷ್ಟ್ರದ ಸಚಿವ ನವಾಬ್ ಮಲಿಕ್ ಆರೋಪಿಸಿದ್ದಾರೆ.
- ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಪತ್ನಿ ಅಮೃತಾ ಫಡಣವೀಸ್ ಅವರು ಡ್ರಗ್ಸ್ ವ್ಯಾಪಾರಿ ಜತೆ ಇರುವ ಚಿತ್ರವನ್ನು ಮಹಾರಾಷ್ಟ್ರ ಸಚಿವ ಮತ್ತು ಎನ್‌ಸಿಪಿ ನಾಯಕ ನವಾಬ್ ಮಲಿಕ್ ಅವರು ಸೋಮವಾರ ಟ್ವೀಟ್ ಮಾಡಿದ್ದಾರೆ. ‘ಮಲಿಕ್ ಅವರು ಭೂಗತ ಜಗತ್ತಿನ ಜೊತೆ ಹೊಂದಿರುವ ನಂಟನ್ನು ಬಹಿರಂಗಪಡಿಸುತ್ತೇನೆ’ ಎಂದು ಫಡಣವೀಸ್ ತಿರುಗೇಟು ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಂಜಾಬ್: ಯೂನಿಟ್ ವಿದ್ಯುತ್‌ಗೆ ₹ 3 ಕಡಿತ, ತಕ್ಷಣದಿಂದ ಜಾರಿ

ಚಂಡೀಗಡ (ಪಿಟಿಐ): ಗೃಹಬಳಕೆ ಸಂಪರ್ಕಗಳಿಗೆ ಅನ್ವಯಿಸಿ ವಿದ್ಯುತ್ ದರವನ್ನು ಯೂನಿಟ್‌ಗೆ ₹ 3 ಇಳಿಸಲು ಪಂಜಾಬ್‌ನ ಸಚಿವ ಸಂಪುಟ ತೀರ್ಮಾನಿಸಿದೆ. ವಿಧಾನಸಭೆಗೆ ಚುನಾವಣೆ ಕೆಲವೇ ತಿಂಗಳಿರುವಾಗ ಈ ತೀರ್ಮಾನ ಹೊರಬಿದ್ದಿದೆ.

ಸಚಿವ ಸಂಪುಟ ಸಭೆಯ ನಂತರ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಈ ನಿರ್ಧಾರ ಪ್ರಕಟಿಸಿದರು. ವಿದ್ಯುತ್ ದರವನ್ನು ಯೂನಿಟ್‌ಗೆ ₹ 3 ಇಳಿಸುವುದರಿಂದ ಬೊಕ್ಕಸಕ್ಕೆ ವಾರ್ಷಿಕ ₹ 3,316 ಕೋಟಿ ಹೊರೆ ಬೀಳಲಿದೆ.

ಜನತೆಗೆ ಇದು ದೀಪಾವಳಿ ಕೊಡುಗೆ. ತಕ್ಷಣದಿಂದಲೇ ಇದು ಜಾರಿಗೆ ಬರಲಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಗೃಹಬಂಧನದಲ್ಲಿ ಮೆಹಬೂಬಾ ಮುಫ್ತಿ: ಪಿಡಿಪಿ ಹೇಳಿಕೆ

ಶ್ರೀನಗರ: ‘ಕಳೆದ ವಾರ ಭದ್ರತಾ ಪಡೆಗಳು ಮತ್ತು ಉಗ್ರರ ನಡುವಿನ ಗುಂಡಿನ ಚಕಮಕಿಯಲ್ಲಿ ಮೃತಪಟ್ಟ ಯುವಕನ ಕುಟುಂಬವನ್ನು ಭೇಟಿ ಮಾಡಲು ಅನಂತನಾಗ್‌ಗೆ ತೆರಳವುದನ್ನು ತಡೆಯಲು ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ (ಪಿಡಿಪಿ) ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರನ್ನು ಸರ್ಕಾರ ಗೃಹ ಬಂಧನದಲ್ಲಿ ಇರಿಸಿದೆ’ ಎಂದು ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.

‘ಮೆಹಬೂಬಾ ಅವರ ಮನೆಯ ಮುಖ್ಯಗೇಟ್‌ಗೆ ಪೊಲೀಸರು ಬೀಗ ಹಾಕಿದ್ದಾರೆ. ಮೆಹಬೂಬಾ ಅವರನ್ನು ನಗರದ ಗುಪ್ಕರ್ ಪ್ರದೇಶದಲ್ಲಿನ ಅವರ ‘ಫೇರ್‌ವ್ಯೂ’ ನಿವಾಸದಲ್ಲಿ ಗೃಹಬಂಧನದಲ್ಲಿ ಇರಿಸಲಾಗಿದ್ದು, ಹೊರಗೆ ಹೋಗಲು ಅವಕಾಶ ನೀಡಲಿಲ್ಲ’ ಎಂದು ಅವರು ದೂರಿದ್ದಾರೆ.

ಸಿಬಿಡಿಟಿ ದಾಳಿ: ₹100 ಕೋಟಿ ಕಪ್ಪು ಹಣ ಪತ್ತೆ

ನವದೆಹಲಿ (ಪಿಟಿಐ): ಬಿಹಾರ, ಜಾರ್ಖಂಡ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ರಸ್ತೆ ನಿರ್ಮಾಣ ಗುತ್ತಿಗೆದಾರರೊಬ್ಬರ ಮನೆ ಮೇಲೆ ಕೇಂದ್ರ ನೇರ ತೆರಿಗೆ ಮಂಡಳಿಯ (ಸಿಬಿಡಿಟಿ) ಅಧಿಕಾರಿಗಳು ಈಚೆಗೆ ದಾಳಿ ನಡೆಸಿದ್ದು, ಪೂರಕ ಆಧಾರವಿಲ್ಲದ ಸುಮಾರು ₹ 100 ಕೋಟಿ ಕಪ್ಪು ಹಣ ಪತ್ತೆ ಹಚ್ಚಿದ್ದಾರೆ.

ಸಿಬಿಡಿಟಿಯು ಆದಾಯ ತೆರಿಗೆ ಇಲಾಖೆಗೆ ನೀತಿಯನ್ನು ರೂಪಿಸಲಿದೆ. ಅ.27ರಂದು ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಮಹಾರಾಷ್ಟ್ರದಲ್ಲಿ ದಾಳಿ ನಡೆಯಿತು. ₹ 5.71 ಕೋಟಿ ನಗದು ಜಪ್ತಿ ಮಾಡಲಾಗಿದೆ. ವಿವಿಧ ಬ್ಯಾಂಕ್‌ಗಳ 10 ಲಾಕರ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಿಬಿಡಿಟಿ ಈ ಕುರಿತ ಹೇಳಿಕೆಯಲ್ಲಿ ತಿಳಿಸಿದೆ.

ದೇಶದೆಲ್ಲೆಡೆ ಸಂಪೂರ್ಣ ನಿಷೇಧ ಇಲ್ಲದಿರುವಾಗ ಪ.ಬಂಗಾಳ ಅದಕ್ಕೆ ಹೊರತಲ್ಲ: ಸುಪ್ರೀಂ

ಪಟಾಕಿ ನಿಷೇಧ: ಕಲ್ಕತ್ತಾ ಹೈಕೋರ್ಟ್ ಆದೇಶ ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಸಾಂಕ್ರಾಮಿಕದ ಮಧ್ಯೆ ವಾಯುಮಾಲಿನ್ಯವನ್ನು ಪರಿಶೀಲಿಸಲು ಈ ವರ್ಷ ಕಾಳಿ ಪೂಜೆ, ದೀಪಾವಳಿ ಮತ್ತು ಇತರ ಹಬ್ಬಗಳ ಸಂದರ್ಭದಲ್ಲಿ ಪಟಾಕಿಗಳನ್ನು ನಿಷೇಧಿಸುವ ಕಲ್ಕತ್ತಾ ಹೈಕೋರ್ಟ್‌ನ ಆದೇಶವನ್ನು ಸುಪ್ರೀಂ ಕೋರ್ಟ್ ಸೋಮವಾರ ರದ್ದುಗೊಳಿಸಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್, ಅಜಯ್ ರಸ್ತೋಗಿ ಅವರನ್ನೊಳಗೊಂಡ ವಿಶೇಷ ನ್ಯಾಯಪೀಠವು, ಈ ನ್ಯಾಯಾಲಯವು ಗಾಳಿಯ ಗುಣಮಟ್ಟವನ್ನು ಅವಲಂಬಿಸಿ ಪಟಾಕಿಗಳ ತಯಾರಿಕೆ ಮತ್ತು ಮಾರಾಟದ ಕುರಿತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ವಿವರಿಸಿರುವ ನಿಯಮವನ್ನು ಪದೇಪದೇ ಪುನರುಚ್ಚರಿಸಿದೆ’ ಎಂದು ಹೇಳಿದೆ.


ಸಾಂದರ್ಭಿಕ ಚಿತ್ರ

ದೀಪಾವಳಿ ವಿರಾಮದ ಸಮಯದಲ್ಲಿ ಪೀಠವು, ನೋಂದಣಿಯಾಗದ ‘ಸಾರಾ ಬಾಂಗ್ಲಾ ಅಟಸ್ಬಾಜಿ ಉನ್ನಯನ್ ಸಮಿತಿ’ ಪಟಾಕಿ ಸಂಘದ ಅಧ್ಯಕ್ಷ ಗೌತಮ್ ರಾಯ್ ಅವರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿತು.

ಅರ್ಜಿದಾರರಾದ ರೋಶನಿ ಅಲಿ ಪರ ವಾದ ಮಂಡಿಸಿದ ವಕೀಲ ರಚಿತ್ ಲಖಮಣಿ, ‘ಹಸಿರು ಪಟಾಕಿಗಳು ಕೂಡ ಮಾಲಿನ್ಯಕ್ಕೆ ಕಾರಣವಾಗಿದ್ದು, ಆಸ್ಪತ್ರೆಗಳು ಮತ್ತು ವಸತಿ ಪ್ರದೇಶಗಳಿಂದ ದೂರವಿರುವ ನಿಗದಿತ ಸ್ಥಳಗಳಲ್ಲಿ ಸಿಡಿಸಬೇಕು’ ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, ‘ಹಾಗೆಂದ ಮಾತ್ರಕ್ಕೆ ಸಂಪೂರ್ಣ ನಿಷೇಧ ಎಂದರ್ಥವಲ್ಲ. ಬೇರಿಯಂ ಲವಣಗಳಂತಹ ನಿಷೇಧಿತ ಪದಾರ್ಥಗಳ ಬಳಕೆಯ ವಿರುದ್ಧ ನಾವು ನಮ್ಮ ಕಾರ್ಯವಿಧಾನವನ್ನು ಬಲಪಡಿಸಬೇಕು. ದೇಶದಾದ್ಯಂತ ಸಂಪೂರ್ಣ ನಿಷೇಧ ಇಲ್ಲದಿರುವಾಗ ಪಶ್ಚಿಮ ಬಂಗಾಳ ಇದಕ್ಕೆ ಹೊರತಾಗಲು ಸಾಧ್ಯವಿಲ್ಲ’ ಎಂದು ಅಭಿಪ್ರಾಯಪಟ್ಟಿತು.

ಪಟಾಕಿ ತಯಾರಕರು ಮತ್ತು ವಿತರಕರ ಸಂಘದ ಪರವಾಗಿ ಹಾಜರಾದ ಹಿರಿಯ ವಕೀಲ ಸಿದ್ಧಾರ್ಥ್ ಭಟ್ನಾಗರ್ ವಾದ ಮಂಡಿಸಿ, 2018ರಿಂದ ಸುಪ್ರೀಂ ಕೋರ್ಟ್ ನೀಡಿದ ಆದೇಶವನ್ನು ಅನುಸರಿಸುತ್ತಿದ್ದಾರೆ. ಈ ವರ್ಷ ಅ. 29ರಂದು, ಪಟಾಕಿಗಳ ಮೇಲೆ ಸಂಪೂರ್ಣ ನಿಷೇಧವಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಅಲ್ಲದೆ, ಪಶ್ಚಿಮ ಬಂಗಾಳ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅ. 26ರಂದು ಹಸಿರು ಪಟಾಕಿಗಳ ಮಾರಾಟಕ್ಕೆ ಅನುಮತಿ ನೀಡಿದೆ ಎಂದು ಸುಪ್ರೀಂ ಕೋರ್ಟ್ ಗಮನಕ್ಕೆ ತಂದರು.

ವಾದ–ವಿವಾದ ಆಲಿಸಿದ ನ್ಯಾಯಪೀಠವು, ‘ಯಾವುದೇ ನಿಷೇಧಿತ ಪಟಾಕಿಗಳನ್ನು ರಾಜ್ಯಕ್ಕೆ ತರದಂತೆ ಪಶ್ಚಿಮ ಬಂಗಾಳ ಸರ್ಕಾರ ಕ್ರಮ ಕೈಗೊಳ್ಳಬಹುದು’ ಎಂದು ಹೇಳಿತು.

‘ಪಾಲಿಸಿ ಸಕ್ರಿಯವಾಗಿ ಇಲ್ಲದಿದ್ದರೆ ಕ್ಲೇಮು ತಿರಸ್ಕರಿಸಬಹುದು’



ನವದೆಹಲಿ (ಪಿಟಿಐ): ಪ್ರೀಮಿಯಂ ಪಾವತಿಸದ ಕಾರಣ ಪಾಲಿಸಿ ಸಕ್ರಿಯವಾಗಿ ಇಲ್ಲದಿದ್ದಲ್ಲಿ ವಿಮೆ ಕ್ಲೇಮು ತಿರಸ್ಕರಿಸಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಪಾಲಿಸಿ ನಿಬಂಧನೆಗಳ ಕಟ್ಟುನಿಟ್ಟಿನ ವ್ಯಾಖ್ಯಾನ ಅಗತ್ಯವಿದೆ ಎಂದೂ ಕೋರ್ಟ್ ಹೇಳಿದೆ.

ರಸ್ತೆ ಅಪಘಾತ ಪ್ರಕರಣದಲ್ಲಿ ಖಾತರಿ ನೀಡಿದ್ದಂತೆ ಹೆಚ್ಚುವರಿ ಪರಿಹಾರ ವಿತರಿಸಲು ರಾಷ್ಟ್ರೀಯ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗ (ಎನ್‌ಸಿಡಿಆರ್‌ಸಿ) ನೀಡಿದ್ದ ಆದೇಶವನ್ನು ಕೋರ್ಟ್ ಇದೇ ಸಂದರ್ಭದಲ್ಲಿ ಅಸಿಂಧುಗೊಳಿಸಿತು.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಬೇಲಾ ಎಂ. ತ್ರಿವೇದಿ ಅವರಿದ್ದ ನ್ಯಾಯಪೀಠವು, ‘ವಿಮೆ ಪ್ರಕರಣದಲ್ಲಿ ಭದ್ರತೆಗೆ ಒಳಪಡಲು ಉತ್ತಮ ನಂಬಿಕೆಯೂ ಅಗತ್ಯ. ಕಾನೂನು ಕ್ರಮ ಇಲ್ಲಿ ವ್ಯವಸ್ಥಿತವಾಗಿದೆ’ ಎಂದು ಹೇಳಿತು.

ವಿಮೆ ಒಪ್ಪಂದದಲ್ಲಿರುವ ನಿಯಮಗಳಿಗೆ ಕಡ್ಡಾಯವಾಗಿ ಬದ್ಧರಾಗಬೇಕು ಎಂಬುದು ಸ್ಪಷ್ಟ. ನಿಬಂಧನೆಗಳನ್ನು ವ್ಯಾಖ್ಯಾನ ಮಾಡುವಾಗ ಒಪ್ಪಂದದ ನಿಯಮಗಳನ್ನು ಪರಿಷ್ಕರಿಸುವುದಕ್ಕೆ ಅನುಮತಿ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತು.

ಎನ್‌ಸಿಡಿಆರ್‌ಸಿ ಆದೇಶವನ್ನು ಪ್ರಶ್ನಿಸಿ ಭಾರತೀಯ ಜೀವವಿಮಾ ನಿಗಮ ಅರ್ಜಿ ಸಲ್ಲಿಸಿತ್ತು. ಅಪಘಾತವಾದ ವೇಳೆ ಪಾಲಿಸಿ ಸಕ್ರಿಯವಾಗಿರಬೇಕು ಎಂಬ 11ನೇ ಸಂಖ್ಯೆಯ ಷರತ್ತು ಪಾಲನೆಯಾಗಿಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಉಲ್ಲೇಖಿಸಿತು.

ವಣ್ಣಿಯಾರ್ ಸಮುದಾಯದ ಮೀಸಲು ರದ್ದು

ಚೆನ್ನೈ: ತಮಿಳುನಾಡಿನ ಉತ್ತರ ಭಾಗದಲ್ಲಿ ನೆಲೆಸಿರುವ ಪ್ರಬಲ ವಣ್ಣಿಯಾರ್ ಸಮುದಾಯಕ್ಕೆ ನೀಡಿದ್ದ ಶೇ 10.5ರಷ್ಟು ಮೀಸಲಾತಿಯನ್ನು ಮದ್ರಾಸ್ ಹೈಕೋರ್ಟ್ ಸೋಮವಾರ ರದ್ದುಪಡಿಸಿದೆ.

ಸರ್ಕಾರಿ ಉದ್ಯೋಗ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಒದಗಿಸುವ ಈ ಕ್ರಮ ಸಂವಿಧಾನಬಾಹಿರ ಎಂದು ನ್ಯಾಯಮೂರ್ತಿಗಳಾದ ಎಂ. ದೊರೆಸ್ವಾಮಿ ಮತ್ತು ಕೆ. ಮುರಳಿ ಶಂಕರ್ ಅವರ ವಿಭಾಗೀಯ ಪೀಠ ತಿಳಿಸಿತು. ವಣ್ಣಿಯಾರ್ ಸಮುದಾಯಕ್ಕೆ ನೀಡಲಾಗಿದ್ದ ವಿಶೇಷ ಮೀಸಲಾತಿಯನ್ನು ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿ ಈ ತೀರ್ಪು ನೀಡಿದೆ.

ವಣ್ಣಿಯಾರ್ ಸಮುದಾಯಕ್ಕೆ ಶೇ 10.5ರಷ್ಟು ಆಂತರಿಕ ಮೀಸಲಾತಿಯನ್ನು ಒದಗಿಸುವ ಮಸೂದೆಯನ್ನು ತಮಿಳುನಾಡು ವಿಧಾನಸಭೆ ಫೆಬ್ರುವರಿಯಲ್ಲಿ ಅಂಗೀಕರಿಸಿತ್ತು. ಡಿಎಂಕೆ ಸರ್ಕಾರವು ಇದೇ ಜುಲೈನಲ್ಲಿ ಅನುಷ್ಠಾನಕ್ಕೆ ಆದೇಶ ಹೊರಡಿಸಿತ್ತು. ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಡಿಎಂಕೆ ಸರ್ಕಾರ ಘೋಷಿಸಿದೆ.

ಜಿಆರ್‌ಟಿ ಜುವೆಲರ್ಸ್‌ನಲ್ಲಿ ಹಬ್ಬದ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು ದೀಪಾವಳಿ ಹಬ್ಬದ ಸಂದರ್ಭದಲ್ಲಿ 'ಸ್ವರ್ಣ ದೀಪಾವಳಿ' ಕೊಡುಗೆಗಳನ್ನು ಘೋಷಿಸಿದೆ. ಇದರ ಅಡಿಯಲ್ಲಿ, ಚಿನ್ನವನ್ನು ಖರೀದಿಸುವ ಗ್ರಾಹಕರಿಗೆ, ಅವರು ಖರೀದಿಸಿದ ಚಿನ್ನದ ತೂಕಕ್ಕೆ ಸಮನಾಗಿ ಬೆಳ್ಳಿಯನ್ನು ಉಡುಗೊರೆಯಾಗಿ ನೀಡಲಾಗುತ್ತದೆ.

ಪ್ರತಿ ಕ್ಯಾರಟ್ ವಜ್ರ ಖರೀದಿಸಿದಾಗ 25 ಗ್ರಾಂ ಬೆಳ್ಳಿ ಉಡುಗೊರೆ, ಬೆಳ್ಳಿಯ ಆಭರಣಗಳ ಮೇಕಿಂಗ್ ಚಾರ್ಜಸ್ ಮೇಲೆ ಶೇ 25ರಷ್ಟು ರಿಯಾಯಿತಿ, ಬೆಳ್ಳಿ ಆಭರಣಗಳ ಬೆಲೆಯ ಮೇಲೆ ಶೇ 10ರಷ್ಟು ರಿಯಾಯಿತಿ ಕೊಡುಗೆಗಳೂ ಇವೆ ಎಂದು ಪ್ರಕಟಣೆ ತಿಳಿಸಿದೆ.

'ನಮ್ಮ ಪಾಲಿಗೆ ಗ್ರಾಹಕರೇ ಯಾವತ್ತಿಗೂ ಮೊದಲು' ಎಂದು ಕಂಪನಿ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಅನಂತಪದ್ಮನಾಭನ್ ಹೇಳಿದ್ದಾರೆ.

ಕಡಿಮೆ ತಾಪಮಾನದಿಂದ ತಣ್ಣನೆಯ ಗಾಳಿ

ಬೆಂಗಳೂರು: ಚಳಿ ವಾತಾವರಣ

ಪ್ರಜಾವಾಣಿ ವಾರ್ತೆ



ಸಾಂದರ್ಭಿಕ ಚಿತ್ರ

ಬೆಂಗಳೂರು: ನಗರದಲ್ಲಿ ಮೂರು ದಿನಗಳಿಂದ ತಂಪಾದ ವಾತಾವರಣ ಕಂಡುಬರುತ್ತಿದ್ದು, ರಾತ್ರಿ ವೇಳೆಗೆ ಕ್ರಮೇಣ ಚಳಿ ಆವರಿಸಿಕೊಂಡ ಅನುಭವವಾಗುತ್ತಿದೆ.

ಒಂದು ವಾರದಿಂದ ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಸಹಿತ ಆಗಾಗ ಜಿಟಿಜಿಟಿ ಮಳೆಯಾಗುತ್ತಿದೆ. ಇದರಿಂದ ತಾಪಮಾನ ಕುಸಿತಗೊಂಡು ಬೀಸುತ್ತಿರುವ ತಣ್ಣನೆಯ ಗಾಳಿಯಿಂದ ಜನ ಮೈನಡುಗುವ ಚಳಿಯ ಅನುಭವ ಪಡೆಯುತ್ತಿದ್ದಾರೆ.

'ವಾತಾವರಣದಲ್ಲಿ ತಾಪಮಾನ ಕುಸಿತವಾದರೆ, ತಂಪಿಗೆ ಪೂರಕವಾದ ಸ್ಥಿತಿ ಉಂಟಾಗುತ್ತದೆ. ಹಾಗಾಗಿ, ಚಳಿಯ ಅನುಭವ ಆಗುತ್ತಿರಬಹುದು. ಆದರೆ, ಇದನ್ನು ಆಧರಿಸಿ ಚಳಿಗಾಲ ಆರಂಭವಾಗಿದೆ ಎಂದು ಭಾವಿಸುವಂತಿಲ್ಲ' ಎನ್ನುತ್ತಾರೆ ಹವಾಮಾನ ತಜ್ಞರು.

'ಬೆಂಗಳೂರಿನಲ್ಲಿ ಈ ವಾರದಿಂದ ಗರಿಷ್ಠ 27 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 20 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುತ್ತಿದೆ. ಈ ಅವಧಿಯಲ್ಲಿ ಹವಾಮಾನದಲ್ಲಿ ಈ ಬದಲಾವಣೆ ಸಾಮಾನ್ಯ. ತಾಪಮಾನ ಕುಸಿತಗೊಂಡಾಗ ತಂಪಾದ ವಾತಾವರಣ ಕಾಣಬಹುದು. ಆಗ ಬೀಸುವ ಗಾಳಿಯೂ ತಣ್ಣನೆಯ ರೂಪ ಪಡೆಯುತ್ತದೆ. ಅದು, ಜನರಿಗೆ ಚಳಿಯ ಅನುಭವ ನೀಡುತ್ತಿರಬಹುದು' ಎಂದು ಹವಾಮಾನ ಇಲಾಖೆಯ ತಜ್ಞ ಸದಾನಂದ ಅಡಿಗ 'ಪ್ರಜಾವಾಣಿ'ಗೆ ತಿಳಿಸಿದರು.

'ತಾಪಮಾನ ಹೆಚ್ಚಾಗಿದ್ದರೆ, ಬೀಸುವ ಗಾಳಿ ತಂಪಾಗಿರುವುದಿಲ್ಲ. ವಾರದಿಂದ ಬೆಂಗಳೂರಿನಲ್ಲಿ ಬಿಸಿಲು ಕಡಿಮೆ ಇದೆ. ಮೋಡ ಆವರಿಸಿದ ವಾತಾವರಣದೊಂದಿಗೆ ದಿನಪೂರ್ತಿ ಕಡಿಮೆ ತಾಪಮಾನ ಇರುವುದರಿಂದ ಸಂಜೆ ಮತ್ತು ರಾತ್ರಿ ವೇಳೆ ತಂಪು ಗಾಳಿ ಬೀಸುತ್ತಿದೆ. ಇದನ್ನು ಕಂಡು ಚಳಿಗಾಲ ಶುರುವಾಗಿದೆ ಎಂದು ಜನ ಭಾವಿಸಬಾರದು. ಮುಂದಿನ ವಾರದವರೆಗೆ ನಗರದಲ್ಲಿ ಇದೇ ರೀತಿಯ ವಾತಾವರಣ ಇರಲಿದೆ' ಎಂದು ವಿವರಿಸಿದರು.

'ನಗರದಲ್ಲಿ ಸಾಮಾನ್ಯವಾಗಿ ನವೆಂಬರ್ ಕೊನೆಯ ವಾರ ಅಥವಾ ಡಿಸೆಂಬರ್ ಮೊದಲ ವಾರದಲ್ಲಿ ಚಳಿ ಕಾಣಿಸಿಕೊಳ್ಳುತ್ತದೆ. ಉತ್ತರ ದಿಕ್ಕಿನಿಂದ ಗಾಳಿ ಬೀಸಿದಾಗ ಚಳಿಯ ತೀವ್ರತೆ ಹೆಚ್ಚಾಗುತ್ತದೆ' ಎಂದು ಹೇಳಿದರು.

'ಕನ್ನಡ ಪ್ರಜ್ಞೆಯ ಸುತ್ತಮುತ್ತ' ಪುಸ್ತಕ ಬಿಡುಗಡೆ

'ಕನ್ನಡದ ಕಾಡನ್ನು ಬೆಳೆಯಲು ಬಿಡಿ'

ಪ್ರಜಾವಾಣಿ ವಾರ್ತೆ



ವಿನಯಾ

ಬೆಂಗಳೂರು: 'ಕನ್ನಡ ಪ್ರಜ್ಞೆ ಇಂದು ಬಹುದೊಡ್ಡ ತಲ್ಲಣಕ್ಕೆ ಒಳಗಾಗಿದೆ. ಕನ್ನಡ ಜ್ಞಾನದ ಮೂಲ ಎನ್ನುವ ಮುಖ್ಯ ನೆಲೆಯಿಂದ ನಾವು ದೂರ ಬಂದಿದ್ದೇವೆ. ಕನ್ನಡ ಎಂಬ ಕಾಡನ್ನು ಅದರ ಪಾಡಿಗೆ ಬೆಳೆಯಲು ಬಿಡಬೇಕೇ ಹೊರತು, ಅದನ್ನು ಬಂಧಿಸುವ ಅಥವಾ ನಾಶಪಡಿಸುವ ಕೆಲಸ ಮಾಡಬಾರದು' ಎಂದು ಲೇಖಕಿ ವಿನಯಾ ಒಕ್ಕುಂದ ತಿಳಿಸಿದರು.

ಕ್ರಿಯಾ ಪುಸ್ತಕ ಪ್ರಕಾಶನ ಸಂಸ್ಥೆಯು ಸೋಮವಾರ ಆನ್‌ಲೈನ್ ಮೂಲಕ ಹಮ್ಮಿಕೊಂಡಿದ್ದ ಡಿ.ಸಿ.ಗೀತಾ ಹಾಗೂ ನಾಗರೇಖಾ ಗಾಂವಕರ ಅವರ ಸಂಪಾದಕತ್ವದ 'ಕನ್ನಡ ಪ್ರಜ್ಞೆಯ ಸುತ್ತಮುತ್ತ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕನ್ನಡ ಎನ್ನುವುದು ಬದುಕಿಗೆ ಬೇಕಿರುವ ವಿವೇಕದ ಸಂಕಥನ ಎಂಬುದನ್ನು ನಾವೆಲ್ಲ ಮರೆಯುತ್ತಿದ್ದೇವೆ. ಇದು, ಕನ್ನಡಕ್ಕೆ ಆಗುತ್ತಿರುವ ಬಹಳ ದೊಡ್ಡ ಧಕ್ಕೆ' ಎಂದು ಕಳವಳ ವ್ಯಕ್ತಪಡಿಸಿದರು.

'ಕನ್ನಡವನ್ನು ವೈಭವೀಕೃತ, ಆದರ್ಶ ಹಾಗೂ ತಾಯಿ ಭುವನೇಶ್ವರಿಯ ನೆಲೆಗಳಲ್ಲಿ ಮಾತ್ರ ನೋಡುತ್ತಿದ್ದು, ಭುವನೇಶ್ವರಿಯ ಚಿತ್ರದಲ್ಲಿ ಆಗಬೇಕಿರುವ ಸರ್ವಧರ್ಮ ಸಹಿಷ್ಣುತೆಯ ಮರುರೂಪಣದ ಬಗ್ಗೆ ಯೋಚಿಸುವ ಸಾಮರ್ಥ್ಯವನ್ನೂ ಕಳೆದುಕೊಳ್ಳುತ್ತಿದ್ದೇವೆ. ಇದು ನಮ್ಮೆದುರು ಇರುವ ದೊಡ್ಡ ಸವಾಲು' ಎಂದು ಎಚ್ಚರಿಸಿದರು.

'ರಾಜ್ಯೋತ್ಸವ ಬಂದಾಗ ಕಾರ್ಯಕ್ರಮಗಳು, ಹಾಡುಗಳು ಹಾಗೂ ಮನರಂಜನೆಗೆ ಮಾತ್ರ ಭಾಷೆಯನ್ನು ಉಳಿಸುತ್ತಿದ್ದೇವೆ. ಕನ್ನಡವನ್ನು ಜ್ಞಾನದ, ಅಧಿಕಾರದ ಹಾಗೂ ಅನ್ನದ ಭಾಷೆಯಾಗಿ ಸರ್ಕಾರದ ಪ್ರತಿನಿಧಿಗಳು ಏಕೆ ಬಿಂಬಿಸುತ್ತಿಲ್ಲ?' ಎಂದು ಪ್ರಶ್ನಿಸಿದರು.

'ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಕನ್ನಡದ ಆದ್ಯತೆ ಹಾಗೂ ಗೊಂದಲಗಳ ಬಗ್ಗೆ ಈ ಪುಸ್ತಕ ಪ್ರಶ್ನೆ ಎತ್ತುವಂತಿದೆ. ಕನ್ನಡ ಪ್ರಸ್ತುತದಲ್ಲಿ ಎದುರಿಸುತ್ತಿರುವ ಬಿಕ್ಕಟ್ಟುಗಳ ಬಗ್ಗೆಯೂ ಪುಸ್ತಕದಲ್ಲಿನ ಬರಹಗಳು ಬೆಳಕು ಚೆಲ್ಲಿವೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕನ್ನಡ ಪ್ರಾಧ್ಯಾಪಕ ಮೋಹನ ಚಂದ್ರಗುತ್ತಿ ಅವರು ಪುಸ್ತಕದ ಪರಿಚಯ ಮಾಡಿಕೊಟ್ಟರು. ಪುಸ್ತಕದ ಸಂಪಾದಕರಾದ ಡಿ.ಸಿ.ಗೀತಾ ಹಾಗೂ ನಾಗರೇಖಾ ಗಾಂವಕರ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಮಾತನಾಡಿದರು. ಕೆ.ಎಸ್.ವಿಮಲಾ ಹಾಗೂ ಇತರರು ಭಾಗವಹಿಸಿದ್ದರು.

ರಾಮರಾಜ್ ನೂತನ ಶೋರೂಂ ಕಾರ್ಯಾರಂಭ



ಮಾರತಹಳ್ಳಿಯಲ್ಲಿ ರಾಮರಾಜ್ ಶೋರೂಂ ಅನ್ನು ಪಾಲಿಕೆಯ ಮಾಜಿ ಸದಸ್ಯ ಎನ್‌. ರಮೇಶ್ ಉದ್ಘಾಟಿಸಿದರು.

ಬೆಂಗಳೂರು: ಹತ್ತಿ ಬಟ್ಟೆಯ ಉಡುಪುಗಳಿಗೆ ಖ್ಯಾತಿ ಪಡೆದಿರುವ 'ರಾಮರಾಜ್' ತನ್ನ ನೂತನ ಶೋರೂಂ ಅನ್ನು ಮಾರತಹಳ್ಳಿಯಲ್ಲಿ ಸೋಮವಾರ ಪ್ರಾರಂಭಿಸಿದೆ.

ಮಾರತಹಳ್ಳಿಯ ಪಾಲಿಕೆಯ ಮಾಜಿ ಸದಸ್ಯ ಎನ್. ರಮೇಶ್ ಅವರು ಶೋರೂಂ ಉದ್ಘಾಟಿಸಿದರು.

'ದಕ್ಷಿಣ ಭಾರತದಲ್ಲಿ ಜನಪ್ರಿಯವಾಗಿರುವ ಧೋತಿ, ಅಂಗಿ ಹಾಗೂ ಬನಿಯನ್‌ಗಳ ಮಾರಾಟವನ್ನು ಉತ್ತರ ಭಾರತಕ್ಕೂ ವಿಸ್ತರಿಸಲಾಗಿದೆ. ಶೋರೂಮ್‌ನಲ್ಲಿ ವಿವಿಧ ವಿನ್ಯಾಸಗಳ ಧೋತಿಗಳು ದೊರೆಯಲಿವೆ. ಬಗೆಬಗೆಯ ಅಂಗಿಗಳು, ಟಿ-ಶರ್ಟ್‌ಗಳು ಸೇರಿದಂತೆ ವಿವಿಧ ರೀತಿಯ ಉಡುಪುಗಳು ದೊರೆಯಲಿವೆ' ಎಂದು ಸಂಸ್ಥೆ ತಿಳಿಸಿದೆ.

'ರಾಜ್ಯದ ವಿವಿಧೆಡೆ ಮಳಿಗೆಯನ್ನು ಪ್ರಾರಂಭಿಸಲಾಗಿದೆ. ಶ್ರೀಲಂಕಾ, ಸಿಂಗಪುರ ಸೇರಿದಂತೆ ವಿವಿಧ ದೇಶಗಳಿಗೆ ಉಡುಪುಗಳನ್ನು ರಫ್ತು ಮಾಡಲಾಗುತ್ತಿದೆ. ದೇಶದಲ್ಲಿ www.ramrajcotton.in ಮೂಲಕ ಆನ್‌ಲೈನ್ ಸೇವೆ ನೀಡಲಾಗುತ್ತಿದೆ' ಎಂದು ಪ್ರಕಟಣೆ ತಿಳಿಸಿದೆ.



ಸಂತ ಜೋಸೆಫರ ಕಾಲೇಜಿನ ಕನ್ನಡ ಸಂಘ ಸೋಮವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಕಿರುತೆರೆ ನಟಿ ವೈಷ್ಣವಿ ಗೌಡ ಚಾಲನೆ ನೀಡಿದರು. ಕಾಲೇಜಿನ ಪ್ರಾಂಶುಪಾಲ ಡಾ.ವಿಕ್ಟರ್ ಲೋಬೋ, ಕಾಲೇಜಿನ ಫಾದರ್ ಸ್ಟೀಬರ್ಟ್ ಡಿಸಿಲ್ವ, ಕಾಲೇಜಿನ ರಿಜಿಸ್ಟ್ರಾರ್ ಮೆಲ್ವಿನ್ ಕೊಲಾಸೊ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಈರಯ್ಯ ಹಂಪಾಪುರ ಇದ್ದರು.

ನಿಧನ ಸುದ್ದಿ

ರಾಜಣ್ಣ ದೀಕ್ಷಿತ್



ಬೆಂಗಳೂರು: ಹೊಸಕೋಟೆ ತಾಲ್ಲೂಕು ಜಡಿಗೆನಹಳ್ಳಿಯ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ರಾಜಣ್ಣ ದೀಕ್ಷಿತ್ (76) ಸೋಮವಾರ ಮಧ್ಯಾಹ್ನ ನಿಧನರಾದರು.

ಅನಾರೋಗ್ಯದಿಂದಾಗಿ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರು ಚಿಕಿತ್ಸೆಗೆ ಸ್ಪಂದಿಸದೆ ಅಸುನೀಗಿದ್ದಾರೆ. ಜಡಿಗೆನಹಳ್ಳಿಯ ಸ್ಮಶಾನದಲ್ಲಿ ಮಂಗಳವಾರ ಬೆಳಿಗ್ಗೆ 10ಕ್ಕೆ ಮೃತರ ಅಂತ್ಯಕ್ರಿಯೆ ನಡೆಯಲಿದೆ.

ಅಪರಾಧ ಸುದ್ದಿ

ಹಲ್ಲೆ: 9 ಮಂದಿಗೆ ನಿರೀಕ್ಷಣಾ ಜಾಮೀನು

ಬೆಂಗಳೂರು: ಎದುರು ಮನೆಯಲ್ಲಿ ಕೆಲಸಕ್ಕಿದ್ದ ಮಹಿಳೆ ಹಾಗೂ ಆಕೆಯ ತಾಯಿಯ ಮೇಲೆ ಹಲ್ಲೆ ಮಾಡಿದ್ದ ಪ್ರಕರಣದ ಸಂಬಂಧ ನಿರ್ಮಾಪಕ ಸೌಂದರ್ಯ ಜಗದೀಶ್ ಪತ್ನಿ ರೇಖಾ ಹಾಗೂ ಅವರ ಮಗ ಸ್ನೇಹಿತ್ ಸೇರಿದಂತೆ 9 ಮಂದಿ ಆರೋಪಿಗಳಿಗೆ 46ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಅನುರಾಧಾ ಎಂಬುವವರು ನೀಡಿದ ದೂರಿನ ಆಧಾರದಲ್ಲಿ ರೇಖಾ, ಸ್ನೇಹಿತ್, ಚಾಲಕ ರಕ್ಷಿತ್, ಭುವನಾ, ಲತಾ ಹಾಗೂ ಬೌನ್ಸರ್‌ಗಳಾದ ನಿಖಿಲ್, ಕುಮಾರ್, ರೋಹಿತ್, ಅಶೋಕ ಅವರ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಹೀಗಾಗಿ ಆರೋಪಿಗಳೆಲ್ಲಾ ತಲೆಮರೆಸಿಕೊಂಡಿದ್ದರು.

ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ಜಾರಿಮಾಡಿದ್ದರು. ಬಂಧನ ಭೀತಿಯಿಂದ ಆರೋಪಿಗಳೆಲ್ಲಾ ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ, 30 ದಿನಗಳೊಳಗೆ ತನಿಖಾಧಿಕಾರಿ ಎದುರು ವಿಚಾರಣೆಗೆ ಹಾಜರಾಗಬೇಕೆಂಬ ಷರತ್ತಿನೊಂದಿಗೆ ಆರೋಪಿಗಳಿಗೆ ಜಾಮೀನು ನೀಡಿದೆ.

ವಾರಸುದಾರನಿಗೆ ಲ್ಯಾಪ್‌ಟ್ಯಾಪ್ ಒಪ್ಪಿಸಿದ ರೈಲ್ವೆ ಪೊಲೀಸರು

ಬೆಂಗಳೂರು: ಕೆಂಗೇರಿ ರೈಲ್ವೆ ನಿಲ್ದಾಣದಲ್ಲಿ ಪತ್ತೆಯಾಗಿದ್ದ ಲ್ಯಾಪ್‌ಟ್ಯಾಪ್ ಒಳಗೊಂಡ ಬ್ಯಾಗನ್ನು ರೈಲ್ವೆ ಪೊಲೀಸರು ಅದರ ವಾರಸುದಾರ ವಿಷ್ಣು ಎಂಬುವವರಿಗೆ ಒಪ್ಪಿಸಿದ್ದಾರೆ.

'ಅಕ್ಟೋಬರ್ 31ರಂದು ರಾತ್ರಿ 9.30ರ ಸುಮಾರಿಗೆ ತಾಳಗುಪ್ಪ ಎಕ್ಸ್‌ಪ್ರೆಸ್ ರೈಲು ಹೋದ ನಂತರ ಬೆಂಚ್‌ವೊಂದರ ಮೇಲೆ ಲ್ಯಾಪ್‌ಟ್ಯಾಪ್ ಇದ್ದ ಬ್ಯಾಗ್ ಪತ್ತೆಯಾಗಿದೆ. ಕರ್ತವ್ಯದಲ್ಲಿದ್ದ ರೈಲ್ವೆ ಪೊಲೀಸ್ ಸಿಬ್ಬಂದಿ ಅದನ್ನು ತಂದು ಪರಿಶೀಲಿಸಿದಾಗ ಲ್ಯಾಪ್‌ಟಾಪ್ ಜೊತೆಗೆ ಇತರ ದಾಖಲೆಗಳು ಪತ್ತೆಯಾಗಿದ್ದವು. ಅದರಲ್ಲಿ ಮಾಲೀಕರ ಮೊಬೈಲ್ ನಂಬರ್ ಕೂಡ ಸಿಕ್ಕಿತ್ತು. ಅವರಿಗೆ ಕರೆ ಮಾಡಿ ಲ್ಯಾಪ್‌ಟ್ಯಾಪ್ ಒಪ್ಪಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ರೈಲಿನಿಂದ ಕಾಣೆಯಾಗಿದ್ದ ವೃದ್ಧ ಯಾದಗಿರಿಯಲ್ಲಿ ಪತ್ತೆ

ಬೆಂಗಳೂರು: ಲಾತೂರ್‌ನಿಂದ ಯಶವಂತಪುರಕ್ಕೆ ರೈಲಿನಲ್ಲಿ ಬರುವ ವೇಳೆ ಕಾಣೆಯಾಗಿದ್ದ ಅಸ್ವಸ್ಥ ವೃದ್ಧರೊಬ್ಬರನ್ನು ರೈಲ್ವೆ ಪೊಲೀಸರು ಯಾದಗಿರಿಯಲ್ಲಿ ಪತ್ತೆ ಮಾಡಿದ್ದಾರೆ.

'ಮನೆಯಲ್ಲಿ ಕೆಲಸಕ್ಕಿದ್ದ ಮಹೇಶ ಮೂಳೆ ಜೊತೆ ತಮ್ಮ ತಂದೆ ರಾಮಚಂದ್ರ ಗಡಿಕಾರ (84) ಅಕ್ಟೋಬರ್ 30ರಂದು ಲಾತೂರು–ಯಶವಂತಪುರ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಪ್ರಯಾಣದ ವೇಳೆ ಮಹೇಶ ನಿದ್ರೆಗೆ ಜಾರಿದ್ದರು. ಮಧ್ಯರಾತ್ರಿ ಎದ್ದು ನೋಡಿದಾಗ ತಂದೆ ಆತನ ಜೊತೆಗಿರಲಿಲ್ಲ ಎಂದು ರಾಮಚಂದ್ರ ಅವರ ಪುತ್ರ ಪ್ರಶಾಂತ್ ಅ. 31ರ ಬೆಳಿಗ್ಗೆ 10.15ಕ್ಕೆ ಕಂಟ್ರೋಲ್ ಕೊಠಡಿಗೆ ಕರೆಮಾಡಿ ತಿಳಿಸಿದ್ದರು. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಬಿ.ಮಲ್ಲೂರ ಅವರು ಕಾಣೆಯಾದ ವ್ಯಕ್ತಿಯ ಭಾವಚಿತ್ರವನ್ನೊಳಗೊಂಡ ಮಾಹಿತಿಯನ್ನು ರಾಯಚೂರು ರೈಲ್ವೆ ಪೊಲೀಸರಿಗೆ ವಾಟ್ಸ್‌ಆ್ಯಪ್ ಮೂಲಕ ರವಾನಿಸಿದ್ದರು. ಅವರು ಮಂತ್ರಾಲಯ, ರಾಯಚೂರು ಹಾಗೂ ಯಾದಗಿರಿಯಲ್ಲಿ ಪತ್ತೆಕಾರ್ಯ ಕೈಗೊಂಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಅ.31ರ ಸಂಜೆ 5ಕ್ಕೆ ಯಾದಗಿರಿ ರೈಲ್ವೆ ನಿಲ್ದಾಣದಲ್ಲಿ ಪತ್ತೆಯಾಗಿದ್ದ ರಾಮಚಂದ್ರ ಅವರನ್ನು ಅವರ ಸಂಬಂಧಿ ಗೋಪಾಲ ಉದ್ದಾರ ಎಂಬುವರೊಂದಿಗೆ ಮನೆಗೆ ಕಳುಹಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ನೀಟ್ ಫಲಿತಾಂಶ: ಮೂರು ಮಂದಿಗೆ ಮೊದಲ ರ‍್ಯಾಂಕ್

ನವದೆಹಲಿ (ಪಿಟಿಐ): ವೈದ್ಯಕೀಯ ಶಿಕ್ಷಣ ಪದವಿ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸುವ ನೀಟ್ ಪ್ರವೇಶ ಪರೀಕ್ಷೆಯ ಫಲಿತಾಂಶವು ಸೋಮವಾರ ಪ್ರಕಟವಾಗಿದ್ದು, ಮೊದಲ ರ‍್ಯಾಂಕ್ ಅನ್ನು ಮೂವರು ಹಂಚಿಕೊಂಡಿದ್ದಾರೆ.

ತೆಲಂಗಾಣದ ಮೃಣಾಲ್ ಕುಟ್ಟೇರಿ, ದೆಹಲಿಯ ತನ್ಮಯ್ ಗುಪ್ತ, ಮಹಾರಾಷ್ಟ್ರದ ಕಾರ್ತಿಕಾ ಜಿ.ನಾಯರ್ ಅವರು ಮೊದಲಿಗರಾಗಿ ಹೊರಹೊಮ್ಮಿದ್ದು, ಪ್ರಥಮ ರ‍್ಯಾಂಕ್ ಹಂಚಿಕೊಂಡಿದ್ದಾರೆ. ಇವರು 720 ಅಂಕಗಳಲ್ಲಿ 720 ಪಡೆದಿದ್ದಾರೆ.

ಪ್ರಥಮ ರ‍್ಯಾಂಕ್ ಅನ್ನು ಮೂವರು ಹಂಚಿಕೊಂಡಿರುವ ಕಾರಣ, ಕೌನ್ಸೆಲಿಂಗ್ ನಡೆಯುವಾಗ ಪ್ರವೇಶ ಕಲ್ಪಿಸಲು ಟೈ-ಬ್ರೇಕಿಂಗ್ ಸೂತ್ರವನ್ನು ಅನುಸರಿಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಪ್ರಕಟಿಸಿದೆ.

ನೀಟ್–ಯುಜಿ ಪ್ರವೇಶ ಪರೀಕ್ಷೆಯಲ್ಲಿ 15 ವಿದ್ಯಾರ್ಥಿಗಳು ಅಕ್ರಮದಲ್ಲಿ ತೊಡಗಿದ್ದು ಸಾಬೀತಾಗಿದ್ದು, ಅವರ ಫಲಿತಾಂಶವನ್ನು ರದ್ದುಪಡಿಸಲಾಗಿದೆ ಎಂದು ತಿಳಿಸಿದೆ.

13 ಭಾಷೆಗಳಲ್ಲಿ 3,858 ಕೇಂದ್ರಗಳಲ್ಲಿ ನಡೆದಿದ್ದ ಪರೀಕ್ಷೆಗೆ 15.44 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಹಾಜರಾಗಿದ್ದರು. 8.70 ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಅರ್ಹತೆ ಪಡೆದಿದ್ದಾರೆ. ಬಾಲಕರಿಗಿಂತ ಬಾಲಕಿಯರೇ ಅಧಿಕ ಸಂಖ್ಯೆಯಲ್ಲಿ ಅರ್ಹತೆ ಗಳಿಸಿದ್ದು, ಪರೀಕ್ಷೆಗೆ ಹಾಜರಾದ 14 ಮಂದಿ ತೃತೀಯ ಲಿಂಗಿಗಳ ಪೈಕಿ ಎಂಟು ಮಂದಿ ಅರ್ಹತೆ ಗಳಿಸಿದ್ದಾರೆ.

'ಹವಾಮಾನ ವೈಪರೀತ್ಯ ತಡೆ: ಬದ್ಧತೆ ಪ್ರದರ್ಶಿಸಿದ ಭಾರತ'

ಗ್ಲಾಸ್ಗೋ (ಪಿಟಿಐ): ಪ್ಯಾರಿಸ್ ಒಪ್ಪಂದದ ಅಡಿಯಲ್ಲಿ ಹವಾಮಾನ ವೈಪರೀತ್ಯ ತಡೆಗಾಗಿ ಬದ್ಧತೆಯನ್ನು ಪ್ರದರ್ಶಿಸಿರುವ ಏಕೈಕ ರಾಷ್ಟ್ರ ಭಾರತ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೇಳಿದ್ದಾರೆ.

ಗ್ಲಾಸ್ಗೋ ಹವಾಮಾನ ವೈಪರೀತ್ಯ ತಡೆ ಶೃಂಗ ಸಭೆಯಲ್ಲಿ ಮಾತನಾಡಿದ ಅವರು, ಹವಾಮಾನ ವೈಪರೀತ್ಯ ಸಂಬಂಧಿತ ಸಮಸ್ಯೆಗಳನ್ನು ನಿಭಾಯಿಸಲು ಭಾರತವು ಕಠಿಣ ಶ್ರಮವಹಿಸುತ್ತಿದೆ ಎಂದು ಹೇಳಿದರು.

ಜೀವನಶೈಲಿ ಬದಲಾವಣೆಗೆ ಕರೆ ನೀಡಿದ ಅವರು, ಪರಿಸರ ಸ್ನೇಹಿ ಜೀವನಶೈಲಿಯು ಹವಾಮಾನ ವೈಪರೀತ್ಯ ನಿಭಾಯಿಸುವಲ್ಲಿ ಸಹಕಾರಿಯಾಗಬಹುದು ಎಂದು ಹೇಳಿದರು.



ಜೀವನಶೈಲಿಯಲ್ಲಿರಲಿ 'ಹೃದಯ'



ಡಾ. ಕಿರಣ್ ವಿ. ಎಸ್.

ಚಿಕಿತ್ಸೆಗಳ ಆದ್ಯತೆಯಲ್ಲಿ ಮೊದಲ ಸ್ಥಾನ ಹೃದಯದ್ದೇ. ಹೃದಯಸಂಬಂಧಿ ಕಾಯಿಲೆಗಳು ಪ್ರತಿಯೊಬ್ಬರಲ್ಲೂ ತೀವ್ರ ಆತಂಕ ಮೂಡಿಸುತ್ತವೆ. ಅಧಿಕ ರಕ್ತದೊತ್ತಡ, ಹೃದಯದ ಧಮನಿಗಳ ರಕ್ತಸಂಚಾರಕ್ಕೆ ಅಡ್ಡಿ, ಜನ್ಮಜಾತ ಹೃದಯಸಮಸ್ಯೆಗಳು, ಹೃದಯದ ಕವಾಟಗಳ ದೋಷ, ಹೃದಯದ ಮಾಂಸಖಂಡಗಳ ದೌರ್ಬಲ್ಯ, ಹೃದಯದ ಮಿಡಿತದಲ್ಲಿನ ಏರುಪೇರು – ಹೀಗೆ ಹಲವಾರು ಅನಾರೋಗ್ಯಗಳು ಯಾವುದೇ ವಯೋಮಾನದಲ್ಲೂ ಹೃದಯವನ್ನು ಕಾಡಬಹುದು. ಇವುಗಳ ಪೈಕಿ ಹಲವಾರು ಸಮಸ್ಯೆಗಳನ್ನು ಸಮರ್ಥವಾಗಿ ನಿಯಂತ್ರಿಸಬಹುದು ಹೃದಯದ ಆರೋಗ್ಯವನ್ನು ಜತನದಿಂದ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಜೀವನಶೈಲಿಯ ಪಾತ್ರ ಮಹತ್ವದ್ದು.

ಯಾವುದೇ ಕಾಯಿಲೆಯ ನಿಗ್ರಹ ಮತ್ತು ನಿಯಂತ್ರಣದಲ್ಲಿ ಮೂರು ಹಂತಗಳಿವೆ. ಮೊದಲನೆಯ ಹಂತ ಕಾಯಿಲೆ ಬಾರದಂತೆ ತಡೆಯುವುದು. ಇದನ್ನು ಸಾಧಿಸಲು ಉತ್ತಮ ಆರೋಗ್ಯ ಪದ್ಧತಿಗಳನ್ನು ರೂಢಿಸಿಕೊಳ್ಳಬೇಕು. ಕಾಯಿಲೆ ಯಾವ ಕಾರಣದಿಂದ ಬರಬಹುದು ಎಂಬುದನ್ನು ಅಂದಾಜಿಸಿ, ಅದಕ್ಕೆ ವಿರುದ್ಧವಾಗಿ ನಿರ್ದಿಷ್ಟ ಪ್ರತಿರಕ್ಷಣೆ ಕಲ್ಪಿಸಬಹುದು. ಎರಡನೆಯ ಹಂತ ಕಾಯಿಲೆಯನ್ನು ಆರಂಭದಲ್ಲೇ ಪತ್ತೆ ಹಚ್ಚಿ, ಅದನ್ನು ಚಿಕಿತ್ಸೆ ಮಾಡುವುದು. ಇದಕ್ಕಾಗಿ ಕಾಯಿಲೆಯ ಆರಂಭಿಕ ಲಕ್ಷಣಗಳ ಪರಿಚಯ ಇರಬೇಕು. ಮೂರನೆಯ ಹಂತ ಕಾಯಿಲೆಯ ಪರಿಣಾಮಗಳನ್ನು ಕಡಿಮೆ ಮಾಡುವುದು ಮತ್ತು ಕಾಯಿಲೆಯಿಂದ ಈಗಾಗಲೇ ಆಗಿರುವ ಶಾರೀರಿಕ ಸಮಸ್ಯೆಗಳನ್ನು ನಿಧಾನವಾಗಿ ಸಹಜ ಸ್ಥಿತಿಗೆ ತರುವುದು. ಹೃದಯದ ಕಾಯಿಲೆಗಳಿಗೂ ಈ ಮೂರು ಹಂತಗಳು ಅನ್ವಯವಾಗುತ್ತವೆ. ಈ ಮೂರೂ ಹಂತಗಳಲ್ಲಿ ಜೀವನಶೈಲಿಯ ಸುಧಾರಣೆಗಳು ಸಹಾಯಕ.

ಹೃದಯದ ಹಲವಾರು ಕಾಯಿಲೆಗಳಿಗೆ ಅನುವಂಶೀಯ ಕಾರಣಗಳಿವೆ. ಹೀಗಾಗಿ, ಹತ್ತಿರದ ರಕ್ತಸಂಬಂಧಿಗಳ ಹೃದಯ ಆರೋಗ್ಯ ಪರಿಸ್ಥಿತಿಯ ಪರಿಚಯ ಇರುವುದು ಒಳ್ಳೆಯದು. ಈ ವಿವರಗಳನ್ನು ವೈದ್ಯರೊಡನೆ ಚರ್ಚಿಸಿ, 'ಇವುಗಳಲ್ಲಿ ಯಾವ ಅನಾರೋಗ್ಯ ಅನುವಂಶಿಕವಾಗಿ ಬರಬಹುದು' ಎಂಬುದನ್ನು ಅರಿತು, 'ಆ ಸಮಸ್ಯೆ ಬಾರದಂತೆ ಯಾವ ಕ್ರಮಗಳನ್ನು ಕೈಗೊಳ್ಳಬೇಕು' ಎಂದೂ ತಿಳಿಯಬಹುದು.

ಹೃದಯದ ಆರೋಗ್ಯ ಮತ್ತು ಆಹಾರ ಜೊತೆಜೊತೆಯಾಗಿ ಸಾಗುತ್ತವೆ. ಸಾತ್ವಿಕ ಆಹಾರವನ್ನು ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಳ್ಳಬೇಕು. ತಾಜಾ ಹಣ್ಣು, ತರಕಾರಿ, ಧಾನ್ಯಗಳು, ಪ್ರೋಟೀನ್ ಅಂಶ ಅಧಿಕವಾಗಿರುವ ಆಹಾರ, ಜಿಡ್ಡಿನ ಅಂಶ ಕಡಿಮೆ ಇರುವ ಹೈನು ಪದಾರ್ಥಗಳನ್ನು ಹೆಚ್ಚಾಗಿ ಸೇವಿಸಬೇಕು.

'ಕೂರುವುದು ಆಧುನಿಕ ಧೂಮಪಾನ' ಎನ್ನುವ ಮಾತಿದೆ! ಧೂಮಪಾನದಿಂದ ಆರೋಗ್ಯದ ಮೇಲೆ ಆಗುವ ವ್ಯತಿರಿಕ್ತ ಪರಿಣಾಮಗಳು, ಯಾವುದೇ ಚಟುವಟಿಕೆಯಿಲ್ಲದೆ ವಿನಾ ಕಾರಣ ಕೂರುವುದರಿಂದಲೂ ಆಗುತ್ತದೆ ಎನ್ನಲಾಗಿದೆ. ಆರೋಗ್ಯಕರ ಹೃದಯಕ್ಕೆ ವ್ಯಾಯಾಮ ಬಹಳ ಮುಖ್ಯ. ದಿನಕ್ಕೆ ಕನಿಷ್ಠ ಮೂವತ್ತು ನಿಮಿಷಗಳ ಕಾಲ ಉಸಿರಾಟದ ಗತಿಯನ್ನು ಏರಿಸುವ ಶಾರೀರಿಕ ವ್ಯಾಯಾಮ ಮಾಡಬೇಕು. ಇದರಲ್ಲಿ ವಾರಕ್ಕೆ ಎರಡು ದಿನ ಮಾಂಸಖಂಡಗಳ ಬಲವನ್ನು ಹೆಚ್ಚಿಸುವ ವ್ಯಾಯಾಮ ಇರಬೇಕು. ವಾರದಲ್ಲಿ ಇಂತಿಷ್ಟು ದಿನ ಎನ್ನುವುದಕ್ಕಿಂತ ಪ್ರತಿದಿನವೂ ತಪ್ಪದೆ ವ್ಯಾಯಾಮ ಮಾಡುವುದು ಸೂಕ್ತ.

ಧೂಮಪಾನ ಮತ್ತು ಮದ್ಯಪಾನಗಳು ಹೃದಯದ ಶತ್ರುಗಳು. ಉಪ್ಪು ಅಥವಾ ಸಕ್ಕರೆಯ ಅಂಶ ಅಧಿಕವಾಗಿರುವ ತಿನಿಸು ಮತ್ತು ಪಾನೀಯಗಳು, ಅಧಿಕ ಜಿಡ್ಡಿನ ಆಹಾರ ಹೃದಯದ ಅನಾರೋಗ್ಯಕ್ಕೆ ಕಾರಣವಾಗಬಹುದು. ಇಂತಹುವುಗಳ ಬಳಕೆಯನ್ನು ಕಡಿಮೆಗೊಳಿಸುವುದು ಹೃದ್ರೋಗವನ್ನು ದೂರವಿಡಲು ಸಹಾಯಕ. ಯಾವುದಾದರೂ ಆರೋಗ್ಯ ಸಂಬಂಧಿ ಔಷಧಗಳನ್ನು ನಿಯಮಿತವಾಗಿ ಸೇವಿಸುತ್ತಿದ್ದರೆ, ಅವುಗಳನ್ನು ಅಕಾರಣವಾಗಿ ತಪ್ಪಿಸಬಾರದು. ಇದರ ಜೊತೆಗೆ ರಕ್ತದೊತ್ತಡ, ಮಧುಮೇಹ ಮುಂತಾದ ಸಮಸ್ಯೆಗಳನ್ನು ಸಾಧ್ಯವಾದಷ್ಟೂ ನಿಯಂತ್ರಣದಲ್ಲಿ ಇಡಬೇಕು.

ದೇಹದ ಬೊಜ್ಜು ಹೃದಯದ ಮೇಲೆ ವಿಪರೀತ ಒತ್ತಡ ಹೇರುತ್ತದೆ. ಶರೀರದ ತೂಕವನ್ನು ಅಂಕೆಯಲ್ಲಿ ಇಡುವುದು ಆರೋಗ್ಯದ ದೃಷ್ಟಿಯಿಂದ ಬಹಳ ಒಳ್ಳೆಯದು. 'ನನ್ನ ದೇಹ; ನನ್ನ ಇಚ್ಛೆ' ಎಂದು ಬೊಜ್ಜನ್ನು ಸಮರ್ಥಿಸಿದರೆ, ಅದರ ಪರಿಣಾಮ ಹೃದಯದ ಮೇಲೆ ತಟ್ಟುವುದನ್ನು ತಪ್ಪಿಸಲಾಗದು. ಹೀಗಾಗಿ, ಬೊಜ್ಜು ಉಳ್ಳವರಿಗೆ ಆರೋಗ್ಯದ ಜವಾಬ್ದಾರಿ ಹೆಚ್ಚಾಗಿ ಇರಬೇಕು. ಆಹಾರತಜ್ಞರ ಸಲಹೆಯ ಮೇರೆಗೆ ಅಗತ್ಯ ಪೋಷಕಾಂಶಗಳುಳ್ಳ ಸಮತೋಲಿತ ಆಹಾರವನ್ನು ಸೇವಿಸಬೇಕು. ಅಧಿಕ ಕ್ಯಾಲರಿ ಉಳ್ಳ ಪದಾರ್ಥಗಳಿಂದ ದೂರವಿರಬೇಕು. ಇದು ಯಾವುದೇ ಲಿಂಗಭೇದವಿಲ್ಲದೆ ಎಲ್ಲರಿಗೂ ಅನ್ವಯಿಸುತ್ತದೆ.

ದೈಹಿಕ ಮತ್ತು ಮಾನಸಿಕ ಒತ್ತಡದ ನಿಯಂತ್ರಣ ಹೃದಯದ ಮೇಲೆ ಬಹಳ ಉತ್ತಮ ಪರಿಣಾಮ ಬೀರಬಲ್ಲದು. ಕೋಪ, ತುಮುಲಗಳು ಹೃದಯದ ರಕ್ತನಾಳಗಳನ್ನು ಸಂಕೋಚಿಸಿ, ಆಘಾತ ಉಂಟುಮಾಡಬಲ್ಲವು. ಮಾನಸಿಕ ಅಶಾಂತಿ, ಕೆಲಸದ ಒತ್ತಡಗಳ ಕಾರಣದಿಂದ ಅಧಿಕ ರಕ್ತದೊತ್ತಡಕ್ಕೆ ತುತ್ತಾಗುವವರ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ಉದ್ವೇಗಗಳಿಗೆ ಸಿಲುಕಿ ಧೂಮಪಾನ, ಮದ್ಯಪಾನಗಳ ಚಟ ಬೆಳೆಸಿಕೊಂಡವರು ಇಬ್ಬಗೆಯಿಂದ ಹೃದಯದ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಒತ್ತಡದಿಂದ ಬಳಲುವವರು ಮಾನಸಿಕ ಆರೋಗ್ಯ ಸಲಹೆಗಾರರ ಸಹಾಯ ಪಡೆಯಬೇಕು. ನಿಗದಿತ ವ್ಯಾಯಾಮ, ಪ್ರಾಣಾಯಾಮ, ಧ್ಯಾನಗಳು ಮನಸ್ಸಿನ ಉದ್ವೇಗವನ್ನು ಕಡಿಮೆ ಮಾಡುವಲ್ಲಿ ಬಹಳ ಸಹಕಾರಿ. ಕುಟುಂಬದ ಸದಸ್ಯರ ಜೊತೆಗಿನ ಮಾತುಕತೆ, ಸಮಾನಮನಸ್ಕ ಸ್ನೇಹಿತರ ಜೊತೆಗಿನ ಒಡನಾಟ, ಧಾರ್ಮಿಕ ಸಭೆಗಳಲ್ಲಿ ಭಾಗವಹಿಸುವಿಕೆ, ಸಾಮಾಜಿಕ ಹಿತದ ಕಾರ್ಯಗಳಲ್ಲಿ ಕೈಜೋಡಿಸುವಿಕೆ ಮುಂತಾದುವು ಮಾನಸಿಕ ತುಮುಲವನ್ನು ಗೆಲ್ಲುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ಹೃದಯದ ಆರೋಗ್ಯದ ಮೇಲೆ ನಿದ್ರೆಯ ಪರಿಣಾಮ ಗಾಢವಾದದ್ದು. ಪ್ರಸ್ತುತ ಜೀವನಶೈಲಿಯಲ್ಲಿ ನಿದ್ರೆಯ ಬಗ್ಗೆ ಹೆಚ್ಚಿನ ಮಂದಿ ಸರಿಯಾದ ಗಮನ ನೀಡುತ್ತಿಲ್ಲ. ಇದರ ಪರಿಣಾಮವಾಗಿ ಸಣ್ಣ ವಯಸ್ಸಿನಲ್ಲೇ ಹೃದ್ರೋಗಗಳಿಗೆ ತುತ್ತಾಗುವವರ ಸಂಖ್ಯೆ ಬೆಳೆಯುತ್ತಿದೆ. ಉತ್ತಮ ಗುಣಮಟ್ಟದ, ಸರಿಯಾದ ಕಾಲಾವಧಿಯ ನಿದ್ರೆ, ಹೃದಯ ಮತ್ತು ರಕ್ತನಾಳಗಳ ಸಮಸ್ಯೆಗಳನ್ನು ಗುಣಪಡಿಸುತ್ತದೆ; ಹೃದಯದ ಕೆಲಸಕ್ಕೆ ಅಗತ್ಯವಾದ ಚೋದಕಗಳನ್ನು ಸರಿದೂಗಿಸುತ್ತದೆ; ಶರೀರದ ರಕ್ಷಕ ವ್ಯವಸ್ಥೆಯನ್ನು ಚುರುಕಾಗಿ ಇಟ್ಟು, ಕಾಯಿಲೆಗಳನ್ನು ದೂರವಿಡುತ್ತದೆ. ನಿದ್ರಾಹೀನತೆಯಿಂದ ಹೃದ್ರೋಗಗಳ ಸಾಧ್ಯತೆ ಅಧಿಕವಾಗುತ್ತದೆ.

(ಲೇಖಕರು ವೈದ್ಯ)

ಮನಸ್ಸು ಶಾಂತವಾಗಿರಲಿ

ಜೀವನದ ಉದ್ದಕ್ಕೂ ಬಿಡುವಿಲ್ಲದೆ ಕೆಲಸ ಮಾಡುವ ನಮ್ಮ ಹೃದಯವನ್ನು ಕ್ಷೇಮವಾಗಿ ಇಟ್ಟುಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಬಹಳ ಮುಖ್ಯ. ನಮ್ಮ ಜೀವನಶೈಲಿ ಮತ್ತು ಹೃದ್ರೋಗ ನಿಯಂತ್ರಣದ ನಡುವೆ ಬಲವಾದ ಸಂಬಂಧವಿದೆ. ನಮ್ಮ ದೈನಂದಿನ ಕಾರ್ಯಗಳಲ್ಲಿ ಇತಿಮಿತಿಯ ಶಿಸ್ತನ್ನು ರೂಢಿಸಿಕೊಳ್ಳುವುದು; ಧ್ಯಾನ ಮತ್ತು ಪ್ರಾಣಾಯಾಮಗಳ ಮೂಲಕ ಮನಸ್ಸನ್ನು ಶಾಂತವಾಗಿ ಇರಿಸಿಕೊಳ್ಳುವುದು ನಾವು ನಮ್ಮ ಹೃದಯಕ್ಕೆ ನೀಡಬಹುದಾದ ಅನುಪಮ ಕೊಡುಗೆಗಳಲ್ಲಿ ಒಂದು.

ಹೃದಯದ ಆರೋಗ್ಯಕ್ಕೂ ನಮ್ಮ ಜೀವನಶೈಲಿಗೂ ನೇರ ನಂಟಿದೆ. ಹಾಗಾದರೆ ನಮ್ಮ ಹೃದಯದ ಆರೋಗ್ಯಕ್ಕಾಗಿ ನಾವು ಏನು ಮಾಡಬೇಕು? ಏನು ಮಾಡಬಾರದು?

ಕಣ್ಣಿನ ರಕ್ಷಣೆಯತ್ತ ದೃಷ್ಟಿ

ಡಾ. ಪಲ್ಲವಿ ಹೆಗಡೆ

ಜಗತ್ತನ್ನು ನೋಡಲು ಕಣ್ಣುಗಳು ಬೇಕು. ದೃಷ್ಟಿಯಿಲ್ಲದಿದ್ದರೆ ಜೀವನದ ಪ್ರಯಾಣ ಸುಲಭವಲ್ಲ. ಹೀಗೆ ನಮ್ಮ ಬದುಕಿಗೆ ಬೆಳಕಾಗಿರುವ ಕಣ್ಣುಗಳನ್ನು ಹೇಗೆ ಜೋಪಾನ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಇಲ್ಲಿ ಕೆಲವೊಂದು ಸಲಹೆ-ಸೂಚನೆಗಳಿವೆ:

ಕಣ್ಣನ್ನು ತೊಳೆಯುವುದು: ಮುಂಜಾನೆ ಶುದ್ಧತಣ್ಣೀರಿನಲ್ಲಿ ಕಣ್ಣನ್ನು ತೊಳೆಯುವುದು, ಜೇನುತುಪ್ಪ ಮತ್ತು ತಣ್ಣೀರನ್ನು ಸಮಪ್ರಮಾಣದಲ್ಲಿ ಬೆರೆಸಿ ಕಣ್ಣನ್ನು ತೊಳೆಯುವುದು ಅಕ್ಷಿಶುದ್ಧಿಕರ.

ಕಾಡಿಗೆ ಹಚ್ಚುವುದು: ತುಪ್ಪದಲ್ಲಿ ಶುದ್ಧಬಿಳಿಹತ್ತಿಯ ಬತ್ತಿಯನ್ನು ಉರಿಸಬೇಕು. ದೀಪ ಉರಿಯುವಾಗ ಮಣ್ಣು/ ಬೆಳ್ಳಿ/ ಬಂಗಾರ/ ತಾಮ್ರದ ಬಟ್ಟಲಿನ ಪಾತ್ರೆಯ ತಳವನ್ನು ದೀಪದ ಮೇಲೆ ಅಡ್ಡವಾಗಿ ಹಿಡಿಯಬೇಕು. ಪೂರ್ತಿ ಉರಿದ ಮೇಲೆ ಮಸಿಯ ದಪ್ಪಪದರ ಅಂಟಿರುತ್ತದೆ. ಅದನ್ನು ಮೃದುವಾಗಿ ತೆಗೆದು ಸಂಗ್ರಹಿಸಿಡಬೇಕು. ನಿತ್ಯವೂ ಬೆಳಗ್ಗೆ ಹಲ್ಲುಜ್ಜಿದ ನಂತರ ಬೆಣ್ಣೆ/ ತುಪ್ಪದೊಂದಿಗೆ ಕಲಸಿ ಕಿರುಬೆರಳಿನಲ್ಲಿ ಕಣ್ಣಿಗೆ ಕಾಡಿಗೆಯಂತೆ ಬಳಸಬೇಕು. ಈ ಮೃದುಕಾಡಿಗೆ ದೃಷ್ಟಿವರ್ಧಕ.

ತುಪ್ಪದ ಕವಲಗ್ರಹ: ದಿವಸವೂ ಬೆಳಗ್ಗೆ ಹಲ್ಲುಜ್ಜಿದ ತಕ್ಷಣ ತುಪ್ಪದ ಮೇಲಿನ ತಿಳಿಯನ್ನು ಬೆಚ್ಚಗೆ ಮಾಡಿ ಬಾಯೊಳಗೆ ಇಟ್ಟುಕೊಳ್ಳುವುದು, ಎಂಜಲು ತುಂಬಿ ಬಂದಾಗ ಉಗಿಯುವುದು ಕೂಡ ನೇತ್ರಗಳಿಗೆ ಹಿತಕರ.

ಸರ್ವಾಂಗಗಳಿಗೂ ಅಭ್ಯಂಗ: ನಿತ್ಯವೂ ತಲೆ, ಮೈ, ಕಾಲುಗಳಿಗೆ ಎಣ್ಣೆ ಸವರಿಕೊಂಡು ಸ್ನಾನಮಾಡುವ ಉಪಾಯವನ್ನು ಆಯುರ್ವೇದವು ಹೇಳಿದೆ. ಮುಪ್ಪನ್ನು ಮುಂದೂಡುವ, ದೃಷ್ಟಿಪ್ರಸಾದನ ಮಾಡುವ ಉತ್ತಮೋತ್ತಮ ದಿನಚರಿಯಿದು.

ನಸ್ಯ: ಸ್ನಾನಕ್ಕೂ ಮುನ್ನ ಮೂಗಿಗೆ ನಾಲ್ಕಾರು ಹನಿಗಳಷ್ಟು ಕರಗಿಸಿದ ತುಪ್ಪವನ್ನು ಹಾಕುವುದು ಕಣ್ಣಿಗೆ ಹಿತ.

ಸ್ನಾನ: ತಲೆಗೆ ತಣ್ಣಗಿನ ಎಣ್ಣೆ ಮತ್ತು ತಲೆಗೆ ತಣ್ಣೀರು ಸ್ನಾನ ಮಾಡುವುದು ದೃಷ್ಟಿರಕ್ಷಕ. ತಲೆಗೆ ಬಿಸಿಬಿಸಿ ನೀರಿನಿಂದ ಸ್ನಾನ ಮಾಡುವುದು ದೃಷ್ಟಿಶಕ್ತಿಯನ್ನು ಕುಗ್ಗಿಸುತ್ತದೆ. ತಣ್ಣೀರು, ಅಥವಾ ಚಳಿಗಾಲ/ ಶೀತಪ್ರದೇಶದಲ್ಲಿ ಮೈಬಿಸಿ/ ಹೂಬಿಸಿ ನೀರಿನ ಸ್ನಾನ ಕಣ್ಣಿಗೆ ಉತ್ತಮ.

ಕಣ್ಣಿಗೆ ಬಿಂದುಗಳು: ತಾಯಿಯ ಎದೆಹಾಲನ್ನು ಹಿಂಡಿ ನಾಲ್ಕಾರು ಹನಿಗಳನ್ನು, ಹಾಲಿನ ಬಿಸಿ ಆರುವ ಮುನ್ನವೇ ಕಣ್ಣಿಗೆ ಹಾಕಿಕೊಳ್ಳುವುದು ನೇತ್ರಗಳಿಗೆ ಪುಷ್ಟಿಕರ. ಸ್ತನ್ಯ ಲಭ್ಯವಿರದಿದ್ದರೆ, ಕಾಯಿಸಿ ಆರಿಸಿದ ಹಾಲನ್ನು ಉಪಯೋಗಿಸ ಬಹುದು. ಕಣ್ಣಿನ ಉರಿ, ಒಣಗಿದ ತೇವವನ್ನು ಸರಿಪಡಿಸುತ್ತದೆ.

ಆಹಾರದಲ್ಲಿ ತುಪ್ಪ-ಬೆಣ್ಣೆ: ನಿತ್ಯವೂ ಬಿಸಿ ಬಿಸಿ ಆಹಾರದೊಂದಿಗೆ ಹಾಲಿನಿಂದ ತೆಗೆದ ಬೆಣ್ಣೆಯನ್ನು, ತುಪ್ಪವನ್ನು ಸೇವಿಸುವುದು ಕಣ್ಣುಗಳಿಗೆ ಹಿತಕರ.

ಹಣ್ಣಿನ ಸೇವನೆ: ಹಸಿ/ಒಣದ್ರಾಕ್ಷಿಯನ್ನು ಆಹಾರದಲ್ಲಿ ನಿಯಮಿತವಾಗಿ ಸೇವಿಸುವುದು ಕಣ್ಣಿಗೆ ಹಿತಕರ.

ಉಪ್ಪು: ಆಹಾರದಲ್ಲಿ ಸೈಂಧವಉಪ್ಪು(ಅಥವಾ ಪಥ್ಯದ ಉಪ್ಪು/ಕಲ್ಲುಪ್ಪು/ರಾಕ್ ಸಾಲ್ಟ್) ಬಳಸುವುದು ಕಣ್ಣಿಗೆ ಹಿತ. ಬೇರೆಲ್ಲಾ ಉಪ್ಪು ದೃಷ್ಟಿನಾಶಕ. ನಿತ್ಯವೂ ಸಮುದ್ರದ ಉಪ್ಪು, ಟೇಬಲ್ ಸಾಲ್ಟ್, ಅಯೋಡಿನ್ ಉಪ್ಪಿನ ನಿತ್ಯಬಳಕೆಯಿಂದ ದೃಷ್ಟಿಶಕ್ತಿ ಕುಂದುವುದು.

ರಾತ್ರಿಯ ಆಹಾರ: ಎಂಟುಗಂಟೆಯೊಳಗೆ ರಾತ್ರಿ ಆಹಾರಸೇವನೆಯ ಅಭ್ಯಾಸ ಕಣ್ಣು ಮತ್ತು ಇತರ ಇಂದ್ರಿಯಗಳಿಗೆ ಹಿತಕರ. ಮೊಸರನ್ನು ರಾತ್ರಿಯ ಆಹಾರದಲ್ಲಿ ಸೇವಿಸಬಾರದು. ರಾತ್ರಿವೇಳೆಯಲ್ಲಿ ಮೊಸರಿನ ಸೇವನೆ ಕಣ್ಣಿನ ಹಲವು ತೊಂದರೆಗಳಿಗೆ ಕಾರಣ.

ನೆಲ್ಲಿಕಾಯಿಯ ನಿಯಮಿತ ಸೇವನೆ: ಆಹಾರದಲ್ಲಿ ನೆಲ್ಲಿಕಾಯಿಯನ್ನು ಬಳಸುವುದು ಉದಾಹರಣೆಗೆ ನೆಲ್ಲಿಕಾಯಿ ಚಟ್ನಿ, ಮಜ್ಜಿಗೆ ಹುಳಿ, ಸಾರು, ರಸಂ, ಹುಳಿಗಾಗಿ ನೆಲ್ಲಿಪುಡಿ, ನೆಲ್ಲಿ ಹಾಕಿ ಕುದಿಸಿದ ನೀರು ಇವುಗಳ ಸೇವನೆ ನೇತ್ರರಕ್ಷಕ. ನೆಲ್ಲಿಕಾಯಿ ಹೊರತುಪಡಿಸಿ ಬೇರೆ ಎಲ್ಲಾ ಹುಳಿರುಚಿಯ ಪದಾರ್ಥಗಳ ಅನಿಯಮಿತ ಸೇವನೆ ಕಣ್ಣಿಗೆ ಹಾನಿ.

ರಸಾಯನ ವಿಧಾನ: ತ್ರಿಫಲಾ ಚೂರ್ಣ ಸುಮಾರು ಕಾಲು ಚಮಚ, ತುಪ್ಪ ಒಂದು ಚಮಚ ಜೇನುತುಪ್ಪ ಎರಡು-ಮೂರು ಹನಿಗಳನ್ನು ಕಲಸಿ, ರಾತ್ರಿಮಲಗುವ ಮುನ್ನ ನೆಕ್ಕುವುದು ಕಣ್ಣಿಗೆ ಹಿತಕರ. ಈ ಪ್ರಮಾಣ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವುದು.

ರಾತ್ರಿ ನಿದ್ರೆ-ಹಗಲು ದುಡಿಮೆ: ಸಕಾಲದಲ್ಲಿ ಹಿತಮಿತ ಆಹಾರಸೇವನೆ-ನಿದ್ದೆ-ದೈನಂದಿನ ವ್ಯವಹಾರ ಕಣ್ಣಿನ ರೋಗಗಳನ್ನೂ ದೂರವಿಡುತ್ತದೆ. ಅಂದರೆ ಹಗಲು ದುಡಿಮೆ, ರಾತ್ರಿ ನಿದ್ರೆ. ತಡರಾತ್ರಿಯೂ ಕೃತಕಬೆಳಕಿನಲ್ಲಿ ಎಚ್ಚರವಿರುವ, ಟಿ.ವಿ., ಮೊಬೈಲ್, ಕಂಪ್ಯೂಟರ್ ವೀಕ್ಷಣೆ ಕಣ್ಣಿಗೆ ಹಾನಿಕರ. ಪ್ರಖರ ಬೆಳಕನ್ನು/ ಸೂರ್ಯರಶ್ಮಿಯನ್ನು ನೇರವಾಗಿ ದಿಟ್ಟಿಸುವ ಪ್ರಯತ್ನ ಮಾಡಬಾರದು. ಸಾಕಷ್ಟು ಬೆಳಕಿನಲ್ಲಿಯೇ ಓದುವ ಅಭ್ಯಾಸ, ಕಣ್ಣಿಗೆ ಹಿತವೆನಿಸುವ ನೋಟ, ಕಣ್ಣಿಗೆ ಸಾಕಷ್ಟು ವಿರಾಮ ದೃಷ್ಟಿಯ ರಕ್ಷಕ.

ಜೈವಿಕಕ್ರಿಯೆಗಳ ಕರೆಗಳನ್ನು ಆಲಿಸಿ: ಅಧೋವಾಯು, ಮಲ, ನಿದ್ರೆ, ಕಣ್ಣೀರು, ಅಜೀರ್ಣದಿಂದಾಗುವ ವಾಂತಿ - ಈ ಶಾರೀರಿಕ ಕರೆಗಳು ದೇಹದ ಅಗತ್ಯಗಳು. ಇವುಗಳಿಗೆ ಗಮನ ಕೊಡದಿದ್ದರೆ ದೃಷ್ಟಿಯೇ ನಷ್ಟವಾದೀತು. ಆದ್ದರಿಂದ, ಇವುಗಳು ಬಂದಾಗ ತಕ್ಷಣ ಅವಸರಿಸಬೇಕು, ವಿಸರ್ಜಿಸಬೇಕು.

ಇವು ದೃಷ್ಟಿಗೆ ಹಾನಿ: ಎಣ್ಣೆಯ ಅತಿಬಳಕೆ/ತಪ್ಪಾದ ಸೇವನೆ ಕಣ್ಣಿಗೆ ಹಾನಿಕರ. ಅದರಲ್ಲೂ ಅತಸೀ/ಅಗಸೆ, ಕುಸುಬೆ ಎಣ್ಣೆಗಳ ಬಳಕೆಯಲ್ಲಿ ಎಚ್ಚರವಿರಲಿ. ಎಣ್ಣೆಯನ್ನು ತೆಗೆದ ನಂತರ ಉಳಿಯುವ ಹಿಂಡಿ (ಉದಾಹರಣೆಗೆ ಸೋಯಾ ಹಿಂಡಿ/ ಸೋಯಾ ಚಂಕ್ಸ್) ಸೇವನೆ ಕಣ್ಣಿಗೆ ಹಿತವಲ್ಲ. ನಾಲ್ಕಾರು ದಿನಗಳಾದ/ಒಣಕಲು ತರಕಾರಿ, ಸೊಪ್ಪುಗಳು ಹಿತವಲ್ಲ.

(ಲೇಖಕಿ ಆಯುರ್ವೇದವೈದ್ಯೆ)

ಅತಿಯಾದರೆ ಅಪಾಯ!

ಡಿ. ಎಂ. ಹೆಗಡೆ

> ಯಾವುದಾದರೂ ಅಷ್ಟೆ. ಅತಿಯಾದರೆ ಅಪಾಯ. ಇತಿಮಿತಿಯಲ್ಲಿರುವುದೇ ಸುಖ ಜೀವನದ ಉಪಾಯ.

ಎಲ್ಲರಿಗೂ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ಇರಬೇಕು. ಅದು ಸರಿ. ಕೆಲವರಿಗೆ ಅತಿಯಾದ ಕಾಳಜಿ ಇರುತ್ತದೆ. ಇದು ತಪ್ಪು. ಯಾವುದಾದರೂ ಅಷ್ಟೆ. ಅತಿಯಾದರೆ ಅಪಾಯ. ಇತಿಮಿತಿಯಲ್ಲಿರುವುದೇ ಸುಖ ಜೀವನದ ಉಪಾಯ. ಆರೋಗ್ಯವಾಗಿರಲಿಕ್ಕೆ ನಿದ್ದೆ ಬೇಕೇ ಬೇಕು. ಅತಿಯಾದ ನಿದ್ರೆಯೂ ಅಪಾಯ. ನಿದ್ರಾಹೀನತೆಯಂತೆ ಅತಿಯಾದ ನಿದ್ರೆಯೂ ಒಂದು ರೋಗ.

ಕೆಲವರು ಹೆಚ್ಚು ತಿನ್ನುತ್ತಾರೆ. ತಿಂದದ್ದು ಪಚನವಾಗದಿದ್ದರೆ ಅದೊಂದು ಸಮಸ್ಯೆ. ಇನ್ನು ಕೆಲವರು ತೀರಾ ಕಡಿಮೆ ತಿನ್ನುತ್ತಾರೆ. ಅಗತ್ಯವಿರುವ ಪೋಷಕಾಂಶಗಳು ಸಿಗದೇ ಅವರು ಕೃಶರಾಗುತ್ತಾರೆ. ಹೆಚ್ಚು ತಿಂದರೆ ಅಜೀರ್ಣವಾಗುತ್ತದೆ. ಕಡಿಮೆ ತಿಂದರೆ ಸಾಕಾಗುವುದಿಲ್ಲ. ಹೀಗಾಗಿಯೇ ಸಮತೋಲನ ಆಹಾರ ಪದ್ಧತಿಯನ್ನು ಅನುಸರಿಸುವುದು ಒಳ್ಳೆಯದು. ತೆಳ್ಳಗಾಗಲಿಕ್ಕೆ ಅಂತ ಕೆಲವರು, ದಪ್ಪವಾಗಲಿಕ್ಕೆ ಅಂತ ಕೆಲವರು ಏನೇನೋ ಮಾಡುತ್ತಾರೆ. ಹಾಗೆಲ್ಲ ಮಾಡುವ ಮೊದಲು ಅನಿವಂಶಿಕವಾಗಿ ಬಂದಿರುವುದರನ್ನು ಗಮನಿಸಿಕೊಳ್ಳಬೇಕು. ಅದನ್ನು ಒಪ್ಪಿಕೊಂಡು ಸಾಧ್ಯವಾದಷ್ಟೂ ಸಮಚಿತ್ತ, ಸಮಭಾವದಿಂದ ಬದುಕುವುದನ್ನು ರೂಢಿಸಿಕೊಳ್ಳಬೇಕು.

ವಯಸ್ಸು ಇಪ್ಪತ್ತೈದಾಗುವವರೆಗೆ ಏನನ್ನಾದರೂ ತಿನ್ನಬಹುದು. ದೇಹ ಬೆಳೆಯುತ್ತ ಇರುತ್ತೆ. ತಿಂದಿದ್ದು ಪಚನವಾಗುತ್ತದೆ. ಕಲ್ಲನ್ನು ತಿಂದರೂ ಕರಗುವ ವಯಸ್ಸು ಅಂತಾರಲ್ಲ ಅದು ಅಂಥ ವಯಸ್ಸು. ಮೂವತ್ತರ ನಂತರ ತಿನ್ನುವ ಪ್ರಮಾಣಕ್ಕೂ ದೈಹಿಕವಾಗಿ ಕೆಲಸವನ್ನು ಮಾಡುವ ಪ್ರಮಾಣಕ್ಕೂ ತಾಳೆ ಹಾಕಿಕೊಳ್ಳುವುದು ಒಳಿತು. ನಲವತ್ತೈದರ ನಂತರ ಆಹಾರದ ವಿಷಯದಲ್ಲಿ ಚ್ಯೂಸಿಯಾಗುವುದು. ಶುಚಿ-ರುಚಿಯಾದ ಆಹಾರವನ್ನು ಹಿತ ಮಿತವಾಗಿ ಸೇವಿಸುವುದು ಅಗತ್ಯ. ಬದುಕಿ ಉಳಿದರೆ ಅರವತ್ತರ ನಂತರ ಯೋಗಿಯಂತೆ ಬದುಕುವುದನ್ನು ರೂಢಿಸಿಕೊಳ್ಳುವುದು ಚೆನ್ನು.

ಕೆಲವರಿಗೆ ಸ್ವದೇಹಮೋಹ ಜಾಸ್ತಿ. ವಯಸ್ಸಲ್ಲದ ವಯಸ್ಸಿನಲ್ಲಿ ಶಕ್ತಿಮೀರಿ ವ್ಯಾಯಾಮ ಮಾಡುತ್ತಾರೆ. ಯಾವ್ಯಾವುದೋ ಪ್ರೋಟೀನು ಪೌಡರ್ ಗಳನ್ನು ಸೇವಿಸುತ್ತಾರೆ. ಅದರಿಂದಾಗುವ ಅನುಕೂಲಕ್ಕಿಂತ ಅನಾನುಕೂಲವೇ ಜಾಸ್ತಿ. ಆಗಿರುವ ಅಪಾಯದ ಅರಿವಾಗುವಷ್ಟರಲ್ಲಿ ಸಮಯ ಮಿಂಚಿರುತ್ತದೆ. ಇನ್ನು ಕೆಲವರಿರುತ್ತಾರೆ ದೂರ್ವಾಸರ ಪಡಿಯಚ್ಚನವರಂತೆ ವರ್ತಿಸುತ್ತಾರೆ. ಕೋಪ ಅಂದರೆ ಕೋಪ. ಎಲ್ಲದಕ್ಕೂ ಕೋಪ ಮಾಡಿಕೊಳ್ಳುತ್ತಾರೆ. ಇವರಿಗೆ ನೆಮ್ಮದಿ ಇರುವುದಿಲ್ಲ. ಇವರ ಜೊತೆಗಿರುವವರಿಗೂ ನೆಮ್ಮದಿ ಇಲ್ಲ. ಹಿಂದೆಂದೋ ನಡೆದ ಒಂದೆರಡು ಘಟನೆಗಳಿಂದುಂಟಾದ ದ್ವೇಷವನ್ನು ಕರಗಲು ಬಿಡದೇ ಹೊಗೆಯಾಡುತ್ತ ಇರುವಂತೆ ಕಾಪಿಟ್ಟುಕೊಳ್ಳುತ್ತಾರೆ. ಇಂಥ ದ್ವೇಷ, ಕೋಪ, ತಾಪಗಳೆಲ್ಲವೂ ರೋಗಕಾರಕಗಳೇ ಆಗಿವೆ.



ಬೇಗ ಮಲಗಬೇಕು. ಕಿರುಣೋದಯಕ್ಕಿಂತ ಮೊದಲು ಏಳಬೇಕು. ಎದ್ದು ನೀರು ಕುಡಿಯಬೇಕು. ವಾಕಿಂಗ್ ಮಾಡಬೇಕು. ವಯಸ್ಸಿಗನುಗುಣವಾಗಿ ವ್ಯಾಯಾಮವನ್ನು ಮಾಡಬೇಕು. ಮನಸ್ಸಿಗೆ ಮತ್ತು ದೇಹಕ್ಕೆ ಇಷ್ಟವಾಗುವ ಆಹಾರವನ್ನು ಮಾತ್ರ ಸೇವಿಸಬೇಕು. ದಿನಕ್ಕೆರಡು ಸಲವಾದರೂ ಹತ್ತರಿಂದ ಹದಿನೈದು ನಿಮಿಷಗಳಷ್ಟಾದರೂ ಮೌನವಾಗಿರಬೇಕು. ಕಣ್ಣನ್ನು ಮುಚ್ಚಿಕೊಂಡು ಮನಸ್ಸು ಮತ್ತು ದೇಹವನ್ನು ಗಮನಿಸಬೇಕು. ಧ್ಯಾನವನ್ನು ರೂಢಿಸಿಕೊಳ್ಳುವುದು ಒಳ್ಳೆಯದು. ಗೆಳೆಯರೊಂದಿಗೆ ಒಂದಿಷ್ಟು ಹರಟೆ, ನಗು ಇದ್ದಷ್ಟೂ ಒಳ್ಳೆಯದು. ದಿನದಲ್ಲಿ ಒಂದಿಷ್ಟು ಹೊತ್ತಾದರೂ ಮನೆಯವರೆಲ್ಲರೂ ಪರಸ್ಪರರ ಭಿನ್ನಾಭಿಪ್ರಾಯಗಳನ್ನು ಮರೆಯಬೇಕು. ಪರಸ್ಪರ ನಗುನಗುತ್ತ ಮಾತನಾಡಬೇಕು. ಮನೆಮಂದಿಯ ಮನಸ್ಸಿನಲ್ಲಿ ನೆಮ್ಮದಿ, ಮುಖದಲ್ಲಿ ನಗು ಇರಬೇಕು. ಅದಕ್ಕಾಗಿ ಮನೆಯವರೆಲ್ಲರೂ ಆಸಕ್ತಿ ವಹಿಸಬೇಕು.

ನಮ್ಮ ಸುತ್ತಲೂ ನಮಗೆ ಧನಾತ್ಮಕ ಅಂಶಗಳೇ ಕಾಣುವಂತಾದರೆ ಸಾಕು. ನಮ್ಮ ಸುತ್ತಲೂ ಇರುವುದನ್ನು ನಮಗೆ ಬೇಕಾದಂತೆ ಬದಲಾಯಿಸಿಕೊಳ್ಳಲಿಕ್ಕೆ ನಮ್ಮಿಂದ ಸಾಧ್ಯವಾಗುವುದಿಲ್ಲ. ಅದರಲ್ಲಿಯ ಒಳ್ಳೆಯ ಅಂಶಗಳನ್ನು ಮಾತ್ರ ನಮಗೆ ನೋಡಲಿಕ್ಕೆ ಸಾಧ್ಯವಾದರೆ ಸಾಕು. ನಮ್ಮ ಮನಸ್ಸಿಗೆ ಸಂತೋಷವಾಗುತ್ತದೆ. ಸುತ್ತಲಿನವುಗಳಲ್ಲಿ ಕೆಟ್ಟದ್ದು ಕಾಣಿಸಿದರೆ ನಮಗೆ ಬೇಜಾರಾಗುತ್ತದೆ. ದುಃಖವಾಗುತ್ತದೆ. ಕೋಪವೂ ಬರುತ್ತದೆ. ಕೊನೆಗೆ ಫ್ರಸ್ಟ್ರೇಶನ್ ಆಗುತ್ತದೆ. ಇವೆಲ್ಲವುಗಳೂ ನಮ್ಮೊಳಗೆ ಉಂಟಾಗುವ ಪ್ರತಿಕ್ರಿಯೆಗಳು. ಇವು ನಮ್ಮ ಆಲೋಚನೆಗಳು. ಹಾಗಾಗಿ, ನಾವು ನಮ್ಮ ಮನಸ್ಸಿಗೆ, ನಮ್ಮ ಕಣ್ಣುಗಳಿಗೆ ಸುತ್ತಲೂ ಒಳ್ಳೆಯದನ್ನು, ಸೌಂದರ್ಯವನ್ನು, ಜೀವಂತಿಕೆಯನ್ನು, ಧನಾಥ್ಮಕತೆಯನ್ನು ಕಾಣುವಂತೆ ರೂಢಿಸಿಕೊಳ್ಳಬೇಕು. ಆವಾಗ ಎಲ್ಲವೂ ಸರಿಯಾಗಿಯೂ, ಸುಂದರವಾಗಿಯೂ, ಶಾಂತವಾಗಿಯೂ ಕಾಣುತ್ತವೆ.





'ಉಂಡಿದ್ದೇ ಉಗಾದಿ, ಮಿಂದಿದ್ದೇ ದೀವಳಿಗೆ.' ಉಗಾದಿಗಾದರೂ ಹೊಟ್ಟೆ ತುಂಬ ಉಣಬೇಕು. ಎಷ್ಟೇ ಬಡತನವಿರಲಿ, ದೀವಳಿಗೆ ಸ್ನಾನದ ರಿವಾಜಿಗಿದೆ ಎಂದೆಂದೂ ಒತ್ತು. ಏಕೆ ಈ ಸ್ನಾನ? ತುಳುನಾಡಿನ ಕರಾವಳಿಯ ಮೌಖಿಕ ಪರಂಪರೆಯ ವಿಶೇಷ ಅಭ್ಯಂಗ ವೈಭವ ಗಮನಿಸಿರಿ.

ಅಭ್ಯಂಗ ಸ್ನಾನದ ವೈವಿಧ್ಯ

ಡಾ. ಸತ್ಯನಾರಾಯಣ ಭಟ್ ಪಿ.

ಅಭ್ಯಂಗ ಎಂದರೆ ಮೈಗೆ ಎಣ್ಣೆ ಹಚ್ಚುವುದು ಎಂದು ಎಲ್ಲರಿಗೆ ತಿಳಿದಿದೆ. ಎಣ್ಣೆ ಹೇಗಿರಬೇಕು? 'ತೋಡಕುಕ್ಕಿನಾರ್' ಎಂಬ ತುಳು ಪಾಡ್ದನ(ಹಾಡುಗಬ್ಬ)ದ ಮಾಹಿತಿಗಳಿಂತಿವೆ. ಇವು ಕನ್ನಡದ ರೂಪಾಂತರಿತ ಮಾಹಿತಿಗಳಾಗಿವೆ. ಗಾಣದೆಣ್ಣೆಯೇ ಪ್ರಶಸ್ತ. ಆರು, ಹನ್ನೆರಡು, ಇಪ್ಪತ್ತನಾಲ್ಕು ಕೈಗಾಣದೆಣ್ಣೆ ತರಿಸಿದರು. ಎಣ್ಣೆ ಹಚ್ಚಿದ ಅನಂತರ ಶುದ್ಧ ನೀರಿನಲ್ಲಿ ಜಳಕ ಮಾಡುವುದು. ಈ ಭಾಷ್ಯದಲ್ಲಿ ಅಪ್ಪಟ ಆಯುರ್ವೇದ ಮಾಹಿತಿಗಳೇ ಅಡಗಿವೆ. ನಿತ್ಯವೂ ತಲೆ, ಮೈ, ಕೈಗೆ ಎಣ್ಣೆ ಹಚ್ಚುವ, ವಿಶೇಷತಃ ನೆತ್ತಿ, ಕಿವಿ, ಮತ್ತು ಪಾದಗಳಿಗೆ ಹಚ್ಚುವ ವಿಧಾನ ವಿವರಿತ. ಅಂತೆಯೇ ಋತುಗನುಗುಣವಾಗಿ ಹದ ಬಿಸಿ ಶುದ್ಧ ಜಲ ಜಳಕದ ಆಚರಣೆಗಳಿವೆ.

'ತೋಡಕುಕ್ಕಿನಾರ್' ಹಾಡುಗಬ್ಬದಲ್ಲಿ ಕಾಣುವ ಅಭ್ಯಂಗ ವಿಧಿಗೆ ಆಯ್ಕೆಗೊಳುವ ದೇಹದ ಒಂಬತ್ತು ಅಂಗ, ಪ್ರತ್ಯಂಗ ಹಾಗೂ ಎಣ್ಣೆಯ ಪ್ರಕಾರಗಳ ಬಣ್ಣನೆ ವಿಶಿಷ್ಟ ಹಾಗೂ ಅನುಕರಣೀಯ. 'ನೆತ್ತಿಗೆ ನೆಯ್ಯೆಣ್ಣೆ, ಕಗ್ ಸೆಲಿಯೆಣ್ಣೆ, ಮೂಂಕುಗ್ ನಚ್ಚಿದೆಣ್ಣೆ, ತಿಗಲೆಗ್ ಮಿಂಚೆಣ್ಣೆ, ಕೆಬಿಕ್ಕ್ ಕೀಲೆಣ್ಣೆ, ಸಂಗ್ ಸಂದೆಣ್ಣೆ, ಬೆರಿಕ್ಕ್ ಬೆಪ್ಪೆಣ್ಣೆ, ಉಗುರುಗ್ ಉರಿಯೆಣ್ಣೆ, ಪಾದೊಗ್ ಪನಿಯಣ್ಣೆ ಪಾದೊಡ್ದು ಬತ್ತಿನ ತೇಜಮುಟ್ಟ ಮೈಮುರಿಯಪ್ಪ ಎಣ್ಣೆ ಪಾಡಾಯೆರ್, ತಾನ್ ತೋಡಾಯಿನ ಕೆರೆತ್ತಲ್ಪ ಏಳ್ ಕೈತ್ತಕೊಪ್ಪರಿಗೆಡ್ ಸಾವಿರ ಕಡ್ಯ ಬೆಂದ್ರ್ಡ್ ಸಾವಿರ ಕಡ್ಯ ಚಂಡಿರ್ದ್ ತಂಪಾಯೆರ್, ಎಣ್ಣೆ ಶುದ್ಧನೀರ್ಡ್ ಜಳಕ ಕರಿತ್ತೆರ್.' ಈ ಹಾಡುಗಬ್ಬದ ಕನ್ನಡ ತರ್ಜುಮೆ ಮತ್ತು ಇದರ ವೈಶಿಷ್ಟ್ಯ ಅರಿಯೋಣವೆ?

ದೇಹದ ಉತ್ತಮಾಂಗ ಶಿರಸ್ಸು. ದೇಹವೆಂಬ ಹಾರ್ಡ್‌ವೇರ್‌ನಲ್ಲಿ ಮೆದುಳು ಮತ್ತು ನರಮಂಡಲವೆಂಬ ಸಾಫ್ಟ್‌ವೇರ್ ಇದೆಯಲ್ಲ. ಅದರಲ್ಲಾಗುವ ವೇರ್ ಎಂಡ್ ಟೇರ್ ಪ್ರತಿಬಂಧಕೋಪಾಯವೇ ಅಭ್ಯಂಗ ಎಂದು ಪೂರ್ವಿಕರು ಅರಿತಿದ್ದರು. 'ನೈ' ಎಂದರೆ ತುಪ್ಪ. ಅದರ ಸಂಗಡ ಎಣ್ಣೆ ಕೂಡಿಸಿದರೆ ನೈಯೆಣ್ಣೆ. ಅದನ್ನು ಯಮಕ ಸ್ನೇಹ ಎಂಬ ಪರಿಭಾಷೆಯಡಿ ಆಯುರ್ವೇದ ಸಂಹಿತೆಗಳು ಗುರುತಿಸುವವು. ನಿತ್ಯವೂ ನೆತ್ತಿ ತಂಪಾಗಿಸುವ ಉಪಾಯವಿದು. ದೀಪಾವಳಿಯ ಅನಂತರದ ಚಳಿಗಾಲದಲ್ಲಿ ನೆತ್ತರು ಚಲನೆ ಏರುಪೇರಾಗದಂತೆ, ಹೃದಯಾಘಾತ, ಲಕ್ವದಂತಹ ಗಂಭೀರ ತೊಂದರೆಗಿದು ಖಂಡಿತ ಪ್ರತಿಬಂಧಕ ಕ್ರಮ. ಎಳ್ಳೆಣ್ಣೆ ಅಥವಾ ತೆಂಗಿನೆಣ್ಣೆ ಉತ್ತಮ. ಹರಳೆಣ್ಣೆ, ಸಾಸಿವೆ ಎಣ್ಣೆಗಳೂ ಮೈಮನಗಳ ದುಗುಡ ದುಮ್ಮಾನ ಕಳೆಯುವ ಸುಲಭ ಸಾಧನಗಳು. ಕಣ್ಣಿನ ಶಕ್ತಿ ಪ್ರಖರವಾಗಿಡಲು ಕಣ್ಣೆವೆ ಮೇಲೆ ತಿಳಿಯಾದ ಜಿಡ್ಡಿನ ಲೇಪನದಿಂದ ಲಾಭವಿದೆ. ನಿದ್ರಿಸುವ ಮುನ್ನ ಮಾಡಿ ನೋಡಿರಿ. ಸುಖನಿದ್ದೆಗಿದುವೆ ಸುಲಭದ ಹಾದಿ.

ಮೂಗಿಗೆ ಬಿಡುವ ಎಣ್ಣೆಯ ಉಪಚಾರಕ್ಕೆ ಆಯುರ್ವೇದವು ನಸ್ಯ ಎನ್ನುತ್ತದೆ. ಅಂತಹ ಉಪಚಾರಕ್ಕೆ ತುಳುವರು ಒತ್ತು ನೀಡಿದ್ದಾರೆ. ಶಿರಸ್ಸಿಗೆ ನೇರ ದಾರಿ ಮೂಗು ಎಂಬ ಮಾತು ಆಯುರ್ವೇದ ಗ್ರಂಥ ಪ್ರಸಿದ್ಧ. ಅಂತಹ ಗ್ರಂಥಸ್ಥ ಮಾಹಿತಿ ಮೌಖಿಕ ಪರಂಪರೆಯಲ್ಲಿ ಉಳಿದಿದ್ದು ಅಚ್ಚರಿಯೇ ಸೈ. ಎದೆ ಮತ್ತು ಬೆನ್ನು ಭಾಗಕ್ಕೆ ಬಿಸಿಯಾದ ಎಣ್ಣೆ ಮಾಲೀಶು ಮಾಡುವ ವಿಧಾನದಿಂದ ಉಸಿರಾಟ ಗತಿ ಸಹಜವಾಗುತ್ತದೆ. ಎದೆ ಗೂಡಿನ ಮಾಂಸಪೇಶೀಗಳ ಸ್ಥಿತಿಸ್ಥಾಪಕತೆ ಯಥಾವತ್ ಕಾಪಾಡಲು ವ್ಯವಸ್ಥೆ ಆಗುತ್ತದೆ. ಆಸ್ತಮಾದ ಏದುಸಿರು ಪಡುವ ಸ್ಥಿತಿಯಲ್ಲಿ ಇಂತಹ ಪ್ರಥಮ ಚಿಕಿತ್ಸೆ ಲಾಭದಾಯಕ. ನಿತ್ಯ ಮಾಡಲಡ್ಡಿಯಿಲ್ಲ. ಕಿವಿಯು ವಾತಸ್ಥಾನ. ಎರಡೂ ಕಿವಿಗೆ ಹದ ಬಿಸಿ ಎಣ್ಣೆ ತೊಟ್ಟಿಕ್ಕಿಸುವ ವಿಧಾನಕ್ಕೆ ಪಾಡ್ದನ ಸಲಹೆ ನೀಡುತ್ತದೆ. ಆಯುರ್ವೇದಗ್ರಂಥಸ್ಥ ಮಾಹಿತಿಯಿದು. ಕೀಲೆಣ್ಣೆ ಎಂದರೆ ಗಾಡಿ ಗಾಲಿಯ ಅಚ್ಚಿಗೆ ಎಣ್ಣೆ ಹಾಕಿದರೆ ಚಕ್ರ ಉರುಳಲು ಸಲೀಸು. ಅಂತಹದೇ ನಿದರ್ಶನ ಪಾಡ್ದನ ನೀಡಿದೆ. ಕಿವಿಯೊಳಗಿನ ಶಂಕುರಚನೆಯ ಸಂದುಗಳ ಸೂಕ್ಷ್ಮಮಾಹಿತಿ ಪೂರ್ವಿಕರಿಗಿತ್ತು. ಹಾಗಾಗಿ ಕಿವಿಯೆಂಬ ಯಂತ್ರಕ್ಕೆ ಕೀಲೆಣ್ಣೆ ಬಿಡುವ ವಿಧಾನ ಪಾಡ್ದನದಲ್ಲಿದೆ.

ದೇಹವೆಂಬ ಯಂತ್ರದಲ್ಲಿವೆ ಅನೇಕಾನೇಕ ಸಂದುಗಳು. ಅವು ಉಜ್ಜಿ ಸವಕಳಿಯಾಗದಂತೆ ಸಂದೆಣ್ಣೆ ಮಾಲೀಶು ಉದ್ದೇಶ ಎಂದೆಂದಿಗೂ ಸಫಲ. ಉಗುರು ಮತ್ತು ಕೂದಲು ಖಂಡಿತವಾಗಿಯೂ ಡೆಡ್ ಟಿಶ್ಯೂ ಅಲ್ಲ. ಅವು ಜೀವಂತ ಇವೆ. ಅದರ ಸಹಜ ಸ್ಥಿತಿಗೆ ಕೊಂಚ ಏರುಬಿಸಿಯ ಉರಿಯುವಷ್ಟು ಶಾಖದ ಎಣ್ಣೆ ಉಗುರಿಗೆ ತೊಟ್ಟಿಕ್ಕಿಸಿದರೆ ಆರೋಗ್ಯ ಖಂಡಿತ. ಅದರ ಶಾಖ ಒಳಗಿಳಿದು ನರಾಗ್ರಗಳಿಗೆ ಉತ್ತೇಜನ ಲಭ್ಯ. ಅಭ್ಯಂಗಾರ್ಹ ಒಂಬತ್ತನೆಯ ಸ್ಥಾನ ಪಾದ. ನಿತ್ಯ ಪಾದಗಳಿಗೆ ಹಚ್ಚಿಸಿಕೊಂಡರೆ ಕಣ್ಣಿಗೆ ಹಿತ ಎನ್ನುತ್ತದೆ ಆಯುರ್ವೇದ ಮೂಲಸಂಹಿತೆ. ಚೈನೀಸ್ ಫೂಟ್ ಮಸಾಜ್ ಎಂಬ ವಿಶೇಷ ವಿಧಾನ ಅಲ್ಲಿ ಇಂದಿಗೂ ಜೀವಂತ. ಯೋಜನಗಟ್ಟಲೆ ದಿನದಿನವೂ ನಡೆದ ಬೌದ್ಧಭಿಕ್ಷುಗಳು ಮಾಹಾಚೀನ ಸೇರಿದ್ದರು. ಅಲ್ಲಿ ಇಂದಿಗೂ ಪಾದಾಭ್ಯಂಗದ ಪದ್ಧತಿ ಜೀವಂತವಾಗಿದೆ. ಮರದ ಆರೋಗ್ಯ ಸರಿ ಇರಬೇಕೆ? ಬೇರು ಆರೋಗ್ಯ ಕಾಪಾಡಿರಿ. ಹಾಗೆಯೇ ದೇಹವೆಂಬ ಮರದ ಸಹಜಾರೋಗ್ಯಕ್ಕೆ ಪಾದವೆಂಬ ಬೇರಿನ ಪುನರುಜ್ಜೀವನ ಅತ್ಯಗತ್ಯ. ಪಾಡ್ದನದ ಕೊನೆ ಚರಣ ಸಾವಿರ ಕೊಡ ಬಿಸಿನೀರ ಸ್ನಾನದ್ದು. ಅನಂತರ ತಣ್ಣೀರಿದ್ದು. ಇಂತಹ ಸ್ನಾನವೈಭವ ಈ ದೀವಳಿಗೆಗೆ ನಿಮ್ಮದಾಗಿಸಿಕೊಳ್ಳಿರಿ. ಆರೋಗ್ಯವಂತರಾಗಿರಿ. ರೋಗ ಮತ್ತು ಮುಪ್ಪು ಬಾರದ ಸುಖಾಯುಷ್ಯ ನಿಮ್ಮದಾಗಲಿ.

(ಲೇಖಕರು ಆಯುರ್ವೇದವೈದ್ಯ)

‘ನೆಟ್4ಇಂಡಿಯಾ’ ಸರ್ವರ್‌ಗೆ ಲಗ್ಗೆ ಇಟ್ಟಿದ್ದ ಶ್ರೀಕೃಷ್ಣ • ದೆಹಲಿಯಲ್ಲಿ ದಾಖಲಾಗಿದ್ದ ಪ್ರಕರಣ

ರಾಹುಲ್ ಗಾಂಧಿ ಜಾಲತಾಣ ಹ್ಯಾಕ್!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಹಣ ವಿನಿಮಯ ಏಜೆನ್ಸಿ ಹಾಗೂ ಗೇಮಿಂಗ್ ಜಾಲತಾಣಗಳನ್ನು ಸಲೀಸಾಗಿ ಹ್ಯಾಕ್ ಮಾಡಿ ‘ಬಿಟ್ ಕಾಯಿನ್ (ಬಿಟಿಸಿ)’ ದೋಚುತ್ತಿದ್ದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26), ದೇಶದ ರಾಜಕೀಯ ಪ್ರಮುಖರ ಜಾಲತಾಣಗಳನ್ನೂ ಹ್ಯಾಕ್ ಮಾಡಿದ್ದ ಸಂಗತಿ ಬಯಲಾಗಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಆರೋಪಿ ಶ್ರೀಕೃಷ್ಣ ವಿರುದ್ಧ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿರುವ ಸಿಸಿಬಿ ಪೊಲೀಸರು, ಜಾಲತಾಣ ಹ್ಯಾಕ್ ಆಗಿದ್ದ ವ್ಯಕ್ತಿಗಳ ಹೆಸರು ಉಲ್ಲೇಖಿಸಿದ್ದಾರೆ. ಈ ಬಗ್ಗೆ ಆರೋಪಿ ಶ್ರೀಕೃಷ್ಣ ಸಹ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ.

ಪ್ರಜಾವಾಣಿ ವಿಶೇಷ

‘ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಉದ್ಯಮಿ ವಿಜಯ್ ಮಲ್ಯ, ಪತ್ರಕರ್ತೆ ಬರ್ಖಾ ದತ್ ಸೇರಿದಂತೆ ಹಲವರ ಜಾಲತಾಣ ಹಾಗೂ ಟ್ವಿಟರ್ ಖಾತೆಗಳನ್ನು ಶ್ರೀಕೃಷ್ಣ ಹ್ಯಾಕ್ ಮಾಡಿದ್ದ’ ಎಂಬ ಮಾಹಿತಿ ಪಟ್ಟಿಯಲ್ಲಿ ದಾಖಲಾಗಿದೆ.

‘ದೆಹಲಿಯ ‘ನೆಟ್4ಇಂಡಿಯಾ’ ಕಂಪನಿಯು ಜಾಲತಾಣಗಳ ಡೊಮೇನ್ (ಯುಆರ್‌ಎಲ್ ಹೆಸರು) ಹಾಗೂ ಹೋಸ್ಟಿಂಗ್ (ಜಾಲತಾಣವನ್ನು ಅಂತರ್ಜಾಲದಲ್ಲಿ ಪ್ರಕಟಿಸುವ ವ್ಯವಸ್ಥೆ) ಸೇವೆ ನೀಡುತ್ತಿದೆ. ರಾಹುಲ್ ಗಾಂಧಿ, ವಿಜಯ್ ಮಲ್ಯ ಹಾಗೂ ಬರ್ಖಾ ದತ್ ಅವರ ಜಾಲತಾಣಗಳನ್ನು ‘ನೆಟ್4ಇಂಡಿಯಾ’ ಕಂಪನಿ ನಿರ್ವಹಣೆ ಮಾಡುತ್ತಿತ್ತು.’

'2016ರ ಡಿಸೆಂಬರ್‌ನಲ್ಲಿ ‘ನೆಟ್4ಇಂಡಿಯಾ’ ದತ್ತಾಂಶ ಕೇಂದ್ರದ ಮುಖ್ಯ ಸರ್ವರ್ ಅನ್ನು ಹ್ಯಾಕ್ ಮಾಡಿದ್ದ ಶ್ರೀಕೃಷ್ಣ, ದತ್ತಾಂಶ ಕದ್ದಿದ್ದ. ರಿಮೋಟ್ ಕೋಡ್ ಎಕ್ಸಿಕ್ಯೂಷನ್ ತಂತ್ರಜ್ಞಾನದ ಮೂಲಕ ಆರೋಪಿ ಈ ಕೃತ್ಯ ಎಸಗಿದ್ದ’ ಎಂಬ ಸಂಗತಿ ಆರೋಪ ಪಟ್ಟಿಯಲ್ಲಿದೆ.

‘ರಾಹುಲ್ ಗಾಂಧಿ, ವಿಜಯ್ ಮಲ್ಯ ಹಾಗೂ ಬರ್ಖಾ ದತ್ ಜಾಲತಾಣಗಳ ‘ಡ್ಯಾಶ್ ಬೋರ್ಡ್’ಗಳನ್ನು ಆರೋಪಿ ತನ್ನ ಸುಪರ್ದಿಗೆ ತೆಗೆದುಕೊಂಡಿದ್ದ. ಜಾಲತಾಣದಲ್ಲಿದ್ದ ಟ್ವಿಟರ್ ಖಾತೆ ವಿವರ ಹಾಗೂ ‘ಡಿಎನ್‌ಎಸ್ ಅಡ್ರೆಸ್’ ದತ್ತಾಂಶ ಕದ್ದಿದ್ದ. ಅದೇ ದತ್ತಾಂಶ ಬಳಸಿಕೊಂಡು ಡ್ಯಾಶ್‌ಬೋರ್ಡ್ ಹಾಗೂ ಟ್ವಿಟರ್ ಖಾತೆಗಳ ಪಾಸ್‌ವರ್ಡ್ ಬದಲಾಯಿಸಿದ್ದ.’

‘ಲಿಜಿಯೊನ್’ ಹೆಸರಿನಿಂದ ಗುರುತಿಸಿಕೊಂಡಿದ್ದ ಶ್ರೀಕೃಷ್ಣ, ಸ್ಕೈಪೇ ಮೂಲಕ ‘ನೆಟ್4ಇಂಡಿಯಾ’ಗೆ ಸಂದೇಶ ಕಳುಹಿಸಿದ್ದ. ಬಿಟ್ ಕಾಯಿನ್ ರೂಪದಲ್ಲಿ ಹಣಕ್ಕೆ ಒತ್ತಾಯಿಸಿದ್ದ. ಹಣ ಕೊಡದಿದ್ದರೆ, ಎಲ್ಲ ದತ್ತಾಂಶಗಳನ್ನು ಅಳಿಸಿ ಹಾಕುವುದಾಗಿ ಬೆದರಿಸಿದ್ದ. ಕಂಪನಿ ಅಧಿಕಾರಿಗಳು ಹಣ ಕೊಟ್ಟ ಬಗ್ಗೆಯೂ ಮಾಹಿತಿ ಇದೆ. ಮತ್ತಷ್ಟು ಹಣಕ್ಕೆ ಬೇಡಿಕೆ ಇಟ್ಟಾಗಲೇ ಅಧಿಕಾರಿಗಳು, ದೆಹಲಿಯ ಆರ್ಥಿಕ ಅಪರಾಧ ದಳದ (ಇಒಎನ್) ಠಾಣೆಗೆ ದೂರು ನೀಡಿದ್ದರು. ಆರೋಪಿ ‘ಲಿಜಿಯೋನ್’ ಹೆಸರಿನಲ್ಲೇ ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣದಲ್ಲಿ ಶ್ರೀಕೃಷ್ಣನ ಸುಳಿವೇ ಸಿಕ್ಕಿರಲಿಲ್ಲ’ ಎಂಬ ಮಾಹಿತಿಯೂ ದೋಷಾರೋಪ ಪಟ್ಟಿಯಲ್ಲಿದೆ.

‘ಬಿಟ್ ಕಾಯಿನ್ ಯಾರಿಗೆಷ್ಟು ಪಾಲು’



‘ಎನ್‌ಡಿಟಿವಿ ವಾಹಿನಿ ಜಾಲತಾಣ ಹ್ಯಾಕ್’

‘ಲ್ಯಾಪ್‌ಟಾಪ್ ಜೊತೆಯಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದ ಶ್ರೀಕೃಷ್ಣ, ಕ್ಷಣಮಾತ್ರದಲ್ಲಿ ಸರ್ವರ್ ಹಾಗೂ ಜಾಲತಾಣಗಳನ್ನು ಹ್ಯಾಕ್ ಮಾಡುವಲ್ಲಿ ಪರಿಣಿತನಾಗಿದ್ದ. ಎನ್‌ಡಿಟಿವಿ ವಾಹಿನಿ ಜಾಲತಾಣವನ್ನೂ ಹ್ಯಾಕ್ ಮಾಡಿ ಹಣಕ್ಕೆ ಬೇಡಿಕೆ ಇರಿಸಿದ್ದ’ ಎಂಬ ಸಂಗತಿಯೂ ಸಿಸಿಬಿ ಪೊಲೀಸರ ಆರೋಪ ಪಟ್ಟಿಯಲ್ಲಿದೆ.

‘ನೆಟ್4ಇಂಡಿಯಾ’ ಕಂಪನಿ ಮೂಲಕವೇ ಎನ್‌ಡಿಟಿವಿ ವಾಹಿನಿ ಜಾಲತಾಣ ನಿರ್ವಹಣೆ ಮಾಡಲಾಗುತ್ತಿತ್ತು. ಕಂಪನಿ ಸರ್ವರ್ ಹ್ಯಾಕ್ ಮಾಡಿದ್ದ ಆರೋಪಿ, ಜಾಲತಾಣ ಹಾಗೂ ಟ್ವಿಟರ್ ಖಾತೆಗಳ ಮಾಹಿತಿ ಕದ್ದಿದ್ದ. ಯೂಸರ್‌ನೇಮ್ ಹಾಗೂ ಪಾಸ್‌ವರ್ಡ್ ಬದಲಾಯಿಸಿ, ಸಂದೇಶವನ್ನೂ ಪ್ರಕಟಿಸಿದ್ದ’ ಎಂಬ ಮಾಹಿತಿಯೂ ಇದೆ.

‘ಡಾರ್ಕ್‌ನೆಟ್ ಮೂಲಕ ಡ್ರಗ್ಸ್ ಖರೀದಿ’

‘ಕೆಂಪೇಗೌಡ ನಗರ ಠಾಣೆಯಲ್ಲಿ ದಾಖಲಾಗಿರುವ ಡ್ರಗ್ಸ್ ಪ್ರಕರಣದಲ್ಲಿ ಶ್ರೀಕೃಷ್ಣ ಸಹ ಆರೋಪಿ. ಡಾರ್ಕ್‌ನೆಟ್ ಮೂಲಕ ವಿದೇಶದಲ್ಲಿರುವ ಪೆಡ್ಲರ್‌ಗಳನ್ನು ಸಂಪರ್ಕಿಸುತ್ತಿದ್ದ ಶ್ರೀಕೃಷ್ಣ, ಅವರಿಂದ ಡ್ರಗ್ಸ್ ತರಿಸಿ ಇತರೆ ಆರೋಪಿಗಳಿಗೆ ನೀಡುತ್ತಿದ್ದ. ತಾನು ಡ್ರಗ್ಸ್ ಸೇವಿಸುತ್ತಿದ್ದ. ಹಣ ವರ್ಗಾವಣೆಯನ್ನು ಬಿಟ್ ಕಾಯಿನ್ ಮೂಲಕವೇ ಮಾಡುತ್ತಿದ್ದ’ ಎಂಬ ಅಂಶ ಆರೋಪ ಪಟ್ಟಿಯಲ್ಲಿದೆ.

ಅರ್ಥವ್ಯವಸ್ಥೆಯಲ್ಲಿ ಹೆಚ್ಚಿದ ಸಂಘಟಿತ ವಲಯದ ಪಾಲು

ಮುಂಬೈ (ಪಿಟಿಐ): ಡಿಜಿಟಲೀಕರಣಕ್ಕೆ ನೀಡಿದ ಆದ್ಯತೆ ಹಾಗೂ ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಗಿಗ್ ಅರ್ಥ ವ್ಯವಸ್ಥೆ ಪ್ರವರ್ಧಮಾನಕ್ಕೆ ಬಂದಿದ್ದರ ಪರಿಣಾಮವಾಗಿ ದೇಶದ ಒಟ್ಟು ಅರ್ಥ ವ್ಯವಸ್ಥೆಯು ಹೆಚ್ಚಿನ ಪ್ರಮಾಣದಲ್ಲಿ ಸಂಘಟಿತವಾಗಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಅರ್ಥಶಾಸ್ತ್ರಜ್ಞರು ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ದೇಶದ ಅರ್ಥ ವ್ಯವಸ್ಥೆಯಲ್ಲಿ (ಒಟ್ಟು ಜಿಡಿಪಿಯಲ್ಲಿ) ಈಗ ಅಸಂಘಟಿತ ವಲಯದ ಪಾಲು ಶೇಕಡ 15ರಿಂದ ಶೇ 20ರಷ್ಟು ಮಾತ್ರ ಇದ್ದಿರಬಹುದು. ಇದು 2018ರಲ್ಲಿ ಶೇ 52.4ರಷ್ಟು ಪಾಲು ಹೊಂದಿತ್ತು ಎಂದು ಎಸ್‌ಬಿಐನ ಮುಖ್ಯ ಅರ್ಥಶಾಸ್ತ್ರಜ್ಞ ಸೌಮ್ಯಕಾಂತಿ ಘೋಷ್ ಅವರು ಸಿದ್ಧಪಡಿಸಿರುವ ವರದಿಯು ಹೇಳಿದೆ. 2016ರ ನೋಟು ರದ್ದತಿ ತೀರ್ಮಾನದ ನಂತರದಲ್ಲಿನ ಹಲವು ಕ್ರಮಗಳು ಅರ್ಥವ್ಯವಸ್ಥೆಯ ಡಿಜಿಟಲೀಕರಣಕ್ಕೆ ವೇಗ ನೀಡಿವೆ. ಸಾಂಕ್ರಾಮಿಕವು ಗಿಗ್ ಅರ್ಥವ್ಯವಸ್ಥೆ ಪ್ರವರ್ಧಮಾನಕ್ಕೆ ಬರುವಂತೆ ಮಾಡಿದ್ದು ವ್ಯವಸ್ಥೆಯಲ್ಲಿನ ಹೆಚ್ಚೆಚ್ಚು ವಹಿವಾಟುಗಳು ಲೆಕ್ಕಕ್ಕೆ ಸಿಗುವಂತೆ ಮಾಡಿದೆ. ಬೇರೆ ದೇಶಗಳಿಗಿಂತ ಹೆಚ್ಚಿನ ವೇಗದಲ್ಲಿ ಇದು ಭಾರತದಲ್ಲಿ ಆಗಿದೆ ಎಂದು ಘೋಷ್ ಅವರು ವರದಿಯಲ್ಲಿ ಹೇಳಿದ್ದಾರೆ.

ಈಚೆಗೆ ಚಾಲನೆ ಪಡೆದ ಇ-ಶ್ರಮ್ ಪೋರ್ಟಲ್ ಸೇರಿದಂತೆ ಹಲವು ಕ್ರಮಗಳ ಪರಿಣಾಮವಾಗಿ ಕಳೆದ ಕೆಲವು ವರ್ಷಗಳಲ್ಲಿ ಕನಿಷ್ಠ ₹ 13 ಲಕ್ಷ ಕೋಟಿಯು ಸಂಘಟಿತ ಅರ್ಥ ವ್ಯವಸ್ಥೆಯ ಅಡಿಯಲ್ಲಿ ಬಂದಿವೆ ಎಂದು ವರದಿ ಹೇಳಿದೆ.

ಸಾಂಕ್ರಾಮಿಕದ ನಂತರದಲ್ಲಿ ಸಂಘಟಿತ ಆರ್ಥಿಕ ವಲಯವು ಶೇ 10ರಷ್ಟು ವಿಸ್ತರಣೆ ಕಂಡಿದೆ. ನೌಕರರ ಭವಿಷ್ಯನಿಧಿ ಸಂಘಟನೆಯು (ಇಪಿಎಫ್‌ಒ) ನೀಡುವ ಅಂಕಿ–ಅಂಶವನ್ನು ಉಲ್ಲೇಖಿಸಿರುವ ವರದಿಯು, 2017–18ರಿಂದ ಈ ವರ್ಷದ ಜುಲೈವರೆಗೆ ಒಟ್ಟು 36.6 ಲಕ್ಷ ಉದ್ಯೋಗಗಳು ಸಂಘಟಿತ ವಲಯಕ್ಕೆ ಬಂದಿವೆ ಎಂದು ಹೇಳಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ ಬಳಕೆ ಹೆಚ್ಚಾಗಿರುವ ಪರಿಣಾಮವಾಗಿ ಕೃಷಿ ವಲಯದಲ್ಲಿನ ಶೇಕಡ 20ರಿಂದ ಶೇ 25ರಷ್ಟು ವಹಿವಾಟುಗಳು ಸಂಘಟಿತ ವಲಯಕ್ಕೆ ಬಂದಿವೆ.

‘ಬಿಟ್ ಕಾಯಿನ್: ಸಮಗ್ರ ತನಿಖೆ ಆಗಿದ್ದರೆ ಸಿಬಿಐಗೆ ಏಕೆ?’

ಬೆಂಗಳೂರು: ‘ಬಿಟ್ ಕಾಯಿನ್ ಹಗರಣದ ಬಗ್ಗೆ ರಾಜ್ಯದ ತನಿಖಾ ಸಂಸ್ಥೆಗಳು ಸಮಗ್ರ ತನಿಖೆ ನಡೆಸಿದ್ದೇ ಆಗಿದ್ದಲ್ಲಿ ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ತನಿಖೆಗೆ ವಹಿಸುವ ಅಗತ್ಯವೇನಿತ್ತು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಬಿಟ್ ಕಾಯಿನ್ ಹಗರಣದ ಕುರಿತು ‘ಪ್ರಜಾವಾಣಿ’ ವರದಿಯನ್ನು ತಮ್ಮ ಟ್ವಿಟರ್ ಖಾತೆಯಲ್ಲಿ ಟ್ಯಾಗ್ ಮಾಡಿರುವ ಅವರು ಹಲವು ಸಂದೇಹಗಳನ್ನು ಎತ್ತಿದ್ದಾರೆ. ‘ಹಗರಣದ ತನಿಖೆಯನ್ನು ಜಾರಿ ನಿರ್ದೇಶನಾಲಯ ಮತ್ತು ಸಿಬಿಐಗೆ ವಹಿಸಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಸಮಗ್ರ ತನಿಖೆ ನಡೆಸಿದ್ದೇ ಆದರೆ ಹೆಚ್ಚಿನ ತನಿಖೆಗೆ ಇಡಿ ಮತ್ತು ಸಿಬಿಐಗೆ ಒಪ್ಪಿಸುವ ಅನಿವಾರ್ಯ ಯಾಕೆ ಬಂತು’ ಎಂದು ಪ್ರಶ್ನಿಸಿದ್ದಾರೆ.

‘ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದ ವರದಿಗಳನ್ನು ಗಮನಿಸಿದರೆ ರಾಜ್ಯ ಸರ್ಕಾರದ ನಡವಳಿಕೆ ಬಗ್ಗೆ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಮುಖ್ಯಮಂತ್ರಿ ಅವರು, ಈ ಹಗರಣದ ಬಗ್ಗೆ ಪ್ರಶ್ನಿಸಿದವರ ವಿರುದ್ಧ ಆರೋಪ ಮಾಡಲು ಹೋಗದೆ ತನಿಖೆಯ ಪೂರ್ಣ ವಿವರವನ್ನು ಸಾರ್ವಜನಿಕರ ಮುಂದಿಡಬೇಕು’ ಎಂದಿದ್ದಾರೆ. ‘ಬಿಟ್ ಕಾಯಿನ್ ಹಗರಣದ ಆರೋಪಿ ಐದು ಸಾವಿರ ಬಿಟ್ ಕಾಯಿನ್ ದೋಚಿದ್ದಾನೆಂದು ಸಿಸಿಬಿ ಪೊಲೀಸರು ಹೇಳಿದ್ದಾರೆಂದು ಪತ್ರಿಕೆ ವರದಿ ಮಾಡಿದೆ. ಹಾಗಿದ್ದಲ್ಲಿ, ಕದ್ದ ಆ ಬಿಟ್ ಕಾಯಿನ್‌ಗಳು ಎಲ್ಲಿವೆ? ಜಪ್ತಿ ಮಾಡಲಾಗಿದೆಯೇ? ಎಂದೂ ಕೇಳಿದ್ದಾರೆ.

ನಾಲ್ವರಿಗೆ ಬೆಳಕು ಕೊಟ್ಟ ಅಪ್ಪು

ಒಂದನೇ ಪುಟದಿಂದ


*ಡೆಸ್ಸೆಮೆಟ್‌ನ ಸ್ಟ್ರಿಪ್ಪಿಂಗ್ ಎಂಡೋಥೆಲಿಯಲ್ ಕೆರಾಟೊಪ್ಲಾಸ್ಟಿ (DSEK) - ಕಾರ್ನಿಯಾದ ಒಳ ಅಥವಾ ಆಳವಾದ ಪದರವನ್ನು ಕಾರ್ನಿಯಾದ ಒಳಗಿನ ಪದರದ ಮೇಲೆ ಪರಿಣಾಮ ಬೀರುವ ಕಾರ್ನಿಯಲ್ ಎಂಡೋಥೀಲಿಯಲ್ ಡಿಕಂಪೆನ್ಸೇಶನ್ ಹೊಂದಿರುವ ಇಬ್ಬರು ರೋಗಿಗಳಿಗೆ ಕಸಿ ಮಾಡಲಾಗುತ್ತದೆ.

ಈ ಕಾರ್ಯವಿಧಾನದಲ್ಲಿ, ಎಂಡೋಥೀಲಿಯಂ ಅನ್ನು ಮಾತ್ರ ಬದಲಾಯಿಸಲಾಗುತ್ತದೆ ಮತ್ತು ಸಾಮಾನ್ಯವಾಗಿ ಸಣ್ಣ ಛೇದನ ಮಾಡಿ ಬಳಿಕ ಹೊಲಿಯಲಾಗುತ್ತದೆ. ಕಾರ್ನಿಯಾವನ್ನು ಪೂರ್ಣ ಪ್ರಮಾಣದಲ್ಲಿ ಕಸಿ ಮಾಡುವ ಅಗತ್ಯವಿರುವುದಿಲ್ಲ. ಇದರಿಂದ ರೋಗಿ ಬೇಗ ಚೇತರಿಸಿಕೊಳ್ಳಲು ಸಾಧ್ಯ.

ಕಸಿ ಮಾಡಲು ಬಳಸದ ಲಿಂಬಲ್ ರಿಮ್ (ಕಾರ್ನಿಯಾದ ಸುತ್ತಳತೆಯ ಬಳಿ ಕಣ್ಣಿನ ಬಿಳಿ ಭಾಗ) ಅನ್ನು ಲಿಂಬಾಲ್ ಸ್ಟೆಮ್ ಸೆಲ್ ಹೊಂದಿರುವ ರೋಗಿಗಳಲ್ಲಿ ಬಳಕೆಗಾಗಿ ‘ಇಂಡ್ಯೂಸ್ಡ್ ಪ್ಲುರಿಪೊಟೆಂಟ್ ಸ್ಟೆಮ್ ಸೆಲ್’ಗಳನ್ನು ಉತ್ಪಾದಿಸಲು ನಮ್ಮ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ರಾಸಾಯನಿಕ ಗಾಯಗಳು ಆಸಿಡ್ ಗಾಯಗಳು ಮತ್ತು ಇತರ ಗಂಭೀರ ಸಮಸ್ಯೆಗಳ ಸಂದರ್ಭ ಇದನ್ನು ಬಳಕೆ ಮಾಡಲು ಸಾಧ್ಯವಿದೆ ಎಂದೂ ಭುಜಂಗಶೆಟ್ಟಿ ವಿವರಿಸಿದರು.

ಡಾ.ರೋಹಿತ್ ಶೆಟ್ಟಿ ಅವರ ನೇತೃತ್ವದಲ್ಲಿ ಡಾ.ಯತೀಶ್ ಶಿವಣ್ಣ, ಡಾ.ಶರೋನ್ ಡಿಸೋಜಾ, ಪ್ರಾರ್ಥನಾ ಭಂಡಾರಿ ಮತ್ತು ಡಾ.ಹರ್ಷ ನಾಗರಾಜ್ ಅವರು ಶಸ್ತ್ರಚಿಕಿತ್ಸೆಗಳನ್ನು ನಡೆಸಿದ್ದಾರೆ. ಕಾರ್ನಿಯಾ ತಂಡದ ಡಾ.ಗೈರಿಕ್ ಕುಂದು ಮತ್ತು ವೀರೇಶ್ ನೆರವು ನೀಡಿದ್ದಾರೆ ಎಂದು ಹೇಳಿದರು.

ಪುನೀತ್ ಕಣ್ಣು ಕಸಿ ಪ್ರಕ್ರಿಯೆ ಹೀಗೆ



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹468

ಖಾದ್ಯ ತೈಲ ಮುಂಬೈ

	(10 ಕೆಜಿಗೆ)
ಶೇಂಗಾ (ರಿಫೈನ್ಡ್)	₹1410 (-)
ಸೋಯಾ (ರಿಫೈನ್ಡ್)	₹1295 (-)
ಸೂರ್ಯಕಾಂತಿ (ರಿಫೈನ್ಡ್)	₹1320 (-)
ಪಾಮೋಲಿನ್	₹1200 (-)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,671
ಇಂದಿನ ಅಂತ್ಯ	17,929
▲	258
ದಿನದ ಗರಿಷ್ಠ	17,954

ವಿನಿಮಯ ದರ

$ ಡಾಲರ್	74.87
£ ಪೌಂಡ್	102.39
€ ಯುರೊ	86.65
¥ ಯೆನ್ (100ಕ್ಕೆ)	65.52

ಮುಂಬೈ ಧಾರಣೆ

ಶೇಂಗಾ

1-11-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1420 (-)
ಒಂದು ವಾರದ ಡೆಲಿವರಿ	1415 (-)
ಸೋಯಾ ಕಚ್ಚಾ	1250 (-)
ಪಾಮ್ ವಾರದ ಡೆಲಿವರಿ	1198 (-)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (-)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 47,550 (-)

ಬೆಳ್ಳಿ ಕೆ.ಜಿ 64,200 (-)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕರ್ನಾಟಕ: ಕನ್ನಡಿಗರಿಗೇ ಉದ್ಯೋಗ

ಒಂದನೇ ಪುಟದಿಂದ

ಕನ್ನಡದ ಮಕ್ಕಳಿಗೆ ಉದ್ಯೋಗದ ಭರವಸೆಯನ್ನು ನೀಡಬೇಕಿದೆ. ಆಗ ಮಾತ್ರ ಕನ್ನಡ, ಕನ್ನಡಿಗರ ಶಕ್ತಿ ಹೆಚ್ಚುತ್ತದೆ. ಅದಕ್ಕಾಗಿ ಕೈಗಾರಿಕಾ ತರಬೇತಿ ಕೇಂದ್ರಗಳು, ಪಾಲಿಟೆಕ್ನಿಕ್‌ಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಹೇಳಿದರು.

ರಾಜ್ಯದಲ್ಲಿ ಆರಂಭವಾಗುವ ಉದ್ದಿಮೆಗಳಲ್ಲಿ ಕೌಶಲ ವಲಯದ ಶೇಕಡ 75ರಷ್ಟು ಹುದ್ದೆಗಳನ್ನು ಕನ್ನಡಿಗರಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದು. ಆಡಳಿತದಲ್ಲಿ ಕನ್ನಡ ಬಳಕೆ ಹೆಚ್ಚಿಸಲು ಅಗತ್ಯವಿರುವ ಎಲ್ಲ ಕೆಲಸವನ್ನೂ ಮಾಡಲಾಗುವುದು. ಚಿಂತನೆ, ಯೋಜನೆ, ಅನುಷ್ಠಾನ ಎಲ್ಲವೂ ಕನ್ನಡದಲ್ಲೇ ನಡೆಯುವಂತೆ ಮಾಡುವುದು ತಮ್ಮ ಗುರಿ ಎಂದರು.

ವಿಶೇಷ ಅನುದಾನ: ಕರ್ನಾಟಕದ ಸಮಗ್ರ ಅಭಿವೃದ್ಧಿ ಆಗಬೇಕು. ಅದಕ್ಕಾಗಿ ಕಲ್ಯಾಣ ಕರ್ನಾಟಕಕ್ಕೆ ಮುಂದಿನ ಬಜೆಟ್ ನಲ್ಲಿ ₹3000 ಕೋಟಿ ವಿಶೇಷ ಅನುದಾನ ಒದಗಿಸಲಾಗುವುದು. ಕಿತ್ತೂರು ಕರ್ನಾಟಕದ ಅಭಿವೃದ್ಧಿ ಹಾಗೂ ಮೈಸೂರು ಕರ್ನಾಟಕದಲ್ಲಿ ಬಾಕಿ ಇರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಅನುದಾನ ಒದಗಿಸಲಾಗುವುದು ಎಂದು ಬೊಮ್ಮಾಯಿ ಹೇಳಿದರು.

‘ಫಡಣವೀಸ್‌ಗೆ ಡ್ರಗ್ ಮಾಫಿಯಾ ನಂಟು’

ಮುಂಬೈ: ‘ಮಹಾರಾಷ್ಟ್ರ ವಿಧಾನಸಭೆಯ ವಿರೋಧಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರಿಗೆ ಡ್ರಗ್ ಮಾಫಿಯಾ ಜೊತೆಗೆ ಸಂಪರ್ಕವಿದೆ’ ಎಂದು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ, ಎನ್‌ಸಿಪಿ ವಕ್ತಾರ ನವಾಬ್ ಮಲ್ಲಿಕ್ ಆರೋಪಿಸಿದ್ದಾರೆ.

ಎರಡು ದಿನದ ಹಿಂದಷ್ಟೇ ಫಡಣವೀಸ್ ಅವರು, ಮಲ್ಲಿಕ್ ಅವರಿಗೆ ಭೂಗತ ಜಗತ್ತಿನ ಜೊತೆಗೆ ಸಂಪರ್ಕವಿದ್ದು, ದೀಪಾವಳಿ ನಂತರ ದಾಖಲೆಗಳನ್ನು ಬಹಿರಂಗಪಡಿಸುತ್ತೇನೆ ಎಂದು ತಿಳಿಸಿದ್ದರು.

ಸೋಮವಾರ ಫಡಣವೀಸ್ ವಿರುದ್ಧ ಆರೋಪಿಸಿರುವ ಮಲ್ಲಿಕ್ ಅವರು, ‘ಸದ್ಯ ಬಂಧನದಲ್ಲಿರುವ ಜಯ್‌ದೀಪ್ ರಾಣಾ ಅವರು ಈ ಕುರಿತು ಮಾಹಿತಿ ನೀಡಿದ್ದಾರೆ’ ಎಂದು ತಿಳಿಸಿದರು.

ಜಯದೀಪ್ ರಾಣಾ ಈಗ ಡ್ರಗ್ಸ್ ಪೂರೈಕೆ ಪ್ರಕರಣದಲ್ಲಿ ಬಂಧಿತರಾಗಿದ್ದು, ಜೈಲಿನಲ್ಲಿದ್ದಾರೆ. ಅವರಿಗೆ ಫಡಣವೀಸ್ ಜೊತೆಗೆ ಸಂಪರ್ಕವಿದೆ. ಅಮೃತಾ ಫಡಣವೀಸ್ ಭಾಗಿಯಾಗಿದ್ದ ರಿವರ್ ಮಾರ್ಚ್ ಆ್ಯಂತೆಮ್‌ನ ಹಣಕಾಸು ವಿಭಾಗದ ಮುಖ್ಯಸ್ಥರಾಗಿದ್ದರು ಎಂದು ತಿಳಿಸಿದರು. ಅಲ್ಲದೆ, ಫಡಣವೀಸ್–ರಾಣಾ ಜೊತೆಗಿರುವ ಚಿತ್ರಗಳನ್ನು ಟ್ವೀಟ್ ಮಾಡಿದ್ದಾರೆ.

ಬೋನಸ್ ಷೇರಿನಿಂದ ಲಾಭವೇನು?

ಷೇರು ಮಾತು

ಶರತ್ ಎಂ.ಎಸ್.



ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಸಂಬಳದ ಜೊತೆಗೆ ಬೋನಸ್ ಕೊಡುವುದನ್ನು ನಾವೆಲ್ಲ ಕೇಳಿದ್ದೇವೆ. ಷೇರುಗಳಲ್ಲಿ ಹೂಡಿಕೆ ಮಾಡುವವರಿಗೂ ಬೋನಸ್ ಸಿಗುತ್ತದೆ ಎಂಬುದು ನಿಮಗೆ ಗೊತ್ತೇ? ಷೇರುಗಳಲ್ಲಿ ಹೂಡಿಕೆ ಮಾಡುವವರಿಗೆ ಸಿಗುವ ಲಾಭಗಳಲ್ಲಿ ಬೋನಸ್ ಷೇರು ಕೂಡ ಬಹಳ ಮುಖ್ಯ.

ಬೋನಸ್ ಷೇರು ಅಂದರೆ?: ಬೋನಸ್ ಷೇರು ಎಂದರೆ ಕಂಪನಿಯು ತನ್ನ ಷೇರುದಾದರಿಗೆ ಹೆಚ್ಚುವರಿಯಾಗಿ, ಉಚಿತವಾಗಿ ಕೊಡುವ ಷೇರು. ಸಾಮಾನ್ಯವಾಗಿ ಅನುಪಾತದ (ರೇಷ್ಯೊ) ಲೆಕ್ಕಾಚಾರದಲ್ಲಿ ಬೋನಸ್ ಷೇರು ಕೊಡಲಾಗುತ್ತದೆ. ಕಂಪನಿ ಹೊಂದಿರುವ ಬಂಡವಾಳದ ಅಗತ್ಯತೆಗೆ ತಕ್ಕಂತೆ ವಿವಿಧ ಅನುಪಾತಗಳಲ್ಲಿ ಷೇರುಗಳನ್ನು ವಿತರಣೆ ಮಾಡಲಾಗುತ್ತದೆ. ಉದಾಹರಣೆಗೆ 1:1, 3:1 ಹೀಗೆ ಬೇರೆ ಬೇರೆ ಅನುಪಾತಗಳಲ್ಲಿ ಷೇರುಗಳನ್ನು ನೀಡಲಾಗುತ್ತದೆ.

ಅಂದರೆ ಹೂಡಿಕೆ ಕಂಪನಿ ಮಾಡುವ ನಿರ್ಧಾರದ ಆಧಾರದ ಮೇಲೆ ಪ್ರತಿ ಷೇರಿಗೆ ಒಂದು ಹೆಚ್ಚುವರಿ ಷೇರು, ಪ್ರತಿ ಷೇರಿಗೆ 3 ಹೆಚ್ಚುವರಿ ಷೇರುಗಳು... ಹೀಗೆ ಅನುಪಾತಕ್ಕೆ ಅನುಗುಣವಾಗಿ ಬೋನಸ್ ಷೇರುಗಳ ಸಂಖ್ಯೆ ಬದಲಾಗುತ್ತದೆ.

ಬೋನಸ್ ಷೇರುಗಳು ಯಾವಾಗ ಸಿಗುತ್ತವೆ?: ಕಂಪನಿ ರೆಕಾರ್ಡ್ ಡೇಟ್ (ನಿಗದಿತ ದಿನಾಂಕ) ಗೊತ್ತುಪಡಿಸುತ್ತದೆ. ಆ ರೆಕಾರ್ಡ್ ಡೇಟ್‌ನ ಒಳಗಾಗಿ ಷೇರುಗಳು ನಿಮ್ಮ ಡಿ-ಮ್ಯಾಟ್ ಖಾತೆಯಲ್ಲಿದ್ದರೆ ಮಾತ್ರ ನಿಮಗೆ ಬೋನಸ್ ಷೇರುಗಳು ಸಿಗುತ್ತವೆ.

ಬೋನಸ್ ಷೇರಿನಿಂದ ಹೂಡಿಕೆ ಮೌಲ್ಯ ವೃದ್ಧಿಸುವುದೇ?: ಬೋನಸ್ ಷೇರುಗಳಿಂದಾಗಿ ಹೂಡಿಕೆ ಮೌಲ್ಯ ತಕ್ಷಣದಲ್ಲೇ ವೃದ್ಧಿಸುವುದಿಲ್ಲ. ಷೇರೊಂದರ ಮಾರುಕಟ್ಟೆ ಬೆಲೆ ₹ 1,000 ಎಂದಿಟ್ಟುಕೊಳ್ಳಿ. 1:1 ಅನುಪಾತದಲ್ಲಿ ಬೋನಸ್ ಷೇರು ದೊರೆತಾಗ, ಷೇರಿನ ಪರಿಷ್ಕೃತ ಬೆಲೆ (ಹೊಸ ಬೆಲೆ) ₹ 500 ಆಗುತ್ತದೆ. ಅಂದರೆ ₹ 500 ಮುಖಬೆಲೆಯ ಎರಡು ಷೇರುಗಳು ನಿಮ್ಮದಾಗುತ್ತವೆ.

ಬೋನಸ್ ಷೇರುಗಳಿಂದ ಲಾಭವಿಲ್ಲವೇ?: ಖಂಡಿತವಾಗಿಯೂ ದೀರ್ಘಾವಧಿಯಲ್ಲಿ ಲಾಭವಿದೆ. ಷೇರಿನ ಬೆಲೆ ಹೆಚ್ಚಳವಾದಾಗ ಹೆಚ್ಚು ಹೊಸ ಹೂಡಿಕೆದಾರರು ಅದರ ಖರೀದಿಗೆ ಮುಂದಾಗುವುದಿಲ್ಲ. ಯಾವಾಗಲೂ ಷೇರಿನ ಬೆಲೆ ಕಮ್ಮಿ ಇದ್ದಾಗಲೇ ಖರೀದಿಸಬೇಕು ಎಂಬ ಧೋರಣೆ ಹೂಡಿಕೆದಾರರಿಗೆ ಇರುತ್ತದೆ. ಉದಾಹರಣೆಗೆ, ಕಂಪನಿಯೊಂದು 1:9ರ ಅನುಪಾತದಲ್ಲಿ ಬೋನಸ್ ಷೇರು ನೀಡುತ್ತದೆ ಎಂದು ಭಾವಿಸೋಣ. ಆಗ ನಿಮ್ಮ ಬಳಿ ಇದ್ದ ಒಂದು ಷೇರಿನ ಜತೆಗೆ ಹೆಚ್ಚುವರಿಯಾಗಿ 9 ಷೇರುಗಳು ಸಿಗುತ್ತವೆ. ಈ ಸಂದರ್ಭದಲ್ಲಿ ಷೇರಿನ ಮಾರುಕಟ್ಟೆ ಬೆಲೆ ₹ 1,000 ಇದ್ದರೆ, ಷೇರಿನ ಪರಿಷ್ಕೃತ ಬೆಲೆ ₹ 100 ಆಗುತ್ತದೆ.

ಕಂಪನಿಯೊಂದರ ಷೇರಿನ ಬೆಲೆ ₹ 1,000 ಇತ್ತು, ಈಗ ಅದರ ಬೆಲೆ ₹ 100 ಎಂದಾದರೆ ಹೆಚ್ಚೆಚ್ಚು ಮಂದಿ ಅದನ್ನು ಖರೀದಿಸುತ್ತಾರೆ. ಹೀಗಾದಾಗ ಬೇಡಿಕೆ ಹೆಚ್ಚಾಗಿ ಷೇರಿನ ಬೆಲೆ ಮತ್ತೆ ವೃದ್ಧಿಸುತ್ತದೆ.

ಯಾವ ಕಂಪನಿ ಬೋನಸ್ ನೀಡುತ್ತದೆ?: ಕಂಪನಿಯು ತನ್ನ ವಹಿವಾಟು ವಿಸ್ತರಣೆಗೆ ಆಸಕ್ತಿ ಹೊಂದಿದೆಯೇ ಅಥವಾ ಸೀಮಿತ ಬೆಳವಣಿಗೆಗೆ ಮನಸ್ಸು ಮಾಡಿದೆಯೇ ಎನ್ನುವ ಅಂಶಗಳ ಆಧಾರದಲ್ಲಿ ಕಂಪನಿ ಬೋನಸ್ ಷೇರುಗಳನ್ನು ನೀಡುವುದೇ ಇಲ್ಲವೇ ಗೊತ್ತಾಗುತ್ತದೆ. ಉದಾಹರಣೆಗೆ ಇನ್ಫೊಸಿಸ್ ಹೆಚ್ಚೆಚ್ಚು ಬೋನಸ್ ಷೇರುಗಳನ್ನು ಹೂಡಿಕೆದಾರರಿಗೆ ಒದಗಿಸಿದೆ. ಆದರೆ ಗೂಗಲ್ ತನ್ನ ಹೂಡಿಕೆದಾರರಿಗೆ ಯಾವಾಗಲೂ ಬೋನಸ್ ಷೇರು ನೀಡಿಲ್ಲ. ಗೂಗಲ್ ತನಗೆ ಬಂದ ಲಾಭದಿಂದ ಹೆಚ್ಚು ಬಿಸಿನೆಸ್ ವಿಸ್ತರಣೆ ಮಾಡಿ ಷೇರುಗಳ ಬೆಲೆ ಮತ್ತಷ್ಟು ಹೆಚ್ಚಳವಾಗುವಂತೆ ನೋಡಿಕೊಳ್ಳುತ್ತಿದೆ. ಇದರಿಂದಲೂ ಹೂಡಿಕೆದಾರನಿಗೆ ಅನುಕೂಲವೇ ಇದೆ. •

ಮಾರುತಿ, ಹುಂಡೈ ಇಳಿಕೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಕಾರು ತಯಾರಿಕಾ ಕಂಪನಿಗಳಾದ ಮಾರುತಿ ಸುಜುಕಿ ಮತ್ತು ಹುಂಡೈ ಅಕ್ಟೋಬರ್ ತಿಂಗಳ ಮಾರಾಟದ ಪ್ರಮಾಣದಲ್ಲಿ ಎರಡಂಕಿಗಳ ಇಳಿಕೆ ಕಂಡಿವೆ. ಜಾಗತಿಕ ಮಟ್ಟದಲ್ಲಿ ತಲೆದೋರಿರುವ ಸೆಮಿಕಂಡಕ್ಟರ್ ಕೊರತೆಯಿಂದಾಗಿ ಉತ್ಪಾದನೆ ತಗ್ಗಿರುವುದು ಇದಕ್ಕೆ ಪ್ರಮುಖ ಕಾರಣ.

ಕಿಯಾ ಇಂಡಿಯಾ, ಹೋಂಡಾ ಕಾರ್ಸ್ ಮತ್ತು ಎಂಜಿ ಮೋಟರ್ ಕಂಪನಿಗಳ ಕಾರು ಮಾರಾಟದ ಪ್ರಮಾಣದಲ್ಲಿ ಕೂಡ ಇಳಿಕೆ ಕಂಡುಬಂದಿದೆ.

ಆದರೆ, ಟಾಟಾ ಮೋಟರ್ಸ್, ಮಹೀಂದ್ರ, ನಿಸಾನ್ ಮತ್ತು ಸ್ಕೋಡಾ ಕಂಪನಿಗಳ ವಾಹನ ಮಾರಾಟ ಪ್ರಮಾಣದಲ್ಲಿ ಏರಿಕೆ ದಾಖಲಾಗಿದೆ.

ಜಿಎಸ್‌ಟಿ ವರಮಾನ ₹ 1.30 ಲಕ್ಷ ಕೋಟಿ

ಒಂದನೇ ಪುಟದಿಂದ

ಇದರಲ್ಲಿ ಕೇಂದ್ರ ಜಿಎಸ್‌ಟಿ ಪಾಲು ₹ 23,861 ಕೋಟಿ, ರಾಜ್ಯ ಜಿಎಸ್‌ಟಿ ಪಾಲು ₹ 30,421 ಕೋಟಿ ಹಾಗೂ ಏಕೀಕೃತ ಜಿಎಸ್‌ಟಿ ಪಾಲು ₹ 67,361 ಕೋಟಿ. ಸೆಸ್ ಮೂಲಕ ಸಂಗ್ರಹ ಆಗಿರುವ ಮೊತ್ತ ₹ 8,484 ಕೋಟಿ’ ಎಂದು ಕೇಂದ್ರ ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಆರ್ಥಿಕ ಚಟುವಟಿಕೆಗಳಲ್ಲಿ ಕಂಡುಬಂದಿರುವ ಚೇತರಿಕೆಗೆ ಅನುಗುಣವಾಗಿ ಜಿಎಸ್‌ಟಿ ಸಂಗ್ರಹ ಆಗಿದೆ ಹಾಗೆಯೇ, ಕೋವಿಡ್‌ನ 2ನೇ ಅಲೆಯ ನಂತರದಲ್ಲಿ ಪ್ರತಿ ತಿಂಗಳು ಜಿಎಸ್‌ಟಿ ಇ–ವೇ ಬಿಲ್‌ಗಳಲ್ಲಿ ಆಗುತ್ತಿರುವ ಹೆಚ್ಚಳಕ್ಕೆ ಅನುಗುಣವಾಗಿ ವರಮಾನ ಸಂಗ್ರಹದಲ್ಲಿಯೂ ಏರಿಕೆ ಆಗಿದೆ ಎಂದು ಸಚಿವಾಲಯ ಹೇಳಿದೆ.

ಸೆಮಿಕಂಡಕ್ಟರ್ ಕೊರತೆಯಿಂದಾಗಿ ಕಾರುಗಳು ಮತ್ತು ಇತರ ಉತ್ಪನ್ನಗಳ ಮಾರಾಟಕ್ಕೆ ಅಡ್ಡಿ ಆಗದೆ ಇದ್ದಿದ್ದರೆ ವರಮಾನ ಸಂಗ್ರಹವು ಇನ್ನಷ್ಟು ಜಾಸ್ತಿ ಇರುತ್ತಿತ್ತು ಎಂದು ಕೂಡ ಸಚಿವಾಲಯ ಹೇಳಿದೆ.

ಮತ್ತೆ 60 ಸಾವಿರದ ಗಡಿ ದಾಟಿದ ಸಂವೇದಿ ಸೂಚ್ಯಂಕ

ಮುಂಬೈ (ಪಿಟಿಐ): ಮೂರು ದಿನಗಳಿಂದ ಇಳಿಕೆಯ ಹಾದಿಯಲ್ಲಿ ಇದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರ ಭರ್ಜರಿ ಏರಿಕೆ ದಾಖಲಿಸಿತು.

831 ಅಂಶಗಳ ಏರಿಕೆ ಕಂಡ ಸೆನ್ಸೆಕ್ಸ್ ಮತ್ತೆ 60 ಸಾವಿರದ ಗಡಿಯನ್ನು ದಾಟಿ ನಡೆಯಿತು. ದಿನದ ಅಂತ್ಯಕ್ಕೆ 60,138 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 258 ಅಂಶಗಳ ಏರಿಕೆ ದಾಖಲಿಸಿತು.



2020ನೇ ಸಾಲಿನ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ ವಿಜೇತ ಅಥ್ಲೀಟ್‌ಗಳಿಗೆ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ಸೋಮವಾರ ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ಹಸ್ತಾಂತರಿಸಿದರು– ಪಿಟಿಐ ಚಿತ್ರ

ಸೆಮಿಯತ್ತ ದಕ್ಷಿಣ ಆಫ್ರಿಕಾ ಚಿತ್ತ

ಅಬುಧಾಬಿ (ಪಿಟಿಐ): ಸತತ ಎರಡು ಜಯ ಸಾಧಿಸಿ ಹುಮ್ಮಸ್ಸಿನಲ್ಲಿರುವ ದಕ್ಷಿಣ ಆಫ್ರಿಕಾ ತಂಡ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮೊದಲ ಗುಂಪಿನ ಪಂದ್ಯದಲ್ಲಿ ಮಂಗಳವಾರ ಬಾಂಗ್ಲಾದೇಶವನ್ನು ಎದುರಿಸಲಿದೆ. ಸೂಪರ್ 12ರ ಹಂತದ ಈ ಪಂದ್ಯದಲ್ಲಿ ಗೆದ್ದರೆ ತೆಂಬಾ ಬವುಮಾ ಬಳಗದ ಸೆಮಿಫೈನಲ್ ಹಾದಿ ಸುಲಭವಾಗಲಿದೆ.

ವೆಸ್ಟ್ ಇಂಡೀಸ್ ಮತ್ತು ಶ್ರೀಲಂಕಾವನ್ನು ಮಣಿಸಿರುವ ತಂಡ ಈಗ ಭರವಸೆಯ ಅಲೆಯಲ್ಲಿದೆ. ಗುಂಪಿನ ಪಾಯಿಂಟ್ ಪಟ್ಟಿಯಲ್ಲಿ ತಂಡ ಈಗ ಎರಡನೇ ಸ್ಥಾನದಲ್ಲಿದೆ. ಹೀಗಾಗಿ ಸೆಮಿಫೈನಲ್ ಪ್ರವೇಶಿಸುವ ಸಾಧ್ಯತೆ ಹೆಚ್ಚಿರುವ ತಂಡ ಎಂದೇ ಪರಿಗಣಿಸಲಾಗಿದೆ.

ಬಾಂಗ್ಲಾದೇಶ ಆಡಿರುವ ಮೂರು ಪಂದ್ಯಗಳನ್ನು ಕೂಡ ಸೋತಿದೆ. ಹೀಗಾಗಿ ನಾಲ್ಕರ ಘಟ್ಟ ಪ್ರವೇಶಿಸುವ ಆಸೆ ಕಮರಿದೆ. ಈ ಹಿನ್ನೆಲೆಯಲ್ಲಿ ಸಮಾಧಾನಕರ ಗೆಲುವಿಗಾಗಿ ತಂಡ ಪ್ರಯತ್ನಿಸಲಿದೆ. ವಿಶ್ವ ದರ್ಜೆಯ ವೇಗಿಗಳನ್ನು ಒಳಗೊಂಡಿರುವ ದಕ್ಷಿಣ ಆಫ್ರಿಕಾ ತಂಡದ ಸ್ಪಿನ್ನರ್‌ಗಳು ಕೂಡ ಉತ್ತಮ ಸಾಮರ್ಥ್ಯ ತೋರುತ್ತಿದ್ದಾರೆ. ಇದು, ಎದುರಾಳಿಗಳನ್ನು ನಿಯಂತ್ರಿಸುವ ಯೋಜನೆಗಳು ಸಮರ್ಪಕವಾಗಲು ನೆರವಾಗುತ್ತಿದೆ.

ಆ್ಯನ್ರಿಚ್ ನಾರ್ಕಿಯಾ ಮತ್ತು ಡ್ವೇನ್ ಪ್ರೆಟೋರಿಯಸ್ ಅವರಿಗೆ ತಬ್ರೇಜ್ ಶಂಸಿ ಉತ್ತಮ ಬೆಂಬಲ ನೀಡುತ್ತಿದ್ದಾರೆ. ತೆಂಬಾ ಬವುಮಾ, ಡೇವಿಡ್ ಮಿಲ್ಲರ್ ಮತ್ತು ಏಡನ್ ಮರ್ಕರಮ್ ಬ್ಯಾಟಿಂಗ್‌ನಲ್ಲಿ ಮಿಂಚುತ್ತಿದ್ದಾರೆ. ಆದರೆ ಕ್ವಿಂಟನ್ ಡಿ'ಕಾಕ್, ರಸಿ ವ್ಯಾನ್ ಡೆರ್ ಡುಸೆನ್ ಮತ್ತು ರೀಜಾ ಹೆನ್ರಿಕ್ಸ್ ಅವೊಂದಿಗೆ ಮಧ್ಯಮ ಕ್ರಮಾಂಕದ ವೈಫಲ್ಯ ತಂಡವನ್ನು ಕಾಡುತ್ತಿದೆ.

ಮಂಡಿರಜ್ಜು ನೋವಿನಿಂದಾಗಿ ಟೂರ್ನಿಯಿಂದ ಹೊರಬಿದ್ದಿರುವ ಶಕೀಬ್ ಅಲ್ ಹಸನ್ ಅವರ ಅನುಪಸ್ಥಿತಿ ಬಾಂಗ್ಲಾದೇಶವನ್ನು ಕಾಡಲಿದೆ.

ಟ್ವೆಂಟಿ–20 ರ್‍ಯಾಂಕಿಂಗ್
ದಕ್ಷಿಣ ಆಫ್ರಿಕಾ 5
ಬಾಂಗ್ಲಾದೇಶ 9

ಟ್ವೆಂಟಿ–20 ವಿಶ್ವಕಪ್‌ನಲ್ಲಿ ಬಲಾಬಲ

ತಂಡ	ಪಂದ್ಯ	ಜಯ	ಸೋಲು	ಟೈ
ದಕ್ಷಿಣ ಆಫ್ರಿಕಾ	33	20	13	-
ಬಾಂಗ್ಲಾದೇಶ	31	7	23	1

ಆರಂಭ: ಸಂಜೆ 3.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ತೆಂಬಾ ಬವುಮಾ –ಎಎಫ್‌ಪಿ ಚಿತ್ರ



ಮೊಹಮ್ಮದುಲ್ಲಾ

ಶ್ರೀಲಂಕಾ ವಿರುದ್ಧ ಜಯ; ನಾಲ್ಕನೇ ವಿಕೆಟ್‌ಗೆ ಶತಕದ ಜೊತೆಯಾಟ ಆಡಿದ ನಾಯಕ ಮಾರ್ಗನ್

ಬಟ್ಲರ್ ಶತಕ; ಸೆಮಿಗೆ ಇಂಗ್ಲೆಂಡ್

ಶಾರ್ಜಾ (ಎಎಫ್‌ಪಿ: ಶತಕ ಗಳಿಸಿದ ವಿಕೆಟ್ ಕೀಪರ್ ಬ್ಯಾಟರ್ ಜೋಸ್ ಬಟ್ಲರ್ ಮತ್ತು ನಾಲ್ಕನೇ ವಿಕೆಟ್‌ಗೆ ಶತಕದ ಜೊತೆಯಾಟ ಆಡಿದ ನಾಯಕ ಏಯಾನ್ ಮಾರ್ಗನ್ ಅವರ ಭರ್ಜರಿ ಬ್ಯಾಟಿಂಗ್ ಇಂಗ್ಲೆಂಡ್‌ಗೆ ಭರ್ಜರಿ ಜಯ ಗಳಿಸಿಕೊಟ್ಟಿತು. ಈ ಮೂಲಕ ತಂಡ ಸೆಮಿಫೈನಲ್‌ಗೆ ಲಗ್ಗೆ ಇರಿಸಿತು.

ಶಾರ್ಜಾ ಕ್ರಿಕೆಟ್ ಅಂಗಣದಲ್ಲಿ ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಬಟ್ಲರ್ ಮತ್ತು ಮಾರ್ಗನ್ ಆಟದ ನೆರವಿನಿಂದ ಇಂಗ್ಲೆಂಡ್ ನಾಲ್ಕು ವಿಕೆಟ್‌ಗಳಿಗೆ 163 ರನ್ ಕಲೆ ಹಾಕಿತು. ಸವಾಲಿನ ಗುರಿ ಬೆನ್ನತ್ತಿದ ಶ್ರೀಲಂಕಾ 19 ಓವರ್‌ಗಳಲ್ಲಿ 137 ರನ್ ಗಳಿಸಿ ಸೋಲೊಪ್ಪಿಕೊಂಡಿತು. ತಲಾ ಎರಡು ವಿಕೆಟ್ ಉರುಳಿಸಿದ ಮೋಯಿನ್ ಅಲಿ, ಆದಿಲ್ ರಶೀದ್ ಮತ್ತು ಕ್ರಿಸ್ ಜೋರ್ಡಾನ್ ಅವರು ಲಂಕಾದ ಪತನಕ್ಕೆ ಕಾರಣವಾದರು.

ಟಾಸ್ ಗೆದ್ದ ಶ್ರೀಲಂಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೂರನೇ ಓವರ್‌ನಲ್ಲೇ ಜೇಸನ್ ರಾಯ್ ಅವರ ವಿಕೆಟ್ ಕಳೆದುಕೊಂಡು ಇಂಗ್ಲೆಂಡ್ ಸಂಕಷ್ಟಕ್ಕೆ ಸಿಲುಕಿತು. ಆಗ ತಂಡದ ಮೊತ್ತ ಕೇವಲ 13 ರನ್ ಆಗಿತ್ತು. 35 ರನ್ ಆಗುವಷ್ಟರಲ್ಲಿ ತಂಡದ ಮೂರು ವಿಕೆಟ್‌ಗಳು ಉರುಳಿದವು. ಆದರೆ ಬಟ್ಲರ್ ಅವರು ಅಮೋಘ ಬ್ಯಾಟಿಂಗ್ ಮೂಲಕ ರನ್ ಗಳಿಸುತ್ತ ಸಾಗಿದರು.

ಆರನೇ ಓವರ್‌ನಲ್ಲಿ ನಾಯಕ ಏಯಾನ್ ಮಾರ್ಗನ್ ಅವರು ಬಟ್ಲರ್ ಜೊತೆಗೂಡಿದ ನಂತರ ರನ್ ಗತಿ ಹೆಚ್ಚಾಯಿತು. ಅವರಿಬ್ಬರು ನಾಲ್ಕನೇ ವಿಕೆಟ್‌ಗೆ 112 ರನ್ ಸೇರಿಸಿದರು. ಇದಕ್ಕೆ ಅವರು ಬಳಸಿದ್ದು 78 ಎಸೆತ.

ಆರಂಭಿಕ ಬ್ಯಾಟ್ಸ್‌ಮನ್ ಜೇಸನ್ ರಾಯ್ ಔಟಾದ ಬೆನ್ನಲ್ಲೇ ಡೇವಿಡ್ ಮಲಾನ್ ಮತ್ತು ಜಾನಿ ಬೇಸ್ಟೊ ಕೂಡ ಮರಳಿದರು. ಮತ್ತೊಂದು ತುದಿಯಲ್ಲಿ ಬೌಂಡರಿಗಳನ್ನು ಗಳಿಸುತ್ತಿದ್ದ ಬಟ್ಲರ್ ಮೊದಲ 10 ಓವರ್‌ಗಳಲ್ಲಿ 47 ರನ್ ಸೇರಿಸಿದರು. 10ನೇ ಓವರ್ ನಂತರ ರನ್ ಗತಿ ಹೆಚ್ಚಿಸಲು ಅವರು ಪ್ರಯತ್ನಿಸಿದರು. 14ನೇ ಓವರ್‌ನಲ್ಲಿ ಅವರು ಅರ್ಧಶತಕ ಪೂರೈಸಿದರು. ಇದಕ್ಕಾಗಿ 45 ಎಸೆತಗಳನ್ನು ಎದುರಿಸಿದ್ದರು. ಇನಿಂಗ್ಸ್ ಮುಂದುವರಿದಂತೆ ಬಟ್ಲರ್ ಮತ್ತು ಮಾರ್ಗನ್ ನಡುವಿನ ಜೊತೆಯಾಟ ಬಲ ಪಡೆದುಕೊಂಡಿತು. 15ನೇ ಓವರ್‌ನಲ್ಲಿ ಇಬ್ಬರೂ 22 ರನ್ ಕಲೆ ಹಾಕಿದರು. ಈ ಓವರ್‌ನಲ್ಲಿ ಬಟ್ಲರ್ ಎರಡು ಸಿಕ್ಸರ್ ಸಿಡಿಸಿದರು. ಮಾರ್ಗನ್ ಒಂದು ಸಿಕ್ಸರ್ ಗಳಿಸಿದರು. ಇನಿಂಗ್ಸ್ ಮುಕ್ತಾಯದ ಹಂತದಲ್ಲಿ ಬಟ್ಲರ್ ಶತಕ ಪೂರೈಸಿದರು. ಇದು ಟ್ವೆಂಟಿ–20 ಕ್ರಿಕೆಟ್‌ನಲ್ಲಿ ಅವರ ಮೊದಲ ಶತಕವಾಗಿದೆ.



ಜೋಸ್ ಬಟ್ಲರ್ ಬ್ಯಾಟಿಂಗ್ ವೈಖರಿ– ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಇಂಗ್ಲೆಂಡ್ 4ಕ್ಕೆ 163 (ಓವರ್)
ಜೇಸನ್ ಬಿ ಡಿ'ಸಿಲ್ವಾ 9 (6 ಎ, 4x1), ಬಟ್ಲರ್ ಔಟಾಗದೆ 101 (67 ಎ, 4x6, 6x6), ಮಲಾನ್ ಬಿ ಚಮೀರ 6 (8 ಎ, 4x1), ಬೇಸ್ಟೊ ಎಲ್‌ಬಿಡಬ್ಲ್ಯು 0 (1 ಎ), ಮಾರ್ಗನ್ ಬಿ ಡಿ'ಸಿಲ್ವಾ 40 (36 ಎ, 4x1, 6x3), ಮೋಯಿನ್ ಔಟಾಗದೆ 1 (2 ಎ)
ಇತರೆ (ಲೆಗ್ ಬೈ 1, ವೈಡ್ 5) 6
ವಿಕೆಟ್ ಪತನ: 1-13 (ಜೇಸನ್ ರಾಯ್, 1.2), 2-34 (ಡೇವಿಡ್ ಮಲಾನ್, 4.6), 3-35 (ಜಾನಿ ಬೇಸ್ಟೊ, 5.2), 4-147 (ಏಯಾನ್ ಮಾರ್ಗನ್, 18.2)
ಬೌಲಿಂಗ್: ದುಷ್ಮಂತ್ ಚಮೀರ 4–0–43–1, ವಾನಿಂದು ಹಸರಂಗ ಡಿ'ಸಿಲ್ವಾ 4–0–21–3, ಲಾಹಿರು ಕುಮಾರ 4–0–44–0, ಮಹೀಶ್ ತೀಕ್ಷಣ 4–0–13–0, ಚಮಿಕ ಕರುಣರತ್ನೆ 2–0–17–0, ದಸುನ್ ಶನಕ 2–0–24–0

ಶ್ರೀಲಂಕಾ 137 (19 ಓವರ್)
ಪಥುಮ್ ರನೌಟ್ (ಮಾರ್ಗನ್/ಬಟ್ಲರ್) 1 (1ಎ), ಪೆರೇರ ಸಿ ಮಾರ್ಗನ್ ಬಿ ರಶೀದ್ 7 (9ಎ), ಚರಿತ ಸಿ ಅಲಿ ಬಿ ರಶೀದ್ 21 (16ಎ, 4X3, 6X1), ಫರ್ನಾಂಡೊ ಎಲ್‌ಬಿಡಬ್ಲ್ಯು ಜೋರ್ಡಾನ್ 13 (14ಎ, 4X1) ಭಾನುಕ ಸಿ ರಾಯ್ ಬಿ ವೋಕ್ಸ್ 26 (18ಎ, 4X2, 6X2), ಶನಕ ರನೌಟ್ (ಬಟ್ಲರ್) 26 (25ಎ, 4X2, 6X1), ವಾನಿಂದು ಸಿ ಬಿಲಿಂಗ್ಸ್ (ಬದಲಿ) ಬಿ ಲಿವಿಂಗ್‌ಸ್ಟೋನ್ 34 (21ಎ, 4X3, 6X1), ಕರುಣರತ್ನೆ ಸಿ ರಾಯ್ ಬಿ ಅಲಿ 0 (2ಎ), ಚಮೀರ ಸಿ ಮಲಾನ್ ಬಿ ಜೋರ್ಡಾನ್ 4 (4ಎ, 4X1), ತೀಕ್ಷಣ ಸಿ ಜೋರ್ಡಾನ್ ಬಿ ಅಲಿ 2 (2ಎ), ಕುಮಾರ ಔಟಾಗದೆ 1 (2ಎ).
ಇತರೆ (ಲೆಗ್‌ಬೈ 1, ವೈಡ್ 1) 2
ವಿಕೆಟ್ ಪತನ: 1–1 (ಪಥುಮ್ ನಿಸ್ಸಂಕ, 0.3), 2–24 (ಚರಿತ ಅಸಲಂಕ, 3.3), 3–34 (ಕುಶಾಲ್ ಪೆರೇರ, 5.1), 4–57 (ಆವಿಷ್ಕಾ ಫರ್ನಾಂಡೊ, 8.3), 5–76 (ಭಾನುಕ ರಾಜಪಕ್ಷ, 10.5), 6–129 (ವಾನಿಂದು ಹಸರಂಗ ಡಿಸಿಲ್ವಾ, 16.5), 7–130 (ದಸುನ್ ಶನಕ, 17.2), 8–134 (ದುಷ್ಮಂತ ಚಮೀರ, 17.6), 9–134 (ಚಮಿಕ ಕರುಣರತ್ನೆ, 18.2), 10–137 (ಮಹೀಶ್ ತೀಕ್ಷಣ, 18.6).
ಬೌಲಿಂಗ್: ಮೋಯಿನ್ ಅಲಿ 3–0–15–2, ಕ್ರಿಸ್ ವೋಕ್ಸ್ 2.3–0–25–1, ಆದಿಲ್ ರಶೀದ್ 4–0–19–2, ಕ್ರಿಸ್ ಜೋರ್ಡಾನ್ 4–0–24–2, ಲಿಯಾಮ್ ಲಿವಿಂಗ್‌ಸ್ಟೋನ್ 4–0–34–1, ತೈಮಿಲ್ ಮಿಲ್ಸ್ 1.3–0–19–0

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 26 ರನ್‌ಗಳ ಜಯ



ಇಂಗ್ಲೆಂಡ್‌ನ (ಎಡದಿಂದ) ಆದಿಲ್ ರಶೀದ್, ಮೋಯಿನ್ ಅಲಿ ಮತ್ತು ಕ್ರಿಸ್ ವೋಕ್ಸ್

ಫುಟ್‌ಬಾಲ್: ಬೆಂಗಳೂರು ಯುನೈಟೆಡ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಗಂ ಸುಭಾಷ್ ಸಿಂಗ್ ಅವರ ಹ್ಯಾಟ್ರಿಕ್ ಗೋಲುಗಳ ಬಲದಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಎಎಸ್‌ಸಿ ಮತ್ತು ಸೆಂಟರ್ ಎಫ್‌ಸಿ ಎದುರಿನ ಪಂದ್ಯದಲ್ಲಿ ಬೆಂಗಳೂರು ತಂಡ 8–0 ಗೋಲುಗಳಿಂದ ಜಯ ಗಳಿಸಿತು. ವಿಜಯಿ ತಂಡದ ಪರವಾಗಿ ಲೂಕಾ ಮಜೇನ್ (14 ಮತ್ತು 45 + 1ನೇ ನಿಮಿಷ), ಬೆಡಾಶ್ವರ್ ಸಿಂಗ್ ಲೈಶ್ರಾಮ್ (45 + 3ನೇ ನಿ), ರೊನಾಲ್ಡೊ ಆಗಸ್ಟೊ ಆ್ಯಂಟೊನಿಯೊ (48ನೇ ನಿ), ಸಿಂಗಂ ಸುಭಾಷ್ ಸಿಂಗ್ (59, 69,78ನೇ ನಿ) ಮತ್ತು ಆನೆಮ್ ಗ್ರಫೆನ್ಬರ್ಗ್ ಜುವಾರ್ (63ನೇ ನಿ) ಗೋಲು ಗಳಿಸಿದರು.

ಜವಾಹರ್ ಯೂನಿಯನ್ ಎಫ್‌ಸಿ ಮತ್ತು ಬೆಂಗಳೂರು ಈಗಲ್ಸ್ ಎಫ್‌ಸಿ ನಡುವಿನ ಪಂದ್ಯ 1–1ರಲ್ಲಿ ಡ್ರಾ ಆಯಿತು.

ಭಾರತದ ಸೋಲಿಗೆ ಕಾರಣಗಳ ಹುಡುಕಾಟ

ಸತತ ಸೋಲಿನಿಂದ ಕಂಗೆಟ್ಟ ವಿರಾಟ್ ಕೊಹ್ಲಿ ಬಳಗದ ಸೆಮಿಫೈನಲ್ ಹಾದಿ ಬಹುತೇಕ ಬಂದ್

ನವದೆಹಲಿ (ಪಿಟಿಐ): ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ಸೆಮಿಫೈನಲ್ ಕನಸು ಬಹುತೇಕ ಕಮರಿಹೋಗಿದೆ. ಮೊದಲ ಪಂದ್ಯದಲ್ಲಿ ಪಾಕಿಸ್ತಾನಕ್ಕೆ ಮಣಿದ ತಂಡಕ್ಕೆ ಎರಡನೇ ಪಂದ್ಯದಲ್ಲೂ ಚೇತರಿಸಿಕೊಳ್ಳಲು ಆಗಲಿಲ್ಲ.

ನ್ಯೂಜಿಲೆಂಡ್ ವಿರುದ್ಧ ಭಾನುವಾರ ನಡೆದ ಪಂದ್ಯದಲ್ಲಿ ತಂಡ ಎಂಟು ವಿಕೆಟ್‌ಗಳಿಂದ ಸೋತ ನಂತರ ತಂಡದ ಈ ಸ್ಥಿತಿಗೆ ಕಾರಣದ ಹುಡುಕಾಟ ಆರಂಭವಾಗಿದೆ. ಸತತವಾಗಿ ಬಯೊ-ಬಬಲ್‌ನಲ್ಲಿದ್ದು ಮಾನಸಿಕವಾಗಿ ಬಳಲಿರುವ ಆಟಗಾರರು, ತಂಡದ ಆಯ್ಕೆಯಲ್ಲಿ ಆಗಿರುವ ಲೋಪ ಮತ್ತು ನಾಯಕನ ವೈಫಲ್ಯವೇ ಸೋಲಿಗೆ ಕಾರಣ ಎಂದು ಹೇಳಲಾಗುತ್ತಿದೆ.

ಈ ವರ್ಷ ತಂಡದ ವೈಫಲ್ಯಕ್ಕೆ ನಿಖರ ಕಾರಣವೇನೆಂದು ಹೇಳಲಾಗದು. ಆದರೆ ಟ್ವೆಂಟಿ–20 ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ಶಹೀನ್ ಶಾ ಅಫ್ರಿದಿ ಅವರ ಮೊದಲ ಎರಡು ಓವರ್‌ಗಳು ಭಾರತ ತಂಡದ ಹಾದಿಯನ್ನೇ ಬದಲಿಸಿದ್ದವು. ಆ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ತಂಡಕ್ಕೆ ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲೂ ಲಯ ಕಂಡುಕೊಳ್ಳಲು ಆಗಲಿಲ್ಲ. ಈ ಪಂದ್ಯದ ನಂತರ 'ತಂಡದಲ್ಲಿ ಧೈರ್ಯ ಇಲ್ಲ' ಎಂದು ನಾಯಕ ವಿರಾಟ್ ಕೊಹ್ಲಿ ನೀಡಿರುವ ಹೇಳಿಕೆಯೂ ಚರ್ಚೆಗೆ ಗ್ರಾಸವಾಗಿದೆ.

'ಭಾರತದ ಸೋಲು ನನಗೂ ಆಘಾತ ತಂದಿದೆ. ತಂಡ ಸೋತಿದ್ದಕ್ಕಲ್ಲ, ಸೋತ ರೀತಿಗೆ ಅಚ್ಚರಿಯಾಗಿದೆ. ನೆರವು ಸಿಬ್ಬಂದಿಯ ಸಲಹೆಗಳನ್ನು ಸರಿಯಾಗಿ ಜಾರಿಗೆ ತರಲು ಆಟಗಾರರು ವಿಫಲರಾಗುತ್ತಿದ್ದಾರೆ' ಎಂದು ಮಾಜಿ ಕ್ರಿಕೆಟಿಗ ಮತ್ತು ವೀಕ್ಷಕ ವಿವರಣೆಗಾರ ವಿ.ವಿ.ಎಸ್ ಲಕ್ಷ್ಮಣ್ ಹೇಳಿದ್ದರು.

ಟ್ವೆಂಟಿ–20 ತಂಡದ ನಾಯಕತ್ವದ ಕೊನೆಯ ಹಂತದಲ್ಲಿರುವ ವಿರಾಟ್ ಕೊಹ್ಲಿ ಅವರಿಗೆ ಐಸಿಸಿಯ ಪ್ರಮುಖ ಟೂರ್ನಿಗಳಲ್ಲಿ ತಮ್ಮ ಸಾಮರ್ಥ್ಯ ತೋರಲು ಆಗಲಿಲ್ಲ. ಐಪಿಎಲ್‌ನಲ್ಲಿ ಕೂಡ ತಾವು ಮುನ್ನಡೆಸುವ ತಂಡಕ್ಕೆ ಪ್ರಶಸ್ತಿ ಗೆದ್ದುಕೊಡಲು ಆಗಲಿಲ್ಲ. ದ್ವಿಪಕ್ಷೀಯ ಸರಣಿಗಳಲ್ಲಿ ಮಾತ್ರ ಯಶಸ್ಸು ಗಳಿಸುತ್ತಿದ್ದಾರೆ.

ವಿಶ್ವಕಪ್ ಟೂರ್ನಿಯಲ್ಲಿ ಅಂತಿಮ 11ರ ಆಯ್ಕೆಯಲ್ಲೂ ತಂಡ ಎಡವುತ್ತಿದೆ. ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ರೋಹಿತ್ ಶರ್ಮಾ ಬದಲಿಗೆ ಇಶಾನ್ ಕಿಶನ್ ಅವರನ್ನು ಇನಿಂಗ್ಸ್ ಆರಂಭಿಸಲು ಕಳುಹಿಸಿದ್ದಕ್ಕೆ ಟೀಕೆಗಳು ಎದ್ದಿವೆ.

ಮಾಜಿ ಆಟಗಾರ ಮತ್ತು ವೀಕ್ಷಕ ವಿವರಣೆಕಾರ ಸುನಿಲ್ ಗಾವಸ್ಕರ್ ಅವರೇ ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಹಾರ್ದಿಕ್ ಪಾಂಡ್ಯ ಅವರಿಗೆ ಮತ್ತೆ ಮತ್ತೆ ಅವಕಾಶ ನೀಡುತ್ತಿರುವುದು ಕೂಡ ಟೀಕೆಗೆ ಕಾರಣವಾಗಿದೆ.



ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ



ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ಭಾರತದ ಯೋಜನೆಗಳು ವಿಫಲಗೊಂಡವು. ಬ್ಯಾಟರ್‌ಗಳು ಭಾರಿ ಹೊಡೆತಗಳಿಗೆ ಕೈಹಾಕಿ ವಿಕೆಟ್ ಕಳೆದುಕೊಂಡರು. ಬೌಲರ್‌ಗಳು ಕೂಡ ಕೈಚೆಲ್ಲಿದರು. ಸಚಿನ್ ತೆಂಡೂಲ್ಕರ್
ಮಾಜಿ ಕ್ರಿಕೆಟಿಗ

ನಮೀಬಿಯಾ ಎದುರಾಳಿ: ಹುಮ್ಮಸ್ಸಿನಲ್ಲಿ ಬಾಬರ್ ಬಳಗ

ನಾಲ್ಕರ ಘಟ್ಟದ ಮೇಲೆ ಪಾಕಿಸ್ತಾನ ಕಣ್ಣು

ಅಬುಧಾಬಿ (ಪಿಟಿಐ): ಭಾರತ ಮತ್ತು ನ್ಯೂಜಿಲೆಂಡ್ ಎದುರು ಪಾರಮ್ಯ ಸಾಧಿಸಿದ್ದು ಸೇರಿದಂತೆ ಗೆಲುವಿನ 'ಹ್ಯಾಟ್ರಿಕ್' ಸಾಧನೆ ಮಾಡಿರುವ ಪಾಕಿಸ್ತಾನ ತಂಡ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ನಮೀಬಿಯಾವನ್ನು ಎದುರಿಸಲಿದೆ.

ಬಲಿಷ್ಠ ತಂಡಗಳಿಗೆ ಪ್ರಬಲ ಪೈಪೋಟಿ ನೀಡುತ್ತ ಬಂದಿರುವ ನಮೀಬಿಯಾ ತಂಡವು ಪಾಕಿಸ್ತಾನಕ್ಕೆ ಉತ್ತಮ ಪೈಪೋಟಿ ನೀಡುವ ನಿರೀಕ್ಷೆ ಇದೆ. ಆದರೆ ಪಾಕಿಸ್ತಾನ ಈ ಪಂದ್ಯದಲ್ಲಿ ಗೆದ್ದು ಸೆಮಿಫೈನಲ್ ಪ್ರವೇಶವನ್ನು ಖಾತರಿಪಡಿಸಿಕೊಳ್ಳಲು ಪ್ರಯತ್ನಿಸಲಿದೆ.

ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ತಂಡಗಳು ಭದ್ರತೆಯ ಕಾರಣ ಹೇಳಿ ಪಾಕಿಸ್ತಾನದಿಂದ ವಾಪಸ್ ಹೋಗಿದ್ದವು. ವಿಶ್ವಕಪ್‌ನಲ್ಲಿ ಪಾಕಿಸ್ತಾನ ಆರಂಭದಿಂದಲೇ ಅಮೋಘ ಆಟ ಆಡುತ್ತಿದೆ. ಭಾರತವನ್ನು 10 ವಿಕೆಟ್‌ಗಳಿಂದ ಸೋಲಿಸಿದ ಹುಮ್ಮಸ್ಸಿನಲ್ಲಿದ್ದ ಪಾಕಿಸ್ತಾನ ನಂತರ ನ್ಯೂಜಿಲೆಂಡ್ ಮತ್ತು ಅಫ್ಗಾನಿಸ್ತಾನ ವಿರುದ್ಧವೂ ಕ್ರಮವಾಗಿ ಐದು ವಿಕೆಟ್‌ಗಳಿಂದ ಜಯ ಸಾಧಿಸಿತ್ತು. ಆರಂಭಿಕ ಜೋಡಿ ಬಾಬರ್ ಆಜಂ ಮತ್ತು ಮೊಹಮ್ಮದ್ ರಿಜ್ವಾನ್ ಅವರು ಅತ್ಯುತ್ತಮ ಫಾರ್ಮ್‌ನಲ್ಲಿದ್ದು ಮಧ್ಯಮ ಕ್ರಮಾಂಕದ ಆಸಿಫ್ ಅಲಿ ಸಿಕ್ಸರ್‌ಗಳ ಮೂಲಕ ಮಿಂಚಿದ್ದಾರೆ. ಆದರೆ ಅನುಭವಿ ಬ್ಯಾಟರ್ ಮೊಹಮ್ಮದ್ ಹಫೀಜ್ ಮತ್ತು ಶೊಯೆಬ್ ಮಲಿಕ್ ಅವರು ರನ್ ಗಳಿಸಲು ವಿಫಲರಾಗುತ್ತಿರುವುದು ತಂಡದಲ್ಲಿ ಆತಂಕ ಮೂಡಿಸಿದೆ.

ತಂಡದ ಬೌಲಿಂಗ್ ವಿಭಾಗ ಬಲಿಷ್ಠವಾಗಿದ್ದು ಯಾವುದೇ ತಂಡದ ಬ್ಯಾಟರ್‌ಗಳನ್ನು ಕೂಡ ಕಟ್ಟಿಹಾಕುವಷ್ಟು ಬಲಿಷ್ಠವಾಗಿದೆ. ನಮೀ ಬಿಯಾ ಬ್ಯಾಟರ್‌ಗಳ ಮೇಲೆಯೂ ಆಧಿಪತ್ಯ ಸ್ಥಾಪಿಸಲು ಬೌಲರ್‌ಗಳು ಪ್ರಯತ್ನಿಸಲಿದ್ದಾರೆ. ಹಸನ್ ಅಲಿ ಮಾತ್ರ ಸ್ವಲ್ಪ ವೈಫಲ್ಯ ಅನುಭವಿಸುತ್ತಿದ್ದಾರೆ.

ಅಫ್ಗಾನಿಸ್ತಾನ ವಿರುದ್ಧ ನೀರಸ ಆಟವಾಡಿರುವ ನಮೀಬಿಯಾ ಪುಟಿದೇಳುವ ಹುಮ್ಮಸ್ಸಿನಲ್ಲಿದೆ. ತಂಡದ ಆರು ಬ್ಯಾಟರ್‌ಗಳು ವೇಗಿಗಳಿಗೆ ಬಲಿಯಾಗಿದ್ದರು. ಹೀಗಾಗಿ ಪಾಕ್ ವೇಗದ ದಾಳಿಯನ್ನು ತಂಡ ಹೇಗೆ ನಿಭಾಯಿಸಲಿದೆ ಎಂಬುದು ಕುತೂಹಲ ಕೆರಳಿಸಿದೆ.



ಪಾಕಿಸ್ತಾನದ ಶಹೀನ್ ಶಾ ಅಫ್ರಿದಿ –ಎಎಫ್‌ಪಿ ಚಿತ್ರ

ಟ್ವೆಂಟಿ–20 ರ್‍ಯಾಂಕಿಂಗ್
ಪಾಕಿಸ್ತಾನ 2
ನಮೀಬಿಯಾ 15

ಟ್ವೆಂಟಿ–20 ವಿಶ್ವಕಪ್‌ನಲ್ಲಿ ಬಲಾಬಲ

ತಂಡ	ಪಂದ್ಯ	ಜಯ	ಸೋಲು	ಟೈ
ಪಾಕಿಸ್ತಾನ	37	22	14	1
ನಮೀಬಿಯಾ	5	3	2	-

ಆರಂಭ: ರಾತ್ರಿ 7.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಬೆಂಗಳೂರು ರೇಸ್

ನೈಟ್ ಇನ್ ಹೂವ್ಸ್ ಗೆಲ್ಲುವ ನಿರೀಕ್ಷೆ

ಮುಂದೂಡಿದ್ದ ಬೆಂಗಳೂರು ಚಳಿಗಾಲದ ಮೊದಲನೇ ದಿನದ ರೇಸ್‌ಗಳು ಮಂಗಳವಾರ ನಡೆಯಲಿವೆ. ರಾಯಲ್ ಕೋಲ್ಕತ್ತ ಟರ್ಫ್ ಕ್ಲಬ್ ಪ್ರಧಾನ ಆಕರ್ಷಣೆಯಾಗಿದ್ದು ನೈಟ್ ಇನ್ ಹೂವ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡತಿದೆ:

1ನೇ ರೇಸ್: ಗಜೆಬೊ ಟಾಕ್ 7, ಐಕಾನಿಕ್ ಪ್ರಿನ್ಸೆಸ್ 10, ಎಲೈಟ್ ಏಜೆಂಟ್ 12
2ನೇ ರೇಸ್: ಡಿ ವಿಲಿಯರ್ಸ್ 1, ಸ್ಟ್ರೈಕಿಂಗ್ ಸಪೋರ್ಟ್ 12, ಸ್ಯಾಕ್ರಮೆಂಟ್ 3
3ನೇ ರೇಸ್: ಮಾರ್ಕೊಪೊಲೊ 3, ಆಗಸ್ಟಿನ 6, ಶಾನ್ ಎ ಅಜೀಮ್ 9
4ನೇ ರೇಸ್: ಕ್ರಿಸ್ಟೊಫರ್ ವ್ರೆನ್ 1, ಜನರಲ್ ಪ್ಯಾಟನ್ 3, ಟ್ವಿಂಕಲ್ ಫೀಟ್ 4
5ನೇ ರೇಸ್: ವಾಚ್‌ಮೈಸ್ಟಾರ್ಸ್ 12, ಸಿಲ್ವರ್ ಡ್ಯೂ 3, ಒಸಿರಿಸ್ 7
6ನೇ ರೇಸ್: ನೈಟ್ ಇನ್ ಹೂವ್ಸ್ 1, ಪೆಕನ್‌ವುಡ್ 2, ಡಿಫೈನಿಂಗ್ ಪವರ್ 3
7ನೇ ರೇಸ್: ಮಿಸ್‌ಲ್‌ಟೊ 4, ಆಂಟಬಸ್ 1, ಸ್ಟಾಕ್‌ಬ್ರಿಡ್ಜ್ 6
8ನೇ ರೇಸ್: ಜ್ಯಾಕ್ ರಿಯಾನ್ 4, ಆಲ್ ಎಬೌಟ್ ಹರ್ 10, ಸ್ಟ್ರೈಕಿಂಗ್ ಮೆಮೋರಿ 6

ಉತ್ತಮ ಬೆಟ್: ವಾಚ್‌ಮೈಸ್ಟಾರ್ಸ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
4,5,6,7,8	3,4,5	6,7,8



ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ನಡೆದ ಸೋಮವಾರ ನಡೆದ ರಾಜ್ಯೋತ್ಸವ ಟ್ರೋಫಿ ರೇಸ್‌ನಲ್ಲಿ ಪ್ರಶಸ್ತಿ ಗೆದ್ದ ಯುನೈಟೆಡ್ ರೇಸಿಂಗ್ ಆ್ಯಂಡ್ ಬ್ಲಡ್‌ಸ್ಟಾಕ್ ಬ್ರೀಡರ್ಸ್ ಲಿಮಿಟೆಡ್‌ನ ಜೆಯನ್ ಮಿರ್ಜಾ (ಬಲ) ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನೀಲ್ ಕುಮಾರ್ (ಎಡ) ಅವರು ಟ್ರೋಫಿ ವಿತರಿಸಿದರು. ಬಿಟಿಸಿ ಮುಖ್ಯಸ್ಥ ಡಿ ವಿನೋದ್ ಶಿವಪ್ಪ ಹಾಗೂ ಸೀನಿಯರ್ ಸ್ಟೀವರ್ಡ್ ಹರಿಮೋಹನ್ ನಾಯ್ಡು ಈ ಸಂದರ್ಭದಲ್ಲಿದ್ದರು– ಪ್ರಜಾವಾಣಿ ಚಿತ್ರ

ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್: ನರೇಂದರ್ ಮುನ್ನಡೆ

ಎಂಟರಘಟ್ಟಕ್ಕೆ ನಿಶಾಂತ್, ಸಂಜೀತ್

ಬೆಲ್‌ಗ್ರೇಡ್ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಬಾಕ್ಸರ್‌ಗಳು ಗೆಲುವಿನ ಅಭಿಯಾನ ಮುಂದುವರಿಸಿದ್ದಾರೆ. ಪ್ರೀಕ್ವಾರ್ಟರ್‌ಫೈನಲ್‌ಗಳಲ್ಲಿ ಭರ್ಜರಿ ಜಯ ಗಳಿಸಿದ ನಿಶಾಂತ್ ದೇವ್ ಹಾಗೂ ಸಂಜೀತ್ ಎಂಟರಘಟ್ಟಕ್ಕೆ ಲಗ್ಗೆಯಿಟ್ಟಿದ್ದಾರೆ.

71 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ನಿಶಾಂತ್, ಭಾನುವಾರ ತಡರಾತ್ರಿ ನಡೆದ ಹಣಾಹಣಿಯಲ್ಲಿ 3–2ರಿಂದ ಮೆಕ್ಸಿಕೊದ ಮಾರ್ಕೊ ಅಲ್ವರೆಜ್ ಅವರ ಸವಾಲು ಮೀರಿದರು.

ಕ್ವಾರ್ಟರ್‌ಫೈನಲ್‌ನಲ್ಲಿ ನಿಶಾಂತ್ ಅವರು ರಷ್ಯಾದ ವ್ಯಾಡಿಮ್ ಮಸಾಯೆವ್ ವಿರುದ್ಧ ಸೆಣಸಲಿದ್ದಾರೆ.

ಹೋದ ಆವೃತ್ತಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದ ಸಂಜೀತ್ (92 ಕೆಜಿ), 16ರ ಘಟ್ಟದ ಬೌಟ್‌ನಲ್ಲಿ 4–1ರಿಂದ ಜಾರ್ಜಿಯಾದ ಜಾರ್ಜಿ ಸಿಗ್ಲೆಜ್ ಅವರನ್ನು ಪರಾಭವಗೊಳಿಸಿದರು. ಮುಂದಿನ ಹಣಾಹಣಿಯಲ್ಲಿ ಅವರಿಗೆ ಇಟಲಿಯ ಅಜೀಜ್ ಅಬ್ಬೆಸ್ ಮೊಹಿದೀನ್ ಸವಾಲು ಎದುರಾಗಿದೆ.


ಭಾರತದ ನಿಶಾಂತ್ ದೇವ್ (ಎಡ) ಗೆಲುವಿನ ಸಂಭ್ರಮ– ಪಿಟಿಐ ಚಿತ್ರ

92 + ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿರುವ ನರೇಂದರ್ ಬೆರ್ವಾಲ್ ಕೂಡ ಭಾನುವಾರ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದರು. ತಜಿಕಿಸ್ತಾನದ ಜಾಕೊನ್ ಒರ್ಬೊನೊವ್ ಅವರನ್ನು ಎರಡನೇ ಸುತ್ತುಗಳಲ್ಲಿ ಕಂಗೆಡಿಸಿದ ಅವರು ಸುಲಭ ಜಯ ಸಂಪಾದಿಸಿದರು.

ಬೌಟ್ ಆರಂಭವಾದ ಮೂರು ನಿಮಿಷಗಳಲ್ಲೇ ಭಾರತದ ಬಾಕ್ಸರ್‌ನ ನೇರ ಪಂಚ್‌ಗಳಿಗೆ ಜಾಕೊನ್ ಉಸಿರಾಡಲೂ ಪರದಾಟ ನಡೆಸಬೇಕಾಯಿತು. ಹೀಗಾಗಿ ಹಣಾಹಣಿಯನ್ನು ಎರಡನೇ ಸುತ್ತಿಗೇ ಸ್ಥಗಿತಗೊಳಿಸಿ ನರೇಂದರ್ ಅವರನ್ನು ವಿಜಯಿ ಎಂದು ಪ್ರಕಟಿಸಲಾಯಿತು.

ರೋಹಿತ್ ಮೋರ್ (57 ಕೆಜಿ ವಿಭಾಗ) ಹಾಗೂ ಆಕಾಶ್ ಸಂಗ್ವಾನ್ (67 ಕೆಜಿ) ಅವರ ಅಭಿಯಾನವು ಪ್ರೀಕ್ವಾರ್ಟರ್‌ನಲ್ಲಿ ಅಂತ್ಯವಾಯಿತು. ರೋಹಿತ್ 1–4ರಿಂದ ಸೆರಿಕ್ ತೆಮಿರ್‌ಜನೊವ್ ಎದುರು ಎಡವಿದರೆ, ಆಕಾಶ್ 0–5ರಿಂದ ಕ್ಯೂಬಾದ ಕೆವಿನ್ ಬ್ರೌನ್ ಬ್ಯಾಜಿನ್ ಎದುರು ಮುಗ್ಗರಿಸಿದರು.

ರೋಹಿತ್– ಬ್ಯಾಜಿನ್ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಇಬ್ಬರೂ ಬಾಕ್ಸರ್‌ಗಳು ತೀವ್ರ ಗಾಯಗೊಂಡರು. ಇಬ್ಬರ ಮುಖದ ಮೇಲೂ ರಕ್ತ ಸುರಿಯಿತು.

ಚೆಸ್: ದಿವ್ಯಾಗೆ ಜಯ

ರಿಗಾ, ಲಾತ್ವಿಯಾ (ಪಿಟಿಐ): ಭಾರತದ ಆಟಗಾರ್ತಿ ದಿವ್ಯಾ ದೇಶಮುಖ್ ಅವರು ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯ ಪಂದ್ಯದಲ್ಲಿ ಜಯ ಸಾಧಿಸಿದರು. ಆದರೆ ದ್ರೋಣವಲ್ಲಿ ಹಾರಿಕ ಹಾಗೂ ಕೆ. ಶಶಿಕಿರಣ್ ಡ್ರಾಕ್ಕೆ ಸಮಾಧಾನಪಟ್ಟರು.

ದಿವ್ಯಾ ಅವರು ನಿಮ್ಜೊ–ಇಂಡಿಯನ್ ಮಾದರಿಯ ಪಂದ್ಯದಲ್ಲಿ ಲಾತ್ವಿಯಾದ ಮದಾರ ಗೋಲ್‌ಸ್ಟಾ ಅವರನ್ನು ಸೋಲಿಸಿದರು. 49 ನಡೆಗಳಲ್ಲಿ ಗೆಲುವು ಒಲಿಸಿಕೊಂಡ ಅವರು ಪಾಯಿಂಟ್ಸ್ ಸಂಖ್ಯೆಯನ್ನು ಎರಡಕ್ಕೆ ಹೆಚ್ಚಿಸಿಕೊಂಡರು.

ಐದನೇ ಸುತ್ತಿನ ಪಂದ್ಯದಲ್ಲಿ ಹಾರಿಕ ಅವರು ರಷ್ಯಾದ ನತಾಲಿಯಾ ಪೊಗೊನಿನಾ ಅವರೊಂದಿಗೆ ಡ್ರಾ ಸಾಧಿಸಿದರು. ಅನುಭವಿ ಶಶಿಕರಣ್ ಕೂಡ ರಷ್ಯಾದ ವ್ಲಾದಿಮಿರ್ ಫೆಡೊಸೀವ್ ಅವರೊಂದಿಗೆ ಸಮಬಲ ಸಾಧಿಸಿದರು.

ಶಶಿಕಿರಣ್ ಹಾಗೂ ಹಾರಿಕ ಅವರ ಬಳಿ ಸದ್ಯ ತಲಾ 3.5 ಪಾಯಿಂಟ್‌ಗಳಿವೆ.

ಹಾಕಿ: ಆರ್‌ಎಸ್‌ಪಿಬಿ ತಂಡಕ್ಕೆ ಪ್ರಶಸ್ತಿ ಗರಿ

ಕೋಲ್ಕತ್ತ (ಪಿಟಿಐ): ಉತ್ತಮ ಆಟವಾಡಿದ ರೈಲ್ವೆ ಕ್ರೀಡಾ ಅಭಿವೃದ್ಧಿ ಮಂಡಳಿ (ಆರ್‌ಎಸ್‌ಪಿಬಿ) ತಂಡವು ರಾಷ್ಟ್ರೀಯ ಅಂತರ್ ಇಲಾಖೆಗಳ ಮಹಿಳಾ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದಿತು. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ 3–0ಯಿಂದ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ತಂಡವನ್ನು ಮಣಿಸಿತು. ವಿಜೇತ ತಂಡದ ಪರ ಕರೀಷ್ಮಾ ಯಾದವ್, ಅಮರೀಂದರ್ ಕೌರ್ ಹಾಗೂ ವಿರಾಜಿನಿ ಎಕ್ಕಾ ಗೋಲು ದಾಖಲಿಸಿದರು.

ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಕಣದಲ್ಲಿ ಸಮೀರ್

ಶ್ರೀಕಾಂತ್, ಲಕ್ಷ್ಯ ಸೇನ್ ಮೇಲೆ ಕಣ್ಣು

ಸಾರ್‌ಬ್ರೂಕನ್, ಜರ್ಮನಿ (ಪಿಟಿಐ): ಪ್ರಮುಖ ಆಟಗಾರ ಕಿದಂಬಿ ಶ್ರೀಕಾಂತ್ ಹಾಗೂ ಉತ್ತಮ ಲಯದಲ್ಲಿರುವ ಲಕ್ಷ್ಯ ಸೇನ್ ಅವರು ಮಂಗಳವಾರ ಆರಂಭವಾಗುವ ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಶ್ರೀಕಾಂತ್ ಅವರು ಕಳೆದ ವಾರ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಲಯಕ್ಕೆ ಮರಳಿರುವ ಸೂಚನೆ ನೀಡಿದ್ದರು. ಟೂರ್ನಿಯ ಎರಡನೇ ಸುತ್ತಿನ ಪಂದ್ಯದಲ್ಲಿ ಅವರು ಎರಡು ಬಾರಿಯ ವಿಶ್ವ ಚಾಂಪಿಯನ್, ಜಪಾನ್‌ನ ಕೆಂಟೊ ಮೊಮೊಟಾ ಎದುರು ವೀರೋಚಿತ ಹೋರಾಟ ತೋರಿ ಸೋತಿದ್ದರು. ಅದೇ ಲಯ ಮುಂದುವರಿಸುವ ಛಲದಲ್ಲಿರುವ ಶ್ರೀಕಾಂತ್, ಹೈಲೊ ಟೂರ್ನಿಯ ಮೊದಲ ಸುತ್ತಿನಲ್ಲಿ ಜಪಾನ್‌ನ ಕೋಕಿ ವಾಟನ್‌ಬೆ ಅವರನ್ನು ಎದುರಿಸಲಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 22ನೇ ಸ್ಥಾನದಲ್ಲಿರುವ ಲಕ್ಷ್ಯ, ಡೆನ್ಮಾರ್ಕ್ ಹಾಗೂ ಫ್ರೆಂಚ್ ಓಪನ್ ಟೂರ್ನಿಗಳಲ್ಲಿ ಕ್ರಮವಾಗಿ ಎರಡನೇ ಸುತ್ತು ಹಾಗೂ ಕ್ವಾರ್ಟರ್‌ಫೈನಲ್‌ಗಳಲ್ಲಿ ನಿರಾಸೆ ಅನುಭವಿಸಿದ್ದರು. ಇಲ್ಲಿ ಮೊದಲ ಸುತ್ತಿನಲ್ಲಿ ಅವರಿಗೆ ಫ್ರಾನ್ಸ್‌ನ ಥಾಮಸ್ ರೌಕ್ಸೆಲ್ ಸವಾಲು ಎದುರಾಗಿದೆ.

ಸಿಂಗಲ್ಸ್ ವಿಭಾಗದಲ್ಲಿ ಸಮೀರ್ ವರ್ಮಾ, ಮಾಜಿ ಚಾಂಪಿಯನ್ ಶುಭಾಂಕರ್ ಡೇ, ಎಚ್.ಎಸ್. ಪ್ರಣಯ್, ಸೌರಭ್ ವರ್ಮಾ ಕೂಡ ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಬಿ.ಸುಮೀತ್ ರೆಡ್ಡಿ–ಮನು ಅತ್ರಿ, ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ–ಎನ್.ಸಿಕ್ಕಿರೆಡ್ಡಿ ಕಳೆದ ಟೂರ್ನಿಗಳಲ್ಲಿ ಅನುಭವಿಸಿದ ನಿರಾಸೆ ಮರೆಯುವ ತವಕದಲ್ಲಿದ್ದಾರೆ.

ಕುಸ್ತಿ: ಬಸವರಾಜಗೆ ಕಂಚು

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಗರದ ಕ್ರೀಡಾ ವಸತಿ ನಿಲಯದ ಕುಸ್ತಿಪಟು ಬಸವರಾಜ ಪಾಟೀಲ ಅವರು ಹರಿಯಾಣದ ಹಿಸ್ಸಾರ್‌ನಲ್ಲಿ ಸೋಮವಾರ ನಡೆದ ರಾಷ್ಟ್ರೀಯ ಜೂನಿಯರ್ ಬೀಚ್ ಕುಸ್ತಿ ಚಾಂಪಿಯನ್‌ಷಿಪ್‌ನ 90 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಬಸವರಾಜ ಅವರು ಕಂಚಿನ ಪದಕಕ್ಕಾಗಿ ನಡೆದ ಹಣಾಹಣಿಯಲ್ಲಿ ಪಂಜಾಬ್‌ನ ಅಜಯಕುಮಾರ್ ಅವರನ್ನು 3–0ರಲ್ಲಿ ಮಣಿಸಿದರು.

ಸೆಮಿಫೈನಲ್‌ನಲ್ಲಿ ಅವರು ಹರಿಯಾಣದ ಸೂರ್ಯಪ್ರತಾಪ ಎದುರು 1–2ರಲ್ಲಿ ಪರಾಭವಗೊಂಡಿದ್ದರು.


ಬಸವರಾಜ ಪಾಟೀಲ

ನಗರದ ಎಆರ್‌ಜಿ ಕಾಲೇಜಿನಲ್ಲಿ ಮೊದಲೇ ವರ್ಷದ ಬಿ.ಎ. ವಿದ್ಯಾರ್ಥಿಯಾಗಿರುವ ಬಸವರಾಜ ಅವರು ಆರ್. ಶಿವಾನಂದ ಬಳಿ ತರಬೇತಿ ಪಡೆಯುತ್ತಿದ್ದಾರೆ.


ಕ್ರಿಕೆಟ್: ಕರ್ನಾಟಕ ಮಹಿಳಾ ತಂಡಕ್ಕೆ ಜಯ

ಬೆಂಗಳೂರು: ವೃಂದಾ ದಿನೇಶ್ (104, 113ಎಸೆತ, 12 ಬೌಂಡರಿ) ಅವರ ಭರ್ಜರಿ ಶತಕದ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ ಮಹಿಳಾ ಏಕದಿನ ಟ್ರೋಫಿ ಟೂರ್ನಿಯ ಕ್ರಿಕೆಟ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಮಹಾರಾಷ್ಟ್ರದ ನಾಗಪುರದ ಅಮೃತಬಾಯಿ ದಾಗಾ ಕಾಲೇಜು ಮೈದಾನದಲ್ಲಿ ನಡೆದ ಎಲೀಟ್ 'ಇ'ಗುಂಪಿನ ಪಂದ್ಯದಲ್ಲಿ ಸೋಮವಾರ ರಾಜ್ಯ ತಂಡದವರು 207 ರನ್‌ಗಳಿಂದ ಪುದುಚೇರಿ ತಂಡಕ್ಕೆ ಸೋಲುಣಿಸಿದರು. ಮೊದಲು ಬ್ಯಾಟ್ ಮಾಡಿದ ಕರ್ನಾಟಕ 50 ಓವರ್‌ಗಳಲ್ಲಿ 5 ವಿಕೆಟ್‌ಗೆ 298 ರನ್ ಕಲೆಹಾಕಿತು. ಮೋನಿಕಾ ಸಿ. ಪಟೇಲ್ (9ಕ್ಕೆ3), ರಾಮೇಶ್ವರಿ ಗಾಯಕವಾಡ್ (16ಕ್ಕೆ 3) ಹಾಗೂ ಪ್ರತ್ಯೂಷಾ (16ಕ್ಕೆ 3) ಅವರ ಬೌಲಿಂಗ್ ದಾಳಿಗೆ ನಲುಗಿದ ಪುದುಚೇರಿ ಕೇವಲ 91 ರನ್‌ಗಳಿಗೆ ಎಲ್ಲ ವಿಕೆಟ್ ಒಪ್ಪಿಸಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 50 ಓವರ್‌ಗಳಲ್ಲಿ 5 ವಿಕೆಟ್‌ಗೆ 298 (ವೃಂದಾ ದಿನೇಶ್ 104, ದಿವ್ಯಾ ಜ್ಞಾನಾನಂದ 54, ವೇದಾ ಕೃಷ್ಣಮೂರ್ತಿ 23, ಪ್ರತ್ಯೂಷಾ ಸಿ.ಔಟಾಗದೆ 40, ಶ್ರೇಯಾಂಕಾ ಆರ್. ಪಾಟೀಲ್ ಔಟಾಗದೆ 31). ಪುದುಚೇರಿ: 45.5 ಓವರ್‌ಗಳಲ್ಲಿ 91 (ಕರುಣಾ ಜೈನ್ 21, ರೆಬೆಕಾ 27; ಮೋನಿಕಾ ಪಟೇಲ್ 9ಕ್ಕೆ3, ಪ್ರತ್ಯೂಷಾ 16ಕ್ಕೆ 3, ರಾಮೇಶ್ವರಿ ಗಾಯಕವಾಡ್ 16ಕ್ಕೆ 3) . ಫಲಿತಾಂಶ: ಕರ್ನಾಟಕ ತಂಡಕ್ಕೆ 207 ರನ್‌ಗಳ ಜಯ

ಕಾಡುವ ನಿದ್ರೆಗೆ ಕಾರಣ ಆಹಾರ





ಮಲಗುವ ಮುನ್ನ ಈ ಆಹಾರ ಸೇವಿಸಿ

- **ಬಾದಾಮಿ:** ಒಂದು ಹಿಡಿ ಬಾದಾಮಿಯನ್ನು ನಿದ್ರಿಸುವ ಮುನ್ನ ಸೇವಿಸಬಹುದು.
- **ಅಕ್ರೂಟ್:** 8–10 ಅಕ್ರೂಟ್ ಚೂರುಗಳನ್ನು ಅಗಿದು ತಿಂದರೆ ಬೇಗ ನಿದ್ರೆ ಬರುತ್ತದೆ.
- **ಹಾಲು:** ಮಲಗುವ ಮುನ್ನ ಉಗುರು ಬೆಚ್ಚಗಿನ ಒಂದು ಕಪ್ ಹಾಲು ಕುಡಿದರೆ ಬೇಕಾದಷ್ಟು ನಿದ್ರೆ ಮಾಡಬಹುದು.
- **ಕಷಾಯ:** ಕೊತ್ತಂಬರಿ, ಜೀರಿಗೆ ಸೇರಿಸಿ ಕುದಿಸಿದ ನೀರನ್ನು ಕುಡಿದರೆ ಬೆಳಗಿನವರೆಗೆ ಯಾವುದೇ ತೊಂದರೆಯಲ್ಲದೇ ನಿದ್ರೆ ಆವರಿಸುತ್ತದೆ.

ಎಸ್ಸೆಚ್

ನಿದ್ರೆಯಿಲ್ಲದ ರಾತ್ರಿಗಳ ಹಿಂದೆ ಹಲವು ಕಾರಣಗಳು ಇಣುಕಿ ಹಾಕುತ್ತವೆ. ಬೆಳಿಗ್ಗೆ ಎದ್ದಾಗ ಕೆಂಪಾದ ಕಣ್ಣು, ಕಾಡುವ ತಲೆನೋವು, ಎಣೆಯಿಲ್ಲದ ಕೋಪ.. ಎಲ್ಲವಕ್ಕೂ ರಾತ್ರಿ ಕೈಕೊಟ್ಟ ನಿದ್ರೆಯೇ ಶತ್ರು. ಇದಕ್ಕೆ ಕಾರಣಗಳನ್ನು ಹುಡುಕುತ್ತ ಹೋದರೆ ಅಸಾಧ್ಯ ಒತ್ತಡ, ಹೆಚ್ಚುವರಿ ಮೊಬೈಲ್ ಮತ್ತು ಕಂಪ್ಯೂಟರ್ ಬಳಕೆ, ಎರ್ರಾಬಿರ್ರಿ ಆಹಾರ ಸೇವನೆ.. ಹೀಗೆ ಪಟ್ಟಿ ಉದ್ದವಾಗುತ್ತದೆ. 'ಸಮತೋಲನವಿಲ್ಲದ, ಅಗತ್ಯಕ್ಕಿಂತ ಹೆಚ್ಚು ಅಥವಾ ಕಡಿಮೆಯಾದ ಆಹಾರ ಗುಣಮಟ್ಟದ ನಿದ್ರೆಗೆ ತಡೆಯೊಡ್ಡುತ್ತದೆ' ಎನ್ನುವ ತಜ್ಞರು, ಸಂಸ್ಕರಿಸಿದ ಆಹಾರವನ್ನು ಹೆಚ್ಚು ಸೇವಿಸುವುದು ಕೂಡ ಇದಕ್ಕೆ ಕಾರಣ ಎನ್ನುತ್ತಾರೆ. ಆದರೆ ಮೀನು, ತರಕಾರಿ ಮೊದಲಾದ ಪೌಷ್ಟಿಕಾಂಶವುಳ್ಳ ಆಹಾರ ಸೇವಿಸಿದರೆ ನಿಶ್ಚಿಂತೆಯಿಂದ ನಿದ್ರೆ ಆವರಿಸಿಕೊಳ್ಳುತ್ತದೆ ಎನ್ನುತ್ತದೆ ಒಂದು ಅಧ್ಯಯನ.

ಹಾಗೆಯೇ ಪ್ರೊಟೀನ್ ಅಂಶ ಕಡಿಮೆ ಇರುವ ಊಟ ಮಾಡಿದರೂ ನಿದ್ರೆ ಹತ್ತಿರ ಸುಳಿಯುವುದಿಲ್ಲ. ಇನ್ನೊಂದು ನೆನಪಿಡಿ, ಈ ಪ್ರೊಟೀನ್ ಅಂಶ ಹೆಚ್ಚಿದ್ದರೂ ಒಳ್ಳೆಯ ನಿದ್ರೆಯನ್ನು ಬೆಳಗಿನವರೆಗೆ ಮಾಡುವುದು ಕಷ್ಟ. ಸಮಯಕ್ಕೆ ಸರಿಯಾಗಿ, ನಿದ್ರೆ ಹೋಗುವ 2–3 ಗಂಟೆಗಳ ಮೊದಲು ಊಟ ಮಾಡಿದರೆ ಚೆನ್ನಾಗಿ ನಿದ್ರೆ ಮಾಡಬಹುದು. ಕ್ಯಾಲೊರಿ ಹೆಚ್ಚಿರುವ ತಿನಿಸು ಸೇವಿಸಿದರೆ ಹಗಲೇ

> ಸಂಸ್ಕರಿಸಿದ ಆಹಾರ, ತಡ ರಾತ್ರಿ ತಿನ್ನುವ ಕುರುಕು, ಪೌಷ್ಟಿಕಾಂಶದ ಕೊರತೆ ಇವೆಲ್ಲವೂ ಒಳ್ಳೆಯ ನಿದ್ರೆಗೆ ಕಡಿವಾಣ ಹಾಕುತ್ತವೆ.

ತೂಕಡಿಸುತ್ತ, ಕಚೇರಿಯಲ್ಲಿ ಬೈಸಿಕೊಳ್ಳಬೇಕಷ್ಟೆ. ಹಾಗೆಯೇ ಇದರಿಂದ ರಾತ್ರಿ ನಿದ್ರೆ ಕಡಿಮೆಯಾಗಿ ಹೊರಳಾಡುತ್ತ, ಮನೆಯವರಿಂದ ಬೈಸಿಕೊಳ್ಳಬೇಕು. ನಿದ್ರೆ ಬರಲು, ಯಾವುದೇ ತೊಂದರೆಯಿಲ್ಲದೇ ನಿದ್ರಿಸಲು ಆಹಾರದಲ್ಲಿನ ಗ್ಲೈಸಿಮಿಕ್ ಸೂಚ್ಯಂಕ ಕೂಡ ಮುಖ್ಯ ಎಂಬುದು ತಜ್ಞರ ಅಂಬೋಣ. ಹೆಚ್ಚು ಜಿಐ ಇರುವ ಆಹಾರವನ್ನು ಮಲಗುವ ನಾಲ್ಕು ತಾಸುಗಳ ಮುಂಚೆ ತಿಂದವರು ಬೇಗ ನಿದ್ರಿಸುತ್ತಾರೆ ಎನ್ನುತ್ತದೆ ಅಧ್ಯಯನವೊಂದು.

ಆರೋಗ್ಯ, ನಮ್ಮ ನಡವಳಿಕೆ ಕೂಡ ಈ ನಿದ್ರೆಯ ಜೊತೆ ಸೇರಿಕೊಂಡಿರುತ್ತದೆ. ಸಮಯಕ್ಕೆ ಸರಿಯಾಗಿ ಊಟ ಮಾಡುವುದು, ಚಯಾಪಚಯ ಕ್ರಿಯೆ ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು ಇವೆಲ್ಲ ಆರೋಗ್ಯದ ಗುಟ್ಟು. ಅದರ ಬದಲು ರಾತ್ರಿ ತಿನ್ನುವುದರಿಂದ ಯಕೃತ್ತಿನ ಕಾರ್ಯಕ್ಕೆ ತೊಂದರೆ ಉಂಟಾಗಿ ಜೀರ್ಣಕ್ರಿಯೆ ಏರುಪೇರಾಗುತ್ತದೆ.

ಇನ್ನೊಂದು ಮುಖ್ಯವಾದ ಅಂಶವೆಂದರೆ ಕಡಿಮೆ ಅಥವಾ ಜಾಸ್ತಿ ಕಾರ್ಬೋಹೈಡ್ರೇಟ್ ಇರುವ ಆಹಾರ ಕೂಡ ನಿದ್ರೆಗೆ ಸಂಬಂಧಪಟ್ಟಿದೆ. ಎಷ್ಟು ಕಾರ್ಬೋಹೈಡ್ರೇಟ್ ಸೇವಿಸುತ್ತೇವೆ ಎನ್ನುವುದಕ್ಕಿಂತ ಯಾವ ಗುಣಮಟ್ಟದ ಕಾರ್ಬೋಹೈಡ್ರೇಟ್ ಸೇವಿಸುತ್ತೇವೆ ಎನ್ನುವುದು ಮುಖ್ಯ. ಹೆಚ್ಚು ಸಂಸ್ಕರಿಸಿದ ಆಹಾರದಲ್ಲಿರುವ ಕಾರ್ಬೋಹಡ್ರೇಟ್, ಅಂದರೆ ಸಕ್ಕರೆ ಅಂಶ ಹೆಚ್ಚಿರುವ ಪಾನೀಯದಿಂದ ನಿದ್ರೆ ಹತ್ತಿರ ಸುಳಿಯಲಾರದು. ಹೀಗಾಗಿ ಪ್ರೊಟೀನ್ ಅಂಶವಿರುವ ಸಮತೋಲಿತ ಆಹಾರ ಸೇವಿಸಿದರೆ ಚೆನ್ನಾಗಿ ನಿದ್ರಿಸಬಹುದು.

ಪೌಷ್ಟಿಕಾಂಶಗಳ ಕೊರತೆ ಕೂಡ ನಿದ್ರೆ ಕಡಿಮೆಯಾಗಲು ಕಾರಣ. ವಿಟಮಿನ್ ಬಿ1, ಕಬ್ಬಿಣ, ಸತು, ಫೋಲೇಟ್ ಮೊದಲಾದ ಅಂಶಗಳ ಕೊರತೆ ಕಡಿಮೆ ನಿದ್ರೆಗೆ ಕಾರಣ ಎನ್ನುತ್ತಾರೆ ಲೈಫ್‌ಸ್ಟೈಲ್ ಕಾಯಿಲೆಗಳ ತಜ್ಞ ಡಾ. ಟಿ.ಎಸ್. ತೇಜಸ್. ಈ ಅಂಶಗಳಿರುವ ಮೈಕ್ರೊನ್ಯೂಟ್ರಿಯಂಟ್‌ಗಳನ್ನು ಸೇವಿಸಿದರೆ ಈ ಸಮಸ್ಯೆ ನಿವಾರಿಸಬಹುದು ಎನ್ನುತ್ತಾರೆ ಅವರು. ಹಾಗೆಯೇ ಮದ್ಯ ಸೇವನೆಯಿಂದಲೂ ನಿದ್ರೆಯ ಅವಧಿ ಹೆಚ್ಚುಕಡಿಮೆಯಾಗುತ್ತದೆ.

ಹಾಲು ಸೇವಿಸಿದರೆ ಚೆನ್ನಾಗಿ ನಿದ್ರಿಸಬಹುದು ಎಂಬುದು ತಜ್ಞರ ಅಭಿಮತ. ಇದರಲ್ಲಿರುವ ಅಮಿನೊ ಆ್ಯಸಿಡ್ ಇದಕ್ಕೆ ಕಾರಣವಂತೆ. ಇದು ನಿದ್ರೆ ಬರಿಸುವ ಹಾರ್ಮೋನ್ ಉತ್ಪಾದಿಸುತ್ತದೆ. ನಮ್ಮ ಹಿರಿಯರು ಮಲಗುವ 2–3 ಗಂಟೆಗೆ ಮುನ್ನ ಊಟ ಮಾಡಿ, ಮಲಗುವ ಮೊದಲು ಹಾಲು ಸೇವಿಸುವ ರೂಢಿ ಇಟ್ಟುಕೊಂಡಿದ್ದು ಇದೇ ಕಾರಣಕ್ಕೆ.



ರಾಜ್‌ಕುಮಾರ್ ರಾವ್, ಪತ್ರಲೇಖಾ

ಸಿನಿಮಾ

ನವೆಂಬರ್‌ನಲ್ಲಿ ರಾಜ್‌ಕುಮಾರ್ ರಾವ್, ಪತ್ರಲೇಖಾ ಮದುವೆ?

ಬಾಲಿವುಡ್ ನಟ ರಾಜ್‌ಕುಮಾರ್ ರಾವ್ ಅವರು ತಮ್ಮ ಬಹುಕಾಲದ ಗೆಳತಿ ಹಾಗೂ ನಟಿ ಪತ್ರಲೇಖಾ ಅವರನ್ನು ನವೆಂಬರ್ ತಿಂಗಳಲ್ಲಿ ಮದುವೆಯಾಗಲಿದ್ದಾರೆ ಎಂದು ಅವರ ಆಪ್ತ ಗೆಳೆಯರು ಹೇಳಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ನವೆಂಬರ್ 10ರಂದು ಈ ಜೋಡಿ ಸಪ್ತಪದಿ ತುಳಿಯಲಿದೆ ಎನ್ನಲಾಗಿದೆ. ಈಗಾಗಲೇ ರಾಜ್‌ಕುಮಾರ್ ಹಾಗೂ ಪತ್ರಲೇಖಾ ಕುಟುಂಬದವರು ತಮ್ಮ ಆಪ್ತರು ಹಾಗೂ ಸಂಬಂಧಿಕರಿಗೆ ಮದುವೆಗೆ ಆಮಂತ್ರಣ ನೀಡಿದ್ದಾರೆ ಎನ್ನಲಾಗಿದೆ.

ಮದುವೆ ನಡೆಯುವ ದಿನಾಂಕ, ಸ್ಥಳದ ಬಗ್ಗೆ ರಾಜ್‌ಕುಮಾರ್ ಹಾಗೂ ಪತ್ರಲೇಖಾ ಯಾವುದೇ ಅಧಿಕೃತ ಮಾಹಿತಿಯನ್ನು ಪ್ರಕಟಿಸಿಲ್ಲ.


ರಾಜಕುಮಾರ್ ರಾವ್ 'ನ್ಯೂಟನ್' ಹಾಗೂ ಪತ್ರಲೇಖಾ 'ಸಿಟಿಲೈಟ್ಸ್' ಸಿನಿಮಾ ಮೂಲಕ ಹೆಚ್ಚು ಜನಪ್ರಿಯತೆ ಪಡೆದುಕೊಂಡಿದ್ದರು.

'ಲವ್ ಸೆಕ್ಸ್ ಔರ್ ಧೋಖಾ' ಸಿನಿಮಾದ ಮೂಲಕ ಬಾಲಿವುಡ್ ಪ್ರವೇಶಿಸಿದ ರಾಜ್‌ಕುಮಾರ್ ರಾವ್ ತಮ್ಮದೇ ಅಭಿಮಾನಿ ಬಳಗವನ್ನು ಹೊಂದಿದ್ದಾರೆ.

ಇವರ ಪಾತ್ರಗಳ ಆಯ್ಕೆ, ವಿಭಿನ್ನ ನಟನಾ ಶೈಲಿಯು ಹಲವು ಪ್ರಶಸ್ತಿಗಳನ್ನು ತಂದುಕೊಟ್ಟಿದೆ.

ನ್ಯಾಷನಲ್ ಫಿಲ್ಮ್ ಅವಾರ್ಡ್, ಫಿಲ್ಮ್‌ಫೇರ್ ಅವಾರ್ಡ್‌ಗಳಿಗೂ ಇವರು ಭಾಜನರಾಗಿದ್ದಾರೆ.

ತುಟಿಯ ಅಂದಕ್ಕೆ ತೆಂಗಿನೆಣ್ಣೆ, ಲೋಳೆಸರ



ರೇಷ್ಮಾ

ಸದಾ ಹೊಳೆಯುವ, ನವಿರಾದ, ರಂಗಿನ ತುಟಿ ಎಂದರೆ ಎಲ್ಲರಿಗೂ ಇಷ್ಟ. ಆದರೆ ಚಳಿಗಾಲದಲ್ಲಿ ತುಟಿಯ ಅಂದವನ್ನು ಕಾಪಾಡಿಕೊಳ್ಳುವುದು ಸವಾಲೇ ಸರಿ. ಚಳಿಗಾಲ ಈಗಷ್ಟೇ ಆರಂಭವಾಗಿದೆ. ಈ ಕಾಲದಲ್ಲಿ ತುಟಿ ಒಣಗುವುದು, ಸಿಪ್ಪೆ ಏಳುವುದು, ಬಿರುಕು ಮೂಡುವುದು ಸಾಮಾನ್ಯ. ತುಟಿಯ ಅಂದ ಕೆಟ್ಟರೆ ಬೇಡವೆಂದರೂ ಮುಖದ ಸೌಂದರ್ಯ ಕೆಡುತ್ತದೆ. ಹಾಗಾಗಿ ತುಟಿಯ ಅಂದ ಹೆಚ್ಚಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಬೇಕು. ಕೆಲವೊಂದು ನೈಸರ್ಗಿಕ ವಿಧಾನಗಳಿಂದ ತುಟಿಯ ಅಂದವನ್ನು ಹೆಚ್ಚಿಸಿಕೊಳ್ಳಬಹುದು. ಲಿಪ್ ಬಾಮ್ ಬಳಕೆಯಿಂದ ತಾತ್ಕಾಲಿಕ ಪರಿಹಾರ ಸಿಕ್ಕರೂ ಶಾಶ್ವತ ಪರಿಹಾರಕ್ಕೆ ಮನೆಮದ್ದಿನ ಬಳಕೆ ಉತ್ತಮ.

ಸೌಂದರ್ಯ

ಒಣ ಚರ್ಮವನ್ನು ನಿವಾರಿಸಿ...

ತುಟಿ ಒಣಗಿದ ಕೂಡಲೇ ಬಿರುಕು ಮೂಡಿ, ಸಿಪ್ಪೆ ಏಳುತ್ತದೆ. ಆ ಕಾರಣಕ್ಕೆ ಒಣ ಚರ್ಮದ ಸಮಸ್ಯೆಯನ್ನು ಮೊದಲು ನಿವಾರಿಸಿಕೊಳ್ಳಬೇಕು. ಒಣ ಚರ್ಮವಿದ್ದರೆ ಲಿಪ್ ಬಾಮ್ ಬಳಸಿದ ನಂತರವೂ ತುಟಿ ಒಣಗಿದಂತೆ ಕಾಣುತ್ತದೆ.

1 ಒಂದು ಚಮಚ ಸಕ್ಕರೆ ಅಥವಾ ಕಲ್ಲುಪ್ಪಿಗೆ ಜೇನುತುಪ್ಪ ಅಥವಾ ಎಣ್ಣೆ ಹಾಕಿ ಮಿಶ್ರಣ ಮಾಡಿ. ಅದನ್ನು ಹತ್ತಿಯ ಸಹಾಯದಿಂದ ತುಟಿಗೆ ಹಚ್ಚಿ ಸ್ಕ್ರಬ್ ರೀತಿ ಉಜ್ಜಿ. ನಂತರ ಒದ್ದೆ ಬಟ್ಟೆಯಿಂದ ಚೆನ್ನಾಗಿ ಒರೆಸಿ. ಇದರಿಂದ ನೈಸರ್ಗಿಕವಾಗಿ ತುಟಿ ಮೇಲಿನ ಒಣ ಚರ್ಮ ನಿವಾರಣೆಯಾಗಿ ಸೌಂದರ್ಯ ಹೆಚ್ಚುತ್ತದೆ.

ಜೇನುತುಪ್ಪ

ಜೇನುತುಪ್ಪದಲ್ಲಿ ಹಲವು ಬಗೆಯ ರೋಗ ನಿವಾರಕ ಅಂಶಗಳಿವೆ. ಇದು ತುಟಿಯ ಊರಿಯೂತ ಹಾಗೂ ಗಾಯ ಗುಣಪಡಿಸುವ ಗುಣಲಕ್ಷಣವನ್ನು ಹೊಂದಿದೆ. ಇದು ಮಾಯಿಶ್ಚರೈಸಿಂಗ್ ಅಂಶವನ್ನು ಹೊಂದಿದ್ದು ತುಟಿ ಸೀಳುವುದನ್ನು ತಡೆಯುತ್ತದೆ. ಒಣ ಹಾಗೂ ಸತ್ತ ಚರ್ಮವನ್ನು ನಿವಾರಣೆ ಮಾಡುತ್ತದೆ. ಜೇನುತುಪ್ಪವನ್ನು ಕೈಬೆರಳಿಗೆ ಸವರಿಕೊಂಡು ಅದನ್ನು ನೀಟಾಗಿ ತುಟಿ ಮೇಲೆ ಲೇಪಿಸಬಹುದು ಅಥವಾ ಹತ್ತಿಯ ಸಹಾಯದಿಂದಲೂ ಉಜ್ಜಬಹುದು.

ತೆಂಗಿನೆಣ್ಣೆ

ಮನುಷ್ಯನ ಚರ್ಮಕ್ಕಿಂತ ತುಟಿಗಳು ಹೆಚ್ಚು ಸೂಕ್ಷ್ಮವಾಗಿರುತ್ತವೆ. ಆ ಕಾರಣಕ್ಕೆ ಗಾಳಿ, ಶಾಖ, ಶೀತದಂತಹ ಅಂಶಗಳಿಗೆ ತೆರೆದುಕೊಂಡಾಗ ಬೇಗನೆ ತುಟಿಯ ಅಂದ ಕೆಡುತ್ತದೆ. ಅದಕ್ಕಾಗಿ ತೆಂಗಿನೆಣ್ಣೆ ಬಳಕೆ ಉತ್ತಮ. ಇದು ತುಟಿಯ ಚರ್ಮವನ್ನು ತೇವಗೊಳಿಸುತ್ತದೆ. ತೆಂಗಿನೆಣ್ಣೆಯು ತುಟಿಯ ಊರಿಯೂತವನ್ನು ಕಡಿಮೆ ಮಾಡುತ್ತದೆ. ಇದು ಆ್ಯಂಟಿಬ್ಯಾಕ್ಟೀರಿಯಲ್ ಲಕ್ಷಣವನ್ನು ಹೊಂದಿದೆ. ತೆಂಗಿನೆಣ್ಣೆಯನ್ನು ತುಟಿಗೆ ಹಚ್ಚಿ ಹತ್ತಿಯ ಸಹಾಯದಿಂದ ಸ್ಕ್ರಬ್ ಮಾಡಿ. ತೆಂಗಿನೆಣ್ಣೆಯಲ್ಲೂ ಕಲಬೆರಕೆ ಬರುತ್ತಿದ್ದು ಗಾಣದಲ್ಲಿ ತಯಾರಿಸಿದ ಶುದ್ಧ ತೆಂಗಿನೆಣ್ಣೆ ಬಳಕೆ ಉತ್ತಮ.

ಲೋಳೆಸರ

ಲೋಳೆಸರದ ಬಳಕೆಯಿಂದ ಚರ್ಮಕ್ಕೆ ಹಲವು ಬಗೆಯ ಉಪಯೋಗಗಳಿವೆ. ಇದರ ನಿರಂತರ ಬಳಕೆಯಿಂದ ಸನ್‌ಬರ್ನ್ ತಡೆಯಬಹುದು. ಇದರಲ್ಲಿ ಉತ್ಕರ್ಷಣ ಗುಣಗಳಿದ್ದು ಒಡೆವ ತುಟಿಗೆ ಉತ್ತಮ ಮದ್ದಾಗಿದೆ. ಲೋಳೆಸರದ ಎಲೆಯನ್ನು ಗಿಡದಿಂದ ನೇರವಾಗಿ ಕಿತ್ತು ಬಳಸುವುದು ಉತ್ತಮ. ಲೋಳೆಸರದ ಲೋಳೆಯನ್ನು ಡಬ್ಬದಲ್ಲಿ ಸಂಗ್ರಹಿಸಿ ಇರಿಸಿಕೊಂಡು ದಿನ ಬಳಸಬಹುದು. ಇದನ್ನು ದಿನದಲ್ಲಿ ಎರಡರಿಂದ ಮೂರು ಬಾರಿ ಹಚ್ಚಬೇಕು.


ಬೆಣ್ಣೆಹಣ್ಣು

ಬೆಣ್ಣೆಹಣ್ಣಿನ ತಿರುಳು ಲಿಪ್‌ಬಾಮ್ ರೀತಿ ಕೆಲಸ ಮಾಡುತ್ತದೆ. ಇದರಲ್ಲಿರುವ ಎಣ್ಣೆಯಂಶ ಒಣಗಿದ ತುಟಿಯನ್ನು ತೇವಾಂಶಭರಿತವನ್ನಾಗಿಸುತ್ತದೆ. ಇದರಲ್ಲಿರುವ ಹಲವು ಬಗೆಯ ಫ್ಯಾಟಿ ಆ್ಯಸಿಡ್ ಹಾಗೂ ಆ್ಯಂಟಿಆಕ್ಸಿಡೆಂಟ್ ಅಂಶಗಳು ಹಲವು ರೀತಿಯ ಚರ್ಮದ ರೋಗ ನಿವಾರಕ ಗುಣಗಳನ್ನು ಹೊಂದಿವೆ.

ಪೆಟ್ರೋಲಿಯಂ ಜೆಲ್ಲಿ

ತುಟಿಗಳ ಅಂದ ಕೆಡದಂತೆ ಕಾಪಾಡಿಕೊಳ್ಳಲು ಪ್ರತಿದಿನ ಪೆಟ್ರೋಲಿಯಂ ಜೆಲ್ಲಿಯನ್ನು ಹಚ್ಚಿಕೊಳ್ಳಬೇಕು. ಹಗಲಿನ ವೇಳೆ ಅಥವಾ ರಾತ್ರಿ ಮಲಗುವ ಮುನ್ನ ತುಟಿಗಳಿಗೆ ಪೆಟ್ರೋಲಿಯಂ ಜೆಲ್ಲಿ ಹಚ್ಚಿಕೊಳ್ಳುವುದರಿಂದ ಒಣ ಚರ್ಮ ಸಮಸ್ಯೆ ಕಡಿಮೆಯಾಗುತ್ತದೆ. ಇದು ತುಟಿ ಸೀಳುವುದನ್ನು ತಡೆಯುತ್ತದೆ ಮತ್ತು ಸನ್‌ಬರ್ನ್ ಆಗುವುದನ್ನೂ ಇದರಿಂದ ತಡೆಯಬಹುದು.

ಚಳಿಗಾಲದ ಉಡುಪಿಗೆ ಹೊಂದುವ ವೈಡ್ ಕಾಫ್ ಬೂಟ್ಸ್





ಫ್ಯಾಷನ್

ಆಲಾಪ

ಕಾಲಕ್ಕೆ ತಕ್ಕ ಆಹಾರ, ಕಾಲಕ್ಕೆ ತಕ್ಕ ಬಟ್ಟೆ, ಬಟ್ಟೆಗೆ ತಕ್ಕ ಫ್ಯಾಷನ್. ಈಗ ಚಳಿಗಾಲ ಬಂತು. ನಮ್ಮ ಬಟ್ಟೆ, ಫ್ಯಾಷನ್ ಎರಡೂ ಬದಲಾಗಬೇಕು. ಚಳಿಗಾಲದಲ್ಲಿ ಎಲ್ಲರೂ ಶೂ ಅಥವಾ ಬೂಟ್ಸ್ ಹಾಕಿಕೊಳ್ಳಲು ಇಷ್ಟಪಡುತ್ತಾರೆ ಜೊತೆಗೆ ಈ ಕಾಲದ ಉಡುಪಿಗೆ ಬೂಟ್ಸ್‌ಗಳು ಲುಕ್ ನೀಡುತ್ತವೆ. ಅಂತೆಯೇ ಮಾರುಕಟ್ಟೆಯಲ್ಲಿ ತರ ತರದ ಶೂಗಳು, ಬೂಟ್ಸ್‌ಗಳು ಬಂದಿವೆ. ನಮಗೆ ಹೊಂದುವ, ಆರಾಮ ಎನಿಸುವ ಬೂಟ್ಸ್‌ಗಳನ್ನು ಕೊಳ್ಳುವುದರೊಂದಿಗೆ ಫ್ಯಾಷನೆಬಲ್ ಆಗಿ ಕೂಡ ಕಾಣಿಸಿಕೊಳ್ಳಬಹುದು.

ಮೊಣಕಾಲಿಗೂ ಮೇಲೆ ಬರುವ ಬೂಟ್ಸ್‌ಗಳು ಚಳಿಗಾಲಕ್ಕೆ ಹೇಳಿ ಮಾಡಿಸಿದ್ದೂ ಹೌದು; ಫ್ಯಾಷನೆಬಲ್ ಕೂಡ ಹೌದು. ಈ ವೈಡ್ ಕಾಫ್ ಬೂಟ್ಸ್‌ಗಳು ಈಗ ಟ್ರೆಂಡ್‌ನಲ್ಲಿದೆ. ಇವು ತುಸು ದುಬಾರಿಯಾಗಿವೆ ಮತ್ತು ಇಂಥ ಬೂಟ್ಸ್‌ಗಳನ್ನು ಕೊಳ್ಳುವುದು, ಬೂಟ್ಸ್‌ಗಳ ಆಯ್ಕೆ ತುಸು ಕಷ್ಟವೇ ಸರಿ. ನಮ್ಮ ಕಾಲಿನ ಅಳತೆಗೆ ತಕ್ಕ ಹಾಗೆ ಇಂಥ ಬೂಟ್ಸ್‌ಗಳು ಲಭ್ಯ ಎಂದು ಹೇಳಲಾಗುವುದಿಲ್ಲ. ಬ್ರ್ಯಾಂಡ್‌ಗಳಿಂದ ಬ್ರ್ಯಾಂಡ್‌ಗಳಿಗೆ ಈ ಅಳತೆ ಕೂಡ ವ್ಯತ್ಯಾಸವಾಗಬಹುದು. ಆದ್ದರಿಂದ ಇಂಥ ಬೂಟ್ಸ್‌ಗಳನ್ನು ಕೊಳ್ಳುವಾಗ ಕೆಲವು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಅಗತ್ಯ. ಏನವು?

- ಮೊದಲು ಮಾಡಬೇಕಾಗಿರುವುದು ನಿಮ್ಮ ಮೀನಖಂಡದ ಸುತ್ತಳತೆಯನ್ನು ಅಳೆಯುವುದು. ಎರಡೂ ಕಾಲಿನ ಅಳತೆ ಪಡೆಯುವುದು ಉತ್ತಮ. ಏಕೆಂದರೆ, ಅವು ಬೇರೆ ಬೇರೆ ಅಳತೆಯದ್ದಾಗಿರುತ್ತದೆ. ನಂತರ ಯಾವ ಅಳತೆ ಬೂಟ್ಸ್ ಕೊಳ್ಳಬೇಕು ಎಂದು ಯೋಚಿಸಿ.
- ಹೆಚ್ಚಿನ ಬ್ರ್ಯಾಂಡ್‌ಗಳಲ್ಲಿ ವೈಡ್ ಕಾಫ್ ಬೂಟ್ಸ್ ಅಳತೆಯು 16 ಇಂಚಿನಿಂದಲೇ ಪ್ರಾರಂಭವಾಗುತ್ತದೆ. ಮೇಲೆ ಹೇಳಿದ ಹಾಗೆ ಎಲ್ಲಾ ಬ್ರ್ಯಾಂಡ್‌ನ ಎಲ್ಲ ಅಳತೆಯ ಬೂಟ್ಸ್‌ಗಳು ಎಲ್ಲರಿಗೂ ಬರುವುದಿಲ್ಲ.

ಈಗಂತೂ ಎಲ್ಲವನ್ನು ಆನ್‌ಲೈನ್‌ನಲ್ಲೇ ಖರೀದಿಸಿಬಿಡುತ್ತೇವೆ. ಬಟ್ಟೆ ಮತ್ತು ಇಂಥ ಬೂಟ್ಸ್‌ಗಳನ್ನು ಕೊಳ್ಳುವಾಗ ಅಳತೆಯದ್ದೇ ಗೊಂದಲ ಕಾಡುತ್ತದೆ. ಖರೀದಿ ಮಾಡುವಾಗ ಚಂದ ಕಂಡರೂ ಮನೆಗೆ ಬಂದ ಮೇಲೆ ಕಾಲಿನ ಅಳತೆಗೆ ಹೊಂದಿಕೆ ಆಗದಿರಬಹುದು. ಆದ್ದರಿಂದ ಜಾಗರೂಕರಾಗಿ ಅಳತೆ ನೋಡಿ ಖರೀದಿ ಮಾಡುವುದು ಒಳಿತು. ಈಗಂತೂ ಮಾರುಕಟ್ಟೆಯಲ್ಲಿ ವಿವಿಧ ಬ್ರ್ಯಾಂಡಿನ ವೈಡ್ ಕಾಫ್ ಬೂಟ್ಸ್ ಲಭ್ಯ ಇವೆ. ಕಾಲಿನ ಅಳತೆ ನೋಡಿಕೊಂಡು, ಅಂಗಡಿಗಳಲ್ಲೇ ಕೊಳ್ಳುವುದು ಉತ್ತಮ.

ಹಬ್ಬಕ್ಕಿರಲಿ ಸಿಹಿ ತಿನಿಸಿನ ಸಂಭ್ರಮ

ಹಬ್ಬಗಳ ಸಮಯದಲ್ಲಿ ಮನೆಯಲ್ಲೇ ಬಗೆ ಬಗೆ ತಿಂಡಿ–ತಿನಿಸುಗಳನ್ನು ತಯಾರಿಸುವುದು ವಾಡಿಕೆ. ಹಬ್ಬ ಎಂದರೆ ಸಿಹಿ. ಯಾವುದೇ ಹಬ್ಬವಾಗಲಿ ಸಿಹಿ ಇಲ್ಲದೆ ಹಬ್ಬ ಪರಿಪೂರ್ಣವಾಗುವುದಿಲ್ಲ. ದೀಪಾವಳಿ ಹಬ್ಬದಲ್ಲೂ ಕಜ್ಜಾಯ, ಹೋಳಿಗೆ, ಬಾಸುಂದಿಯಂತಹ ಸಿಹಿ ತಿನಿಸುಗಳನ್ನು ತಯಾರಿಸಿ ದೇವರಿಗೆ ನೈವೇದ್ಯ ಮಾಡುತ್ತಾರೆ. ಸಾಂಪ್ರದಾಯಿಕ ತಿನಿಸುಗಳ ಜೊತೆ ಕಾಂಟಿನೆಂಟಲ್ ಖಾದ್ಯಗಳನ್ನು ತಯಾರಿಸುವ ಮೂಲಕ ಹಬ್ಬದ ರಂಗನ್ನು ಇನ್ನಷ್ಟು ಹೆಚ್ಚಿಸಬಹುದು. ಕಾಂಟಿನೆಂಟಲ್ ಸಿಹಿ ತಿನಿಸುಗಳು ಮಕ್ಕಳಿಂದ ಹಿಡಿದು ಎಲ್ಲರಿಗೂ ಇಷ್ಟವಾಗುವುದರಲ್ಲಿ ಅನುಮಾನವಿಲ್ಲ.

ರೆಸಿಪಿ

ಚಾಕೊಲೇಟ್ ಪೀನಟ್ ಬಟರ್ ಕಪ್

ಈ ಚಾಕೊಲೇಟ್ ಪೀನಟ್ ಬಟರ್ ಕಪ್ ಅನ್ನು ಸರಳವಾಗಿ, ಸುಲಭವಾಗಿ ತಯಾರಿಸಬಹುದು. ಇದನ್ನು ತಯಾರಿಸಲು ಕಡಿಮೆ ಸಾಮಗ್ರಿಗಳು ಸಾಕು. ಇದನ್ನು ಅಂಗಡಿಯಲ್ಲಿ ಖರೀದಿಸಿ ತಿನ್ನುವುದಕ್ಕಿಂತ ಮನೆಯಲ್ಲೇ ತಯಾರಿಸಿ ತಿನ್ನಬಹುದು. ಪೀನಟ್ ಬಟರ್ ಕಪ್ ಒಮ್ಮೆ ತಿಂದರೆ ಮತ್ತೆ ಮತ್ತೆ ತಿನ್ನಬೇಕು ಎನ್ನುವಷ್ಟರ ಮಟ್ಟಿಗೆ ಚೆನ್ನಾಗಿರುತ್ತದೆ. ಇದರ ರುಚಿಯೂ ಭಿನ್ನವಾಗಿದ್ದು ನೀವು ಒಮ್ಮೆ ಮನೆಯಲ್ಲಿ ಪ್ರಯತ್ನಿಸಿ ನೋಡಿ.

ಬೇಕಾಗುವ ಸಾಮಗ್ರಿಗಳು: ಚಾಕೊಲೇಟ್ – 250 ಗ್ರಾಂ, ಪೀನಟ್ ಬಟರ್ – 200 ಗ್ರಾಂ, ಸಕ್ಕರೆ ಪುಡಿ – ಕಾಲು ಕಪ್, ವೆನಿಲ್ಲಾ ಎಕ್ಸ್‌ಟ್ರ್ಯಾಕ್ಟ್ – ಅರ್ಧ ಟೀ ಚಮಚ, ಉಪ್ಪು – ಚಿಟಿಕೆ.

ತಯಾರಿಸುವ ವಿಧಾನ: ಮೊದಲು ಕಪ್ ಕೇಕ್ ಪೇಪರ್ ಅನ್ನು ಸಿದ್ಧಗೊಳಿಸಿ ಇರಿಸಿಕೊಳ್ಳಿ. ಒಂದು ಕಪ್‌ಗೆ ಪೀನಟ್ ಬಟರ್ ಹಾಕಿ ಅದಕ್ಕೆ ಸಕ್ಕರೆ ಪುಡಿ ಸೇರಿಸಿ ಸಕ್ಕರೆ ಕರಗುವವರೆಗೂ ಚೆನ್ನಾಗಿ ತಿರುಗಿಸಿ. ಕಪ್ ಕೇಕ್ ಪೇಪರ್ ಮೇಲೆ ಮೊದಲು 2 ಚಮಚ ಚಾಕೊಲೇಟ್ ಹಾಕಿ, ಚಾಕೊಲೇಟ್ ಮೇಲೆ ಪೀನಟ್ ಬಟರ್ ಹಾಕಿ. ಮತ್ತೆ ಅದರ ಮೇಲೆ ಚಾಕೊಲೇಟ್ ಹಾಕಿ ಚೆನ್ನಾಗಿ ಕವರ್ ಮಾಡಿ. ಇದನ್ನು ಒಂದು ಗಂಟೆಗಳ ಕಾಲ ಫ್ರಿಜ್‌ನಲ್ಲಿಡಿ. ಈಗ ನಿಮ್ಮ ಮುಂದೆ ಚಾಕೊಲೇಟ್ ಪೀನಟ್ ಬಟರ್ ಕಪ್ ತಿನ್ನಲು ಸಿದ್ಧ.






ಕೊಕೊನಟ್ ಕ್ಯಾರಾಮೆಲ್ ಬರ್ಫಿ

ತೆಂಗಿನಕಾಯಿ ಬರ್ಫಿ ಎಂದರೆ ಬಹುತೇಕ ಎಲ್ಲರೂ ಇಷ್ಟಪಡುತ್ತಾರೆ. ಆದರೆ ಹಬ್ಬಕ್ಕೆ ಕೊಕೊನಟ್ ಕ್ಯಾರಾಮೆಲ್ ಬರ್ಫಿ ತಯಾರಿಸುವ ಮೂಲಕ ಬಾಯಿ ಸಿಹಿ ಮಾಡಿಕೊಳ್ಳಬಹುದು. ಇದು ಭಿನ್ನ ರುಚಿಯನ್ನು ಹೊಂದಿದ್ದು, ಮಕ್ಕಳಿಗೆ ಹೆಚ್ಚು ಇಷ್ಟವಾಗುತ್ತದೆ.

ಬೇಕಾಗುವ ಸಾಮಗ್ರಿಗಳು: ತೆಂಗಿನತುರಿ – ಸ್ವಲ್ಪ, ದಪ್ಪ ತೆಂಗಿನಹಾಲು – 2 ಕಪ್‌ನಷ್ಟು, ಸಕ್ಕರೆ ಪುಡಿ – 400 ಗ್ರಾಂ, ಕಾರ್ನ್ ಸಿರಪ್ – ಕಾಲು ಕಪ್, ಉಪ್ಪು – ಅರ್ಧ ಚಮಚ, ಶುಂಠಿ ಪುಡಿ – 1 ಚಮಚ, ಏಲಕ್ಕಿ ಪುಡಿ – ಸ್ವಲ್ಪ.

ತಯಾರಿಸುವ ವಿಧಾನ: ಅಗಲವಾದ ಚೌಕಾಕಾರದ ಪಾತ್ರೆಗೆ ಸುತ್ತಲೂ ಬೆಣ್ಣೆ ಸವರಿ. ತೆಂಗಿನತುರಿಯನ್ನು ಕೆಂಬಣ್ಣ ಬರುವವರೆಗೂ ಹುರಿದುಕೊಳ್ಳಿ. ಆ ತುರಿಯನ್ನು ಬೆಣ್ಣೆ ಸವರಿದ ಪಾತ್ರೆ ಮೇಲೆ ಹರಡಿ. ಈ ತೆಂಗಿನಹಾಲನ್ನು ದಪ್ಪ ತಳದ ಪಾತ್ರೆಗೆ ಹಾಕಿ ಅದಕ್ಕೆ ಸಕ್ಕರೆ, ಉಪ್ಪು, ಕಾರ್ನ್ ಸಿರಪ್ ಸೇರಿಸಿ ಒಲೆಯ ಮೇಲೆ ಇರಿಸಿ ಚೆನ್ನಾಗಿ ಕಲೆಸಿ. ಅದು ಮಂದವಾಗುವವರೆಗೂ ಕುದಿಸಬೇಕು. ಚಿಕ್ಕ ಕಪ್‌ವೊಂದರಲ್ಲಿ ಏಲಕ್ಕಿ ಪುಡಿ, ಶುಂಠಿ ಪುಡಿ ಸೇರಿಸಿ ಮಿಶ್ರಣ ಮಾಡಿ. ಒಲೆಯ ಮೇಲಿರುವ ಮಿಶ್ರಣ ಕುದಿದು ಮಂದವಾದ ಮೇಲೆ ಅದಕ್ಕೆ ಶುಂಠಿ, ಏಲಕ್ಕಿ ಮಿಶ್ರಣ ಸೇರಿಸಿ ಕಲೆಸಿ. ನಂತರ ಆ ಮಿಶ್ರಣವನ್ನು ತೆಂಗಿನತುರಿ ಉದುರಿಸಿದ ಪಾತ್ರೆಗೆ ಸುರಿಯಿರಿ. ಅದರ ಮೇಲೆ ಮತ್ತೆ ತೆಂಗಿನತುರಿ ಉದುರಿಸಿ, ಸ್ವಲ್ಪ ಹೊತ್ತು ಇಡಿ. ಅದು ಗಟ್ಟಿಯಾದ ಮೇಲೆ ನಿಮಗೆ ಬೇಕಾದ ಆಕಾರಕ್ಕೆ ಕತ್ತರಿಸಿಕೊಳ್ಳಿ.



ಹೀಗಿರಲಿ ಐಷಾರಾಮಿ ಅಡುಗೆಮನೆ..

ಮನಸ್ವಿ

ಒಂದು ಮನೆಯಲ್ಲಿ ಅಡುಗೆಮನೆಯೇ ಪ್ರಧಾನ. ತೆರೆದ ಅಥವಾ ಮುಚ್ಚಿದ ಅಡುಗೆಮನೆ ಯಾವುದೇ ಇರಲಿ ಅಡುಗೆಮನೆಯನ್ನು ವೈಭವದಿಂದ ಕಾಣುವಂತೆ ಇರಿಸಿಕೊಳ್ಳಬಹುದು. ಕೆಲವೊಂದು ಅಲಂಕಾರಿಕ ವಸ್ತುಗಳನ್ನು ಇರಿಸಿಕೊಳ್ಳುವುದರಿಂದ ಅಡುಗೆಮನೆಯನ್ನು ಐಷಾರಾಮಿಯಾಗಿ ಕಾಣುವಂತೆ ಮಾಡಬಹುದು. ಮಾಡರ್ನ್ ಎನ್ನಿಸುವ ಸಾಮಗ್ರಿಗಳು ಅಡುಗೆಮನೆಯ ಅಂದವನ್ನು ಹೆಚ್ಚಿಸಿ ನೋಟ ಬದಲಿಸುವುದರಲ್ಲಿ ಎರಡು ಮಾತಿಲ್ಲ. ಅಲಂಕಾರಿಕ ದೀಪಗಳು, ಕಪ್ ಸಾಸರ್‌ಗಳು, ಅಡುಗೆ ಸಾಮಗ್ರಿ ಸೆಟ್‌ಗಳು, ದೀಪಗಳು, ಪೇಂಟ್ ಚಿತ್ತಾರ ಇವು ಅಡುಗೆಮನೆಗೆ ಭಿನ್ನ ನೋಟ ಸಿಗುವಂತೆ ಮಾಡುವುದರಲ್ಲಿ ಅನುಮಾನವಿಲ್ಲ. ಈಗ ಹಬ್ಬದ ಸಮಯದಲ್ಲಿ ಆಫರ್‌ಗಳು ನಡೆಯುತ್ತಿದ್ದು ಕಡಿಮೆ ದರದಲ್ಲಿ ಅಡುಗೆಮನೆಯ ಅಂದವನ್ನು ಹೆಚ್ಚಿಸಿಕೊಳ್ಳಬಹುದು.

ಅಂದದ ಕಟ್ಲರಿ

ಕಾಫಿ ಕಪ್, ಚಮಚ–ಸೌಟುಗಳು, ಸಾಸರ್‌ಗಳು ಮುಂತಾದ ಅಡುಗೆಮನೆಯ ಪರಿಕರಗಳು ಯಾವಾಗಲೂ ಅಡುಗೆಮನೆಯ ಅಂದವನ್ನು ಹೆಚ್ಚಿಸುತ್ತವೆ. ಅಲ್ಲದೇ ಇವು ಅವಶ್ಯ ಕೂಡ ಹೌದು. ಬಣ್ಣ ಬಣ್ಣದ ಹಾಗೂ ಗಾಢ ಹೊಳಪಿನ ಅಡುಗೆ ಮನೆಯ ಪರಿಕರಗಳು ಅಂದವನ್ನು ಇನ್ನಷ್ಟು ಹೆಚ್ಚಿಸುವುದಲ್ಲದೇ ವೈಭವಯುತವಾಗಿ ಕಾಣುವಂತೆಯೂ ಮಾಡುತ್ತವೆ. ಚಮತ್ಕಾರಿ ಕಟ್ಲರಿಗಳು ಅಡುಗೆಮನೆಯ ನೋಟವನ್ನೇ ಬದಲಿಸುವುದರಲ್ಲಿ ಎರಡು ಮಾತಿಲ್ಲ. ಗಾಢ ಬಣ್ಣದ ಮಗ್‌ಗಳು, ಬಣ್ಣದ ಚಿತ್ತಾರದ ಪ್ಲೇಟ್‌ಗಳು ಅಡುಗೆಮನೆಯ ಅಂದವನ್ನು ಹೆಚ್ಚಿಸುತ್ತವೆ.

ಅಲಂಕಾರಿಕ ವಸ್ತುಗಳು

ಮನೆಯ ಹಾಲ್ ಹಾಗೂ ಬೆಡ್‌ರೂಮ್, ಲೀವಿಂಗ್ ರೂಮ್ ಮಾತ್ರವಲ್ಲ ಅಡುಗೆಕೋಣೆಯಲ್ಲೂ ಅಲಂಕಾರಿಕ ವಸ್ತುಗಳನ್ನು ಇರಿಸುವ ಮೂಲಕ ಅಂದವನ್ನು ಹೆಚ್ಚಿಸಬಹುದು. ಜೊತೆಗೆ ಇವುಗಳನ್ನು ಅಡುಗೆಮನೆಯಲ್ಲಿ ಇರಿಸುವ ಮೂಲಕ ಐಷಾರಾಮಿಯಾಗಿ ಕಾಣುವಂತೆ ಮಾಡಬಹುದು. ಅಂದದ ಗಾಜಿನ ಟೀ/ ಕಾಫಿ ಕೆಟಲ್, ಚಮಚದ ಸ್ಟ್ಯಾಂಡ್ ಮುಂತಾದವುಗಳನ್ನು ಖರೀದಿಸುವ ಮೂಲಕ ಅಡುಗೆಕೋಣೆಯ ಅಂದವನ್ನು ಇನ್ನಷ್ಟು ಹೆಚ್ಚಿಸಬಹುದು.

ಅಂದದ ಗಿಡಗಳು

ಹಾಲ್ ಅಥವಾ ಸಿಟೌಟ್‌ಗಳಲ್ಲಿ ಅಲಂಕಾರಿಕ ಗಿಡಗಳನ್ನು ಬೆಳೆಸುವಂತೆ ಅಡುಗೆಮನೆಯಲ್ಲೂ ಚಿಕ್ಕ ಚಿಕ್ಕ ಅಲಂಕಾರಿಕ ಗಿಡಗಳನ್ನು ಇರಿಸಬಹುದು. ಅಡುಗೆಮನೆಯಲ್ಲಿನ ಜಾಗಕ್ಕೆ ಅನುಗುಣವಾಗಿ ಈ ಗಿಡಗಳನ್ನು ಇರಿಸಬಹುದು. ಅದರಲ್ಲೂ ಔಷಧೀಯ ಗಿಡಗಳನ್ನು ಅಡುಗೆಮನೆಯಲ್ಲಿ ಇರಿಸುವುದು ಸೂಕ್ತ. ಟೇಬಲ್ ಮೇಲೆ ಸೂಕ್ತವಾಗುವ ಗಿಡಗಳನ್ನು ಇರಿಸಬಹುದು. ಅಡುಗೆಮನೆಯಲ್ಲಿ ನೇತು ಹಾಕುವ ಗಿಡಗಳನ್ನು ಇಡದೇ ಇರುವುದು ಸೂಕ್ತ. ಇವು ಸೀಲಿಂಗ್‌ನ ಅಂದವನ್ನು ಕೆಡಿಸುತ್ತವೆ.

ಅದ್ಭುತ ಪರಿಮಳ


ಅಡುಗೆಮನೆಯಿಂದ ಕರಿದ, ಹುರಿದ ವಾಸನೆ ಬರುವುದು ಸಹಜ. ಇದನ್ನು ಸದಾ ಸ್ವಚ್ಛವಾಗಿಟ್ಟುಕೊಂಡರೂ ವಾಸನೆ ಅಡುಗೆಮನೆಯನ್ನು ಅಂದವನ್ನು ಹಾಳು ಮಾಡುವುದರಲ್ಲಿ ಎರಡು ಮಾತಿಲ್ಲ. ಹಾಗಾಗಿ ಕಾಂಪ್ಯಾಕ್ಟ್ ಡಿಫ್ಯೂಸರ್ ಅಥವಾ ಪರಿಮಳ ಬೀರುವ ವಸ್ತುಗಳನ್ನು ಇರಿಸಬಹುದು. ಇದರ ಸುವಾಸನೆಯು ಅಡುಗೆಮನೆಯನ್ನು ಬೇರೆಯದ್ದೇ ಲೋಕಕ್ಕೆ ಕರೆದುಕೊಂಡು ಹೋಗುವಂತೆ ಮಾಡುವುದರಲ್ಲಿ ಅನುಮಾನವಿಲ್ಲ. ಜೊತೆಗೆ ಇದು ಐಷಾರಾಮಿ ಅಡುಗೆಮನೆಗೂ ಸಾಕ್ಷಿಯಾಗುವುತ್ತದೆ.

ದೀಪಗಳು

ಕೆಲವೊಂದು ಅಮೂರ್ತ ಚಿತ್ತಾರವಿರುವ ಸೀಲಿಂಗ್ ಬೆಳಕು, ದೀಪಗಳು ಅಡುಗೆಮನೆಯ ನೋಟ ಬದಲಿಸುವುದರಲ್ಲಿ ಎರಡು ಮಾತಿಲ್ಲ. ಬಣ್ಣದ ಸಣ್ಣ ಸಣ್ಣ ದೀಪಗಳನ್ನು ಅಡುಗೆಮನೆಯ ಗೋಡೆಗೆ ನೇತು ಹಾಕಬಹುದು. ಇವು ಅಲಂಕೃತವಾಗಿ ಕಾಣುತ್ತವೆ. ಜೊತೆಗೆ ಅಡುಗೆಮನೆಗೆ ಬೆಳಕೂ ನೀಡುತ್ತವೆ. ದೊಡ್ಡ ದೊಡ್ಡ ದೀಪಗಳನ್ನು ಖರೀದಿಸುವ ಬದಲು ಅಡುಗೆಮನೆಯ ಒಳಾಂಗಣ ವಿನ್ಯಾಸಕ್ಕೆ ಹೊಂದುವಂತಹ ದೀಪಗಳನ್ನು ಖರೀದಿಸಬೇಕು. ಈ ದೀಪಗಳು ಅಡುಗೆಮನೆಗೆ ಭಿನ್ನ ನೋಟ ಸಿಗುವಂತೆ ಮಾಡುತ್ತವೆ.

ಮೊಬೈಲ್ ಬಳಕೆ

ಬೆರಳುಗಳ ಮೇಲೆ ಹಾಕದಿರಿ ಭಾರ



ಮೊಬೈಲ್ ಸ್ಕ್ರೀನ್ ಕಾಣಬೇಕು ಎನ್ನುವ ಕಾರಣಕ್ಕೆ ಮುಂಗೈಯನ್ನು ಬಾಗಿಸಿ ಹಿಡಿದುಕೊಂಡಿರುತ್ತೇವೆ. ಇದು ಹಲವು ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಗೆ ಕಾರಣವಾಗಬಹುದು ಎನ್ನುತ್ತಾರೆ ವೈದ್ಯರು. ಈ ಬಗ್ಗೆ ಎಚ್ಚರ ವಹಿಸುವುದು ಅಗತ್ಯ.

ಸುಕೃತ ಎಸ್.

ಟಿಪ್ಸ್

ಕಿರುಬೆರಳು ಮೊಬೈಲ್‌ನ ಭಾರವನ್ನು ಹೊತ್ತಿರುತ್ತದೆ. ತೋರುಬೆರಳು, ಉಂಗುರದ ಬೆರಳು, ಮಧ್ಯದ ಬೆರಳುಗಳು ಮೊಬೈಲ್‌ನ ಬೆನ್ನನ್ನು ಹಿಡಿದುಕೊಂಡಿರುತ್ತದೆ. ಹೆಬ್ಬೆರಳು ಮೊಬೈಲ್ ಸ್ಕ್ರೀನ್ ಮೇಲೆ ಓಡಾಡುತ್ತಿರುತ್ತದೆ. ಬೆಡ್ ಮೇಲೆ ಮಲಗಿಯೋ, ಚೇರ್ ಮೇಲೆ ಕೂಳಿತೋ, ಬಸ್‌ನಲ್ಲಿ, ಕಾರ್‌ನಲ್ಲಿ, ಅಲ್ಲಿ ಇಲ್ಲಿ ಅಂತ ಎಲ್ಲಾ ಕಡೆ ಈ ರೀತಿ ಮೊಬೈಲ್ ಹಿಡಿದುಕೊಳ್ಳುತ್ತೇವೆ. ಮೊಬೈಲ್ ಸ್ಕ್ರೀನ್ ಕಾಣಬೇಕು ಎನ್ನುವ ಕಾರಣಕ್ಕೆ ಮುಂಗೈಯನ್ನು ಸ್ವಲ್ಪ ಬಾಗಿಸಿ ನಮ್ಮ ಮುಖಕ್ಕೆ ಹಿಡಿದುಕೊಂಡಿರುತ್ತೇವೆ ಅಲ್ವಾ? ಹೀಗೆ ಮೊಬೈಲ್ ಹಿಡಿದುಕೊಳ್ಳುವುದರಿಂದ ಕೆಲವು ಗಂಭೀರ ಆರೋಗ್ಯ ಸಮಸ್ಯೆ ಆಗುತ್ತದೆ ಎನ್ನುತ್ತದೆ ವೈದ್ಯಲೋಕ.

ಅಗತ್ಯಕ್ಕಿಂತ ಹೆಚ್ಚಾಗಿ ಮೊಬೈಲ್ ನೋಡುವುದನ್ನು ಎಲ್ಲರೂ ನಿಯಂತ್ರಿಸಬೇಕಾದದ್ದೇ. ಅದರಲ್ಲಿ ಅನುಮಾನ ಇಲ್ಲ. ಇದು ನಮ್ಮ ಮಾನಸಿಕ ಆರೋಗ್ಯಕ್ಕೆ ಹೆಚ್ಚು ಉತ್ತಮವಾದ ಬೆಳವಣಿಗೆ. ಅದರಿಂದ ಮನಸ್ಸು ಶಾಂತವಾಗಿರುತ್ತದೆ; ಕ್ರಿಯಾಶೀಲವಾಗುತ್ತದೆ. ಇದರ ಜೊತೆಗೆ ದೈಹಿಕ ಆರೋಗ್ಯಕ್ಕೂ ಇದು ಒಳ್ಳೆಯದು. ಇದು ಒಂದು ಕಡೆಯಾದರೆ, ಕಡಿಮೆ ಸಮಯ ಮೊಬೈಲ್ ಹಿಡಿದುಕೊಂಡರೂ, ಅದನ್ನು ಹೇಗೆ ಹಿಡಿದುಕೊಳ್ಳುತ್ತೇವೆ ಎನ್ನುವುದು ಮುಖ್ಯವಾಗಿದೆ. ಇದುರಿಂದ ಕೈಬೆರಗಳು, ಕೈಗಳ ಆರೈಕೆಗೂ ತೊಂದರೆ ಆಗುತ್ತದೆ ಎನ್ನುವುದು ಹಲವು ಸಂಶೋಧನೆಗಳಿಂದ ದೃಢಪಟ್ಟಿದೆ.

ಮೊಬೈಲ್ ಹಿಡಿದುಕೊಂಡ ಸಂದರ್ಭದಲ್ಲಿ ಕಿರುಬೆರಳು ಮತ್ತು ಹೆಬ್ಬೆರಳುಗಳು ಹೆಚ್ಚು ನೋಯುತ್ತದೆ. ಈ ಅನುಭವ ಎಲ್ಲರಿಗೂ ಆಗಿರಲೂ ಬಹುದು. ಇದಕ್ಕೆ ಕಾರಣ, ಮೊಬೈಲ್ ಹಿಡಿದುಕೊಂಡಾಗ ಅದರ ಭಾರ ಈ ಬೆರಳುಗಳ ಮೇಲೆ ಹೆಚ್ಚು ಬೀಳುತ್ತದೆ. ಆದ್ದರಿಂದ ಬೆರಳುಗಳ ಸೆಳೆತ ಅಥವಾ ಉರಿ ಕೂಡ ಆಗಬಹುದು.

ಮೊಬೈಲ್ ಭಾರವನ್ನು ಬೆರಳುಗಳು ಹೊತ್ತು, ಮೊಬೈಲ್‌ನ ಸ್ಕ್ರೀನ್ ಕಾಣುವುದಕ್ಕೆ ಮಣಿಕಟ್ಟನ್ನು ಕೆಳಗೆ ಮಾಡಿ ನೋಡುವುದು ಅಲ್ನರ್ ನರಕ್ಕೆ ಹೆಚ್ಚು ಒತ್ತಡವನ್ನು ನೀಡುತ್ತದೆ. ಅಲ್ನರ್ ನರವು ಕೈಯ ಮೂರು ಮುಖ್ಯ ನರಗಳಲ್ಲಿ ಒಂದಾಗಿದೆ.



ಮಣಿಕಟ್ಟಿನ ನೋವು ಅಥವಾ ಕೈ ಸಂಬಂಧಿ ಸಮಸ್ಯೆಗಳು ಮತ್ತು ಹೆಚ್ಚಾದ ಮೊಬೈಲ್ ಬಳಕೆಯ ಕುರಿತು ಹಾಂಗ್‌ಕಾಂಗ್‌ನಲ್ಲಿ ಅಧ್ಯಯನ ನಡೆದಿದೆ. ಅದರ ಪ್ರಕಾರ, ಕೈಯಲ್ಲಿ ಬಳಸುವ ಎಲೆಕ್ಟ್ರಾನಿಕ್ ವಸ್ತುವಿನ ಹೆಚ್ಚು ಬಳಕೆಯಿಂದ ಕಾರ್ಪಲ್ ಟನಲ್ ಸಿಂಡ್ರೋಮ್ (ಮಣಿಕಟ್ಟಿನ ಸಮಸ್ಯೆ) ಬರಬಹುದು ಎಂದಿದೆ.

ಮೊಬೈಲ್ ಬಳಕೆ ಅಂತಲ್ಲ, ಹೆಚ್ಚು ಹೆಚ್ಚು ಟೈಪ್ ಮಾಡುವಂಥ ಉದ್ಯೋಗದಲ್ಲಿ ಇದ್ದರೆ ಕೂಡ ಕಾರ್ಪಲ್ ಟನಲ್ ಸಿಂಡ್ರೋಮ್ ಕಾಣಿಸಿಕೊಳ್ಳಬಹುದು. ಇದರಿಂದ ಮಣಿಕಟ್ಟಿನಲ್ಲಿ ನೋವಾಗುವುದು, ಮರಗಟ್ಟುವುದು ಸರಿಯಾಗಿ ಮುಷ್ಠಿ ಕಟ್ಟಲು ಬರದೇ ಇರುವುದು ಮುಂತಾದವುಗಳು ತಲೆದೋರಬಹುದು.

ಈ ಅಧ್ಯಯನಕ್ಕೆ 500 ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಯಿತು. ಇವರುಗಳನ್ನು ಎರಡು ಗುಂಪುಗಳನ್ನಾಗಿ ಮಾಡಲಾಯಿತು. ಒಂದು ಗುಂಪು ದಿನದಲ್ಲಿ ಐದು ತಾಸಿಗೂ ಹೆಚ್ಚು ಮೊಬೈಲ್ ಬಳಕೆ ಮಾಡುವವರು ಮತ್ತು ಐದು ತಾಸಿಗಿಂತ ಕಡಿಮೆ ಬಳಸುವವರು ಎಂದು. ಐದು ತಾಸಿಗೂ ಹೆಚ್ಚಿಗೆ ಮೊಬೈಲ್ ಬಳಕೆ ಮಾಡುವ ಶೇ 54 ಮಂದಿಯಲ್ಲಿ ಸ್ನಾಯು ಸೆಳೆತ, ನೋವು ಕಾಣಿಸಿಕೊಂಡರೆ, ಮತ್ತೊಂದು ಗುಂಪಿನ ಶೇ 12ರಷ್ಟು ಮಂದಿಯಲ್ಲಿ ಈ ರೀತಿಯ ಸಮಸ್ಯೆ ಕಾಣಿಸಿಕೊಂಡಿದೆ.

ಮೊಬೈಲ್ ಬಳಸುವಾಗಿನ ನಮ್ಮ ನಿಲುವು ಸಹ ನೋವುಕಾರಕವಾಗಬಹುದು. ನಿಂತುಕೊಂಡು ಮೊಬೈಲ್ ನೋಡುವಾಗ ಕುತ್ತಿಗೆಯನ್ನು ಕೆಳಗೆ ಹಾಕುತ್ತೇವೆ. ಮಲಗಿ ಮೊಬೈಲ್ ನೋಡುವಾಗ ಕುತ್ತಿಗೆಯನ್ನು ಅಸಹಜವಾಗಿ ಇಟ್ಟುಕೊಂಡಿರುತ್ತೇವೆ. ಇದು ನರಗಳ ಮೇಲೆ ಭಾರ ಬೀಳುವಂತೆ ಮಾಡುತ್ತದೆ. ಕುತ್ತಿಗೆ ನೋವಿಗೂ ನಮ್ಮ ಈ ರೂಢಿಗಳೇ ಕಾರಣ ಎನ್ನುತ್ತವೆ ಅಧ್ಯಯನಗಳು.

ಇಂದಿನ ಆಧುನಿಕ ಜೀವನದಲ್ಲಿ ಮೊಬೈಲ್ ಅನ್ನು ತ್ಯಜಿಸುತ್ತೇವೆ ಎಂದೆಲ್ಲಾ ಅಂದುಕೊಳ್ಳಲು ಅಸಾಧ್ಯ. ಅದು ಅನಿವಾರ್ಯ ಎನ್ನುವಷ್ಟರ ಮಟ್ಟಿಗೆ ಅದು ಜೀವನಾಡಿಯಾಗಿ ಹೋಗಿದೆ. ಆದರೆ, ಬಳಕೆಯ ನಿಯಂತ್ರಣ ನಮ್ಮ ಕೈಯಲ್ಲೇ ಇದೆ. ಅಗತ್ಯ ಇದ್ದಷ್ಟು ಮಾತ್ರ ಮೊಬೈಲ್ ಬಳಕೆ ಮತ್ತು ಬೆರಳುಗಳ ಮೇಲೆ, ಮಣಿಕಟ್ಟಿನ ಮೇಲೆ ಹೆಚ್ಚು ಭಾರ ಬೀಳದಂತೆ ಬಳಕೆ ಮಾಡುವುದು, ದೈಹಿಕ ಆರೋಗ್ಯದ ದೃಷ್ಟಿಯಿಂದ ಸೂಕ್ತ. ❖



ಒಲಿಂಪಿಕ್ಸ್ ಬಳಿಕ ಮಂಕಾದರೆ ಸಿಂಧು?

ಬಸವರಾಜ ದಳವಾಯಿ

ಕ್ರೀಡೆ

ಬ್ರೆಜಿಲ್‌ನಲ್ಲಿ 2016ರಲ್ಲಿ ರಿಯೊಡಿ ಜನೈರೊ ಒಲಿಂಪಿಕ್ಸ್‌ನಲ್ಲಿ ಜಯಿಸಿದ್ದ ಬೆಳ್ಳಿ ಪದಕಕ್ಕೆ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು, ಟೋಕಿಯೊ ಕೂಟದಲ್ಲಿ ಚಿನ್ನದ ಲೇಪನ ಮೂಡಿಸುವರು ಎಂಬುದು ಕೋಟ್ಯಂತರ ಭಾರತೀಯರ ನಿರೀಕ್ಷೆಯಾಗಿತ್ತು. ಆದರೆ ಹಾಗಾಗದಿದ್ದರೂ ಕಂಚಿನ ಪದಕ ಒಲಿಸಿಕೊಂಡ ಭಾರತದ ಆಟಗಾರ್ತಿ ನಿರಾಸೆಯನ್ನಂತೂ ಮಾಡಲಿಲ್ಲ.

ಆದರೆ 2020ರ ಟೋಕಿಯೊ ಒಲಿಂಪಿಕ್ಸ್ ಬಳಿಕ ಹಾಲಿ ವಿಶ್ವ ಚಾಂಪಿಯನ್ ಸಿಂಧು ಅವರ ಆಟ ಮಂಕಾಗಿದೆಯೇ?.. ಹೀಗೊಂದು ಚರ್ಚೆ ಬ್ಯಾಡ್ಮಿಂಟನ್ ವಲಯದಲ್ಲಿ ಕೇಳಿಬರುತ್ತಿರುವುದು ಸುಳ್ಳಲ್ಲ.

26 ವರ್ಷದ ಹೈದರಾಬಾದ್ ಪ್ರತಿಭೆ ಸಿಂಧು, ಟೋಕಿಯೊ ಕೂಟದ ಬಳಿಕ ದೀರ್ಘ ವಿರಾಮ ತೆಗೆದುಕೊಂಡರು. ಸತತ ಪಂದ್ಯಗಳಿಂದಾಗಿ ಬಸವಳಿದಿದ್ದ ಕಾರಣ ವಿಶ್ರಾಂತಿ ಪಡೆದಿದ್ದರು. ಈ ವರ್ಷದ ಆಗಸ್ಟ್ 8ರಂದು ಒಲಿಂಪಿಕ್ಸ್ ಕೊನೆಗೊಂಡರೂ ಸಿಂಧು ಮೊದಲ ಟೂರ್ನಿಯಲ್ಲಿ ಕಣಕ್ಕಿಳಿದಿದ್ದು, ಅಕ್ಟೋಬರ್ 19ರಂದು ಆರಂಭವಾದ ಡೆನ್ಮಾರ್ಕ್ ಓಪನ್ ಮೂಲಕ.

ಈ ಟೂರ್ನಿಗಳಿಗಿಂತಲೂ ಮೊದಲು ನಡೆದ ಸುದಿರ್‌ಮನ್ ಕಪ್ ಹಾಗೂ ಊಬರ್‌ಕಪ್‌ನಂತಹ ಮಹತ್ವದ ಟೂರ್ನಿಗಳಲ್ಲಿ ಅವರು ಸ್ಪರ್ಧಿಸಿರಲಿಲ್ಲ.

ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲಿ ಸಿಂಧು ಕ್ವಾರ್ಟರ್‌ಫೈನಲ್‌ನಲ್ಲಿ ಮುಗ್ಗರಿಸಿದರೆ, ಅದರ ಬಳಿಕ ನಡೆದ ಫ್ರೆಂಚ್ ಓಪನ್‌ನಲ್ಲಿ ಸೆಮಿಫೈನಲ್‌ವರೆಗೆ ಮಾತ್ರ ತಲುಪಲು ಸಾಧ್ಯವಾಯಿತು.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಸಿಂಧು ಏಳನೇ ಸ್ಥಾನದಲ್ಲಿದ್ದಾರೆ. ಡೆನ್ಮಾರ್ಕ್ ಟೂರ್ನಿಯಲ್ಲಿ ಅವರು ನಿರಾಸೆ ಅನುಭವಿಸಿದ್ದು ತನಗಿಂತ ಕೆಳರ‍್ಯಾಂಕಿನ ಕೊರಿಯಾ ಆಟಗಾರ್ತಿ ಆ್ಯನ್ ಸೆಯಂಗ್ (8ನೇ ಸ್ಥಾನ) ಎದುರು. ಹೈದರಾಬಾದ್ ಆಟಗಾರ್ತಿಯ ಫ್ರೆಂಚ್ ಓಪನ್ ಅಭಿಯಾನವು 15ನೇ ಕ್ರಮಾಂಕದಲ್ಲಿರುವ ಜಪಾನ್‌ನ ಸಯಕಾ ಟಕಾಹಸಿ ಅವರ ವಿರುದ್ಧ ಅಂತ್ಯವಾಗಿತ್ತು.

ಸಿಂಧು ಅವರಿಗೆ, 2019ರಲ್ಲಿ ಸ್ವಿಟ್ಜರ್ಲೆಂಡ್‌ನ ಬಾಸೆಲ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಒಲಿದಿತ್ತು. ಅದಕ್ಕಿಂತ ಮೊದಲು ಅವರು ವಿಶ್ವ ಕೂಟದಲ್ಲಿ ಅವರು ತಲಾ ಎರಡು ಬೆಳ್ಳಿ ಮತ್ತು ಕಂಚು ಗೆದ್ದುಕೊಂಡಿದ್ದರು. 2014 ಮತ್ತು 2018ರ ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳೂ ಅವರು ಮುಡಿಗೇರಿದ್ದವು.

'ಸಿಂಧು ವಿಶ್ವದ ಶ್ರೇಷ್ಠ ಬ್ಯಾಡ್ಮಿಂಟನ್ ಆಟಗಾರ್ತಿ. ಅವರು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ ಪಟ್ಟ ಅಲಂಕರಿಸುವುದಕ್ಕೆ ಆದ್ಯತೆ ನೀಡಬೇಕು. ಅವರು ಜಯಿಸಿದ ವೃತ್ತಿಬದುಕಿನ ಪ್ರಮುಖ ಪ್ರಶಸ್ತಿಗಳ ಪಟ್ಟಿಯಲ್ಲಿ ಇರದ ಏಕೈಕ ಟ್ರೋಫಿ ಅದು' ಎಂದು ಬ್ಯಾಡ್ಮಿಂಟನ್ ದಂತಕತೆ ಪ್ರಕಾಶ್ ಪಡುಕೋಣೆ ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು.

ಹೌದು..ಪಡುಕೋಣೆ ಅವರ ಮಾತಿನಂತೆ ಅಂತಹ ಛಲದ ಆಟ ಹಲವು ಬಾರಿ ಸಿಂಧು ಅವರಿಂದ ಹೊರಹೊಮ್ಮಿದೆ. ಕೆಲವು ಬಾರಿ ಕೂದಲೆಳೆ ಅಂತರದಲ್ಲಿ ಪದಕಗಳು ಅವರ ಕೈ ತಪ್ಪಿವೆ. ಯುವ ಕ್ರೀಡಾಪಟುಗಳಿಗೆ ಸ್ಫೂರ್ತಿಯ ಸೆಲೆಯಾಗಿರುವ ಸಿಂಧು, 'ಚಾಂಪಿಯನ್ ಆಟ'ಕ್ಕೆ ಮತ್ತೆ ಮರಳುವರು ಎಂಬುದು ಬ್ಯಾಡ್ಮಿಂಟನ್ ಪ್ರಿಯರ ನಿರೀಕ್ಷೆಯಾಗಿದೆ. ❖

ಪಟಾಕಿ ಹಚ್ಚುವ ಮುನ್ನ ಇರಲಿ ಎಚ್ಚರ

ಡಾ. ಸತ್ಯ ಪ್ರಸಾದ್ ಬಾಲ್ಕಿ



ಡಾ. ಸತ್ಯ ಪ್ರಸಾದ್ ಬಾಲ್ಕಿ


ಆರೋಗ್ಯ

ನೂರು ಕೋಟಿಯಷ್ಟು ಕೋವಿಡ್ ಲಸಿಕೆಯ ಡೋಸ್‌ಗಳನ್ನು ದೇಶದಲ್ಲಿ ಜನರಿಗೆ ಇಲ್ಲಿಯ ವರೆಗೆ ನೀಡಲಾಗಿದೆ. ನಿಧಾನವಾಗಿ ಸೋಂಕಿತರ ಪ್ರಮಾಣಯೂ ಇಳಿಯುತ್ತಿದೆ. ಷೇರು ಮಾರುಕಟ್ಟೆಯಲ್ಲಿಯೂ ಏರಿಕೆ ಕಂಡಿದೆ. ಜನರು ಪ್ರವಾಸ ಹೊರಡಲು ಮತ್ತೆ ಶುರು ಮಾಡಿದ್ದಾರೆ. ಜನರಲ್ಲಿ ಒಂದು ರೀತಿಯ ಉತ್ಸಾಹ ಮತ್ತು ಆರಾಮ ಮನೆ ಮಾಡಿದೆ. ಇಂಥ ಹೊತ್ತಿನಲ್ಲಿ ಬಂದಿರುವ ಹಬ್ಬಗಳು ಜನರಲ್ಲಿನ ಉತ್ಸಾಹವನ್ನು ಇಮ್ಮಡಿಗೊಳಿಸಿದೆ ಎಂದೇ ಹೇಳಬಹುದು. ದೀಪಾವಳಿಯನ್ನು 'ಧಮಾಕ' ರೀತಿಯಲ್ಲಿ ಆಚರಿಸಲು ಜನರು ಸಿದ್ಧತೆ ನಡೆಸಿದ್ದಾರೆ.



ದೀಪಾವಳಿಯನ್ನು ನಮ್ಮ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಬಹಳ ಸಂಭ್ರಮದಿಂದ ಆಚರಿಸಲಾಗುತ್ತದೆ. ಕಳೆದ ವರ್ಷ ದೀಪಾವಳಿ ಸಂದರ್ಭದಲ್ಲಿ ಕೊರೊನಾವು ನಮ್ಮನ್ನು ಒತ್ತಡಕ್ಕೆ ತಳ್ಳಿತ್ತು ಮತ್ತು ಆ ಸಮಯದಲ್ಲಿ ಸೋಂಕಿತರ ಸಂಖ್ಯೆಯೂ ಹೆಚ್ಚಿತ್ತು. ಆದ್ದರಿಂದ ಈ ಬಾರಿ ಜನರು ದೀಪಾವಳಿಯನ್ನು ಬಹಳ ವಿಜೃಂಭಣೆ ಆಚರಿಸುತ್ತಾರೆ ಎನ್ನುವುದರಲ್ಲಿ ಅನುಮಾನ ಇಲ್ಲ. ದೀಪಾವಳಿಯು ನೇತ್ರತಜ್ಞರಿಗೆ ಬಹಳ ಒತ್ತಡದ ಸಮಯ. ಅಡುಗೆ ಮನೆಯಲ್ಲಿ ಹೆಚ್ಚು ಹೊತ್ತು ನಿಲ್ಲುವುದು, ಹೆಚ್ಚು ಹೆಚ್ಚು ದೀಪಗಳನ್ನು, ವಿದ್ಯುತ್ ದೀಪಾಲಂಕಾರಗಳನ್ನು ನೋಡುವುದು, ಪಟಾಕಿ.. ಮುಂತಾದವುಗಳ ಕಾರಣ ಕಣ್ಣುಗಳಿಗೆ ಹೆಚ್ಚು ಅಪಾಯವಿದೆ. ಸಂಭ್ರಮಾಚರಣೆಯ ಜೊತೆಗೆ ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ.

ತನಗೆ ಆಪತ್ತು ಇದೆ ಎಂದು ಕಣ್ಣಿಗೆ ತಿಳಿದ ತಕ್ಷಣದಲ್ಲಿ ರೆಪ್ಪೆ ಮುಚ್ಚಿಕೊಳ್ಳುವ ಸಹಜವಾದ ವ್ಯವಸ್ಥೆ ನಮ್ಮ ದೇಹದಲ್ಲಿ ಇದೆ. ಆದರೆ, ಕೆಲವೊಮ್ಮೆ ಈ ವ್ಯವಸ್ಥೆ ಕೈಕೊಡುವುದೂ ಉಂಟು. ಕಣ್ಣಿನ ಹೊರಪದರ ಕಾರ್ನಿಯಾವು (cornea) ಪಾರದರ್ಶಕವಾಗಿ ಇರುತ್ತದೆ ಮತ್ತು ಬೆಳಕನ್ನು ಕಣ್ಣಿನೊಳಗೆ ಬಿಟ್ಟುಕೊಂಡು ದೃಷ್ಟಿಯನ್ನು ನೀಡುತ್ತದೆ. ಕಣ್ಣಿನ ಅಂತರ್ಗತ ಒತ್ತಡದಿಂದ ಅದು ವೃತ್ತಾಕಾರದಲ್ಲೇ ಇರುತ್ತದೆ. ಕಣ್ಣಿನ ಹತ್ತಿರದಲ್ಲೇ ಪಟಾಕಿ ಸಿಡಿಯುತ್ತಿದ್ದರೆ ಕಣ್ಣಿನ ನರಗಳಿಗೆ ಹಾನಿ ಉಂಟಾಗುತ್ತದೆ ಮತ್ತು ಈ ಹಂತದಲ್ಲಿ ಚಿಕಿತ್ಸೆ ನೀಡಲು ಕಷ್ಟವಾಗುತ್ತದೆ.



ಅಡುಗೆ ಮಾಡುವಾಗ ಬಿಸಿ ಎಣ್ಣೆ ಕಣ್ಣಿಗೆ ಬಿದ್ದರೆ ಕಣ್ಣಿನ ಹೊರ ಪದರ ಸುಟ್ಟುಹೋಗುತ್ತದೆ. ದೀಪಾವಳಿಗೆ ವಿದ್ಯುತ್ತಿನ ದೀಪಾಲಂಕಾರ ಮಾಡುವುದು ಸಹಜ. ವೈರಿಂಗ್‌ನಲ್ಲಿ ತೊಂದರೆ ಆಗಿ ಕಣ್ಣಿಗೆ ಹಾನಿಯಾಗಬಹುದು. ಈ ಎಲ್ಲದಕ್ಕಿಂತ ಪಟಾಕಿಯಿಂದ ಆಗುವ ಅಪಾಯವೇ ಹೆಚ್ಚು ಹಾನಿಕರವಾದದ್ದು.

ಕಣ್ಣಿಗೆ ಗಾಯವಾದ ತಕ್ಷಣ ಮಾಡಬೇಕಾದದ್ದು ಏನು?

- ಕಣ್ಣಿಗೆ ಏನೋ ಬಿದ್ದ ಅನುಭವವಾದರೆ, ಬಿಸಿ ಎಣ್ಣೆ ಕಣ್ಣಿಗೆ ಬಿದ್ದರೆ, ತಕ್ಷಣದಲ್ಲಿ ಶುದ್ಧ ನೀರಿನಿಂದ ಕಣ್ಣನ್ನು ತೊಳೆದುಕೊಳ್ಳಬೇಕು ಅಥವಾ ಒಂದು ಬಟ್ಟಲಿನಲ್ಲಿ ನೀರನ್ನು ತುಂಬಿಕೊಂಡು ಕಣ್ಣನ್ನು ಅದ್ದಿ ಕಣ್ಣನ್ನು ಮಿಟುಕಿಸಬೇಕು.
- ನಂತರದಲ್ಲಿ ವೈದ್ಯರನ್ನು ಸಂಪರ್ಕಿಸಿ ಕಣ್ಣಿಗೆ ಬಿದ್ದ ವಸ್ತುವನ್ನು ತಕ್ಷಣದಲ್ಲಿ ತೆಗೆಸಿಕೊಳ್ಳಬೇಕು. ಅದಕ್ಕೆ ಸರಿಯಾದ ಚಿಕಿತ್ಸೆ ಪಡೆದುಕೊಳ್ಳಬೇಕು.
- ಪಟಾಕಿ ಸಿಡಿದು ಕಣ್ಣಿನಿಂದ ಹೆಚ್ಚು ರಕ್ತಸ್ರಾವ ಆಗುತ್ತಿದ್ದರೆ, ಶುದ್ಧ ನೀರಿನಿಂದ ಕಣ್ಣನ್ನು ತೊಳೆದುಕೊಳ್ಳಬೇಕು. ಶುದ್ಧವಾದ ಹತ್ತಿ ಬಟ್ಟೆಯನ್ನು ಕಣ್ಣಿಗೆ ಸುತ್ತಿಕೊಳ್ಳಬೇಕು. ತಕ್ಷಣವೇ ವೈದ್ಯರಲ್ಲಿಗೆ ಹೋಗಬೇಕು. ಶಸ್ತ್ರಚಿಕಿತ್ಸೆಯೂ ಬೇಕಾಗಬಹುದು.

ಮುಂಜಾಗ್ರತೆ ವಹಿಸುವುದು..

- ಅಡುಗೆ ಮಾಡುವಾಗ ಬಿಸಿ ಎಣ್ಣೆ ಹಾರದಂತೆ ಕಣ್ಣಿಗೆ ಕನ್ನಡಕವನ್ನು ಹಾಕಿಕೊಳ್ಳುವುದು ಉತ್ತಮ. ಬಾಣಲೆಯಿಂದ ಸ್ವಲ್ಪ ದೂರದಲ್ಲಿ ಇರುವುದು ಉತ್ತಮ. ಜೊತೆಗೆ ಸೊಂಟಕ್ಕಿಂತ ಮೇಲಿನ ಮಟ್ಟದಲ್ಲಿ ಪಾತ್ರೆಗಳನ್ನು ಬಳಸಿ ಅಡುಗೆ ಮಾಡುವುದು ಉತ್ತಮ.
- ಪಟಾಕಿ ಸಿಡಿಯುವಾಗ ದೂರ ನಿಲ್ಲಬೇಕು. ಮುಖಕ್ಕೆ ಫೇಸ್‌ಶೀಲ್ಡ್ ಹಾಕಿಕೊಳ್ಳುವುದು ಉತ್ತಮ. ಕೋವಿಡ್ ಕಾರಣದಿಂದ ಇಂಥ ಶೀಲ್ಡ್‌ಗಳು ಧಾರಾಳವಾಗಿ ಮಾರುಕಟ್ಟೆಯಲ್ಲಿ ದೊರೆಯುತ್ತದೆ.
- ಪಟಾಕಿ ಹಚ್ಚಿ ಕೈಯಲ್ಲಿ ಹಿಡಿದುಕೊಳ್ಳುವುದು, ಗಾಳಿಯಲ್ಲಿ ಬಿಸಾಡುವುದು ಒಳ್ಳೆಯ ನಡೆಯಲ್ಲ.
- ಪಟಾಕಿ ಹಚ್ಚುವ ವೇಳೆ ಮಕ್ಕಳು ದೊಡ್ಡವರ ನಿಗಾದಲ್ಲಿ ಇರುವುದು ಉತ್ತಮ.
- ಇಂಥ ಸಮಯದಲ್ಲಿ ಹತ್ತಿರದಲ್ಲಿಯೇ ಬಕೆಟ್‌ನಲ್ಲಿ ನೀರನ್ನು ಇಟ್ಟುಕೊಳ್ಳುವುದು ಒಳಿತು.
- ಹೆಚ್ಚಿನವರು ರಸ್ತೆಯಲ್ಲಿಯೇ ಪಟಾಕಿ ಸಿಡಿಸುವುದರಿಂದ ದ್ವಿಚಕ್ರ ಸವಾರರು ಹೆಲ್ಮೆಟ್ ಧರಿಸುವುದು ಸೂಕ್ತ.
- ಕಣ್ಣಿಗೆ ತೊಂದರೆ ಆದಾಗ ತಾವಾಗಿಯೇ ಚಿಕಿತ್ಸೆ ಮಾಡಿಕೊಳ್ಳುವುದು, ಮನೆಯಲ್ಲೇ ಇರುವ ಕಣ್ಣಿನ ಡ್ರಾಪ್‌ಗಳನ್ನು ಬಳಸುವುದು ತಪ್ಪು. ವೈದ್ಯರ ಬಳಿ ಹೋಗುವುದೇ ಉತ್ತಮ.

'ಚಿಕಿತ್ಸೆಗಿಂತ ಎಚ್ಚರಿಕೆಯೇ ಉತ್ತಮವಾದುದು' ಎನ್ನುವಂತೆ ಎಚ್ಚರಿಕೆ ವಹಿಸಿ ಹಬ್ಬಗಳನ್ನು ಆಚರಿಸುವುದು ಒಳಿತು. ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳು!

(ಲೇಖಕರು: ಕನ್ಸಲ್ಟೆಂಟ್ ನೇತ್ರತಜ್ಞ, ಮ್ಯಾಕ್ಸಿವಿಷನ್ ಕಣ್ಣಿನ ಆಸ್ಪತ್ರೆ)

ಮಗನ ಫೋಟೊ ಹಂಚಿಕೊಂಡ ನಟ ಅಜಿತ್

ತಮಿಳಿನ ಖ್ಯಾತ ನಟ ಅಜಿತ್ ಕುಮಾರ್ ಅವರು ತಮ್ಮ ಮಗ ಅದ್ವಿಕ್ ಫೋಟೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಅಜಿತ್ ತಮ್ಮ ಸ್ಟೆಟಸ್‌ನಲ್ಲಿ ಮಗನೊಂದಿಗೆ ಇರುವ ಚಿತ್ರವನ್ನು ಹಂಚಿಕೊಂಡಿದ್ದಾರೆ. ಆ ಚಿತ್ರದಲ್ಲಿ ಮಗನ ತಲೆಗೆ ದೊಡ್ಡ ಹೆಲ್ಮೆಟ್ ಹಾಕಿ ಮುಗುಳ್ನಗೆ ಬೀರಿದ್ದಾರೆ. ಆ ಮೂಲಕ ಅಜಿತ್ ಸಾಮಾಜಿಕ ಜಾಗೃತಿ ಮೂಡಿಸುತ್ತಿದ್ದಾರೆ ಎಂದು ಅಭಿಮಾನಿಗಳು ಕಮೆಂಟ್‌ಗಳನ್ನು ಹಾಕುತ್ತಿದ್ದಾರೆ.

ಇನ್ನು ಕೆಲವರು ಇದು 'ವಾಲಿಮೈ' ಸಿನಿಮಾದ ಪ್ರಚಾರ ಎಂದು ಹೇಳುತ್ತಿದ್ದಾರೆ. ಅಭಿಮಾನಿಗಳಂತೂ ಅದ್ವಿಕ್ ಫೋಟೊ ನೋಡಿ ಖುಷಿಪಟ್ಟಿದ್ದಾರೆ. ಇದು 'ಮರಿ ಸಿಂಹ' ಎಂಬ ಕಮೆಂಟ್‌ಗಳನ್ನು ಬರೆಯುತ್ತಿದ್ದಾರೆ. ಅಜಿತ್ ನಟನೆಯ 'ವಾಲಿಮೈ' ಸಿನಿಮಾ ಬರುವ ಸಂಕ್ರಾಂತಿಗೆ ಬಿಡುಗಡೆಯಾಗಲಿದೆ. ಈ ಚಿತ್ರವನ್ನು ಎಚ್. ವಿನೋತ್ ನಿರ್ದೇಶನ ಮಾಡಿದ್ದಾರೆ.

ವಾಲಿಮೈನಲ್ಲಿ ನಾಯಕಿಯಾಗಿ ಹುಮಾ ಖುರೇಶಿ ನಟಿಸಿದ್ದಾರೆ. ತೆಲುಗು ನಟ ಕಾರ್ತಿಕೇಯ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಯೋಗಿ ಬಾಬು, ಸುಮಿತ್ರಾ ಸೇರಿದಂತೆ ಹಲವರು ತಾರಾಬಳಗದಲ್ಲಿ ಇದ್ದಾರೆ. ❖



ಸಿನಿಮಾ

ಸದ್ದು ಮಾಡುತ್ತಿದೆ 'ಬಿಜಿಲಿ... ಬಿಜಿಲಿ' ಹಾಡು



ಬಾಲಿವುಡ್ ನಟಿ ಶ್ವೇತಾ ತಿವಾರಿ ಪುತ್ರಿ ಪಲಾಕ್ ತಿವಾರಿ ಅಭಿನಯಿಸಿರುವ ಚೊಚ್ಚಲ ವಿಡಿಯೊ ಸಾಂಗ್ ಸಾಮಾಜಿಕ ಜಾಲತಾಣಗಳಲ್ಲಿ ಸಖತ್ ಸದ್ದು ಮಾಡುತ್ತಿದೆ.

ಬಿಜಿಲಿ...ಬಿಜಿಲಿ ವಿಡಿಯೊ ಹಾಡಿನಲ್ಲಿ ಮಿಂಚಿರುವ ಪಲಾಕ್ ತಿವಾರಿಗೆ ನೆಟ್ಟಿಗರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಹಾರ್ಡಿ ಸಂಧು ಹಾಡಿರುವ ಬಿಜಿಲಿ... ಬಿಜಿಲಿ... ಹಾಡಿಗೆ ಜಾನಿ ಸಂಗೀತ ನೀಡಿದ್ದಾರೆ. ಸಂಧು ಕೂಡ ಪಲಾಕ್ ಜೊತೆ ಮಸ್ತ್ ಸ್ಟೆಪ್ ಹಾಕಿದ್ದಾರೆ.

ಯುಟ್ಯೂಬ್‌ನಲ್ಲಿ ಬಿಡುಗಡೆಯಾಗಿ 12 ಗಂಟೆಗಳಲ್ಲಿ 31 ಲಕ್ಷ ವೀಕ್ಷಣೆ ಪಡೆದಿದೆ. ❖